ರಸಿಕ್‌ಗೆ ನಾಲ್ಕು ವಿಕೆಟ್
ಆರ್‌ಸಿಬಿ ತಂಡದ ವೇಗಿ ರಸಿಕ್ ಡಾರ್ ಅವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಎಲ್‌ಎಸ್‌ಜಿ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ನಾಲ್ಕು ವಿಕೆಟ್ ಪಡೆದು ಮಿಂಚಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 78,111 | ನಿಫ್ಟಿ 24,231 | $/₹ 93.33 | ಚಿನ್ನ (Std. 10g) ₹1,60,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,68,800 (ಬೆಂಗಳೂರು)

ಶಾಸಕ ವಿನಯ ಅಪರಾಧಿ

ಯೋಗೀಶಗೌಡ ಕೊಲೆ ಪ್ರಕರಣ: ಶಿಕ್ಷೆಯ ಪ್ರಮಾಣ ಇಂದು ಪ್ರಕಟ

• ಬಿ.ಎಸ್.ಷಣ್ಮುಖಪ್ಪ

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಧಾರವಾಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಸೇರಿದಂತೆ 17 ಜನ ಆರೋಪಿಗಳು ‘ಅಪರಾಧಿಗಳು’ ಎಂದು ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ತೀರ್ಮಾನಿಸಿದೆ.

ವಿನಯ ಕುಲಕರ್ಣಿ

ಪ್ರಕರಣದ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಬುಧವಾರ ಸಂಜೆ ತೆರೆದ ನ್ಯಾಯಾಲಯದಲ್ಲಿ ಪ್ರಕಟಿಸಿದರು.

ಶಿಕ್ಷೆಯ ಪ್ರಮಾಣವನ್ನು ಗುರುವಾರ ಪ್ರಕಟಿಸುವುದಾಗಿ ತಿಳಿಸಿದ ನ್ಯಾಯಾಧೀಶರು, ಎಲ್ಲ ಅಪರಾಧಿಗಳನ್ನು ಕೂಡಲೇ ಕಸ್ಟಡಿಗೆ ಪಡೆಯುವಂತೆ ಸಿಬಿಐ ಪೊಲೀಸರಿಗೆ ನಿರ್ದೇಶಿಸಿದರು. ಕೊಲೆ ಪ್ರಕರಣದಲ್ಲಿ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ಅಥವಾ ಮರಣ ದಂಡನೆ ವಿಧಿಸಲು ಅವಕಾಶವಿದೆ. ವಿಸ್ತೃತ ತೀರ್ಪು ಇನ್ನಷ್ಟೇ ಬಿಡುಗಡೆಯಾಗಬೇಕಿದೆ.

17 ಅಪರಾಧಿಗಳು ಜೈಲಿಗೆ: ತೀರ್ಪು ಪ್ರಕಟವಾದ ಮೇಲೆ ನ್ಯಾಯಾಧೀಶರ ಸೂಚನೆಯಂತೆ 17 ಅಪರಾಧಿಗಳನ್ನು ಸಿಬಿಐ ಪೊಲೀಸರು ಕಸ್ಟಡಿಗೆ ಪಡೆದುಕೊಂಡರು. ಬಂದೋಬಸ್ತ್‌ನಲ್ಲಿ ಬೌರಿಂಗ್ ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ತಪಾಸಣೆಗೆ ಒಳಪಡಿಸಿದರು. ಬಳಿಕ, ಅಪರಾಧಿಗಳನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಬುಧವಾರ ರಾತ್ರಿ ಕರೆದೊಯ್ದು ಬಿಟ್ಟುಬಂದರು.

21 ಆರೋಪಿಗಳು: ಪ್ರಕರಣದಲ್ಲಿ ಒಟ್ಟು 21 ಜನರನ್ನು ಆರೋಪಿಗಳು ಎಂದು ಹೆಸರಿಸಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ಖುಲಾಸೆಗೊಂಡವರು: ಸಂಶಯದ ಲಾಭದ ಅಡಿಯಲ್ಲಿ ವಾಸುದೇವ ರಾಮ ನಿಲೇಕಣಿ ಹಾಗೂ ಸೋಮಶೇಖರ ಬಸಪ್ಪ ನ್ಯಾಮಗೌಡ ಅವರನ್ನು ಖುಲಾಸೆಗೊಳಿಸಲಾಗಿದೆ.

ಮಾಫಿ ಸಾಕ್ಷಿಯಾದವರು: ಬಸವರಾಜ ಮುತ್ತಗಿ ಮತ್ತು ಶಿವಾನಂದ ಶ್ರೀಶೈಲ ಬಿರಾದಾರ ಇವರನ್ನು ಕೈಬಿಡಲಾಗಿದೆ.

ಪ್ರಕರಣವೇನು?: ಧಾರವಾಡ ಉಪನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2016ರ ಜೂನ್ 15ರಂದು ಯೋಗೀಶಗೌಡ ಗೌಡರ್ ಕೊಲೆ ನಡೆದಿತ್ತು. ಈ ಪ್ರಕರಣದ ತನಿಖೆ ನಡೆಸಿದ್ದ ಸಿಬಿಐ, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ಪ್ರಾಸಿಕ್ಯೂಷನ್ ಪರವಾಗಿ ಕೆ.ಎಸ್. ಹೇಮಾ ಕಾರಂತ ಹಾಗೂ ಶಿವಾನಂದ ಪೆರ್ಲ, ಪ್ರಮುಖ ಆರೋಪಿ ವಿನಯ ಕುಲಕರ್ಣಿ ಪರ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿದ್ದರು.

ದೋಷಿಗಳು 17 ಜನ

ಕೊಲೆ ಮತ್ತು ಕ್ರಿಮಿನಲ್ ಪಿತೂರಿಯೂ ಸೇರಿದಂತೆ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ವಿವಿಧ ಕಲಂಗಳ ಅಡಿಯಲ್ಲಿ 17 ಜನ ಆರೋಪಿಗಳನ್ನು ‘ಅಪರಾಧಿಗಳು’ ಎಂದು ತೀರ್ಮಾನಿಸಲಾಗಿದೆ. ಅವರಲ್ಲಿ ವಿನಯ ಕುಲಕರ್ಣಿ, ವಿಕ್ರಂ ಬಳ್ಳಾರಿ, ಬಸವರಾಜ ಕುರಹಟ್ಟಿ, ಸಂದೀಪ್ ಸೌದತ್ತಿ, ವಿನಾಯಕ ಕಟಗಿ, ಮಹೇಶ್ವರ ಹೊಂಗಲ್ ಅಲಿಯಾಸ್ ಮುದುಕ, ಸಂತೋಷ ಸವದತ್ತಿ, ಎಂ.ದಿನೇಶ್, ಅಶ್ವತ್ಥ, ಸುನಿಲ್, ನಜೀರ್ ಅಹಮದ್, ಶಹನವಾಜ್, ನೂತನ್, ಹರ್ಷಿತ, ಚಂದ್ರಶೇಖರ ಇಂಡಿ, ವಿಕಾಸ್ ಕಲಬುರಗಿ ಮತ್ತು ಚನ್ನಕೇಶವ ಬಿ ಟಿಂಗರಿಕರ ಇವರನ್ನು ಅಪರಾಧಿಗಳು ಎಂದು ನ್ಯಾಯಾಲಯ ಘೋಷಿಸಿದೆ.

ಸುಳ್ಳು ಹೇಳಿಕೆ: ಮೂವರು ಪೊಲೀಸ್ ಅಧಿಕಾರಿಗಳ ವಿರುದ್ಧವೂ ಪ್ರಕರಣ

ಸುಳ್ಳು ಹೇಳಿಕೆ ನೀಡಿದ ಆರೋಪದಡಿ ಪೊಲೀಸ್ ಅಧಿಕಾರಿಗಳೂ ಆದ ಮೂವರು ಪ್ರಾಸಿಕ್ಯೂಷನ್ ಸಾಕ್ಷಿಗಳಾದ ಶಿವಾನಂದ ಚಲವಾದಿ, ಬಾಬು ಕಟಗಿ ಮತ್ತು ಶಂಕರಗೌಡ ಬಸನಗೌಡ ಪಾಟೀಲ ಹಾಗೂ ಸ್ವತಂತ್ರ ಸಾಕ್ಷಿಗಳಾದ ದತ್ತಾತ್ರೇಯ ಗುಂಡಗತ್ತಿ, ಆನಂದ ಈರಪ್ಪ ಉದ್ದಣ್ಣವರ, ವಿನಾಯಕ ಬಿಂಜಿಯವರ, ಮೋಹನ ಈಚರಪ್ಪ ಮುಲುಮುತ್ತಲ ವಿವೇಕಾನಂದ ದಳವಾಯಿ, ನಟರಾಜ ಸರ್ಜ ದೇಸಾಯಿ ಮತ್ತು ವಿಜಯ ಕುಲಕರ್ಣಿ ವಿರುದ್ಧ; ಅಪರಾಧ ಪ್ರಕ್ರಿಯಾ ಸಂಹಿತೆ–1973ರ (ಸಿಆರ್‌ಪಿಸಿ) ಕಲಂ 340ರ ಅಡಿಯಲ್ಲಿ ‘ಪರ್ಜುರಿ’ (ಸುಳ್ಳು ಹೇಳಿಕೆ ನೀಡಿದ ಸಾಕ್ಷಿ) ಕೇಸನ್ನು ದಾಖಲಿಸುವಂತೆ ಸಿಟಿ ಸಿವಿಲ್ ಕೋರ್ಟ್ ರಿಜಿಸ್ಟ್ರಾರ್ ಅವರಿಗೆ ನ್ಯಾಯಾಧೀಶರು ಆದೇಶಿಸಿದ್ದಾರೆ.

ಪ್ರಕರಣದ ವಿವರ 5

ಅಂತ್ಯದತ್ತ ಇರಾನ್ ಯುದ್ಧ: ಟ್ರಂಪ್

ವಾಷಿಂಗ್ಟನ್/ಕೈರೊ (ಎಪಿ): ಇರಾನ್ ಮೇಲಿನ ಯುದ್ಧ ಬಹುತೇಕ ಅಂತ್ಯದತ್ತ ತಲುಪಿದೆ. ಮುಂದಿನ ಎರಡು ದಿನ ದೊಳಗೆ ಮತ್ತೆ ಮಾತುಕತೆ ನಡೆಯಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಇರಾನ್ ಬಂದರುಗಳಿಗೆ ಹಾಕಿದ ದಿಗ್ಬಂಧನ ಯಶಸ್ವಿಯಾಗಿದೆ. ಹಡಗುಗಳ ಸಂಚಾರವು ಸಂಪೂರ್ಣ ಬಂದ್ ಆಗಿದೆ ಎಂದು ಅಮೆರಿಕ ಸೇನೆ ಹೇಳಿಕೊಂಡಿದೆ. ‘ತನ್ನ ವ್ಯಾಪ್ತಿಯೊಳಗಿರುವ ಶತ್ರುಗಳ ಮೇಲೆ ದಾಳಿ ನಡೆಸಲಾಗುವುದು’ ಎಂದು ಇರಾನ್ ತಿರುಗೇಟು ನೀಡಿದೆ.

ಫಾಕ್ಸ್ ಬ್ಯುಸಿನೆಸ್ ನೆಟ್‌ವರ್ಕ್‌ಗೆ ಟ್ರಂಪ್ ಸಂದರ್ಶನ ನೀಡಿದ್ದು, ‘ಯುದ್ಧ ಮುಗಿದಿದೆ ಎಂದು ನಾನು ಭಾವಿಸಿದ್ದೇನೆ. ಸಂಘರ್ಷ ಮುಂದುವರಿಸಿದರೆ ಇರಾನ್‌ನ ಪುನರ್ ನಿರ್ಮಾಣಕ್ಕೆ 20 ವರ್ಷ ಬೇಕಾಗುತ್ತದೆ. ಏನಾಗುತ್ತೋ ನೋಡೋಣ. ಅವರು ತುಂಬಾ ಕೆಟ್ಟದಾಗಿ ಒಪ್ಪಂದವನ್ನು ಮಾಡಿಕೊಳ್ಳಲು ಬಯಸುತ್ತಾರೆ’ ಎಂದಿದ್ದಾರೆ. 10

‘ಕಟ್ಟುನಿಟ್ಟಿನ ತಪಾಸಣೆ: ಒಪ್ಪಂದದಲ್ಲೇ ಸೇರಿಸಿ’

ಸೋಲ್: ‘ಇರಾನ್‌ನ ಪರಮಾಣು ಚಟುವಟಿಕೆಗಳನ್ನು ಪರಿಶೀಲಿಸಲು ‘ಕಟ್ಟುನಿಟ್ಟಿನ ತಪಾಸಣಾ’ ಕ್ರಮಗಳನ್ನು, ಸಂಭಾವ್ಯ ಅಮೆರಿಕ–ಇರಾನ್ ಒಪ್ಪಂದದಲ್ಲೇ ಸೇರಿಸಬೇಕು’ ಎಂದು ವಿಶ್ವಸಂಸ್ಥೆಯ ಪರಮಾಣು ಕಾವಲುಪಡೆಯ ಮುಖ್ಯಸ್ಥರು ಆಗ್ರಹಿಸಿದ್ದಾರೆ.

ಇರಾನ್‌ನ ಪರಮಾಣು ಕಾರ್ಯಕ್ರಮಕ್ಕಾಗಿ ಸಂಪೂರ್ಣ ಪರಿಶೀಲನಾ ಆಡಳಿತದ ಅಗತ್ಯವನ್ನು ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯ (ಐಎಇಎ) ಮಹಾನಿರ್ದೇಶಕ ರಾಫೆಲ್ ಗ್ರೊಸ್ಸಿ ಅವರು ಬುಧವಾರ ಪ್ರತಿಪಾದಿಸಿದ್ದಾರೆ. ಅಣ್ವಸ್ತ್ರ ಅಭಿವೃದ್ಧಿ ಪಡಿಸುತ್ತಿಲ್ಲ ಎಂದು ಇರಾನ್ ಹೇಳಿಕೊಂಡಿದೆ. ಆದರೆ, ಪರಮಾಣು ಕಾರ್ಯಕ್ರಮದ ಮಿತಿಗಳನ್ನು ತಿರಸ್ಕರಿಸಿದೆ.

‘ಯುರೇನಿಯಂ ಸಮೃದ್ಧಿ: ಇರಾನ್‌ಗೆ ಹಕ್ಕಿದೆ’

ಬೀಜಿಂಗ್: ‘ನಾಗರಿಕ ಉದ್ದೇಶಗಳಿಗಾಗಿ ಯುರೇನಿಯಂ ಅನ್ನು ಸಮೃದ್ಧೀಕರಣ ಗೊಳಿಸಲು ಪರಭಾರೆ ಮಾಡಲಾಗದ ಹಕ್ಕನ್ನು ಇರಾನ್ ಹೊಂದಿದೆ’ ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್ ಬುಧವಾರ ಹೇಳಿದ್ದಾರೆ.

‘ಜಗತ್ತಿನ ಎಲ್ಲ ದೇಶಗಳು ಯುರೇನಿಯಂ ಸಮೃದ್ಧೀಕರಣದ ಹಕ್ಕನ್ನು ಹೊಂದಿವೆ. ಈ ಸಾರ್ವತ್ರಿಕ ತತ್ವವನ್ನು ರಷ್ಯಾ ಒಪ್ಪಿದೆ’ ಎಂದು ವರದಿಗಾರರಿಗೆ ತಿಳಿಸಿದ್ದಾರೆ. ‘ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಕೊನೆಗೊಳಿಸುವ ಮಾತುಕತೆಯನ್ನು ರಷ್ಯಾ ಹಾಗೂ ಚೀನಾ ಬೆಂಬಲಿಸಲಿವೆ’ ಎಂದಿದ್ದಾರೆ.

ಹಿಂದಿಗೆ ಅಂಕ ಕೊಡಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ 2025-26ನೇ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ವಿಷಯಗಳಿಗೆ ಗ್ರೇಡ್ ಬದಲಿಗೆ ಅಂಕ ನೀಡುವಂತೆ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಗ್ರೇಡಿಂಗ್ ವ್ಯವಸ್ಥೆಯನ್ನು ಪ್ರಶ್ನಿಸಿ ಚಿಕ್ಕಮಗಳೂರಿನ ಸಹನಾ ಆರ್.ನಾಯ್ಕ್ ಸೇರಿದಂತೆ ಮೂವರು ವಿದ್ಯಾರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಆರ್.ವಿ. ನಾಯ್ಕ್ ಅವರ ವಾದ ಪುರಸ್ಕರಿಸಿರುವ ನ್ಯಾಯ-ಪೀಠ,2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ವಿಷಯಗಳಿಗೆ ಗ್ರೇಡ್ ಬದಲಿಗೆ ಅಂಕಗಳನ್ನು ನೀಡುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ ಅರ್ಜಿ ಇತ್ಯರ್ಥಪಡಿಸಿದೆ.

ಬೆಂಗಳೂರು ವಲಯ: ಶೇ 98.91ರಷ್ಟು ಉತ್ತೀರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಬಿಎಸ್‌ಇ 10ನೇ ತರಗತಿಯ ಮೊದಲ ಹಂತದ ಪರೀಕ್ಷಾ ಫಲಿತಾಂಶ ಬುಧವಾರ ಪ್ರಕಟಗೊಂಡಿದ್ದು, ಬೆಂಗಳೂರು ವಲಯವು ಶೇ 98.91 ಫಲಿತಾಂಶ ಪಡೆದಿದೆ.

ಕರ್ನಾಟಕದಾದ್ಯಂತ ಸಿಬಿಎಸ್‌ಇಗೆ ಸಂಯೋಜಿತವಾಗಿರುವ ಶಾಲೆಗಳು ಬೆಂಗಳೂರು ವಲಯದ ಅಡಿಯಲ್ಲಿ ಬರುತ್ತವೆ. 2025ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿಯೂ ಇಷ್ಟೇ ಫಲಿತಾಂಶ ದಾಖಲಿಸಿತ್ತು.

ಬೆಂಗಳೂರು ವಲಯವು ರಾಷ್ಟ್ರೀಯ ಮಟ್ಟದಲ್ಲಿ ಮೂರನೇ ಸ್ಥಾನ ಪಡೆದುಕೊಂಡಿದೆ. ತಿರುವನಂತಪುರ ಮತ್ತು ವಿಜಯವಾಡ ವಲಯಗಳು ಶೇ 99.79 ಫಲಿತಾಂಶದೊಂದಿಗೆ ದೇಶದಲ್ಲೇ ಮೊದಲ ಸ್ಥಾನ ಪಡೆದಿವೆ, ಚೆನ್ನೈ ವಲಯ ಶೇ 99.58 ಫಲಿತಾಂಶದೊಂದಿಗೆ ಎರಡನೇ ಸ್ಥಾನ ಪಡೆದಿದೆ. ಒಟ್ಟಾರೆ ಅಗ್ರ ಮೂರು ಸ್ಥಾನಗಳಲ್ಲಿ ದಕ್ಷಿಣ ಭಾರತದ ವಲಯಗಳೇ ಇವೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ರಾಷ್ಟ್ರೀಯ ಮಟ್ಟದ ಫಲಿತಾಂಶ ಅಲ್ಪ, ಅಂದರೆ ಶೇ 0.04ರಷ್ಟು ಹೆಚ್ಚಳವಾಗಿದೆ. 7

ಚಿನಕುರುಳಿ ಪ್ರಕಾಶ್ ಶೆಟ್ಟಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

ಜಿಬಿಎಯಿಂದ ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ (ಜಿಬಿಜಿಎ) ಜಾರಿಯಾದ ನಂತರ, ಮೊದಲ ಬಾರಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ 19 ಸಹಾಯಕ ಎಂಜಿನಿಯರ್ ಹಾಗೂ ಪರಿಸರ ಎಂಜಿನಿಯರ್‌ಗಳನ್ನು ರಾಜ್ಯದ ವಿವಿಧ ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ ಮಾಡಲಾಗಿದೆ.

ರಾಜ್ಯದಲ್ಲಿರುವ 325 ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರಾಗಿರುವ ಕಾಯಂ ಹುದ್ದೆಗಳಲ್ಲಿ ಶೇ 40ರಷ್ಟು ಹುದ್ದೆಗಳು ಖಾಲಿ ಇವೆ. ನೇಮಕಾತಿ ಪ್ರಕ್ರಿಯೆ ವಿಳಂಬವಾಗುತ್ತಿರುವುದರಿಂದ ಆಡಳಿತಾತ್ಮಕ ಹಾಗೂ ಅಭಿವೃದ್ಧಿ ಕೆಲಸಗಳು ಕುಂಠಿತವಾಗುತ್ತಿವೆ. ಅಲ್ಲದೆ, ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ನಿರ್ದೇಶನದಂತೆ ಖಾಲಿ ಇರುವ ಪರಿಸರ ಎಂಜಿನಿಯರ್‌ಗಳ ಹುದ್ದೆಗಳನ್ನು ಭರ್ತಿಗೊಳಿಸಬೇಕಾಗಿದ್ದು, ವರ್ಗಾವಣೆ ಮಾಡಲಾಗಿದೆ ಎಂದು ನಗರಾಭಿವೃದ್ಧಿ ಇಲಾಖೆ ಅಧಿಸೂಚನೆಯಲ್ಲಿ ತಿಳಿಸಿದೆ.

ಜಿಬಿಎಯಲ್ಲಿದ್ದ ಪರಿಸರ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳಾದ ಸಂತೋಷ್‌ಕುಮಾರ್ ಕಡ್ಡಿ, ಜೆ. ಚಿತ್ರಾ, ಎನ್‌.ಕೆ. ಸಪ್ನಾ, ಬಿ.ಆರ್. ಸೌಮ್ಯಾ, ಆರ್. ವೆಂಕಟೇಶ್, ಜೆ.ಕೆ. ರವಿಕುಮಾರ್, ಎಂ.ಎಸ್. ಮಮತಾ, ಎಂ. ನೇತ್ರಾವತಿ ಅವರನ್ನು ಬಾಗಲಕೋಟೆ, ಕೋಲಾರ, ಚಿತ್ರದುರ್ಗ, ಕೊಡಗು, ಬಳ್ಳಾರಿ, ಕೊಪ್ಪಳ, ದಕ್ಷಿಣ ಕನ್ನಡ, ಯಾದಗಿರಿ ಜಿಲ್ಲೆಯ ವಿವಿಧ ನಗರಸಭೆಗಳಿಗೆ ವರ್ಗಾಯಿಸಲಾಗಿದೆ. ಪರಿಸರ ಎಂಜಿನಿಯರ್‌ಗಳಾದ ಜ್ಯೋತಿ ಜಿ. ಚೌಳರ್ಕರ್, ಎಂ.ಎಸ್. ರೇಖಾ, ಜಿ.ಬಿ. ಪೂರ್ಣಿಮಾ, ಶ್ರೀನಿಧಿ, ಎಲ್. ತೀರ್ಥ ಪ್ರಸಾದ್, ಡಿ. ಲೋಹಿತ್, ಟಿ.ಜೆ. ಶಶಿಕಲಾ, ಎಂ.ಎನ್. ಶೋಭಾ, ಎಂ.ಎಂ. ಅಭಿಲಾಷ, ಶಿಲ್ಪಶ್ರೀ ಅವರನ್ನು ಮಡಿಕೇರಿ, ಕುಶಾಲನಗರ, ಸಕಲೇಶಪುರ, ಕುಮಟಾ, ಮುದ್ದೇಬಿಹಾಳ, ಬಸವನಬಾಗೇವಾಡಿ, ಅಂಕೋಲಾ, ಹೂವಿನಹಡಗಲಿ, ಕಮಲಾಪುರ, ಕಂಪ್ಲಿಗೆ ವರ್ಗಾವಣೆ ಮಾಡಲಾಗಿದೆ.

ಕಾವೇರಿ 6ನೇ ಹಂತ ಜಾರಿಗೆ ತಯಾರಿ

ಜೈಕಾ ತಂಡದೊಂದಿಗೆ ಜಲಮಂಡಳಿ ಅಧಿಕಾರಿಗಳ ಸಭೆ, ಸ್ಥಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಲವು ಭಾಗಗಳು ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಸುವ ಕಾವೇರಿ 6ನೇ ಹಂತದ ನೀರು ಸರಬರಾಜು ಯೋಜನೆಗೆ ಜಲಮಂಡಳಿ ತಯಾರಿ ಆರಂಭಿಸಿದೆ.

₹6,939 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳುತ್ತಿರುವ ಈ ಯೋಜನೆಗೆ ಸಾಲ ನೀಡಲಿರುವ ಜಪಾನ್ ಅಂತರ ರಾಷ್ಟ್ರೀಯ ಸಹಕಾರ ಸಂಸ್ಥೆಯ(ಜೈಕಾ) ಅಧಿಕಾರಿಗಳ ತಂಡ ಬುಧವಾರ ಜಲ ಮಂಡಳಿಯಲ್ಲಿ ಅಧಿಕಾರಿಗ ಳೊಂದಿಗೆ ಚರ್ಚೆ ನಡೆಸಿತು. ನಂತರ ಯೋಜನೆ ಜಾರಿಯಾಗಲಿರುವ ಸ್ಥಳಗಳಿಗೆ ತೆರಳಿ ಪರಿಶೀಲನೆ ನಡೆಸಿತು.

ಮಂಡಳಿ ಅಧ್ಯಕ್ಷ ಡಾ.ರಾಮಪ್ರಸಾತ್ ಮನೋಹರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಯೋಜನೆಯ ಸ್ವರೂಪ, ಮಾರ್ಗ, ಭೂಸ್ವಾಧೀನ ಪ್ರಕ್ರಿಯೆ ಕುರಿತು ಮಾಹಿತಿ ವಿನಿಮಯ ಮಾಡಿಕೊಳ್ಳಲಾಯಿತು.

ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರ ಸಮೀಪದ ಕಟ್ಟೇರಿ ಗ್ರಾಮದ ನೀರು ಸಂಸ್ಕರಣಾ ಘಟಕದಲ್ಲಿ ಶೇಖರಣಾ ಅಣೆಕಟ್ಟೆ ನಿರ್ಮಿಸಿ ಅಲ್ಲಿಂದ ನೀರನ್ನು ಪಂಪ್ ಮಾಡಲಾಗುತ್ತದೆ. ಕಟ್ಟೇರಿಯಿಂದ 82 ಕಿ.ಮೀ. ದೂರದ ರಾಮನಗರ ಸಮೀಪದ ದೇವರ ಹೊಸಹಳ್ಳಿಯಲ್ಲಿ ಶೇಖರಣಾ ಜಲಾಶಯ ನಿರ್ಮಿಸಲಾಗುತ್ತದೆ. ಪಂಪಿಂಗ್ ಮೂಲಕ ಕೆಂಗೇರಿ ಸಮೀಪದ ನೈಸ್ ರಸ್ತೆ ಜಂಕ್ಷನ್‌ನಲ್ಲಿ 3ನೇ ಶೇಖರಣಾ ಜಲಾಶಯ ನಿರ್ಮಿಸಿ ಅಲ್ಲಿ ನೀರನ್ನು ಸಂಗ್ರಹಿಸಲಾಗುತ್ತದೆ. ಜಿಕೆವಿಕೆಯಲ್ಲಿ ನಿರ್ಮಿಸುವ ಶೇಖರಣಾ ಜಲಾಶಯಕ್ಕೆ ನೀರು ಪೂರೈಕೆ ಮಾಡಿ ಅಲ್ಲಿಂದ ನೀರು ನಿಗದಿತ ಪ್ರದೇಶಗಳಿಗೆ ಹರಿಸುವ ಯೋಜನೆ ರೂಪಿಸಲಾಗಿದೆ.

ಮುಖ್ಯಾಂಶಗಳು

- ₹6,939 ಕೋಟಿ ಯೋಜನಾ ವೆಚ್ಚ
- 500 ಎಂಎಲ್‌ಡಿ ನೀರು ಬಳಕೆ
- 2028 ಏಪ್ರಿಲ್‌ಗೆ ಟೆಂಡರ್ ಪ್ರಕ್ರಿಯೆ ಶುರು
- ಯೋಜನೆ ಜಾರಿ ಗುರಿ 2036

ಯೋಜನೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದ್ದು, ಸಿದ್ಧತೆ ಶುರುವಾಗಿದೆ. ನಗರದ ಭವಿಷ್ಯದ ಕುಡಿಯುವ ನೀರಿನ ಬೇಡಿಕೆಗೆ ಅನುಗುಣವಾಗಿ ಯೋಜನೆ ರೂಪಿಸಲಾಗುತ್ತಿದೆ.

ಡಾ.ರಾಮಪ್ರಸಾತ್ ಮನೋಹರ್, ಅಧ್ಯಕ್ಷ ಜಲಮಂಡಳಿ

ಜಲಮಂಡಳಿ ಅಧ್ಯಕ್ಷ ಡಾ.ರಾಮಪ್ರಸಾತ್ ಮನೋಹರ್ ಅವರ ಅಧ್ಯಕ್ಷತೆಯಲ್ಲಿ ಕಾವೇರಿ 6ನೇ ಹಂತದ ನೀರಿನ ಯೋಜನೆ ಜಾರಿ ಕುರಿತು ಜೈಕಾ ತಂಡದೊಂದಿಗೆ ಸಭೆ ನಡೆಯಿತು

ಭೂಸ್ವಾಧೀನ ಪ್ರಕ್ರಿಯೆ ಹೇಗೆ?

ಸುಮಾರು 120 ಕಿ.ಮೀ. ದೂರದವರೆಗೂ ಪೈಪ್‌ಲೈನ್ ಅಳವಡಿಸಲಾಗುತ್ತಿದ್ದು, ಇದಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತದೆ. ಯೋಜನಾ ವೆಚ್ಚವಾಗಿ ₹5,177 ಕೋಟಿ, ಪೈಪ್‌ಲೈನ್ ಮಾರ್ಗದಲ್ಲಿ 130 ಎಕರೆ ಭೂ ಸ್ವಾಧೀನಕ್ಕೆ ₹1,822 ಕೋಟಿ ಬೇಕಾಗಲಿದೆ. ಈ ಕುರಿತು ಹೆಚ್ಚಿನ ವಿವರವನ್ನು ತಂಡ ಪಡೆದುಕೊಂಡಿತು.

'6 ಟಿಎಂಸಿ ಅಡಿ ನೀರಿನ ಪೈಕಿ (500 ಎಂಎಲ್‌ಡಿ) 4 ಟಿಎಂಸಿ ಅಡಿ ನೀರನ್ನು ಬೆಂಗಳೂರು ನಗರದ ನಾಡಪ್ರಭು ಕೆಂಪೇಗೌಡ ಬಡಾವಣೆ, ಶಿವರಾಮ ಕಾರಂತ ಬಡಾವಣೆ ಸಹಿತ ಹಲವು ಬಡಾವಣೆಗಳು, 2 ಟಿಎಂಸಿ ಅಡಿ ನೀರನ್ನು ಬೆಂಗಳೂರಿನ ಉಪನಗರಗಳಾದ ಚಿಕ್ಕಬಾಣಾವರ, ನೆಲಮಂಗಲ, ಹೊಸಕೋಟೆ, ದೇವನಹಳ್ಳಿ, ಬಾಶೆಟ್ಟಿಹಳ್ಳಿ, ವಿಜಯಪುರಕ್ಕೆ ಹಂಚಿಕೆ ಮಾಡಲಾಗುತ್ತದೆ. ಭೂಸ್ವಾಧೀನ ಪ್ರಕ್ರಿಯೆ ಹಂತ ಹಂತವಾಗಿ ಆರಂಭಿಸಲಾಗುತ್ತದೆ' ಎಂದು ಅಧಿಕಾರಿಗಳು ವಿವರಿಸಿದರು.

ರೈಲ್ವೆ ಸಮಾನಾಂತರ ರಸ್ತೆಯಲ್ಲಿ ಅಕ್ರಮವಾಗಿ ಕಸ ವಿಲೇವಾರಿ

ತ್ಯಾಜ್ಯ: ಬ್ಲಿಂಕಿಟ್ ಸಂಸ್ಥೆಗೆ ₹80 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ನಗರ ಪಾಲಿಕೆಯ ವ್ಯಾಪ್ತಿಯ ವಾರ್ಡ್ ಸಂಖ್ಯೆ 9ರಲ್ಲಿ, ಬ್ಯಾಟರಾಯನಪುರ ವಿಭಾಗದ ರೈಲ್ವೆ ಸಮಾನಾಂತರ ರಸ್ತೆಯಲ್ಲಿ ಅಕ್ರಮವಾಗಿ ತ್ಯಾಜ್ಯವನ್ನು ವಿಲೇವಾರಿ ಮಾಡಿರುವವರ ಮೇಲೆ ಕ್ರಮ ಕೈಗೊಳ್ಳಲಾಗಿದೆ.

ಪರಿಶೀಲನೆಯ ವೇಳೆ ಖಾಸಗಿ ಸಂಸ್ಥೆ ಬ್ಲಿಂಕಿಟ್ ವತಿಯಿಂದ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ತ್ಯಾಜ್ಯ ಸುರಿದಿರುವುದು ಪತ್ತೆಯಾಗಿದ್ದು, ಆ ಸಂಸ್ಥೆಗೆ ₹80 ಸಾವಿರ ದಂಡ ವಿಧಿಸಲಾಗಿದೆ. ಬ್ಯಾಟರಾಯನಪುರ ವಿಭಾಗದ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ತೀರ್ಥಪ್ರಸಾದ್ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕಿ ಕವಿತಾ ಅವರು ಕಾರ್ಯಾಚರಣೆ ನಡೆಸಿದರು. ಇಂತಹ ಉಲ್ಲಂಘನೆ ಮರುಕಳಿಸಿದಲ್ಲಿ ಇನ್ನಷ್ಟು ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಆಯುಕ್ತ ಪೊಮ್ಮಲ ಸುನೀಲ್‌ಕುಮಾರ್ ತಿಳಿಸಿದರು.

ಪ್ರತಿದಿನವೂ ವರದಿ: ಪ್ರತಿನಿತ್ಯ ಕಸ ತೆರವು ಕಾರ್ಯವು ಸಮರ್ಪಕವಾಗಿ ನಿರ್ವಹಣೆ ಆಗಬೇಕು. ಈ ನಿಟ್ಟಿನಲ್ಲಿ ತ್ಯಾಜ್ಯ ನಿರ್ವಹಣೆ ಬಗ್ಗೆ ಪ್ರತಿದಿನವೂ ವರದಿ ನೀಡುವಂತೆ ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ತ್ಯಾಜ್ಯ ಬ್ಲ್ಯಾಕ್‌ಸ್ಪಾಟ್‌ಗಳು ಹೆಚ್ಚಾಗಿರುವ ಸ್ಥಳಗಳನ್ನು ಗುರುತಿಸಿ ಅವುಗಳ ನಿರ್ಮೂಲನೆ ಮಾಡಬೇಕು. ಪ್ರತಿ ಬೀದಿಗಳಿಗೆ ನಿಯೋಜನೆ ಮಾಡಿದ ಸ್ವಚ್ಛತೆ ಸಿಬ್ಬಂದಿಯ ವಿವರವನ್ನು ಹಾಗೂ ಅವರು ಅಲ್ಲಿ ಸರಿಯಾಗಿ ಕಾರ್ಯ ನಿರ್ವಹಣೆ ಮಾಡುತ್ತಿರುವ ಬಗ್ಗೆ ಮೇಲುಸ್ತುವಾರಿ ಮಾಡಬೇಕು ಎಂದರು.

₹2 ಲಕ್ಷ ದಂಡ: ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರದ ವಾರ್ಡ್, ಮಾರುತಿ ಮಂದಿರ ಪ್ರದೇಶದಲ್ಲಿ ಅಕ್ರಮವಾಗಿ ಏಕ ಬಳಕೆ ಪ್ಲಾಸ್ಟಿಕ್ ಸಂಗ್ರಹಣೆ ಮತ್ತು ವ್ಯಾಪಾರ ನಡೆಸುತ್ತಿದ್ದವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಬಾಲಾಜಿ ಪಾಲಿಪ್ಯಾಕ್ ಮಳಿಗೆಯವರಿಂದ ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ಪತ್ತೆಯಾಗಿದ್ದು, ₹2 ಲಕ್ಷ ದಂಡ ವಿಧಿಸಲಾಗಿದೆ ಎಂದು ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಘನತ್ಯಾಜ್ಯ ನಿರ್ವಹಣಾ ವಿಭಾಗ ಅಧಿಕಾರಿಗಳು ತಿಳಿಸಿದರು.

ಗೊಬ್ಬರ ಖರೀದಿ, ಉಚಿತ ವಿತರಣೆಗೆ ಚಾಲನೆ

ಬೆಂಗಳೂರು: ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ (ಕೆಸಿಡಿಎಲ್) ಸಹಯೋಗದಲ್ಲಿ ಗ್ರೇಟರ್ ಬೆಂಗಳೂರು ಐಟಿ ಬೆಂಗಳೂರು ಕಂಪನೀಸ್ ಆ್ಯಂಡ್ ಇಂಡಸ್ಟ್ರೀಸ್ ಅಸೋಸಿಯೇಷನ್ (ಜಿಬಿಐಟಿಸಿಐಎ) ಮೂಲಕ ರೈತರಿಗೆ ಉಚಿತವಾಗಿ ಗೊಬ್ಬರ ವಿತರಿಸುವ ಕಾರ್ಯಕ್ರಮಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಜಿಬಿಐಟಿಸಿಐಎಯು ತನ್ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯ ಭಾಗವಾಗಿ ಮೈತ್ರಿ ಸರ್ವ ಸೇವಾ ಸಮಿತಿಯ ಮೂಲಕ, ಬೆಂಗಳೂರಿನಲ್ಲಿ ಉತ್ಪಾದನೆಯಾಗುತ್ತಿರುವ ಸಾವಯವ ಗೊಬ್ಬರವನ್ನು ಖರೀದಿಸಿ, ರೈತರಿಗೆ ಉಚಿತವಾಗಿ ವಿತರಿಸುತ್ತದೆ ಎಂದು ಕೆಸಿಡಿಸಿಎಲ್ ಅಧ್ಯಕ್ಷ ಎ.ಎನ್. ನಟರಾಜ್ ಗೌಡ ತಿಳಿಸಿದರು.

'ನಗರದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಮರ್ಪಕವಾಗಿ ಸಂಸ್ಕರಿಸಿ, ಅದನ್ನು ಮೌಲ್ಯಯುತ ಸಂಪನ್ಮೂಲವಾಗಿ ಪರಿವರ್ತಿಸುವುದು ಇಂದಿನ ಅಗತ್ಯ. ಕಾಂಪೋಸ್ಟ್ ಉತ್ಪಾದನೆ ಮತ್ತು ಬಳಕೆಯನ್ನು ಉತ್ತೇಜಿಸುವ ಮೂಲಕ ಪರಿಸರ ಸಂರಕ್ಷಣೆಗೂ, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದಕ್ಕೂ ಈ ಉಪಕ್ರಮ ಸಹಕಾರಿ ಆಗಲಿದೆ' ಎಂದು ಅಭಿಪ್ರಾಯಪಟ್ಟರು.

ಈ ಯೋಜನೆಯ ಪ್ರಯೋಜನವನ್ನು ಚಿಕ್ಕಬಳ್ಳಾಪುರ ಹಾಗೂ ಕೋಲಾರ ಸೇರಿದಂತೆ ವಿವಿಧ ಜಿಲ್ಲೆಗಳ ರೈತರು ಪಡೆಯಲಿದ್ದಾರೆ ಎಂದು ಜಿಬಿಐಟಿಸಿಐಎ ಅಧ್ಯಕ್ಷ ಗಿರೀಶ್ ತಿಳಿಸಿದರು.

ಜಿಬಿಐಟಿಸಿಐಎ ಸಿಎಸ್‌ಆರ್ ಮುಖ್ಯಸ್ಥರಾದ ವಾಸುದೇವನ್, ಮೈತ್ರಿ ಸರ್ವ ಸೇವಾ ಸಮಿತಿಯ ಪದಾಧಿಕಾರಿಗಳಾದ ಹರೀಶ್ ಬಾಬು, ವಿಶಾಲ್ ಉಪಸ್ಥಿತರಿದ್ದರು.

ಕೋಲಾರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಕೋಲಾರ
ಎನ್.ಹೆಚ್.-75, ಹುತ್ತೂರು ಅಂಚೆ. ಕೋಲಾರ-563 102. ಫೋನ್: 08152 282300 ಫ್ಯಾಕ್ಸ್: 08152 282303

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕ್ರ.ಸಂ.ಕೋಹಾಒ/ಶೇ.ತಾಂ./ಇ ಟೆಂಡರ್/ರಾ.ವಿ/197/2026-27 ದಿನಾಂಕ:09.04.2026

ಕೋಲಾರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಕೋಲಾರ ಎನ್. ಹೆಚ್-75, ಹುತ್ತೂರು ಅಂಚೆ, ಕೋಲಾರ-563102. ರವರಿಂದ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರ ರಾಸುಗಳಿಗೆ (ಮಿಶ್ರ ತಳಿ ಹೈನುರಾಸುಗಳು ಮತ್ತು ಪಡ್ಡೆಗಳು, ಸ್ಥಳೀಯ ಹೈನುರಾಸುಗಳು ಮತ್ತು ಎಮ್ಮೆಗಳು) ಗುಂಪು ವಿಮಾ ಸೌಲಭ್ಯವನ್ನು ಒಂದು ವರ್ಷದ ಅವಧಿಗೆ ಆಸಕ್ತಿಯುಳ್ಳ ಮತ್ತು IRDAI ನಲ್ಲಿ ನೋಂದಣಿಯಾಗಿರುವ ಅರ್ಹ ಜೀವ ವಿಮಾ ಕಂಪನಿಗಳಿಂದ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ಗಳನ್ನು ಇ-ಟೆಂಡರ್ ಮೂಲಕ ಅಹ್ವಾನಿಸಲಾಗಿದೆ.

ವಿವರಗಳು ಈ ಕೆಳಕಂಡಂತಿವೆ

1	ಇ-ಟೆಂಡರ್ ಲಭಿಸುವ ದಿನಾಂಕ ಮತ್ತು ಸಮಯ	ದಿನಾಂಕ: 10.04.2026 ರಿಂದ 11.05.2026 ಸಂಜೆ 5:30 ಗಂಟೆಯವರೆಗೆ.
2	ಟೆಂಡರ್ ಬಗ್ಗೆ ಸ್ಪಷ್ಟನೆ/ ಆಕ್ಷೇಪಣೆ ಪಡೆಯುವ ಕೊನೆಯ ದಿನಾಂಕ: ಮತ್ತು ಸಮಯ	ದಿನಾಂಕ: 04.05.2026 ರಂದು ಸಂಜೆ 5:30 ಗಂಟೆಯವರೆಗೆ.
3	ಟೆಂಡರ್ ಸಲ್ಲಿಸುವ / ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 11.05.2026 ರಂದು ಸಂಜೆ 5:30 ಗಂಟೆಯ ಒಳಗೆ.
4	ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ:13.05.2026 ರಂದು ಬೆಳಗ್ಗೆ 10.00 ಗಂಟೆಯ ನಂತರ.
5	ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 14.05.2026 ರಂದು ಬೆಳಗ್ಗೆ 10.00 ಗಂಟೆಯ ನಂತರ
6	ತಾಂತ್ರಿಕ / ವಾಣಿಜ್ಯ ಟೆಂಡರ್‌ಗಳನ್ನು ತೆರೆಯುವ ಸ್ಥಳ	ಕೋಲಾರ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಮಂಡಳಿ ಸಭಾಂಗಣ ಕೋಲಾರ ಡೇರಿ, ಎನ್. ಹೆಚ್.-75, ಹುತ್ತೂರು ಅಂಚೆ.

ಟೆಂಡರ್ ಸಂಬಂಧ ನೀಡಬೇಕಾದ ಅರ್ಜಿ ಶುಲ್ಕ, ಇ.ಎಂ.ಡಿ ಮೊತ್ತ, ಭದ್ರತಾ ಠೇವಣೆ ಹಾಗೂ ಟೆಂಡರ್ ಷರತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ https;//www.kppp.karnataka.gov.in ನಲ್ಲಿ ಲಭ್ಯವಿರುತ್ತದೆ.

ಸಹಿ/-ವ್ಯವಸ್ಥಾಪಕ ನಿರ್ದೇಶಕರು
(ಕೋಲಾರ ಹಾಲು ಒಕ್ಕೂಟ) ಇ-ಟೆಂಡರ್ ಅಹ್ವಾನ ಪ್ರಾಧಿಕಾರ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು-560011.

ಸಂಖ್ಯೆ: ಕಾಇಂ/ಸನೀ/ಸ.ಇಂ-05/ಟೆಂಡರ್ ಪ್ರಕಟಣೆ ಸಂ.01/2026-27/1101 ದಿನಾಂಕ: 15.04.2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರರು ಲೆಕ್ಕ ಶೀರ್ಷಿಕೆ : 4702 - ಆಧುನೀಕರಣ ಕಾಮಗಾರಿಗಳು ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡಂತೆ ಕಾಮಗಾರಿಗಳ ಕೆಟಿಪಿಪಿ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW ರ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗೆ ಕೆಪಿಪಿಪಿ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.

ಕಾಮಗಾರಿಯ ಹೆಸರು :- ಬೆಂಗಳೂರು ದಕ್ಷಿಣ ಜಿಲ್ಲೆ, ಮಾಗಡಿ ತಾಲ್ಲೂಕು, ಮಾಗಡಿ ಗೌರಮ್ಮನ ಕೆರೆಯ ಕೋಡಿಯಿಂದ ಭರ್ಗಾವತಿ ಕೆರೆ ಸೇರುವ ಹಳ್ಳಕ್ಕೆ ತಿರುಮಲೆ ಬಳಿ ಡ್ರೈನ್ ನಿರ್ಮಾಣ ಕಾಮಗಾರಿ- 2ನೇ ಕರೆ.

ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ): **ರೂ.401.62,** ಇಎಂಡಿ (ರೂಗಳಲ್ಲಿ): **ರೂ.6,02,500.00.**
ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 11 ತಿಂಗಳು ಮಳೆಗಾಲ ಸೇರಿದಂತೆ.

(1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ: **15.04.2026 ಸಂಜೆ 16.00** ಗಂಟೆಯ ನಂತರ, (2) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **14.05.2026 ಸಂಜೆ 15.00** ಗಂಟೆಯವರೆಗೆ. (3) ಪ್ರೀ ಬಿಡ್ ಮೀಟಿಂಗ್ ದಿನಾಂಕ ಮತ್ತು ವೇಳೆ: **28.04.2026 ಸಂಜೆ 15.00** ಗಂಟೆಗೆ. (4) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 14.05.2026 ಸಂಜೆ 16.30 ಗಂಟೆಯವರೆಗೆ** (5) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **16.05.2026 ಬೆಳಗ್ಗೆ 11.30** ಗಂಟೆಗೆ. (5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ**

ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಟ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ- 4 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ

ವಾಸಾಸಂಇ/ವಾ.ಪ್ರ/198/ಶಿರಡಿಸಾಯಿ/2026-27



ಕಲ್ವಿ ಜಯೀತಾ | ಬಪಾತು ತರುಣ್ಯಾ | ಪ್ರಕೃತಿ ಕೆ.ಎನ್. | ಲೀಲಾ ಮಾನುಷ್ ಜಿ | ಲಾಸ್ಯಾ ಮೆಕಲಾ

ಸಿಬಿಎಸ್‌ಇ: ಚೈತನ್ಯ ಶಾಲೆ ಸಾಧನೆ

ಬೆಂಗಳೂರು: ಶ್ರೀ ಚೈತನ್ಯ ಟೆಕ್ನೊ ಸ್ಕೂಲ್ಸ್‌ನ ಐವರು ವಿದ್ಯಾರ್ಥಿಗಳು ಸಿಬಿಎಸ್‌ಇ 10ನೇ ತರಗತಿಯಲ್ಲಿ ಅತಿಹೆಚ್ಚು ಅಂಕಗಳಿಸಿದ್ದಾರೆ.

ಕಲ್ವಿ ಜಯೀತಾ, ಬಪಾತು ತರುಣ್ಯಾ ಅವರು 500ಕ್ಕೆ 499 ಅಂಕ ಗಳಿಸಿದ್ದರೆ, ಪ್ರಕೃತಿ ಕೆ.ಎನ್. ಲೀಲಾ ಮಾನುಷ್ ಜಿ, ಲಾಸ್ಯಾ ಮೆಕಲಾ ಅವರು 498 ಅಂಕ ಪಡೆದಿದ್ದಾರೆ ಎಂದು ಶ್ರೀ ಚೈತನ್ಯ ಎಜ್ಯುಕೇಷನಲ್ ಇನ್‌ಸ್ಟಿಟ್ಯೂಷನ್‌ನ ನಿರ್ದೇಶಕಿ ಸೀಮಾ ಬೋಪಣ್ಣ ತಿಳಿಸಿದ್ದಾರೆ.

ಆಹಾನ್ ಸಂಜೀವನ್ | ಬಿ.ಸಂಜನಾ ರೆಡ್ಡಿ | ಭುವಿ ವೀರೇಂದ್ರ ಸುತಾರ್ | ಪಿ.ನಿತೀಶ್ ರಾಜ್ | ಶೌರ್ಯಾ ಮನೋಜ್

ನಾರಾಯಣ ಶಾಲೆಗಳ ಉತ್ತಮ ಸಾಧನೆ

ಬೆಂಗಳೂರು: ಸಿಬಿಎಸ್‌ಇ 10ನೇ ತರಗತಿ ಫಲಿತಾಂಶದಲ್ಲಿ ನಾರಾಯಣ ಸ್ಕೂಲ್ಸ್ ಉತ್ತಮ ಸಾಧನೆ ಮಾಡಿದೆ.

ಬನ್ನೇರುಘಟ್ಟ ಶಾಲೆಯ ಆಹಾನ್ ಸಂಜೀವನ್ ಮತ್ತು ಗೋವಿನಗೆರೆ ಸರಸ್ವತಿ ಭವನ ಶಾಲೆಯ ಬಿ.ಸಂಜನಾ ರೆಡ್ಡಿ ಅವರು 500ಕ್ಕೆ ತಲಾ 498 ಅಂಕ ಗಳಿಸಿದ್ದಾರೆ. ಸಹಕಾರ ನಗರ ಶಾಲೆಯ ಭುವಿ ವೀರೇಂದ್ರ ಸುತಾರ್, ಶೌರ್ಯಾ ಮನೋಜ್ ವಟ್ಟಂವರ್ ಹಾಗೂ ಮಾರತ್‌ಹಳ್ಳಿ ಶಾಲೆಯ ಪಿ.ನಿತೀಶ್ ರಾಜ್ ತಲಾ 497 ಅಂಕ ಗಳಿಸಿದ್ದಾರೆ ಎಂದು ನಾರಾಯಣ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ನ ನಿರ್ದೇಶಕರಾದ ಡಾ. ಸಿಂಧೂರ ನಾರಾಯಣ ತಿಳಿಸಿದ್ದಾರೆ.

ಟೈಲರಿಂಗ್ ತರಬೇತಿ ಮೇ 11ರಿಂದ

ಬೆಂಗಳೂರು: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್ ಸಹಯೋಗದಲ್ಲಿ ನಡೆಯುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಮೇ 11ರಿಂದ ಮಹಿಳೆಯರಿಗೆ ಟೈಲರಿಂಗ್ ತರಬೇತಿ ಹಮ್ಮಿಕೊಳ್ಳಲಾಗಿದೆ.

18ರಿಂದ 50 ವರ್ಷ ವಯೋಮಾನದ ಕನ್ನಡ ಭಾಷೆ ಓದಲು, ಬರೆಯಲು ಬರುವ ನಿರುದ್ಯೋಗಿ ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಮೊಬೈಲ್: 9380162042 ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆ ನಿರ್ದೇಶಕರು ತಿಳಿಸಿದ್ದಾರೆ.

ಕೆ.ಆರ್. ಮಾರುಕಟ್ಟೆಯಲ್ಲಿ ಬೆಂಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆ.ಆರ್. ಮಾರುಕಟ್ಟೆ ಪ್ರದೇಶದಲ್ಲಿ ಬುಧವಾರ ಮುಂಜಾನೆ ಬೆಂಕಿ ಅವಘಡ ಸಂಭವಿಸಿ, ಕೆಲ ಸಮಯ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಮಾರುಕಟ್ಟೆಯ ಪ್ರದೇಶದಲ್ಲಿ ಕಸದ ರಾಶಿ ಹಾಕಲಾಗಿತ್ತು. ಕಸದ ರಾಶಿಯಲ್ಲಿ ಸಣ್ಣ ಪ್ರಮಾಣದಲ್ಲಿ ಕಾಣಿಸಿಕೊಂಡ ಬೆಂಕಿಯು ವ್ಯಾಪಿಸುತ್ತಲೇ ಸಾಗಿತು. ಅಗ್ನಿ ಅವಘಡದಿಂದ ಮಾರುಕಟ್ಟೆ ಸುತ್ತಮುತ್ತ ದಟ್ಟ ಹೊಗೆ ಆವರಿಸಿಕೊಂಡಿತ್ತು. ಅಕ್ಕಪಕ್ಕದ ಅಂಗಡಿಗಳಿಗೂ ಬೆಂಕಿ ವ್ಯಾಪಿಸುವ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ನಿರಂತರ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಹೀಗಾಗಿ ಹೆಚ್ಚಿನ ಹಾನಿ ಸಂಭವಿಸುವುದು ತಪ್ಪಿತು.

Government of Bharat

ಈಗ ನೇತೃತ್ವದ ಸರದಿ,
ನಾರಿ ಶಕ್ತಿಗೆ ವಂದಿಸುವ ಜವಾಬ್ದಾರಿ
#NariShaktiVandan
CBC 22201/13/0012/2627

ದೇಶದ ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ
ಶೇಕಡ 33 ರಷ್ಟು ಮೀಸಲಾತಿಯ ಖಾತ್ರಿ

4 ಕೋಟಿಗೂ ಹೆಚ್ಚು ಪ್ರಧಾನಮಂತ್ರಿ ಆವಾಸ್ ಮನೆಗಳು, ಬಹುಪಾಲು ಮಹಿಳೆಯರ ಹೆಸರಿನಲ್ಲಿ

35 ಕೋಟಿಗೂ ಹೆಚ್ಚು ಮಹಿಳೆಯರಿಗೆ ಮುದ್ರಾ ಸಾಲ ಲಭಿಸಿದೆ

ಅಪಘಾತ: ಪತ್ನಿ ಸಾವು, ಪತಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಜಾಲ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಅರೆಬಿನ್ನ ಮಂಗಲದ ಬಳಿ ಸ್ಕೂಟರ್ ನಿಯಂತ್ರಣ ತಪ್ಪಿ ಚರಂಡಿಗೆ ಉರುಳಿದ ಪರಿಣಾಮ ಪತ್ನಿ ಮೃತಪಟ್ಟು, ಪತಿ ಗಾಯಗೊಂಡಿರುವ ಘಟನೆ ಮಂಗಳವಾರ ರಾತ್ರಿ ನಡೆದಿದೆ.

ಅರೆಬಿನ್ನಮಂಗಲದ ನಿವಾಸಿ ನೇತ್ರಾ (30) ಮೃತಪಟ್ಟವರು. ಅವರ ಪತಿ ಅನಿಲ್ ಗಾಯಗೊಂಡಿದ್ದು, ಅಪಾಯದಿಂದ ಪಾರಾಗಿದ್ದಾರೆ.

ನೇತ್ರಾ–ಅನಿಲ್ ದಂಪತಿ ಬಾಗಲೂರು ಸಂತೆಗೆ ಮಂಗಳವಾರ ಸಂಜೆ ತೆರಳಿದ್ದರು. ಸಂತೆಯಲ್ಲಿ ವಿವಿಧ ಸಾಮಗ್ರಿ ಖರೀದಿಸಿ ರಾತ್ರಿ 7.30ರ ಸುಮಾರಿಗೆ ಮನೆಗೆ ಸ್ಕೂಟರ್‌ನಲ್ಲಿ ವಾಪಸ್ ಬರುತ್ತಿದ್ದರು. ಯಡಿಯೂರು ಮಾರ್ಗದ ಅರೆಬಿನ್ನ ಮಂಗಲದ ರಸ್ತೆಬದಿಯಲ್ಲಿ ಚರಂಡಿ ಕಾಮಗಾರಿ ನಡೆಯುತ್ತಿತ್ತು. ಕಾಮಗಾರಿ ಸ್ಥಳದಲ್ಲಿ ದೊಡ್ಡಗಾತ್ರದ ಪೈಪ್‌ಗಳನ್ನು ರಸ್ತೆಬದಿಯಲ್ಲಿ ಹಾಕಲಾಗಿತ್ತು. ಕಿರಿದಾದ ರಸ್ತೆಯಲ್ಲಿ ದಂಪತಿ ಸ್ಕೂಟರ್‌ನಲ್ಲಿ ಸಾಗುತ್ತಿದ್ದರು. ಪೈಪ್‌ಗೆ ಡಿಕ್ಕಿ ಹೊಡೆದ ಸ್ಕೂಟರ್ ನಿಯಂತ್ರಣ ತಪ್ಪಿತ್ತು. ಹಿಂಬದಿಯಲ್ಲಿ ಕುಳಿತಿದ್ದ ನೇತ್ರಾ ಕೆಳಕ್ಕೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದರು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಅವರು ಮೃತಪಟ್ಟರು. ಅನಿಲ್ ಸಹ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವಾಟರ್ ಟ್ಯಾಂಕ್ ವಾಹನದ ಚಾಲಕರಾಗಿ ಅನಿಲ್ ಕೆಲಸ ಮಾಡುತ್ತಿದ್ದರು ಎಂದು ಸಂಚಾರ ಪೊಲೀಸರು ಹೇಳಿದರು.

ಚಿಕ್ಕಜಾಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಡಿಯಿಂದ ತಳ್ಳಿ ತಾಯಿಯ ಕೊಲೆ

ಆರೋಪಿ ಬಂಧನ, ರಾಜರಾಜೇಶ್ವರಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಸಿ.ವೆಂಕಟೇಶ್

ಸಾವಿತ್ರಮ್ಮ

ಅಪರಾಧ ಸುದ್ದಿ

ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ ತಾಯಿಯ ಆರೈಕೆ ಮಾಡುವುದು ಕಷ್ಟವೆಂದು ಕಟ್ಟಡದ ನಾಲ್ಕನೇ ಮಹಡಿಯಿಂದ ಕೆಳಗೆ ತಳ್ಳಿ ಕೊಲೆ ಮಾಡಿದ ಪುತ್ರನನ್ನು ರಾಜರಾಜೇಶ್ವರಿನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸಾವಿತ್ರಮ್ಮ (72) ಕೊಲೆಯಾದ ವೃದ್ಧೆ. ಕೃತ್ಯ ಎಸಗಿದ ಆರೋಪಿ ಸಿ.ವೆಂಕಟೇಶ್(42) ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಆರ್.ಆರ್ ನಗರದ ಬಿಇಎಂಎಲ್ ಲೇಔಟ್‌ನಲ್ಲಿ ಬಾಡಿಗೆ ಮನೆಯ ಎರಡನೇ ಮಹಡಿಯಲ್ಲಿ ಸಾವಿತ್ರಮ್ಮ, ಅವರ ಪುತ್ರ ವೆಂಕಟೇಶ್ ಹಾಗೂ ವೆಂಕಟೇಶ್ ಪತ್ನಿ ನೆಲಸಿದ್ದರು. ವೆಂಕಟೇಶ್ ಮಾರಾಟ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

'ಸಾವಿತ್ರಮ್ಮ ಅವರು ಪಾರ್ಶ್ವವಾಯು ಪರಿಣಾಮದಿಂದ ಅಂಗಾಂಗಗಳ ಸ್ವಾಧೀನ ಕಳೆದುಕೊಂಡಿದ್ದರು. ಅವರಿಗೆ ನಡೆದಾಡಲು ಸಾಧ್ಯವಾಗುತ್ತಿರಲಿಲ್ಲ. ಬುಧವಾರ ಬೆಳಿಗ್ಗೆ ತಾಯಿಯನ್ನು ನಾಲ್ಕನೇ ಮಹಡಿಗೆ ಎತ್ತಿಕೊಂಡು ಹೋಗಿದ್ದ ಆರೋಪಿ ಅಲ್ಲಿಂದ ತಳ್ಳಿ ಕೊಲೆ ಮಾಡಿದ್ದಾನೆ. ಕೆಳಗೆ ಬಿದ್ದ ರಭಸಕ್ಕೆ ವೃದ್ಧೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಆರೋಪಿಯನ್ನು ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ. ಕಳೆದ ಐದು ವರ್ಷದಿಂದ ತಾಯಿ ಪಾರ್ಶ್ವವಾಯು ಪೀಡಿತರಾಗಿದ್ದರು. ಪ್ರತಿನಿತ್ಯ ನೋವು ಅನುಭವಿಸುತ್ತಿದ್ದರು. ಕೆಲಸ ಮುಗಿಸಿಕೊಂಡು ಮನೆಗೆ ಬಂದಾಗ ನೋವಿನಿಂದ ಬಳಲುತ್ತಿರುವುದು ಗೊತ್ತಾಗುತ್ತಿತ್ತು. ಅವರು ಕಷ್ಟಪಡುವುದನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೇ ಅವರ ಆರೈಕೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಅದೇ ಕಾರಣಕ್ಕೆ ನಾಲ್ಕನೇ ಮಹಡಿಗೆ ಕರೆದೊಯ್ದು ಕೃತ್ಯ ಎಸಗಿರುವುದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ. ವಿಚಾರಣೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಮನೆಯ ಮಾಲೀಕ ಇ.ವಿಕ್ರಂ ನೀಡಿದ ದೂರಿನ ಮೇಲೆ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 103 (ಕೊಲೆ) ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಸ್ಥಳಕ್ಕೆ ಪಶ್ಚಿಮ ವಿಭಾಗದ ಡಿಸಿಪಿ ಎನ್.ಯತೀಶ್, ಬ್ಯಾಟರಾಯನಪುರ ಉಪ ವಿಭಾಗದ ಎಸಿಪಿ ಎನ್.ಚಂದನ್ ಕುಮಾರ್, ರಾಜರಾಜೇಶ್ವರಿನಗರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಬಿ.ಎಂ. ಶಿವಕುಮಾರ್ ಅವರು ಅಪರಾಧ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಬದಲಾವಣೆಗೆ ನಕಲಿ ನೋಟು ತಂದಿದ್ದ ಆರೋಪಿ ಸೆರೆ

ಬೆಂಗಳೂರು: ₹2 ಸಾವಿರ ಮುಖಬೆಲೆಯ ನಕಲಿ ನೋಟುಗಳನ್ನು ಬದಲಾಯಿಸಿಕೊಡುವಂತೆ ಭಾರತೀಯ ರಿಸರ್ವ್ ಬ್ಯಾಂಕ್ ಕಚೇರಿಗೆ ತಂದಿದ್ದ ಆರೋಪಿಯನ್ನು ಹಲಸೂರು ಗೇಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ನಾಗಶೆಟ್ಟಿಹಳ್ಳಿಯ ನಿವಾಸಿ ಎಸ್.ವಿ. ರಮೇಶ್ (52) ಬಂಧಿತ.

ಚಲಾವಣೆಯಿಂದ ವಾಪಸ್ ಪಡೆದ ₹2 ಸಾವಿರ ಮುಖಬೆಲೆಯ 375 ನೋಟುಗಳನ್ನು ನೃಪತುಂಗ ರಸ್ತೆಯಲ್ಲಿ ಇರುವ ಆರ್‌ಬಿಐ ಕಚೇರಿಗೆ ಆರೋಪಿ ಏಪ್ರಿಲ್ 9ರಂದು ತಂದಿದ್ದ. ನೋಟುಗಳನ್ನು ತೆಗೆದುಕೊಂಡು ₹7.50 ಲಕ್ಷ ನೀಡುವಂತೆ ಆರೋಪಿ ಕೋರಿದ್ದ. ಆರ್‌ಬಿಐ ಕಚೇರಿಯಲ್ಲಿದ್ದ ಅಧಿಕಾರಿಗಳು ನೋಟುಗಳನ್ನು ಪರಿಶೀಲನೆ ನಡೆಸಿದ್ದರು. ಆಗ ನಕಲಿ ನೋಟುಗಳು ಎಂಬುದು ಕಂಡುಬಂದಿತ್ತು. ತಕ್ಷಣವೇ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದರು ಎಂದು ಪೊಲೀಸರು ಹೇಳಿದರು.

ಆರ್‌ಬಿಐನ ಸಹಾಯಕ ಪ್ರಧಾನ ವ್ಯವಸ್ಥಾಪಕ ಭೀಮ್ ಚೌಧರಿ ನೀಡಿದ ದೂರಿನ ಮೇಲೆ ಆರೋಪಿಯ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ. ತನಿಖೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ವಿಶೇಷ ತಂಡ ರಚನೆ: 'ಈ ಪ್ರಕರಣದ ಹಿಂದೆ ದೊಡ್ಡ ಜಾಲ ಇರುವುದು ಕಂಡುಬಂದಿದೆ. ನಕಲಿ ನೋಟುಗಳನ್ನು ಎಲ್ಲಿ ಮುದ್ರಿಸಲಾಗುತ್ತಿದೆ, ಈ ಜಾಲದ ಹಿಂದೆ ಯಾರಿದ್ದಾರೆ ಎಂಬುದನ್ನು ಪತ್ತೆಹಚ್ಚಲು ವಿಶೇಷ ಪೊಲೀಸ್ ತಂಡ ರಚಿಸಲಾಗಿದೆ' ಎಂದು ಪೊಲೀಸರು ಹೇಳಿದರು.

2023ರ ಮೇ 19ರಂದು ₹2 ಸಾವಿರ ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಘೋಷಿಸಿತ್ತು. ನೋಟುಗಳನ್ನು ಚಲಾವಣೆಯಿಂದ ಹಿಂಪಡೆದಿದ್ದರೂ, ಸಾರ್ವಜನಿಕರಿಗೆ ಆರ್‌ಬಿಐ ಕಚೇರಿಗಳಲ್ಲಿ ಇವುಗಳನ್ನು ಬದಲಾಯಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಒಬ್ಬ ವ್ಯಕ್ತಿ ಏಕಕಾಲಕ್ಕೆ ಗರಿಷ್ಠ ₹20 ಸಾವಿರ ಮೌಲ್ಯದ ನೋಟುಗಳನ್ನು ಮಾತ್ರ ಬದಲಾಯಿಸಬಹುದು ಎಂದು ಮೂಲಗಳು ಹೇಳಿವೆ.

ವೇಶ್ಯಾವಾಟಿಕೆ: ನಾಲ್ವರು ಮಹಿಳೆಯರ ಬಂಧನ

ಬೆಂಗಳೂರು: ವೇಶ್ಯಾವಾಟಿಕೆ ನಡೆಸುತ್ತಿದ್ದ ಮನೆಯೊಂದರ ಮೇಲೆ ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಸಿಬ್ಬಂದಿ ದಾಳಿ ನಡೆಸಿ, ವೇಶ್ಯಾವಾಟಿಕೆ ನಡೆಸುತ್ತಿದ್ದ ನಾಲ್ವರು ಮಹಿಳೆಯರನ್ನು ಬಂಧಿಸಿದ್ದಾರೆ. ಹೊರ ರಾಜ್ಯದ ಇಬ್ಬರು ಸೇರಿದಂತೆ ನಾಲ್ವರು ಮಹಿಳೆಯರನ್ನು ರಕ್ಷಿಸುವಲ್ಲಿ ಯಶಸ್ವಿ ಆಗಿದ್ದಾರೆ.

ಖಚಿತ ಮಾಹಿತಿ ಆಧರಿಸಿ ವಿಜಯನಗರ, ರಾಮಸ್ವಾಮಿಪಾಳ್ಯ ಮುಖ್ಯರಸ್ತೆ, ಕರುಮಾರಿಯಮ್ಮ ದೇವಸ್ಥಾನದ ಬಳಿಯೊಂದರ ಮನೆ, ಬಾಣಸವಾಡಿ, ಅಂದ್ರಹಳ್ಳಿ ಮುಖ್ಯರಸ್ತೆ, ವೀರಭದ್ರೇಶ್ವರ ನಗರ, ಬ್ಯಾಡರಹಳ್ಳಿಯಲ್ಲಿರುವ ಮನೆಗಳ ಮೇಲೆ ದಾಳಿ ನಡೆಸಲಾಯಿತು. ಮನೆಗಳನ್ನು ಬಾಡಿಗೆಗೆ ಪಡೆದು ಹೊರ ರಾಜ್ಯದ ಮಹಿಳೆಯರನ್ನು ಕರೆಸಿಕೊಂಡು ವೇಶ್ಯಾವಾಟಿಕೆ ನಡೆಸುತ್ತಿದ್ದರು. ಆರೋಪಿಗಳನ್ನು ಬಂಧಿಸಿ ನಾಲ್ವರು ಮಹಿಳೆಯರನ್ನು ರಕ್ಷಿಸಲಾಗಿದೆ ಎಂದು ಸಿಸಿಬಿ ಮೂಲಗಳು ಹೇಳಿವೆ.

'ಬಂಧಿತ ಮಹಿಳೆಯರನ್ನು ವಿಚಾರಣೆ ನಡೆಸಲಾಗಿದೆ. ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಆರೋಪಿಗಳು ವೇಶ್ಯಾವಾಟಿಕೆ ನಡೆಸುತ್ತಿದ್ದರು ಎಂಬುದು ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

ಮನೆಗೆ ನುಗ್ಗಿ ಆಭರಣ ಕಳ್ಳತನ: ಬಾಲಕ ಸೇರಿ ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಪುನೀತ್

ಶಶಿಕುಮಾರ್

ಅಕ್ಷಯ್

ಬೆಂಗಳೂರು: ಮನೆಗೆ ನುಗ್ಗಿ ಚಿನ್ನದ ಆಭರಣ ಹಾಗೂ ನಗದು ಕಳ್ಳತನ ಮಾಡಿಕೊಂಡು ಪರಾರಿ ಆಗುತ್ತಿದ್ದ ಬಾಲಕ ಸೇರಿದಂತೆ ನಾಲ್ವರು ಆರೋಪಿಗಳನ್ನು ಕೋಣನಕುಂಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕಾಳೇನ ಅಗ್ರಹಾರ ಒಂದನೇ ಕ್ರಾಸ್ ನಿವಾಸಿ ಎಸ್.ಪುನೀತ್ ಕುಮಾರ್ ಅಲಿಯಾಸ್ ಅಭಿ (22), ಕೆಂಪೇಗೌಡ ಬಡಾವಣೆಯ ಶಶಿಕುಮಾರ್ (41), ತೆಲಂಗಾಣ ರಾಜ್ಯದ ಅಕ್ಷಯ್ (21) ಬಂಧಿತರು. ಇದೇ ಪ್ರಕರಣದಲ್ಲಿ ಮೊದಲ ಆರೋಪಿ ಬಾಲಕ ಆಗಿದ್ದು, ಆತನನ್ನು ಬಂಧಿಸಿ ಬಾಲಮಂದಿರಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಬಂಧಿತರಿಂದ ₹14 ಲಕ್ಷ ಮೌಲ್ಯದ 113 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಗೊಟ್ಟಿಗೆರೆ ಶಂಕರ್‌ನಾಗ್ ರಸ್ತೆಯ ನಿವಾಸಿ ರೇಣುಕಾ ಮನೆಯಲ್ಲಿ ಆರೋಪಿಗಳು ಕಳ್ಳತನ ಮಾಡಿದ್ದರು. ರೇಣುಕಾ ನೀಡಿದ ದೂರಿನ ಮೇಲೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಹಲವು ಪ್ರಕರಣಗಳಲ್ಲಿ ಆರೋಪಿಗಳು ಭಾಗಿ ಆಗಿರುವುದು ಪತ್ತೆಯಾಗಿದೆ ಎಂದು ಪೊಲೀಸರು ಹೇಳಿದರು.

ಮಾರ್ಚ್ 13ರಂದು ರೇಣುಕಾ ಅವರು ಮನೆಯ ಬಾಗಿಲಿಗೆ ಬೀಗ ಹಾಕಿಕೊಂಡು ಕೀ ಅನ್ನು ಕಿಟಕಿ ಬಳಿ ಇಟ್ಟು ತೆರಳಿದ್ದರು. ಕಿಟಕಿಯ ಬಳಿ ಕೀ ಇರುವುದನ್ನು ಗಮನಿಸಿದ್ದ ಆರೋಪಿಗಳು, ಬಾಗಿಲು ತೆರೆದು ಎರಡು ಜೊತೆ ಚಿನ್ನದ ಓಲೆ, ಎರಡು ಚಿನ್ನದ ಉಂಗುರ, ಎರಡು ಬೆಳ್ಳಿಯ ನಾಣ್ಯಗಳು, ನಗದು ಕಳ್ಳತನ ಮಾಡಿಕೊಂಡು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ಕೆ.ಎಸ್. ಬೃಂದಾಶ್ರೀ ಎಂಬುವರ ಮನೆಗೂ ಇದೇ ಆರೋಪಿಗಳು ನುಗ್ಗಿ ಆಭರಣ ದೋಚಿ ಪರಾರಿ ಆಗಿದ್ದರು. ಮನೆಯಲ್ಲಿದ್ದ ಎರಡು ಜೊತೆ ಚಿನ್ನದ ಓಲೆ, ಒಂದು ಚಿನ್ನದ ಉಂಗುರ, ಒಂದು ನೆಕ್ಲೇಸ್ ಕಳವು ಮಾಡಿದ್ದರು. ಕಾರ್ಯಕ್ರಮಕ್ಕೆಂದು ಬೃಂದಾಶ್ರೀ ಕುಟುಂಬಸ್ಥರು ಮೈಸೂರಿಗೆ ತೆರಳಿದ್ದ ವೇಳೆ ಆರೋಪಿಗಳು ಕಳ್ಳತನ ಮಾಡಿದ್ದರು ಎಂದು ಪೊಲೀಸರು ಹೇಳಿದರು.

ಬಂಧಿತರ ವಿರುದ್ಧ ಬೆಂಗಳೂರಿನ ಕೋಣನಕುಂಟೆ ಹಾಗೂ ತೆಲಂಗಾಣದ ಮಂಜಿರಿಯಲ್ ಟೌನ್ ಪೊಲೀಸ್ ಠಾಣೆಯಲ್ಲಿ ಒಟ್ಟು ಎಂಟು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದರು.

ಅಂಬೇಡ್ಕರ್ ಜಯಂತಿ

ಪ್ರಜಾವಾಣಿ ಚಿತ್ರ

ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಕದಿರೇನಹಳ್ಳಿಯಲ್ಲಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ವತಿಯಿಂದ 'ಭೀಮೋತ್ಸವ' ಆಚರಿಸಲಾಯಿತು. ಪಕ್ಷದ ಗೌರವಾಧ್ಯಕ್ಷ ರವಿ ಕೃಷ್ಣಾರೆಡ್ಡಿ, ರಾಜ್ಯಾಧ್ಯಕ್ಷ ದೀಪಕ್ ಸಿ.ಎನ್, ಉಪಾಧ್ಯಕ್ಷ ಮಂಜುನಾಥ ಎಸ್., ಪ್ರಧಾನ ಕಾರ್ಯದರ್ಶಿ ರಘುಪತಿ ಭಟ್, ರಾಜ್ಯ ಎಸ್.ಸಿ/ಎಸ್.ಟಿ ಘಟಕದ ಅಧ್ಯಕ್ಷ ಪ.ಯ. ಗಣೇಶ್ ಭಾಗವಹಿಸಿದ್ದರು

ಎರಡು ಗುಜರಿ ಅಂಗಡಿಗೆ ಬೆಂಕಿ

ಆನೇಕಲ್: ಇಲ್ಲಿಗೆ ಸಮೀಪದ ಗೌರೇನಹಳ್ಳಿ ಬಳಿಯ ಕಕ್ಕಮಲ್ಲೇಶ್ವರ ಬೆಟ್ಟ-ಸಿದ್ದನಪಾಳ್ಯ ರಸ್ತೆಯ ಗುಜರಿ ಗೋದಾಮಿನಲ್ಲಿ ಬುಧವಾರ ಬೆಂಕಿ ಕಾಣಿಸಿಕೊಂಡಿದ್ದು, ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ಬೆಂಕಿಗೆ ಆಹುತಿಯಾಗಿವೆ.

ಸಿದ್ದನಪಾಳ್ಯ ರಸ್ತೆಯ ಬಾಬು ಎಂಬುವರಿಗೆ ಸೇರಿದ ಗೋದಾಮಿನಲ್ಲಿ ಬುಧವಾರ ಮಧ್ಯಾಹ್ನ ಬೆಂಕಿ ಕಾಣಿಸಿಕೊಂಡಿತು. ಗೋದಾಮಿನಲ್ಲಿದ್ದ ವಸ್ತುಗಳು ಸುಟ್ಟು ಕರಕಲಾಗಿವೆ. ನೋಡ ನೋಡುತ್ತಿದ್ದಂತೆ ಬೆಂಕಿ ಕೆನ್ನಾಲಿ ಗೋದಾಮಿಗೆ ವ್ಯಾಪಿಸಿತು. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಲು ಪ್ರಯಾಸಪಟ್ಟರು.

ತಾಲ್ಲೂಕಿನ ಬೊಮ್ಮಸಂದ್ರ ಕೈಗಾರಿಕ ಪ್ರದೇಶದ ವ್ಯಾಪ್ತಿಯ ಆರ್.ಕೆ.ಟೌನ್‌ಶಿಪ್ ಗುಜರಿ ಅಂಗಡಿಯಲ್ಲಿಯೂ ಬೆಂಕಿ ಕಾಣಿಸಿಕೊಂಡಿತು. ಬೆಂಕಿಗೆ ನಿಖರ ಕಾರಣ ತಿಳಿದುಬಂದಿಲ್ಲ.

₹9 ಕೋಟಿ ಮೌಲ್ಯದ ಹೈಡ್ರೋ ಗಾಂಜಾ ವಶ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2ರಲ್ಲಿ ಮಂಗಳವಾರ ರಾತ್ರಿ ಬ್ಯಾಂಕಾಕ್‌ನಿಂದ ಬಂದ ಪ್ರಯಾಣಿಕರಿಂದ ಕಸ್ಟಮ್ಸ್ ಅಧಿಕಾರಿಗಳು ₹9.10 ಕೋಟಿ ಮೌಲ್ಯದ 26.2 ಕೆ.ಜಿ ಹೈಡ್ರೋಪೋನಿಕ್ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಗಾಂಜಾ ಕಳ್ಳಸಾಗಾಣೆ ಮಾಡುತ್ತಿದ್ದ ಒಟ್ಟು ಐವರು ಪ್ರಯಾಣಿಕರನ್ನು ಮಾದಕ ದ್ರವ್ಯ ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್) ಅಡಿ ಬಂಧಿಸಲಾಗಿದೆ.

ರಿಸ್ಕ್ ಪ್ರೊಫೈಲಿಂಗ್ ಮತ್ತು ಪ್ರಯಾಣಿಕರ ಮೇಲ್ವಿಚಾರಣೆಯ ಆಧಾರದ ಮೇಲೆ ಕಸ್ಟಮ್ಸ್ ಅಧಿಕಾರಿಗಳು ವಿಶೇಷ ಕಾರ್ಯಾಚರಣೆ ಕೈಗೊಂಡಿದ್ದರು. ಲಗೇಜ್ ತಪಾಸಣೆ ವೇಳೆ ಮಾದಕ ವಸ್ತು ಪತ್ತೆಯಾದವು.

ಇಬ್ಬರು ಪ್ರಯಾಣಿಕರಿಂದ ₹6.30 ಕೋಟಿ ಮೌಲ್ಯದ 17.90 ಕೆ.ಜಿ. ಹೈಡ್ರೋ ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಇತರ ಮೂರು ಪ್ರಕರಣಗಳಲ್ಲಿ ಒಬ್ಬೊಬ್ಬ ಪ್ರಯಾಣಿಕರಿಂದ ಪ್ರತ್ಯೇಕವಾಗಿ ₹1.70 ಕೋಟಿಯ 4.9 ಕೆ.ಜಿ, ₹63.70 ಲಕ್ಷದ ₹1.80 ಕೆ.ಜಿ, ₹51.80 ಲಕ್ಷದ 1.50 ಕೆ.ಜಿ. ಗಾಂಜಾ ವಶಪಡಿಸಿಕೊಳ್ಳಲಾಗಿದೆ.

'ದಕ್ಷಿಣ–ಪೂರ್ವ ಏಷ್ಯಾ ದೇಶಗಳಿಂದ ಅಂತರ ರಾಷ್ಟ್ರೀಯ ಮಾರ್ಗಗಳ ಮೂಲಕ ಸಂಘಟಿತ ಕಳ್ಳಸಾಗಣೆ ಹೆಚ್ಚುತ್ತಿರುವ ಲಕ್ಷಣಗಳು ಕಂಡುಬರುತ್ತಿವೆ. ಈ ಹಿನ್ನೆಲೆ ಮೇಲ್ವಿಚಾರಣೆಯನ್ನು ಮತ್ತಷ್ಟು ಬಲಪಡಿಸಲಾಗುತ್ತಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಕ್ವಾಂಟಂ ತಂತ್ರಜ್ಞಾನದಲ್ಲಿ ಅತ್ಯುತ್ತಮ ಸಾಧನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಕ್ವಾಂಟಂ ದಿನಾಚರಣೆಯ ಪ್ರಯುಕ್ತ ರಾಜ್ಯದ ಸಮಗ್ರ ಕ್ವಾಂಟಂ ಎಕೋ ಸಿಸ್ಟಮ್ ಮ್ಯಾಪ್ ಅನ್ನು ಬುಧವಾರ ಅನಾವರಣಗೊಳಿಸಲಾಗಿದೆ. ಇಂತಹ ಸಮಗ್ರ ಮಾಹಿತಿಯನ್ನು ಹೊರತಂದಿರುವ ದೇಶದ ಮೊದಲ ರಾಜ್ಯ ಕರ್ನಾಟಕ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ತಿಳಿಸಿದರು.

ಜವಾಹರಲಾಲ್ ನೆಹರೂ ತಾರಾಲಯದ ಆವರಣದಲ್ಲಿರುವ ಯು.ಆರ್. ರಾವ್ ಭವನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಆಯೋಜಿಸಿದ್ದ ವಿಶ್ವ ಕ್ವಾಂಟಂ ದಿನಾಚರಣೆಯ 'ದೃಷ್ಟಿಕೋನದಿಂದ ವಾಸ್ತವದತ್ತ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಕ್ವಾಂಟಂ ತಂತ್ರಜ್ಞಾನದಲ್ಲಿ ಕರ್ನಾಟಕ ರಾಜ್ಯವು ಬಹಳಷ್ಟು ಅಭಿವೃದ್ಧಿ ಸಾಧಿಸಿದೆ. ಕ್ವಾಂಟಂ ನಾವೀನ್ಯದಲ್ಲಿ ಜಾಗತಿಕ ಕೇಂದ್ರವಾಗಿ ಅತ್ಯುತ್ತಮ ಸ್ಥಾನ ಪಡೆದುಕೊಳ್ಳುತ್ತಿದೆ. ಭಾರತೀಯ ವಿಜ್ಞಾನ ಸಂಸ್ಥೆ ಸಿದ್ಧಪಡಿಸಿರುವ ಈ ನಕ್ಷೆಯಲ್ಲಿ ನಮ್ಮ ರಾಜ್ಯದ ಕ್ವಾಂಟಂ ಕ್ಷೇತ್ರದ ಪ್ರಮುಖ ತಾಂತ್ರಿಕ ಪ್ರಗತಿಗಳನ್ನು ದಾಖಲಿಸಿದ್ದೇವೆ' ಎಂದು ವಿವರಿಸಿದರು.

ಅರಿಂಧಮ್ ಘೋಷ್ ನೇಮಕ

ಕರ್ನಾಟಕ ಕ್ವಾಂಟಂ ಟಾಸ್ಕ್ ಫೋರ್ಸ್ ಅಧ್ಯಕ್ಷರಾಗಿ ಐಐಎಸ್‌ಸಿಯ ಪ್ರೊ.ಅರಿಂಧಮ್ ಘೋಷ್ ಅವರನ್ನು ನೇಮಿಸಲಾಗಿದೆ ಎಂದು ಸಚಿವ ಎನ್.ಎಸ್. ಬೋಸರಾಜು ಘೋಷಿಸಿದರು.

ಶಿಕ್ಷಣ ತಜ್ಞರು, ಸ್ಟಾರ್ಟ್ ಅಪ್‌ಗಳು ಮತ್ತು ಕೈಗಾರಿಕೆಗಳನ್ನು ಒಂದೇ ವೇದಿಕೆಯಡಿ ತರುವ ಗುರಿಯನ್ನು ಹೊಂದಿರುವ ಪ್ರಮುಖ ಕ್ವಾಂಟಂ ಹಬ್ 'ಕ್ಯೂ-ಸಿಟಿ' ಆಗಿರಲಿದೆ. ಏಕ-ಗವಾಕ್ಷಿ ಕ್ವಾಂಟಂ ಪರಿಸರ ವ್ಯವಸ್ಥೆಯಾಗಿ ವಿನ್ಯಾಸಗೊಳಿಸಲಾದ ಕ್ಯೂ–ಸಿಟಿ ಸಂಶೋಧನೆಗಳನ್ನು ಜನಬಳಕೆಗೆ ಅನ್ವಯವಾಗುವಂತೆ ಮಾಡಲು ಅನುವು ಮಾಡಿಕೊಡುತ್ತದೆ. ಕ್ಯೂ–ಸಿಟಿಗಾಗಿ ವಿಸ್ತೃತ ಯೋಜನಾ ವರದಿಯನ್ನು ಶೀಘ್ರದಲ್ಲೇ ಸಿದ್ಧಪಡಿಸಲಾಗುವುದು. ಇದು ರಾಜ್ಯದ ಕ್ವಾಂಟಂ ಟಾಸ್ಕ್ ಫೋರ್ಸ್‌ನ ಉಸ್ತುವಾರಿಯಲ್ಲಿ ಅನುಷ್ಠಾನಗೊಳ್ಳಲಿದೆ ಎಂದರು.

ಕ್ವಾಂಟಂ ವಲಯದಲ್ಲಿ ಕೌಶಲ ಅಭಿವೃದ್ಧಿ, ಸಂಶೋಧನೆ ಮತ್ತು ಸ್ಟಾರ್ಟ್-ಅಪ್‌ಗಳ ಬೆಳವಣಿಗೆಯನ್ನು ಬೆಂಬಲಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ₹10 ಕೋಟಿ ಅನುದಾನವನ್ನು ಘೋಷಿಸಿದ್ದಾರೆ ಎಂದು ತಿಳಿಸಿದರು.

ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, 'ಮುಂಬರುವ ದಶಕವನ್ನು ನಾವು ಅಧಿಕೃತವಾಗಿ 'ಡೀಪ್ ಟೆಕ್ ದಶಕ' ಎಂದು ಘೋಷಿಸಿದ್ದು, ಇದಕ್ಕೆ ಬೆಂಬಲವಾಗಿ ₹400 ಕೋಟಿ ಮೀಸಲು ನಿಧಿ ಇಟ್ಟಿದ್ದೇವೆ. ₹1,300ಕ್ಕೂ ಹೆಚ್ಚು ಸ್ಟಾರ್ಟ್-ಅಪ್‌ಗಳಿಗೆ ಯಾವುದೇ ಷೇರು ಪಾಲುದಾರಿಕೆ ಇಲ್ಲದೆ ₹50 ಲಕ್ಷದವರೆಗೆ ಅನುದಾನ ನೀಡುವ ಮೂಲಕ, ಒಂದೇ ದಿನದಲ್ಲಿ ದಾಖಲೆಯ ₹732 ಕೋಟಿ ವಿತರಿಸಲು ಕ್ರಮ ಕೈಗೊಂಡಿದ್ದೇವೆ' ಎಂದು ವಿವರಿಸಿದರು.

ಇಸ್ರೊ ಮಾಜಿ ಅಧ್ಯಕ್ಷ ಕಿರಣ್ ಕುಮಾರ್, ಐಐಎಸ್‌ಸಿಯ ಪ್ರೊ. ಅರಿಂಧಮ್ ಘೋಷ್, ಐಟಿ-ಬಿಟಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಎನ್. ಮಂಜುಳಾ, ಕೆ-ಸ್ಟೆಪ್ಸ್ ವ್ಯವಸ್ಥಾಪಕ ನಿರ್ದೇಶಕ ಸದಾಶಿವ ಪ್ರಭು ಉಪಸ್ಥಿತರಿದ್ದರು.

ರಾಜ್ಯ ಸರ್ಕಾರ ದೃಢ ನಿರ್ಧಾರ ತೆಗೆದುಕೊಳ್ಳಲಿ: ನನ್ನ ಮತ ನನ್ನ ಹಕ್ಕು ಒಕ್ಕೂಟ ಆಗ್ರಹ

ಎಸ್‌ಐಆರ್ ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮೂಲಕ ಭಾರತೀಯರ ಮತದಾನದ ಹಕ್ಕನ್ನು ನಾಶ ಮಾಡುತ್ತಿದ್ದು, ರಾಜ್ಯದ ಮತದಾರರು ಇದನ್ನು ವಿರೋಧಿಸಬೇಕು' ಎಂದು ಆಗ್ರಹಿಸಿ ನನ್ನ ಮತ ನನ್ನ ಹಕ್ಕು ಒಕ್ಕೂಟದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಕೋರಮಂಗಲದ ವೆಂಕಟಾಪುರ, ಚೆಲುವಾದಿಪಾಳ್ಯ, ಆನಂದಪುರ, ಜನತಾ ಕಾಲೊನಿ, ವಿನೋಬಾ ನಗರ, ಕೆ.ಪಿ ಅಗ್ರಹಾರ, ಬಿಳೇಕಹಳ್ಳಿ, ಬನಶಂಕರಿ, ಸುಭಾಷ್ ನಗರ, ಜಕ್ಕಸಂದ್ರ, ಸೋಮಸುಂದರಪಾಳ್ಯ, ಕದಿರೇನಹಳ್ಳಿ ಮತ್ತು ಚಿನ್ನಪ್ಪ ಗಾರ್ಡನ್ ಪ್ರದೇಶಗಳಲ್ಲಿ ವಿವಿಧ ಗುಂಪುಗಳಿಂದ ಪ್ರತಿಭಟನೆ ನಡೆಯಿತು.

ವಿಧಾನಸೌಧದ ಎದುರು 30 ಮಂದಿ ಚಿಂತಕರು, ವಕೀಲರು ಮತ್ತು ಹೋರಾಟಗಾರರು ಬುಧವಾರ ಘೋಷಣೆಗಳನ್ನು ಕೂಗಿ, ರಾಜಕೀಯ ಸಮಾನತೆಯನ್ನು ರಕ್ಷಿಸುವ ಪ್ರತಿಜ್ಞೆ ಕೈಗೊಂಡರು.

'ಪಶ್ಚಿಮ ಬಂಗಾಳದ ಮತದಾರರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದಾಗ, ತೆಗೆದು ಹಾಕಲಾದ ಮತದಾರರ ಹೆಸರನ್ನು ತಾತ್ಕಾಲಿಕವಾಗಿ ಉಳಿಸಲು ನಿರಾಕರಿಸಲಾಗಿದೆ. ಅವರು ಮುಂದಿನ ಚುನಾವಣೆಯಲ್ಲಿ ಮತ ಚಲಾಯಿಸಬಹುದು ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ. ಈ ಆದೇಶವು ಜನಪ್ರತಿನಿಧಿಗಳ ಕಾಯ್ದೆಯ ಸೆಕ್ಷನ್ 21(3)ರ ಉಲ್ಲಂಘನೆಯಾಗಿದೆ' ಎಂದು ಪ್ರತಿಭಟನಾನಿರತರು ಆರೋಪಿಸಿದರು.

'ಬಡವರು, ಕಟ್ಟಕಡೆಯ ವ್ಯಕ್ತಿಗೂ ದೇಶದ ದಿಕ್ಕು ರೂಪಿಸುವ ಹಕ್ಕು ದೊರೆಯಲೆಂದು ಸಂವಿಧಾನವು ಮತದಾನದ ಹಕ್ಕನ್ನು ನೀಡಿದೆ. ವಿಶೇಷ ಪರಿಷ್ಕರಣೆ ಪ್ರಶ್ನಿಸದಿದ್ದರೆ ರಾಜಕೀಯ ಸಮಾನತೆಯ ಭರವಸೆ ಉಳಿಯುವುದಿಲ್ಲ' ಎಂದು ಹೇಳಿದರು.

ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ವಿರೋಧಿಸಿ ಕೋರಮಂಗಲ ಸಮೀಪದ ವೆಂಕಟಾಪುರದಲ್ಲಿ ಬುಧವಾರ ಗೃಹ ಕಾರ್ಮಿಕರ ಹಕ್ಕುಗಳ ಒಕ್ಕೂಟದಿಂದ ಪ್ರತಿಭಟನೆ ನಡೆಸಲಾಯಿತು

'ಎಸ್‌ಐಆರ್ ವಿರುದ್ಧ ರಾಜ್ಯ ಸರ್ಕಾರ ದೃಢ ನಿಲುವು ತೆಗೆದುಕೊಳ್ಳಬೇಕು. ಮತಹಕ್ಕು ಕಾಪಾಡುವುದಕ್ಕಾಗಿ ಪರಿಷ್ಕರಣೆ ವಿರೋಧಿಸಲು ರಾಜ್ಯದ ಜನತೆ ಮುಂದಾಗಬೇಕು. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ತುರ್ತು ಕ್ರಮ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಲಾಯಿತು.

SUPPORTED BY
Ministry of Housing and Urban Affairs, Government of India
अमृत 2.0 Atal Mission for Rejuvenation and Urban Transformation
जल शक्ति मंत्रालय
जल संसाधन, नदी विकास और गंगा संरक्षण विभाग, भारत सरकार
MINISTRY OF JAL SHAKTI
DEPARTMENT OF WATER RESOURCES, RIVER DEVELOPMENT & GANGA REJUVENATION, GOVERNMENT OF INDIA

ಇಂದು ಉದ್ಘಾಟನೆ

INDIAN PLUMBING ASSOCIATION
ESTD. 1993
Redefining Water, Sanitation & Plumbing Standards

PLUMBEX® India 2026
Bringing Industry Together

ಭಾರತದ ಅತಿ ದೊಡ್ಡ ಪ್ರದರ್ಶನ
ನೀರು | ಸ್ವಚ್ಛತೆ | ಪ್ಲಂಬಿಂಗ್

ಗುರುವಾರ 16 ಶುಕ್ರವಾರ 17 ಶನಿವಾರ 18
ಏಪ್ರಿಲ್ 2026
ಹಾಲ್ ಸಂಖ್ಯೆ 4, BIEC, ಬೆಂಗಳೂರು
ಸಮಯ: ಬೆಳಿಗ್ಗೆ 10:00 ರಿಂದ ಸಂಜೆ 6:00 ವರೆಗೆ

ಮೊದಲ ಬಾರಿಗೆ ಪ್ರಾರಂಭವಾಗುತ್ತಿದೆ!
BATHROOM CHALLENGE 2026
AROUND THE DROP

ಲಕ್ಕಿ ಡ್ರಾ
ಭೇಟಿದಾರರಿಗಾಗಿ
ಬಹುಮಾನ ಮೌಲ್ಯ
₹1,20,000

Register Now

ಪ್ರದರ್ಶನ ಪ್ರವೇಶ ಉಚಿತ

Industry Partners
Principal: ASTRAL PIPES • BATHWARE
Diamond: TRUFLO by hindware, PRINCE PIPES
Platinum: KPT PIPES, Sintex
Sustainability: Huliot India
Ruby: VS, SANT VALVES, SUDHAKAR PIPES AND FITTINGS
Media: SLOAN
Gold: Kartar, RUBINETTERIE BRESCIANE
Curtain Raiser: NVR VALVES & FITTINGS
Visitors Badge: RHINOX
Visitors Bag: KOTHARI PIPES
Knowledge: IAPMO
Lunch Partners: SUKRUTA EXPERIENCE WATER, AAGAM, ripple SMART METERING, GEBERIT, xylem Let's Solve Water
Registration Counter: VINDSOL
Water Station: Kirloskar Enriching Lives

200 + Exhibitors from India and abroad
*T & C apply
www.indianplumbing.org

ತಲೆಬಿಸಿಗಳು ಯಾವಾಗಲೂ ಇದ್ದೇ ಇರುತ್ತವೆ. ಪ್ರಗತಿಯ ಬಹಳ ಉಜ್ವಲ ಅವಕಾಶ ಇರುವ ವಲಯಗಳ ಮೇಲೆ ಗಮನ ಕೇಂದ್ರೀಕರಿಸಿ, ಅದಕ್ಕೆ ಅನುಗುಣವಾಗಿ ಹೂಡಿಕೆ ಮಾಡಿ

ಮುತ್ತುಕೃಷ್ಣನ್ ದಂಡಪಾಣಿ, ಹೂಡಿಕೆದಾರ

ದುಡ್ಡಿನಂಥಾ ಮಾತು

ರಕ್ಷಣೆ: ದೀರ್ಘಾವಧಿ ಹೂಡಿಕೆ ಅವಕಾಶ

• ಅನಿಲ್ ಆರ್.

ಷೇರುಪೇಟೆಗಳಲ್ಲಿ ಅಸ್ಥಿರತೆ ಹೆಚ್ಚಿರುವ ಹೊತ್ತಿನಲ್ಲಿ, ಜಾಗತಿಕ ಮಟ್ಟದಲ್ಲಿ ಬಿಕ್ಕಟ್ಟುಗಳು, ಸಮರಗಳು ತೀವ್ರಗೊಳ್ಳುತ್ತಿರುವ ಸಂದರ್ಭದಲ್ಲಿ ರಕ್ಷಣಾ ವಲಯದ ಕಂಪನಿಗಳ ಮೇಲಿನ ಹೂಡಿಕೆಯು ಗಮನ ಸೆಳೆಯುತ್ತಿದೆ. ಸದ್ಯದ ಪರಿಸ್ಥಿತಿಗಳು ಹಾಗೂ ದೀರ್ಘಾವಧಿಗೆ ಚಾಲ್ತಿಯಲ್ಲಿ ಇರಲಿರುವ ಅಂಶಗಳು ಇದಕ್ಕೆ ಕಾರಣವಾಗಿ ಒದಗಿಬಂದಿವೆ.

ಪಶ್ಚಿಮ ಏಷ್ಯಾದಲ್ಲಿನ ಬಿಗುವಿನ ಪರಿಸ್ಥಿತಿ, ಭಾರತದ ಗಡಿಯಲ್ಲಿನ ಸಮಸ್ಯೆಗಳು ಸರ್ಕಾರವು ಮಿಲಿಟರಿಯ ಆಧುನೀಕರಣಕ್ಕೆ ಆದ್ಯತೆ ನೀಡಬೇಕಾದ ಪರಿಸ್ಥಿತಿ ಸೃಷ್ಟಿಸಿವೆ. ಸರ್ಕಾರದ ಉದ್ದೇಶಕ್ಕೆ ಅನುಗುಣವಾಗಿ ರಕ್ಷಣಾ ವಲಯದ ಮೇಲೆ ಒಂದಿಷ್ಟು ವೆಚ್ಚಗಳನ್ನೂ ಮಾಡಲಾಗುತ್ತಿದೆ. ಭಾರತದ ರಕ್ಷಣಾ ವಲಯದಲ್ಲಿ ಇರುವ ಅವಕಾಶಗಳನ್ನು ಈಗಿನ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಮಾತ್ರವೇ ಅವಲೋಕಿಸುವುದು, ವಲಯದ ಸಾಮರ್ಥ್ಯವನ್ನು ಕಡೆಗಣಿಸಿದಂತೆ ಆಗುತ್ತದೆ.

ಪತ್ರಿಕೆಗಳಲ್ಲಿ ಕಾಣಿಸುವ ಸುದ್ದಿ ಶೀರ್ಷಿಕೆಗಳ ಹಿಂದೆ ವ್ಯವಸ್ಥೆಯಲ್ಲಿ ಆಗುತ್ತಿರುವ ಬದಲಾವಣೆಗಳು ಅಡಗಿವೆ. ಸರ್ಕಾರದ ನೀತಿಗಳಲ್ಲಿ ದೃಢತೆ, ದೇಶದಲ್ಲಿ ತಯಾರಿಕೆ ಮಾಡುವುದಕ್ಕೆ ಆದ್ಯತೆ ನೀಡುತ್ತಿರುವುದು, ಪರರ ಮೇಲಿನ ಅವಲಂಬನೆಯಿಂದ ಸ್ವಾವಲಂಬನೆ ಕಡೆ ಸಾಗುತ್ತಿರುವ ವ್ಯವಸ್ಥೆಯ ಕಥೆಯು ಸುದ್ದಿಯ ತಲೆಬರಹಗಳ ಹಿಂದೆ ಇದೆ.

ಎರಡು ದಶಕಗಳ ಹಿಂದೆ ಭಾರತವು ತನ್ನ ಅಗತ್ಯದ ಹೆಚ್ಚಿನ ಮಿಲಿಟರಿ ಉಪಕರಣಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಯುದ್ಧ ವಿಮಾನಗಳು, ಜಲಾಂತರ್ಗಾಮಿಗಳು, ಕ್ಷಿಪಣಿ ವ್ಯವಸ್ಥೆಗಳು ಭಾರತಕ್ಕೆ ವಿದೇಶಗಳಿಂದ ಆಮದಾಗುತ್ತಿದ್ದವು. ಸೇನಾ ಉಪಕರಣಗಳ ಖರೀದಿ ಪ್ರಕ್ರಿಯೆ ನಿಧಾನವಾಗಿ ನಡೆಯುತ್ತಿತ್ತು, ಸೇನಾ ಕ್ಷೇತ್ರದಲ್ಲಿ ಖಾಸಗಿ ವಲಯದ ಭಾಗವಹಿಸುವಿಕೆಯು ನಗಣ್ಯವಾಗಿತ್ತು. ದೇಶದಲ್ಲಿ ರಕ್ಷಣಾ ಉಪಕರಣಗಳ ಉತ್ಪಾದನೆಯು ಹೆಚ್ಚು ಬೆಳವಣಿಗೆ ಕಂಡಿರಲಿಲ್ಲ. ಈಗ ಪರಿಸ್ಥಿತಿ ಆಮೂಲಾಗ್ರವಾಗಿ ಬದಲಾಗಿದೆ. ಆತ್ಮನಿರ್ಭರ ಭಾರತ ಮತ್ತು ಭಾರತದಲ್ಲೇ ತಯಾರಿಸಿ ಉಪಕ್ರಮಗಳ ಮೂಲಕ ಭಾರತವು ಇಂದು ತನ್ನದೇ ಆದ ಸುಧಾರಿತ ಯುದ್ಧ ವಿಮಾನಗಳನ್ನು, ಉಪಗ್ರಹಗಳನ್ನು ಮತ್ತು ರೇಡಾರ್ ಉಪಕರಣಗಳನ್ನು ರೂಪಿಸುತ್ತಿದೆ. ರಕ್ಷಣಾ ಉಪಕರಣಗಳ ತಯಾರಿಕಾ ವಲಯವು ಹಿಂದೆ ಸರ್ಕಾರಿ ಸ್ವಾಮ್ಯದ ಕಂಪನಿಗಳ ಪ್ರಾಬಲ್ಯದ ವಲಯವಾಗಿ ಇದ್ದಿದ್ದು ಈಗ ಹೆಚ್ಚು ವಿಶಾಲವಾದ ನೆಲೆಯ, ಖಾಸಗಿ ಕಂಪನಿಗಳ, ನವೋದ್ಯಮಗಳ, ಅಕಾಡೆಮಿಕ್ ಸಂಸ್ಥೆಗಳ ಮತ್ತು ಜಾಗತಿಕ ತಂತ್ರಜ್ಞಾನ ಪಾಲುದಾರರ ಭಾಗೀದಾರಿಕೆ ಇರುವ ವಲಯವಾಗಿ ಬೆಳೆದಿದೆ.

ಕೆಲವು ಅಂಕಿ–ಅಂಶಗಳು ಆಗಿರುವ ಬದಲಾವಣೆಯನ್ನು ಬಹಳ ಚೆನ್ನಾಗಿ ಹೇಳುತ್ತಿವೆ. ದೇಶದ ರಕ್ಷಣಾ ವಲಯದ ಉತ್ಪಾದನೆಯು 2024–25ನೆಯ ಹಣಕಾಸು ವರ್ಷದಲ್ಲಿ ₹1.51 ಲಕ್ಷ ಕೋಟಿಗೆ ಹೆಚ್ಚಿದೆ. ಇದು ಒಂದು ದಶಕದ ಹಿಂದಿನ ಉತ್ಪಾದನೆಯ ಮೊತ್ತವಾದ ₹46,429 ಕೋಟಿಗೆ ಹೋಲಿಸಿದರೆ ಮೂರು ಪಟ್ಟಿಗಿಂತ ಹೆಚ್ಚು. 2013–14ನೆಯ ಹಣಕಾಸು ವರ್ಷದಲ್ಲಿ ರಕ್ಷಣಾ ಉಪಕರಣಗಳ ರಫ್ತು ಮೊತ್ತ ₹686 ಕೋಟಿ ಇತ್ತು. ಅದು 2024–25ನೆಯ ಸಾಲಿನಲ್ಲಿ ₹23,622 ಕೋಟಿಗೆ ಏರಿಕೆ ಆಗಿದ್ದು, 34 ಪಟ್ಟು ಹೆಚ್ಚಳ ಕಂಡಿದೆ. ಜಾಗತಿಕ ಮಟ್ಟದಲ್ಲಿ ಭಾರತವು ನಂಬಿಕಸ್ಥ ರಕ್ಷಣಾ ಉಪಕರಣಗಳ ಪೂರೈಕೆದಾರ ಎಂಬುದನ್ನು ಇವೆಲ್ಲ ಹೇಳುತ್ತಿವೆ.

ದೇಶದ ಈ ಬೆಳವಣಿಗೆಗೆ 2026–27ನೆಯ ಸಾಲಿನ ಕೇಂದ್ರ ಬಜೆಟ್ ಇನ್ನಷ್ಟು ಬಲ ತುಂಬಿದೆ. ಬಜೆಟ್‌ನಲ್ಲಿ ರಕ್ಷಣಾ ವಲಯದ ಬಂಡವಾಳ ವೆಚ್ಚಕ್ಕಾಗಿ ₹2.19 ಲಕ್ಷ ಕೋಟಿ ತೆಗೆದಿರಿಸಲಾಗಿದೆ. ಇದು ಹಿಂದಿನ ವರ್ಷ ತೆಗೆದಿರಿಸಿದ್ದ ಮೊತ್ತಕ್ಕೆ ಹೋಲಿಸಿದರೆ ಶೇ 17ರಷ್ಟು ಹೆಚ್ಚು. ಇಷ್ಟು ಮೊತ್ತ ತೆಗೆದಿರಿಸುವ ಮೂಲಕ ಮುಂದಿನ ದಶಕದಲ್ಲಿಯೂ ರಕ್ಷಣಾ ಉಪಕರಣಗಳ ಖರೀದಿಯು ಉತ್ತಮ ಮಟ್ಟದಲ್ಲಿಯೇ ಇರುತ್ತದೆ ಎಂಬುದನ್ನು ಹೇಳಿದಂತಾಗಿದೆ.

ಅರ್ಥ ವ್ಯವಸ್ಥೆಯಲ್ಲಿನ ಏರಿಳಿತಗಳಿಗೆ ಹಲವು ವಲಯಗಳು ನೇರವಾಗಿ ಸ್ಪಂದಿಸುತ್ತಿರುತ್ತವೆ. ಆದರೆ ರಕ್ಷಣಾ ವಲಯವು ಹಾಗಲ್ಲ. ರಕ್ಷಣಾ ಉದ್ದೇಶಕ್ಕೆ ಮಾಡುವ ವೆಚ್ಚಗಳಲ್ಲಿ ಅಂತಹ ವ್ಯತ್ಯಾಸಗಳು ಆಗುವುದಿಲ್ಲ. ಜಿಡಿಪಿ ಬೆಳವಣಿಗೆ ಹೇಗೇ ಇದ್ದರೂ, ಹಣದುಬ್ಬರ ಪ್ರಮಾಣವು ಏನೇ ಆದರೂ ಸರ್ಕಾರಗಳು ರಕ್ಷಣಾ ಉದ್ದೇಶದ ಬಜೆಟ್ ಮೊತ್ತವನ್ನು ಹೆಚ್ಚು ಮಾಡುತ್ತಿರುತ್ತವೆ. ಏಕೆಂದರೆ ದೇಶದ ರಕ್ಷಣೆಗೆ ಸಂಬಂಧಿಸಿದ ವಿಚಾರ ಇದು. ಹೀಗಾಗಿ, ರಕ್ಷಣಾ ವಲಯದ ಕಂಪನಿಗಳಿಗೆ ಬಹಳ ವಿಶಿಷ್ಟವಾದ ಸ್ಥಾನ ಲಭಿಸುತ್ತದೆ. ಅವುಗಳಿಗೆ ದೀರ್ಘಾವಧಿಯ ಕಾರ್ಯಾದೇಶ ಲಭ್ಯ- ವಾಗುತ್ತದೆ, ಸರ್ಕಾರದ ನೀತಿಗಳನ್ನು ಆಧರಿಸಿ ವರಮಾನ ಮೂಲ ಅವಕ್ಕೆ ಇರುತ್ತದೆ, ಮಾರುಕಟ್ಟೆಗಳಲ್ಲಿನ ಅಸ್ಥಿರತೆಯಿಂದ ಹೊರತಾಗಿರುವ ಬೆಳವಣಿಗೆಯ ಅವಕಾಶ ಅವುಗಳಿಗೆ ಇರುತ್ತದೆ.

ಭಾರತದಲ್ಲಿ ವೈಮಾಂತರಿಕ್ಷ, ನೌಕಾದಳ, ಕ್ಷಿಪಣಿಗಳು, ಎಲೆಕ್ಟ್ರಾನಿಕ್ಸ್ ಉಪಕರಣಗಳ ಆಧುನೀಕರಣದ ಯೋಜನೆಗಳು ಹೆಚ್ಚು ಬಲ ಪಡೆದಂತೆಲ್ಲ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಕಂಪನಿಗಳು ಬಹುವರ್ಷಗಳವರೆಗೆ ಚಾಲ್ತಿಯಲ್ಲಿರುವ ಕಾರ್ಯಾದೇಶಗಳ ಮೂಲಕ ಹೆಚ್ಚೆಚ್ಚು ಪ್ರಯೋಜನ ಪಡೆಯುತ್ತವೆ. ಬೇರೆ ವಲಯಗಳಿಗೆ ಇಂತಹ ಬಗೆಯಲ್ಲಿ ಕಾರ್ಯಾದೇಶ ಸಿಗುವುದು ಕಷ್ಟ.

ರಕ್ಷಣಾ ವಲಯದ ಅಡಿಯಲ್ಲಿ, ರಕ್ಷಣಾ ಎಲೆಕ್ಟ್ರಾನಿಕ್ಸ್ ವಿಭಾಗವು ಹೆಚ್ಚು ಆಕರ್ಷಕವಾದ ಉಪ ವಲಯದಂತೆ ಕಾಣುತ್ತದೆ. ಆಧುನಿಕ ಕಾಲಘಟ್ಟದ ಯುದ್ಧತಂತ್ರಗಳು ತಂತ್ರಜ್ಞಾನ ಆಧಾರಿತ, ಹೈಬ್ರಿಡ್ ಆಗುತ್ತಿವೆ. ರೇಡಾರ್ ವ್ಯವಸ್ಥೆಗಳು, ಮಾನವರಹಿತ ವಿಮಾನಗಳು, ಅವಾಕ್ಸ್‌ನಂತಹ ಗಗನ ಸರ್ವೇಕ್ಷಣಾ ತಂತ್ರಗಳು ಮಹತ್ವ ಪಡೆದುಕೊಳ್ಳುತ್ತಿವೆ. ಈ ವಲಯದಲ್ಲಿನ ಕಂಪನಿಗಳು ಕೆಲಸಗಳನ್ನು ವೇಗವಾಗಿ ಅನುಷ್ಠಾನಕ್ಕೆ ತರುವ ಮೂಲಕ, ಹೆಚ್ಚಿನ ಮೌಲ್ಯವರ್ಧನೆ ಮೂಲಕ ಮತ್ತು ದೇಶೀಯವಾಗಿ ತಯಾರಿಸುವ ನೀತಿಗಳ ಮೂಲಕ ಹೆಚ್ಚಿನ ಅನುಕೂಲ ಪಡೆಯಲಿವೆ. ನಾವು ನಿರಂತರವಾಗಿ ಗಮನಿಸುತ್ತ ಇರುವ, ಷೇರುಪೇಟೆ ನೋಂದಾಯಿತ ಕಂಪನಿಗಳ ಪೈಕಿ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಮತ್ತು ಅಸ್ತ್ರ ಮೈಕ್ರೋವೇವ್ ಪ್ರಾಡಕ್ಟ್ಸ್ ಬಗ್ಗೆ ಧನಾತ್ಮಕವಾಗಿದ್ದೇವೆ.

ಭಾರತ್ ಡೈನಾಮಿಕ್ಸ್ ಲಿಮಿಟೆಡ್ (ಬಿಡಿಎಲ್) ಬಗ್ಗೆ ನಾವು ನಿರಂತರವಾಗಿ ಗಮನಿಸುತ್ತ ಇರುವುದಿಲ್ಲವಾದರೂ, ಕ್ಷಿಪಣಿ ತಯಾರಿಕಾ ವ್ಯವಸ್ಥೆಯಲ್ಲಿ ಹೊಂದಿರುವ ಬಲವಾದ ಸ್ಥಾನದ ಕಾರಣದಿಂದಾಗಿ ಅದು ಗಮನಿಸಲು ಯೋಗ್ಯವಾದ ಕಂಪನಿ. ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಕೂಡ ನಾವು ನಿರಂತರವಾಗಿ ಗಮನಿಸುತ್ತಿಲ್ಲದ ಕಂಪನಿಯಾದರೂ, ಅದು ಭಾರತದ ಯುದ್ಧ ವಿಮಾನ ತಯಾರಿಕಾ ಯೋಜನೆಯ ಆಧಾರಸ್ತಂಭ ಇದ್ದಂತೆ. ಹೀಗಾಗಿ ಅದರ ಮೇಲೆ ಒಂದು ಕಣ್ಣಿಡಬೇಕು. ಈ ಕಂಪನಿಯ ಕೈಯಲ್ಲಿ ₹2 ಲಕ್ಷ ಕೋಟಿ ಮೊತ್ತದ ಕಾರ್ಯಾದೇಶ ಇದೆ.

ರಕ್ಷಣಾ ವಲಯದ ಕಂಪನಿಗಳ ಷೇರುಮೌಲ್ಯವು ಹೆಚ್ಚಿನ ಮಟ್ಟದಲ್ಲಿಯೇ ಉಳಿದಿದೆ. ಹಲವು ಕಂಪನಿಗಳ ವಿಚಾರದಲ್ಲಿ ಹೂಡಿಕೆದಾರರ ಉತ್ಸಾಹವು ಆ ಕಂಪನಿಗಳ ವರಮಾನ ಗಳಿಕೆಗಿಂತ ಮುಂದೆ ಸಾಗಿದೆ. ಆದರೆ ಈಚೆಗೆ ಕಂಡುಬಂದ ಕುಸಿತವು ಮೌಲ್ಯವನ್ನು ತುಸು ತಗ್ಗಿಸಿದೆ. ಹೀಗಿದ್ದರೂ, ಈ ವಲಯದ ಷೇರುಗಳು 'ಅಗ್ಗ'ವಾಗಿಲ್ಲ. ಸಣ್ಣ ಹೂಡಿಕೆದಾರರು ಅವಸರದಿಂದ ಮುಂದಡಿ ಇರಿಸುವ ಬದಲು ತಾಳ್ಮೆಯಿಂದ ಹೆಜ್ಜೆ ಇರಿಸುವುದು ಸೂಕ್ತ ನಡೆ ಆಗಬಹುದು. ಅವರು ಮಾರುಕಟ್ಟೆ ಇಳಿಕೆ ಕಂಡ ಸಂದರ್ಭಗಳಲ್ಲಿ ಹೂಡಿಕೆ ಮಾಡುತ್ತ ಸಾಗಬಹುದು.

ಭಾರತದ ರಕ್ಷಣಾ ವಲಯದ ಆಧುನೀಕರಣವು ದಶಕದ ಅವಧಿಯ ಯೋಜನೆ. ದೀರ್ಘಾವಧಿಯ ಮುನ್ನೋಟ ಹೊಂದಿರುವ ಹೂಡಿಕೆದಾರರು ಈ ವಲಯದಲ್ಲಿ ಅರ್ಥಪೂರ್ಣವಾದ ಮೊತ್ತವನ್ನು ತೊಡಗಿಸಬಹುದು.

ಲೇಖಕ ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಹಿರಿಯ ಸಂಶೋಧನಾ ವಿಶ್ಲೇಷಕ

ಕಲೆ: ಸಂತೋಷ್ ಸಸಿಹಿತ್ಲು

ಸಣ್ಣ ಹೂಡಿಕೆದಾರರಿಗೆ ಮ್ಯೂಚುವಲ್ ಫಂಡ್ ಸೂಕ್ತ

• ಜಿಬಿನ್ ಜಾನ್

ಕೇಂದ್ರ ಸರ್ಕಾರದ ಈಚಿನ ವರ್ಷಗಳ ಬಜೆಟ್‌ಗಳಲ್ಲಿ ರಕ್ಷಣಾ ವಲಯಕ್ಕೆ ಮೀಸಲಿಡುವ ಮೊತ್ತವು ಹೆಚ್ಚಳ ಕಾಣುತ್ತಿದೆ. ರಕ್ಷಣಾ ವಲಯಕ್ಕೆ ತೆಗೆದಿರಿಸುವ ಮೊತ್ತವು ಸ್ಥಿರವಾಗಿರುತ್ತದೆ, ಜಾಗತಿಕ ಮಟ್ಟದಲ್ಲಿ ಬಿಕ್ಕಟ್ಟುಗಳು ಇದ್ದಾಗ ಮೊತ್ತವು ಹೆಚ್ಚಾಗುತ್ತವೆ. ಈಗಿನ ಪರಿಸ್ಥಿತಿಯಲ್ಲಿ, ಮುಂದಿನ ವರ್ಷಗಳಲ್ಲಿ ಕೂಡ ರಕ್ಷಣಾ ವಲಯಕ್ಕೆ ತೆಗೆದಿರಿಸುವ ಮೊತ್ತವನ್ನು ಸರ್ಕಾರವು ಹೆಚ್ಚಿಸುವ ಸಾಧ್ಯತೆ ಇದೆ.

ದೇಶದ ರಕ್ಷಣಾ ವಲಯದ ಆಧುನೀಕರಣವು ವೇಗ ಪಡೆದುಕೊಳ್ಳುತ್ತಿದ್ದು, ಕಾರ್ಯಾದೇಶಗಳನ್ನು ಅನುಷ್ಠಾನಕ್ಕೆ ತರುವ ಕೆಲಸದಲ್ಲಿ ತೊಡಗಿರುವ ಕಂಪನಿಗಳು ಪ್ರಯೋಜನ ಪಡೆಯುತ್ತವೆ. ಆದರೆ ಈಗ ರಕ್ಷಣಾ ವಲಯದ ಕಂಪನಿಗಳ ಷೇರುಮೌಲ್ಯವು ದುಬಾರಿ ಆಗಿದೆ. ಹಲವು ಕಂಪನಿಗಳು ನಿಗದಿತ ಅವಧಿಯಲ್ಲಿ ಕಾರ್ಯಾದೇಶಗಳನ್ನು ಅನುಷ್ಠಾನಕ್ಕೆ ತರಲು ಕಷ್ಟಪಡುತ್ತಿವೆ. ಕಚ್ಚಾ ವಸ್ತುಗಳ ಕೊರತೆ, ವಿಶೇಷವಾದ ಯಂತ್ರಗಳ ಕೊರತೆ ಸೇರಿದಂತೆ ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆ ಇದಕ್ಕೆ ಕಾರಣ.

ದೀರ್ಘಾವಧಿಯ ಹೂಡಿಕೆಗೆ ಮ್ಯೂಚುವಲ್ ಫಂಡ್‌ಗಳು, ಅದರಲ್ಲೂ ಮುಖ್ಯವಾಗಿ ನಿರ್ದಿಷ್ಟವಾದ ವಲಯಗಳಲ್ಲಿ ಹಣ ತೊಡಗಿಸುವ ಫಂಡ್‌ಗಳು ಹೆಚ್ಚು ಸೂಕ್ತ. ರಕ್ಷಣಾ ವಲಯದ ಕಂಪನಿಗಳ ಷೇರುಮೌಲ್ಯ ಈಗ ಹೆಚ್ಚಿನ ಮಟ್ಟದಲ್ಲಿ ಇರುವ ಕಾರಣದಿಂದಾಗಿ ಹೂಡಿಕೆದಾರರು ರಕ್ಷಣಾ ವಲಯದ ಕಂಪನಿಗಳ ಮೇಲೆ ಹಣ ತೊಡಗಿಸುವ ಮ್ಯೂಚುವಲ್ ಫಂಡ್‌ಗಳಲ್ಲಿ ಕನಿಷ್ಠ ಐದು ವರ್ಷಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಹಣ ಹೂಡಿಕೆ ಮಾಡಲು ಸಿದ್ಧವಿರಬೇಕು.

ರಕ್ಷಣಾ ಉಪಕರಣಗಳ ಖರೀದಿಗೆ ಸರ್ಕಾರ ರೂಪಿಸುವ ನೀತಿಗಳು, ಕಾರ್ಯಾದೇಶಗಳ ಅನುಷ್ಠಾನದ ಅವಧಿ, ಪೂರೈಕೆ ವ್ಯವಸ್ಥೆ ಮೇಲಿನ ಅವಲಂಬನೆಯಂತಹ ಸಂಗತಿಗಳ ಕಾರಣದಿಂದಾಗಿ ರಕ್ಷಣಾ ವಲಯದ ಕಂಪನಿಗಳ ಷೇರುಗಳನ್ನು ವಿಶ್ಲೇಷಿಸುವುದು ಬಹಳ ಸಂಕೀರ್ಣ ಕೆಲಸ. ಹೀಗಾಗಿ, ಸಣ್ಣ ಹೂಡಿಕೆದಾರರು ರಕ್ಷಣಾ ವಲಯದ ಕಂಪನಿಗಳ ಮೇಲೆ ಹೂಡಿಕೆ ಮಾಡಲು ಬಯಸಿದರೆ, ರಕ್ಷಣಾ ವಲಯದ ಮೇಲೆ ಹಣ ತೊಡಗಿಸುವ ಮ್ಯೂಚುವಲ್ ಫಂಡ್‌ಗಳು ಅವರಿಗೆ ಹೆಚ್ಚು ಅನುಕೂಲ ಕಲ್ಪಿಸಬಹುದು.

ನಿರ್ದಿಷ್ಟವಾದ ವಲಯಗಳ ಮೇಲೆ ಹಣ ತೊಡಗಿಸುವ ಕಂಪನಿಗಳು, ಹೆಚ್ಚು ವೈವಿಧ್ಯವನ್ನು ಹೊಂದಿರುವ ಫಂಡ್‌ಗಳಿಗಿಂತ ಜಾಸ್ತಿ ಪ್ರಮಾಣದ ರಿಸ್ಕ್ ಒಳಗೊಂಡಿರುತ್ತವೆ. ಹೀಗಾಗಿ, ಇಂತಹ ವಲಯವಾರು ಫಂಡ್‌ಗಳು ಹೆಚ್ಚಿನ ರಿಸ್ಕ್ ತಾಳಿಕೊಳ್ಳಬಹುದಾದ ಹೂಡಿಕೆದಾರರಿಗೆ, ಹೆಚ್ಚಿನ ಅವಧಿಗೆ ಹಣ ತೊಡಗಿಸಲು ಸಿದ್ಧವಿರುವವರಿಗೆ ಸೂಕ್ತವಾಗುತ್ತವೆ.

ಲೇಖಕ ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಹಿರಿಯ ಹೂಡಿಕೆ ಪರಿಣತ

ಮಹಿಳೆಯರು ಪಡೆದ ಸಾಲ ₹76 ಲಕ್ಷ ಕೋಟಿ

2017ರ ಡಿಸೆಂಬರ್‌ವರೆಗೆ ದೇಶದ ಮಹಿಳೆಯರು ₹16 ಲಕ್ಷ ಕೋಟಿ ಸಾಲ ಮಾಡಿದ್ದರು. ಇದು 2025ರ ಡಿಸೆಂಬರ್ ವೇಳೆಗೆ ₹76 ಲಕ್ಷ ಕೋಟಿಗೆ ತಲುಪಿದೆ. ಇದೇ ಅವಧಿಯಲ್ಲಿ ಸಾಲ ತೆಗೆದುಕೊಳ್ಳುವ ಮಹಿಳೆಯರ ಪ್ರಮಾಣ ಶೇ 19ರಿಂದ ಶೇ 36ಕ್ಕೆ ಏರಿಕೆಯಾಗಿದೆ. ದಕ್ಷಿಣ ಮತ್ತು ಪಶ್ಚಿಮ ರಾಜ್ಯಗಳ ಜೊತೆಗೆ ಬಿಹಾರ ಮತ್ತು ಉತ್ತರ ಪ್ರದೇಶದಂತಹ ಉತ್ತರದ ರಾಜ್ಯಗಳು ಸಹ ಸಾಲ ತೆಗೆದುಕೊಳ್ಳುವುದರಲ್ಲಿ ಹೆಚ್ಚಿನ ಬೆಳವಣಿಗೆಯನ್ನು ದಾಖಲಿಸಿವೆ.

16 ಕೋಟಿ ಸಾಲ ತೆಗೆದುಕೊಂಡಿರುವ ಮಹಿಳೆಯರು

45 ಕೋಟಿ ದೇಶದಲ್ಲಿ ಸಾಲ ತೆಗೆದುಕೊಳ್ಳಲು ಅರ್ಹ ಮಹಿಳೆಯರ ಸಂಖ್ಯೆ

4.8 ಪಟ್ಟು ಹೆಚ್ಚಳ 2017ರ ಡಿಸೆಂಬರ್‌ನಿಂದ 2025ರ ಡಿಸೆಂಬರ್‌ವರೆಗೆ ಸಾಲದ ಪ್ರಮಾಣ

9% ಸಾಲ ತೆಗೆದುಕೊಳ್ಳುವ ಮಹಿಳೆಯರ ಪ್ರಮಾಣದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರ (ಸಿಎಜಿಆರ್)

ಸಾಲ ವಿವಿಧ ಬಗೆಗಳು

- ಕಿರುಸಾಲ
- ವೈಯಕ್ತಿಕ ಅಗತ್ಯಗಳು ಮತ್ತು ಮನೆ ಖರ್ಚುಗಳನ್ನು ನಿಭಾಯಿಸಲು
- ವಾಣಿಜ್ಯ ಉದ್ದೇಶ

ಸಾಲ ತೆಗೆದುಕೊಂಡ ಮೊತ್ತ, ಉದ್ದೇಶ

ವರ್ಷ	ಮೊತ್ತ (₹ಲಕ್ಷ ಕೋಟಿಗಳಲ್ಲಿ)	ಕಿರುಸಾಲ	ವೈಯಕ್ತಿಕ ಸಾಲ	ವಾಣಿಜ್ಯ ಉದ್ದೇಶ
2017	16	7%	77%	16%
2022	41	7%	75%	19%
2025	76	4%	71%	25%
2017ರಿಂದ ಇಷ್ಟು ಪಟ್ಟು ಹೆಚ್ಚಳ ದಾಖಲಿಸಿದೆ		2.9	4.5	7.5

* ವರದಿಯು ಕಿರುಸಾಲ, ವೈಯಕ್ತಿಕ ಅಗತ್ಯಕ್ಕಾಗಿ ಮಾಡುವ ಸಾಲಕ್ಕಿಂತ ವಾಣಿಜ್ಯ ಉದ್ದೇಶಕ್ಕಾಗಿ ಮಾಡುವ ಸಾಲದ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿದೆ ಎಂಬುದನ್ನು ತೋರಿಸುತ್ತಿದೆ



ಆಧಾರ: ನೀತಿ ಆಯೋಗದ ಜಂಟಿ ವರದಿ

ಎಲ್‌ಟಿ ಫುಡ್ಸ್

ಬ್ರೋಕರೇಜ್ ಮಾತು

ಜಾಗತಿಕ ಎಫ್‌ಎಂಸಿಜಿ ಕಂಪನಿ ಎಲ್‌ಟಿ ಫುಡ್ಸ್‌ನ ಷೇರಿನ ಬೆಲೆ ₹500 ಆಗಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಕಂಪನಿಯ ಒಟ್ಟು ವರಮಾನದಲ್ಲಿ ಅಮೆರಿಕದ ಮಾರುಕಟ್ಟೆಯ ಪಾಲು ಶೇ 46ರಷ್ಟಿದೆ. ಅಮೆರಿಕದ ಆಡಳಿತವು ವಿಧಿಸಿದ್ದ ಶೇ 50ರಷ್ಟು ಸುಂಕವನ್ನು ಗ್ರಾಹಕರಿಗೆ ಕಂಪನಿಯು ವರ್ಗಾಯಿಸಿದೆ. ಗ್ರಾಹಕರು ಕಂಪನಿಯ ಬ್ರ್ಯಾಂಡ್‌ನೊಂದಿಗೆ ಉಳಿದುಕೊಳ್ಳುತ್ತಾರೆ ಎನ್ನುವ ಬಲವಾದ ನಂಬಿಕೆಯನ್ನು ಕಂಪನಿ ಹೊಂದಿದೆ. ಇತ್ತೀಚೆಗೆ ಸುಂಕವನ್ನು ಶೇ 10ಕ್ಕೆ ಇಳಿಕೆ ಮಾಡಲಾಗಿದ್ದು, ಮಾರಾಟವನ್ನು ಹೆಚ್ಚಿಸಲಿದೆ. ಲಾಭದ ಪ್ರಮಾಣವು ಏರಿಕೆಯಾಗುವ ವಿಶ್ವಾಸವನ್ನು ಕಂಪನಿ ಹೊಂದಿದೆ.

2024–25ನೇ ಆರ್ಥಿಕ ವರ್ಷದಿಂದ 2027–28ನೇ ಆರ್ಥಿಕ ವರ್ಷದವರೆಗೆ ಕಂಪನಿಯ ಒಟ್ಟು ವರಮಾನದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರ (ಸಿಎಜಿಆರ್) ಶೇ 17ರಷ್ಟಿರಲಿದೆ. ಇದೇ ಅವಧಿಯಲ್ಲಿ ತೆರಿಗೆ, ಬಡ್ಡಿ, ಸಾಲ ತೀರುವಳಿ ಪೂರ್ವದ ವರಮಾನ (ಇಬಿಐಟಿಡಿಎ) ಶೇ 18ರಷ್ಟು ಮತ್ತು ತೆರಿಗೆ ನಂತರದ ಲಾಭ ಶೇ 18ರಷ್ಟಾಗುವ ನಿರೀಕ್ಷೆ ಇದೆ ಎಂದು ತಿಳಿಸಿದೆ.

ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಬೆಲೆ ₹410.60 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ಮಾಹಿತಿ, ವಿವರಗಳಿಗೆ ಪತ್ರಿಕೆ ಹೊಣೆಯಲ್ಲ)

'ನೀಟ್' ದಿಕ್ಸೂಚಿ — ಪಿಯುಸಿ/ಸಿಇಟಿ ಪರೀಕ್ಷೆ

PHYSICS

15) In the circuit diagram, heat produces in R, 2R and 1.5 R are in the ratio of



(a) 4 : 2 : 3 (b) 8 : 4 : 27
(c) 2 : 4 : 3 (d) 27 : 8 : 4

Ans:- (b)

Expln– We have $I_1 = \frac{I \times 2R}{3R} = \frac{2I}{3}$

$\therefore H_1 = I_1^2 R = \frac{4I^2}{9} \times R$ ....(i)

Also, $I_2 = \frac{I \times R}{3R} = \frac{I}{3}$

$\therefore H_2 = I_2^2 (2R) = \frac{I^2}{9} \times 2R$ ....(ii)

and $H_3 = I^2 (1.5\ R)$ .... (iii)

From Eqns. (i), (ii) and (iii),

$H_1 : H_2 : H_3 = \frac{4I^2}{9} \times R : \frac{I^2}{9} \times 2R : I^2 \times 1.5\ R$

$= \frac{4}{9} : \frac{2}{9} : 1.5 = 4:2:13.5 = 8:4:27$

16) A bullet is fired from a gun at the speed of 280 m/s in the direction 30° above the horizontal. The maximum height attained by the bullet is ($g = 9.8\ ms–2$, $\sin 30° = 0.5$)

a) 3000 m b) 2800 m
c) 2000 m d) 1000 m

Ans:- d

$$h_{max} = \frac{u^2 \sin^2\theta}{2g} = \frac{280 \times 280}{2 \times 9.8} \times \frac{1}{4}$$

$= 1000\ m$

17) For Young's double slit experiment, two statements are given below:

Statement I: If screen is moved away from the plane of slits, angular separation of the fringes remains constant.

Statement II: If the monochromatic source is replaced by another monochromatic source of larger wavelength, the angular separation of fringes decreases. In the light of the above statements,

choose the correct answer from the options given below:

a) Statement I is false but Statement II is true
b) Both Statement I and Statement II is true
c) Both Statement I and Statement II are true
d) Statement I is true but Statement II is false

Ans:- d

18)White light reflected from a soap film (RI=1.5) has a maxima at 600 nm and a minima at 450 nm with no minimum in between. Then the thickness of the film is

(a) 1 (b) 2
(c) 3 (d) 4

Ans:- (c)

Expln- We know for maxima

$2\mu t \cos r = \frac{(2n+1)\lambda_1}{2}$ ....(i)

For minima $2\mu t \cos r = (n+1)\lambda_2$ ...(ii)

Given here, $\lambda_1 = 600$ nm and $\lambda_2 = 450$ nm

Dividing Eq. (i) by (ii) and substituting values of λ_1 and λ_2, we get

$\frac{(2n+1)\lambda_1}{2(n+1)\lambda_2} = 1$

$\Rightarrow 90n + 90 = 60n + 60$

$30n = 30 \Rightarrow n = 1$

Using one of the equation, we get

In given condition $2\mu t = (2n+1)\frac{\lambda}{2}$

$2 \times 1.5 \times t = (2 \times 1 + 1)\frac{600}{2}$

$3t = \frac{3 \times 600}{2}$

$\Rightarrow t = 300\ nm = 3 \times 10^{-6}\ m = 3$ units

19) A container has two chambers of volumes $V_1 = 2$ litres and $V_2 = 3$ litres separated by a partition made of a thermal insulator. The chambers contain $n_1 = 5$ and $n_2 = 4$ moles of ideal gas at pressures $p_1 = 1$ atm and $p_2 = 2$ atm, respectively. When the partition is removed, the mixture attains an equilibrium pressure of

(a) 1.8 atm (b) 1.3 atm
(c) 1.6 atm (d) 1.4 atm

Ans:- (C)

Expln:=

$P_1V_1 + P_2V_2 = P(V_1 + V_2)$

$1(2) + 2(3) = P(2 + 3)$

$\frac{8}{5} = P$

$\Rightarrow 1.6$ atm

20) A small oil drop of mass 10^{-6} kg is hanging in at rest between two plates separated by 1 mm having a potential difference of 500 V. The charge on the drop is ($g = 10\ ms^{-2}$)

(a) 2×10^{-9} C (b) 2×10^{-11} C
(c) 2×10^{-6} C (d) 2×10^{-9} C

Ans:- (b)

Expn- Given, the drop rests between the two plates

$\therefore qE = mg$

(or) $q\frac{V}{r} = mg$ $\left(\because E = \frac{V}{r}\right)$

$\Rightarrow q = \frac{mgr}{V}$

Here, $m = 10^{-6}$ kg, $g = 10\ m/s^2$, $r = 1\ mm = 10^{-3}$ m & $V = 500$ V

Substituting all the values, we get

$q = \frac{10^{-6} \times 10 \times 10^{-3}}{500} = 2 \times 10^{-11}$ C

21) A cylindrical tube of length 0.2 m and radius R with sugar solution of concentration C produce a rotation of θ in the plane of vibration of a plane polarized light. The same sugar solution is transferred to another tube of length 0.3 m of same radius. The remaining gap is filled by distilled water. Now the optical rotation produced is (Contd.....)

BIOLOGY

MULTIPLE CHOICE QUESTIONS:-

42) Identify the desirable charecteristics for a plasmid used in rDNA technology from the following

(a) Ability to multiply and express outside the host in a bioreactor
(b) A highly active promoter. (.......*Contd)*
(C) A site at which replication can be initiated.
(D) One or more identifiable marker genes.
(E) One or more unique restriction sites.

(a) A, C and E (b) B, C, and E
(c) A, C, D and E (d) B, C, D, and E

Ans: d

Expl:- a plasmid is a small DNA molecule that is a physically separate form and can replicate independently of chromosomal DNA within a cell. All the statements given in the options are appropriate excepting the one that is has ability to multiply and express outside the host in a bioreactor because plasmid always multiply inside the host using cell machinery.

44) **What is the function of protein GLUT-4?**

a) Acts as an enzyme
b) Enables glucose transport into cells
c) Fight infectious agents
d) Functions as intercellular ground substance

Ans: (b)

Expln:- GLUT-4 is an insulin-responsive glucose transporter that is found in the adipose tissue, and brain. It is present in the cytoplasm of cells in vesicles from which it is translocated to the plasma membrane under the influence of insulin.

40) Match List-I with List-II and choose the correct answer.

List-I:	List-II:
1) Nitrogen rich fertilizers	p) Ozone depletion
2) Carbon dioxide	q) Eutrophication
3) Carbon monoxide	r) Greenhouse effect
4) CFC's	s) Air pollutant

Ans code

(A) 1-p, 2-q, 3-r, 4-s
(B) 1-q, 2-r, 3-s , 4-p
(C) 1-r, 2-s, 3-p, 4-q
(D) 1-s, 2-p, 3-q, 4-r

Ans:- B

51) Identify the 'order' from the following:

a) Carnivora b) Muscidae
c) Insecta d) Panthera

Ans: (a)

Expln:- • Carnivora is the order of eutherian mammals, which refer to any meat-eating organism. Example- Dogs, Cats, Wolves etc.

• Muscidae is a family of flies found in the superfamily Muscoidea. Example- Housefly, Musca.

• Insects are a class of hexapod invertebrates within the arthropod phylum. Example- Ant, Bugs etc.

• Panthera is a genus within the Felidae family. Example- Tiger, Lion etc.

24. Which compounds were used by Miller in his experiment for obtaining amino acids and other organic substances?

(a) Carbon dioxide, water vapour and methane
(b) Methane, ammonia, water vapour and hydrogen cyanide
(c) Ammonia, methane, hydrogen and water vapour
(d) Ammonia. methane and carbon dioxide.

Ans:C

Expl:- miller in his experiment used methane, ammonia, hydrogen and water vapour in the ratio 2: 1: 2. Electric discharge was then allowed to be created in a closed flask containing these compounds at 800°C.

The conditions were set similar to those in the primitive atmosphere in the laboratory. After a week he observed the presence of substances like amino acids and other organic substances such as sugar, pigments, nitrogen bases, fats, etc.

25) Read the following statements

Statement I : All vertebrates develop a row of vestigial gill slits during embryonic stage.

Statement II : Embryos always pass through the adult stages of other animals.

Which of the following options is correct with reference to these statements.?

(A) Statement I is correct, Statement II is incorrect.
(B) Statement I is incorrect, Statement II is correct.
(C) Both Statements I and II are correct.
(D) Both Statements I and II are incorrect.

Ans. A

32) n a taxonomic hierarchy, the number of common characters will increase as we go from

a) Species to Kingdom
b). Kingdom to Species
c) Class to Order d) Genus to Species

Ans: (b)

Expln:- As we go higher from species to kingdom, the number of common characteristics goes on decreasing or vice versa. Lower the taxa more are the characteristics that the members within the taxon share. Higher the category, greater is the difficulty of determining the relationship to other taxa at the same level

26. Which of the following is true for eutrophicated water body?

(a) High mineral content
(b) High oxygen content
(c) Rich species diversity
(d) Low organic content

Ans: a

ಆಸ್ಪತ್ರೆ: ಹೆಚ್ಚುವರಿ ಶುಲ್ಕ 'ವಸೂಲಿ'

ಕಾಯ್ದೆ ಉಲ್ಲಂಘಿಸಿ ರೋಗಿಗಳಿಂದ ಅಧಿಕ ಶುಲ್ಕ ಪಡೆದ ಆಸ್ಪತ್ರೆಗಳ ವಿರುದ್ಧ ಕ್ರಮ

• ವರುಣ ಹೆಗಡೆ

ಬೆಂಗಳೂರು: ನಗರದ ಕೆಲ ಖಾಸಗಿ ಆಸ್ಪತ್ರೆ ಹಾಗೂ ಕ್ಲಿನಿಕ್‌ಗಳು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆಯನ್ನು (ಕೆಪಿಎಂಇ) ಉಲ್ಲಂಘಿಸುವ ಜತೆಗೆ ರೋಗಿಗಳಿಂದ ಅಧಿಕ ಹಣವನ್ನು ವಸೂಲಿ ಮಾಡುತ್ತಿವೆ.

ಕಾಯ್ದೆಯಡಿ ಎಲ್ಲ ಖಾಸಗಿ ವೈದ್ಯಕೀಯ ಸಂಸ್ಥೆಗಳು ಕಡ್ಡಾಯವಾಗಿ ಹೊರರೋಗಿ ವಿಭಾಗದ ಸಮಾಲೋಚನಾ ಶುಲ್ಕ, ಶಸ್ತ್ರಚಿಕಿತ್ಸೆ, ಎಕ್ಸ್-ರೆ, ಸ್ಕ್ಯಾನಿಂಗ್ ಸೇರಿ ತಮ್ಮಲ್ಲಿ ಲಭ್ಯವಿರುವ ವೈದ್ಯಕೀಯ ಪರೀಕ್ಷೆ ಹಾಗೂ ಚಿಕಿತ್ಸೆಗಳ ಶುಲ್ಕದ ವಿವರವನ್ನು ಪ್ರದರ್ಶಿಸಬೇಕು. ದರ ಫಲಕವು ಮುಖ್ಯ ದ್ವಾರದ ಪ್ರಮುಖ ಸ್ಥಳದಲ್ಲಿ ಸುಲಭವಾಗಿ ಕಾಣುವಂತೆ ಇರಬೇಕು. ಚಿಕಿತ್ಸಾ ದರ ಪಟ್ಟಿಯಲ್ಲಿ ಪ್ರದರ್ಶಿಸಿದ ಪ್ರಕಾರವೇ ರೋಗಿಗಳಿಗೆ ನಿಗದಿತ ಶುಲ್ಕಗಳನ್ನು ವಿಧಿಸುವುದು ಕಡ್ಡಾಯ. ಆದರೆ, ನಗರದ ಕೆಲ ಖಾಸಗಿ ಆಸ್ಪತ್ರೆ ಹಾಗೂ ಕ್ಲಿನಿಕ್‌ಗಳು ಚಿಕಿತ್ಸಾ ದರ ಪಟ್ಟಿಯನ್ನು ರೋಗಿಗಳಿಗೆ ಕಾಣುವ ಸ್ಥಳದಲ್ಲಿ ಪ್ರದರ್ಶಿಸದಿರುವುದು ಒಂದೆಡೆಯಾದರೆ, ಇನ್ನೊಂದೆಡೆ ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ಹಣ ಪಡೆಯುತ್ತಿರುವ ಬಗ್ಗೆ ಆರೋಗ್ಯ ಇಲಾಖೆಗೆ ದೂರುಗಳು ಸಲ್ಲಿಕೆಯಾಗುತ್ತಿವೆ.

ಆ ಪ್ರಕರಣಗಳ ಬಗ್ಗೆ ಕೆಪಿಎಂಇ ನೋಂದಣಿ ಮತ್ತು ಕುಂದು–ಕೊರತೆ ಪ್ರಾಧಿಕಾರದ ಸಭೆಯಲ್ಲಿ ವಿಚಾರಣೆ ನಡೆಸಿ, ಆಸ್ಪತ್ರೆಗಳಿಗೆ ದಂಡ ವಿಧಿಸುವ ಜತೆಗೆ ದೂರುದಾರರಿಗೆ ಹೆಚ್ಚಿನ ಹಣ ಮರುಪಾತಿಸಲು ಕ್ರಮವಹಿಸಲಾಗುತ್ತಿದೆ. ಆರೋಗ್ಯ ಇಲಾಖೆ ಪ್ರಕಾರ ನಗರದಲ್ಲಿ ಇತ್ತೀಚೆಗೆ ಹತ್ತಕ್ಕೂ ಅಧಿಕ ಪ್ರಕರಣಗಳಲ್ಲಿ ದೂರುದಾರರಿಗೆ ಹೆಚ್ಚುವರಿ ಹಣ ದೊರೆತಿದೆ.

> ಆಸ್ಪತ್ರೆಗಳು ದರಪಟ್ಟಿಯಲ್ಲಿ ನಮೂದಿಸಿದಷ್ಟೇ ಹಣವನ್ನು ಪಡೆಯಬೇಕು. ಹೆಚ್ಚಿನ ಹಣ ಪಡೆದ ಬಗ್ಗೆ ದೂರು ನೀಡಿದರೆ ಕಾನೂನಿನಡಿ ಕ್ರಮ ಕೈಗೊಳ್ಳಲಾಗುತ್ತದೆ
>
> **ಡಾ. ರವೀಂದ್ರನಾಥ ಎಂ. ಮೇಟಿ,** ಬೆಂಗಳೂರು ನಗರ ಜಿಲ್ಲಾ ಆರೋಗ್ಯಾಧಿಕಾರಿ

ಖಾಸಗಿ ಚಿಕಿತ್ಸೆ

ಸರ್ಕಾರ ನಿಗದಿಪಡಿಸಿದ ದರಕ್ಕಿಂತ ಹೆಚ್ಚು ಹಣ ಪಡೆದಿರುವ ಬಗ್ಗೆ ರಾಜಾಜಿನಗರದ ಸಿಡ್ವಿನ್ ಆಸ್ಪತ್ರೆ ವಿರುದ್ಧ ಸುಂಕದಕಟ್ಟೆಯ ಕೃಷ್ಣಪ್ಪ ಎನ್ನುವವರು ದೂರು ನೀಡಿದ್ದರು. ಅವರಿಗೆ ಚಿಕಿತ್ಸೆಯ ಬಿಲ್‌ನಲ್ಲಿ ಶೇ 20ರಷ್ಟು ಹಣವನ್ನು (₹73,530) ಹಿಂದಿರುಗಿಸಲು ಪ್ರಾಧಿಕಾರದ ಸಭೆಯಲ್ಲಿ ಸೂಚಿಸಲಾಗಿದೆ.

ಮಾಹಿತಿ ಫಲಕ ಕಡ್ಡಾಯ

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆಯಡಿ (ಕೆಪಿಎಂಇ) ವೈದ್ಯಕೀಯ ಸಂಸ್ಥೆಗಳು ನೋಂದಣಿ ಸಂಖ್ಯೆ, ಸಂಸ್ಥೆಯ ಹಾಗೂ ಮಾಲೀಕರ ಹೆಸರನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು. ಕ್ಲಿನಿಕ್‌ಗಳ ಮಾಹಿತಿ ಫಲಕವನ್ನು ಕನಿಷ್ಠ 5 ಅಡಿ ಅಗಲ ಹಾಗೂ 2.5 ಅಡಿ ಉದ್ದಕ್ಕೆ ನಿಗದಿಪಡಿಸಲಾಗಿದೆ. ಆಸ್ಪತ್ರೆಗಳು ಕನಿಷ್ಠ 7 ಅಡಿ ಅಗಲ ಹಾಗೂ 3 ಅಡಿ ಉದ್ದದ ಫಲಕವನ್ನು ಆವರಣದಲ್ಲಿಯೆ ಅಳವಡಿಸಿಕೊಳ್ಳಬೇಕು. ಫಲಕದ ಮೊದಲ ಸಾಲಿನಲ್ಲಿ ಕೆಪಿಎಂಇ ನೋಂದಣಿ ಸಂಖ್ಯೆ, ಎರಡನೇ ಸಾಲಿನಲ್ಲಿ ಆಸ್ಪತ್ರೆಯ ಹೆಸರು, ಮೂರನೇ ಸಾಲಿನಲ್ಲಿ ಮಾಲೀಕರ ಅಥವಾ ವ್ಯವಸ್ಥಾಪಕ ಹೆಸರನ್ನು ನಮೂದಿಸಬೇಕು. ಫಲಕದಲ್ಲಿ ನಮೂದಿಸಿರುವ ಅಕ್ಷರಗಳು ಎದ್ದು ಕಾಣುವಂತೆ ಕಪ್ಪು ಅಕ್ಷರದಲ್ಲಿ ಇರಬೇಕು. ಅದನ್ನು ಬೇರೆಡೆಗೆ ಸ್ಥಳಾಂತರಿಸುವಂತೆ ಇರಬಾರದು.

ಪತ್ನಿಯ ಚಿಕಿತ್ಸೆಗೆ ಹೆಚ್ಚಿನ ಹಣ ಪಡೆದಿರುವ ಬಗ್ಗೆ ತುಮಕೂರಿನ ಗೋವಿಂದರಾಜು ಎಂಬುವರು ನಾಗರಾಬಾವಿಯ ಫೋರ್ಟಿಸ್ ಆಸ್ಪತ್ರೆ ವಿರುದ್ಧ ದೂರಿದ್ದರು. ಅವರಿಗೆ ಬಿಲ್‌ನಲ್ಲಿ ವ್ಯತ್ಯಾಸ ಹಣ ₹21,100 ಹಿಂದುರಿಗಿಸಲು ಆದೇಶಿಸಲಾಗಿದೆ. ಇದೇ ರೀತಿ, ಇಟ್ಟಮಡುವಿನ ವೆಂಕಟೇಶ್ ಅವರಿಗೆ ₹2.23 ಲಕ್ಷ ಮರುಪಾವತಿಸುವಂತೆ ಉದ್ಭವಿ ಆಸ್ಪತ್ರೆಗೆ, ಕಣ್ಣಿನ ಚಿಕಿತ್ಸೆಗೆ ಸಂಬಂಧಿಸಿದಂತೆ ಸಂಪಿಗೆ ಲೇಔಟ್‌ನ ಲಲಿತಾ ಎ. ಅವರಿಗೆ ₹30 ಸಾವಿರ ಹಿಂದಿರುಗಿಸಲು ಇಂದಿರಾನಗರದ ಎ.ಕೆ.ಕ್ಲಿನಿಕ್‌ಗೆ ಆದೇಶಿಸಲಾಗಿದೆ. ನಗರದ ಪ್ರಮುಖ ಆಸ್ಪತ್ರೆಗಳು ಲಕ್ಷಾಂತರ ರೂಪಾಯಿ ಹೆಚ್ಚುವರಿ ಹಣ ಪಡೆದಿರುವ ಬಗ್ಗೆಯೂ ದೂರುಗಳು ಸಲ್ಲಿಕೆಯಾಗಿವೆ.

ಎಫ್‌ಐಆರ್, ದಂಡ: ಕೆಪಿಎಂಇ ಕಾಯ್ದೆ ಉಲ್ಲಂಘನೆ ಪ್ರಕರಣಗಳ ವಿಚಾರಣೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಯ ಅಧ್ಯಕ್ಷತೆಯಲ್ಲಿ ನಿಯಮಿತವಾಗಿ ಕೆಪಿಎಂಇ ನೋಂದಣಿ ಮತ್ತು ಕುಂದು–ಕೊರತೆ ಪ್ರಾಧಿಕಾರದ ಸಭೆಯನ್ನು ನಡೆಸಲಾಗುತ್ತಿದೆ. ಕಾನೂನು ಉಲ್ಲಂಘಿಸಿದವರ ವಿರುದ್ಧ ಈ ಸಭೆಯಲ್ಲಿ ಪರವಾನಗಿ ರದ್ದತಿ, ಎಫ್‌ಐಆರ್ ದಾಖಲು ಹಾಗೂ ದಂಡ ವಿಧಿಸುವಿಕೆಯಂತಹ ಕ್ರಮ ಕೈಗೊಳ್ಳಲಾಗುತ್ತಿದೆ. ನಗರದಲ್ಲಿ ಕೆಪಿಎಂಇ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಆರೋಗ್ಯಾಧಿಕಾರಿಗಳು ಕಳೆದ ಫೆಬ್ರುವರಿಯಲ್ಲಿ 65 ಪ್ರಕರಣಗಳ ಬಗ್ಗೆ ವಿವರ ಸಲ್ಲಿಸಿದ್ದರು.

'ಕೆಪಿಎಂಇ ಕಾಯ್ದೆಯಡಿ ಖಾಸಗಿ ಆಸ್ಪತ್ರೆಗಳು ಕಡ್ಡಾಯವಾಗಿ ದರಪಟ್ಟಿಯನ್ನು ಹಾಕಬೇಕು. ಯಾವ ಚಿಕಿತ್ಸೆಗೆ ಎಷ್ಟು ದರ ಎಂದು ನಮೂದಿಸಿ, ಆಸ್ಪತ್ರೆಯ ಮುಂಭಾಗದಲ್ಲಿಯೇ ಪ್ರಕಟಿಸಬೇಕು. ದರಪಟ್ಟಿಯಲ್ಲಿ ನಮೂದಿಸಿದಷ್ಟೇ ಹಣವನ್ನು ಪಡೆಯಬೇಕು. ಹೆಚ್ಚುವರಿ ಹಣ ಪಡೆದಲ್ಲಿ ಅಂತಹ ಆಸ್ಪತ್ರೆಗಳ ವಿರುದ್ಧ ಜಿಲ್ಲಾ ಆರೋಗ್ಯಾಧಿಕಾರಿಗೆ ದೂರು ನೀಡಬಹುದು' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಜಿಬಿಎ: 23 ಸಾವಿರ ಗಣತಿದಾರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಜನಗಣತಿ-2027ರ ಮೊದಲ ಹಂತ ಮನೆ-ಮನೆಗೆ ಭೇಟಿ ನೀಡಿ, ಮನೆ ಪಟ್ಟಿ ಸಿದ್ದಪಡಿಸುವ ಕಾರ್ಯ ಏ.16ರಿಂದ ಆರಂಭವಾಗಲಿದೆ. ಇದಕ್ಕಾಗಿ 26 ಸಾವಿರ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಗಣತಿದಾರರು ಮತ್ತು ಮೇಲ್ವಿಚಾರಕರು, ಅಧಿಕಾರಿಗಳ ಸಹಕಾರದೊಂದಿಗೆ ಎಲ್ಲಾ ಮನೆಗಳ ಸಮಗ್ರ ಮತ್ತು ನಿಖರ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ ಎಂದರು.

23,705 ಗಣತಿದಾರರು, 2,912 ಮೇಲ್ವಿಚಾರಕರು ಸೇರಿದಂತೆ 26,616 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಎಲ್ಲಾ ನಾಗರಿಕರು ಜನಗಣತಿ ತಂಡಗಳಿಗೆ ಪೂರ್ಣ ಸಹಕಾರ ನೀಡಿ, ನಿಖರ ಮಾಹಿತಿಯನ್ನು ಒದಗಿಸುವಂತೆ ವಿನಂತಿಸಲಾಗಿದೆ. ಜನಗಣತಿಯಲ್ಲಿ ಭಾಗವಹಿಸುವುದು ಒಂದು ಮಹತ್ವದ ರಾಷ್ಟ್ರೀಯ ಕರ್ತವ್ಯವಾಗಿದೆ ಎಂದು ಹೇಳಿದರು.

ಜನಗಣತಿ ಉದ್ದೇಶಕ್ಕಾಗಿ ಮಾಹಿತಿಯನ್ನು ನೀಡುವುದು ಜನಗಣತಿ ಕಾಯ್ದೆ 1948ರ ಅನ್ವಯ ಕಡ್ಡಾಯವಾಗಿದ್ದು, ಮಾಹಿತಿ ನೀಡಲು ನಿರಾಕರಿಸಿದಲ್ಲಿ ಅಥವಾ ಸಿಬ್ಬಂದಿಗೆ ಅಸಹಕಾರ ತೋರಿದಲ್ಲಿ ಕಾಯ್ದೆಯ ವಿಧಿಗಳ ಪ್ರಕಾರ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಐದು ನಗರ ಪಾಲಿಕೆಗಳ ಸಿಬ್ಬಂದಿ ನಿಯೋಜನೆ ವಿವರ

ನಗರ ಪಾಲಿಕೆ	ಸಿಬ್ಬಂದಿ
ಬೆಂಗಳೂರು ಉತ್ತರ	4,497
ಬೆಂಗಳೂರು ಪಶ್ಚಿಮ	6,653
ಬೆಂಗಳೂರು ಪೂರ್ವ	3,419
ಬೆಂಗಳೂರು ಕೇಂದ್ರ	4,068
ಬೆಂಗಳೂರು ದಕ್ಷಿಣ	5,068

ಬೆಂಗಳೂರಿನ ಕೋಟೆ ಪ್ರೌಢಶಾಲೆ ಆವರಣದಲ್ಲಿ ಶ್ರೀರಾಮಸೇವಾ ಮಂಡಳಿ ಹಾಗೂ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಆಯೋಜಿಸಿದ 88ನೇ ಶ್ರೀರಾಮನವಮಿ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ಬುಧವಾರ ಜೆ.ಎ. ಜಯಂತ್ ಕೊಳಲು ವಾದನ ನಡೆಸಿಕೊಟ್ಟರು ಪ್ರಜಾವಾಣಿ ಚಿತ್ರ: ರಂಜು ಪಿ.

'ಸಿದ್ದರಾಮಯ್ಯ–ಬಿಜೆಪಿ ನಡುವೆ ಒಪ್ಪಂದ'

ಕೊಪ್ಪಳ: ತಮ್ಮ ಕುರ್ಚಿ ಗಟ್ಟಿ ಮಾಡಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದಾರೆ. ರಾಜ್ಯದಲ್ಲಿ ಇರುವುದು ಬಿಜೆಪಿ–ಕಾಂಗ್ರೆಸ್ ಮೈತ್ರಿ ಆಡಳಿತ ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ ಆರೋಪಿಸಿದರು.

'ಕಾಂಗ್ರೆಸ್ ಪಕ್ಷವೇ ಮೂಲತಃ ಅಹಿಂದ ಸಿದ್ಧಾಂತವನ್ನು ಹೊಂದಿದೆ. ಆದರೆ, ಸಿದ್ದರಾಮಯ್ಯ ಅವರು ನಾನು ಇದ್ದರೆ ಮಾತ್ರ ಕಾಂಗ್ರೆಸ್ ಪಕ್ಷ ಇರಬೇಕು. ಇಲ್ಲವಾದರೆ ಕಾಂಗ್ರೆಸ್ ರಾಜ್ಯದಲ್ಲಿ ಉಳಿಯಲೇಬಾರದು ಎನ್ನುವ ಕೆಟ್ಟ ಬುದ್ಧಿ ಹೊಂದಿದ್ದಾರೆ. ತಮ್ಮ ಸ್ಥಾನಕ್ಕೆ ಅಭದ್ರತೆ ಕಾಡಿದಾಕ್ಷಣ ಅಹಿಂದ ನಾಯಕ ಎಂದು ಬಿಂಬಿಸಿಕೊಳ್ಳುತ್ತಾರೆ' ಎಂದರು.

ಏರ್‌ಲೈನ್ಸ್ ವಿರುದ್ಧ ಎಫ್‌ಐಆರ್ ಕೋರ್ಟ್ ಆದೇಶ

ದೇವನಹಳ್ಳಿ: ವೀಸಾ ಸಂಬಂಧಿತ ಗೊಂದಲ ಹಿನ್ನೆಲೆಯಲ್ಲಿ ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೊನೆಯ ಕ್ಷಣದಲ್ಲಿ ವಿಮಾನಕ್ಕೆ ಹತ್ತಲು ಅವಕಾಶ ನಿರಾಕರಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ದೇವನಹಳ್ಳಿ ನ್ಯಾಯಾಲಯವು ಈಚೆಗೆ ಕೆಎಲ್‌ಎಂ ರಾಯಲ್ ಡಚ್ ಏರ್‌ಲೈನ್ಸ್ ಕಂಪನಿಯ ಹಿರಿಯ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲು ಆದೇಶಿಸಿದೆ.

ತಮಿಳುನಾಡಿನ ಸೇಲಂ ಮೂಲದ ವೈದ್ಯಕೀಯ ಸಂಸ್ಥೆಗಳ ಸಮೂಹದ ಮುಖ್ಯಸ್ಥ ಜೆ.ಎಸ್.ಸತೀಶ್ ಕುಮಾರ್ ದಾಖಲಿಸಿದ್ದ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯ, ಏರ್‌ಲೈನ್ಸ್ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ), ಮುಖ್ಯ ಕಾರ್ಯಾಚರಣಾ ಅಧಿಕಾರಿ (ಸಿಒಒ) ಸೇರಿದಂತೆ ಇತರ ಹಿರಿಯ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸುವಂತೆ ನಿರ್ದೇಶನ ನೀಡಿದೆ.

ಸತೀಶ್ ಕುಮಾರ್ ಮತ್ತು ಅವರ ಕುಟುಂಬದ ಏಳು ಸದಸ್ಯರು 2024ರಲ್ಲಿ ಪೆರು ದೇಶಕ್ಕೆ ಪ್ರವಾಸ ಹೊರಟಿದ್ದರು. ಅದಕ್ಕಾಗಿ ₹49 ಲಕ್ಷ ನೀಡಿ ನಾನ್-ರೀಫಂಡಬಲ್ ಬಿಸಿನೆಸ್ ಕ್ಲಾಸ್ ಟಿಕೆಟ್ ಬುಕ್ ಮಾಡಿದ್ದರು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಪ್ರಯಾಣಿಸಲು ನಿರ್ಧರಿಸಿದ್ದರು.

ಆದರೆ, ವೀಸಾ ಸಂಬಂಧಿತ ಗೊಂದಲದ ಕಾರಣ ಉಲ್ಲೇಖಿಸಿ ಡಚ್ ವಿಮಾನಯಾನ ಸಂಸ್ಥೆ ಕೊನೆಯ ಕ್ಷಣದಲ್ಲಿ ವಿಮಾನಕ್ಕೆ ಹತ್ತಲು ಅನುಮತಿ ನಿರಾಕರಿಸಿತ್ತು ಎಂದು ಆರೋಪಿಸಲಾಗಿದೆ. ಈ ಘಟನೆಯ ಬಳಿಕ ಸತೀಶ್ ಕುಮಾರ್ ನ್ಯಾಯಾಲಯದ ಮೊರೆ ಹೋಗಿ ಕಾನೂನು ಪರಿಹಾರ ಕೋರಿದ್ದರು.

ಕೋಟ್ಯಂತರ ಜನರ ನಂಬಿಕೆ ತಪ್ಪು ಎನ್ನುವುದು ಕಷ್ಟ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋಟ್ಯಂತರ ಜನರ ನಂಬಿಕೆಗಳನ್ನು ತಪ್ಪು ಅಥವಾ ಸಮರ್ಪಕವಲ್ಲದ್ದು ಎಂದು ಘೋಷಿಸುವುದು ತುಂಬಾ ಕಷ್ಟಕರವಾದ ಕೆಲಸ ಎಂದು ಸುಪ್ರೀಂ ಕೋರ್ಟ್ ಬುಧವಾರ ಅಭಿಪ್ರಾಯಪಟ್ಟಿತು.

ಶಬರಿಮಲೆ ದೇವಸ್ಥಾನ ಸೇರಿದಂತೆ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯ ಮತ್ತು ಬಹುಧರ್ಮೀಯರು ಆಚರಿಸುವ ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿ ಕುರಿತು ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿದ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠ ಈ ಹೇಳಿಕೆ ನೀಡಿತು.

'ಹಲವು ನಂಬಿಕೆಗಳು ಹಾಗೂ ಆಚರಣೆಗಳನ್ನು ಆಧರಿಸಿ ಧರ್ಮ ಎಂದು ನಿರ್ಧರಿಸಲಾಗಿರುತ್ತದೆ. ನಿರ್ದಿಷ್ಟ ಸಮುದಾಯಗಳು ಅನುಸರಿಸುವ ಇವುಗಳು ತಪ್ಪೋ ಸರಿಯೋ ಎಂದು ನ್ಯಾಯಾಲಯ ಹೇಳಲು ಸಾಧ್ಯವಿಲ್ಲ' ಎಂದು ತಿರುವಾಂಕೂರು ದೇವಸ್ವ ಮಂಡಳಿಯ (ಟಿಡಿಬಿ) ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಎ.ಎಂ. ಸಂಘ್ವಿ ಪ್ರತಿಪಾದಿಸಿದರು.

ಸಂವಿಧಾನದ 25 (2) (ಬಿ) ವಿಧಿಯ ಅನ್ವಯ ಎಲ್ಲ ಹಿಂದೂಗಳು ದೇವಸ್ಥಾನ ಪ್ರವೇಶಬಹುದು ಎಂದು ಹೇಳುವಂತೆಯೇ, 26 (ಬಿ) ವಿಧಿಯಂತೆ ನಿರ್ದಿಷ್ಟ ಕಟ್ಟುಪಾಡುಗಳನ್ನು ದೇವಸ್ಥಾನದ ಪ್ರವೇಶಕ್ಕೆ ಹಾಕಿಕೊಳ್ಳುವ ಅವಕಾಶವನ್ನೂ ಕಲ್ಪಿಸಬಹುದು ಎಂದು ಸಂಘ್ವಿ ಅವರು ವಾದಿಸಿದರು.

'ಸಂವಿಧಾನದ 25 (2) (ಬಿ) ವಿಧಿಯನ್ನು ಉಲ್ಲೇಖಿಸುವಾಗ 'ಸಾರ್ವಜನಿಕ ಆದೇಶ, ನೈತಿಕತೆ ಅಥವಾ ಆರೋಗ್ಯ' ಎಂಬ ಪದಗಳನ್ನು ಬಳಸುವುದರ ಬದಲು 'ಸಾಮಾಜಿಕ ಸುಧಾರಣೆ' ಎಂಬ ಪದಪುಂಜ ಉಪಯೋಗಿಸುವುದು ಸೂಕ್ತ' ಎಂದು ಸಿಜೆಐ ಸೂರ್ಯಕಾಂತ್ ನೇತೃತ್ವದ ಪೀಠವು ಸಲಹೆ ನೀಡಿತು.

ಸಾಮಾಜಿಕ ಸುಧಾರಣೆಯ ನೆಪದಲ್ಲಿ ಧರ್ಮವನ್ನು ಟೊಳ್ಳಾಗಿಸುವುದು ಸರಿಯಲ್ಲ ಎಂದು ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು ಹೇಳಿದ್ದನ್ನು ಸಂಘ್ವಿ ಒಪ್ಪಿಕೊಂಡರು. ಆದರೆ, ಶತಮಾನಗಳಿಂದ ನಿರ್ದಿಷ್ಟ ಆಚರಣೆಗಳನ್ನು ನಡೆಸಿಕೊಂಡು ಬಂದಿರುವ ಶಬರಿಮಲೆ, ಗುರುವಾಯೂರು ದೇಗುಲಗಳ ವಿಧಿ–ವಿಧಾನಗಳನ್ನು ಪ್ರಶ್ನಿಸಿ ದಿಢೀರ್ ಪಿಐಎಲ್ ಹಾಕುವುದು ಸರಿಯಲ್ಲ ಎಂದು ವಾದಿಸಿದರು.

ರಾಜತಾಂತ್ರಿಕರ ಜೊತೆಗೆ ಸಂವಾದ: ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ

ನಾಳೆ ದೆಹಲಿಯಲ್ಲಿ 'ಬ್ರಿಡ್ಜ್ ಟು ಬೆಂಗಳೂರು'

ಪ್ರಜಾವಾಣಿ ವಾರ್ತೆ

ಪ್ರಿಯಾಂಕ್ ಖರ್ಗೆ

ಬೆಂಗಳೂರು: ಏಪ್ರಿಲ್ 17ರಂದು ನವದೆಹಲಿಯಲ್ಲಿ 'ಬ್ರಿಡ್ಜ್ ಟು ಬೆಂಗಳೂರು' ಕಾರ್ಯಕ್ರಮದಲ್ಲಿ ರಾಜತಾಂತ್ರಿಕರ ಜೊತೆಗೆ ಸಂವಾದ ನಡೆಯಲಿದೆ ಎಂದು ಐಟಿ ಮತ್ತು ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ ನವೆಂಬರ್ 17ರಿಂದ 19ರವರೆಗೆ ನಡೆಯಲಿರುವ ಬೆಂಗಳೂರು ಟೆಕ್ ಸಮಿಟ್‌ಗೆ ಪೂರ್ವಭಾವಿಯಾಗಿ ಬ್ರಿಡ್ಜ್ ಟು ಬೆಂಗಳೂರು ಹಮ್ಮಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

'ಜಾಗತಿಕ ಕಂಪನಿಗಳ ಜೊತೆ ಸಹಭಾಗಿತ್ವಕ್ಕಾಗಿ ಒಂದು ವರ್ಷದಿಂದ ಪ್ರತಿಫಲ ಆಧಾರಿತ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ. ಈ ಯೋಜನೆಗಳು ಈಗಾಗಲೇ ಸಾಕಷ್ಟು ಫಲ ನೀಡಿವೆ. ಜಾಗತಿಕ ನಾವೀನ್ಯ ಮೈತ್ರಿಕೂಟದ ನೆರವಿನೊಂದಿಗೆ ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರವು ಇನ್ನಷ್ಟು ಅವಕಾಶಗಳನ್ನು ಸೃಷ್ಟಿಸಲಿದೆ' ಎಂದು ಹೇಳಿದರು.

40ಕ್ಕೂ ಹೆಚ್ಚು ದೇಶಗಳು, 2,000ಕ್ಕಿಂತ ಅಧಿಕ ನವೋದ್ಯಮಗಳ ಬೆಂಬಲ ಹಾಗೂ 60ಕ್ಕೂ ಅಧಿಕ ಜಾಗತಿಕ ಮಟ್ಟದ ಒಡಂಬಡಿಕೆ ಹಾಗೂ ಬೇರೆ ಬೇರೆ ಕಂಪನಿಗಳ ಜೊತೆಗಿನ ಸಹಕಾರದೊಂದಿಗೆ ಕರ್ನಾಟಕ ಸರ್ಕಾರವು ಜಾಗತಿಕ ನಾವೀನ್ಯ ಮೈತ್ರಿಕೂಟದಲ್ಲಿ ತನ್ನದೇ ಆದ ಛಾಪನ್ನು ಮೂಡಿಸುತ್ತಿದೆ ಎಂದರು.

ಯುನೈಟೆಡ್ ಅರಬ್ ಎಮಿರೇಟ್ಸ್, ಸಿಂಗಪುರ, ಬೆಲ್ಜಿಯಂ, ಆಸ್ಟ್ರೇಲಿಯಾ, ಜರ್ಮನಿ ಮತ್ತು ಜಪಾನ್ ಸೇರಿದಂತೆ ಒಟ್ಟು 9 ದೇಶಗಳೊಂದಿಗೆ ಮಾರುಕಟ್ಟೆ ಆಧಾರಿತ ಯೋಜನೆಗಳನ್ನು ಕೈಗೊಂಡು ನವೋದ್ಯಮಿಗಳಿಗೆ ಜಾಗತಿಕವಾಗಿ ಮಾರುಕಟ್ಟೆ ವಿಸ್ತರಣೆಗೆ ನೆರವಾಗಿದೆ ಎಂದು ವಿವರಿಸಿದರು.

'ಜಾಗತಿಕ ಸಂಸ್ಥೆಗಳಾದ ಲಂಡನ್‌ನ ಇಂಪೀರಿಯಲ್ ಕಾಲೇಜು, ಜಾನ್ಸ್ ಹಾಪ್‌ಕಿನ್ಸ್ ವಿಶ್ವವಿದ್ಯಾಲಯ, ರೈಸ್ ವಿಶ್ವವಿದ್ಯಾಲಯ, ಗ್ಲಾಸ್ಗೋ ವಿಶ್ವವಿದ್ಯಾಲಯ, ಲಾ ಟ್ರೋಬ್ ವಿಶ್ವವಿದ್ಯಾಲಯ ಮೊದಲಾದ ಸಂಸ್ಥೆಗಳ ಜತೆ ರಾಜ್ಯ ಸರ್ಕಾರವು ಒಡಂಬಡಿಕೆ ಪತ್ರಗಳಿಗೆ ಸಹಿ ಹಾಕುವ ಮೂಲಕ ಅವರ ತಾಂತ್ರಿಕ ನೆರವನ್ನು ಪಡೆದುಕೊಳ್ಳಲು ಮುಂದಾಗಿದೆ. 2025ರಲ್ಲಿ ನಡೆದ ವಿವಾ ಟೆಕ್ ಸಮ್ಮೇಳನದಲ್ಲಿ ಯುರೋಪ್- ಬೆಂಗಳೂರು ಮಧ್ಯೆ ನಾವೀನ್ಯ ಕಾರಿಡಾರ್ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. 2027ರ ಏಪ್ರಿಲ್‌ನಲ್ಲಿ ಬೆಂಗಳೂರಿನಲ್ಲಿ ಜಿಟೆಕ್ಸ್ ಎಐ ಇಂಡಿಯಾ- ಜಾಗತಿಕ ಮಟ್ಟದ ಸಮ್ಮೇಳನವನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಇವೆಲ್ಲ ಕಾರ್ಯಕ್ರಮಗಳ ಫಲವಾಗಿ ರಾಜ್ಯಕ್ಕೆ ಸುಮಾರು ₹5,500 ಕೋಟಿ ಮೊತ್ತದ ಜಾಗತಿಕ ಬಂಡವಾಳವು ಹರಿದು ಬರಲಿದ್ದು ಸುಮಾರು 7,200 ಉದ್ಯೋಗಗಳು ಸೃಷ್ಟಿಯಾಗಲಿವೆ. ₹6,350 ಕೋಟಿ ಬಂಡವಾಳವು ಡಾಟಾ ಕೇಂದ್ರಗಳ ಸ್ಥಾಪನೆಗೆ ಹೂಡಿಕೆಯಾಗಲಿವೆ ಎಂದು ಹೇಳಿದರು.

ಸಿ.ಎಂ, ಡಿಸಿಎಂ ಭಾಗಿ

ನವದೆಹಲಿಯಲ್ಲಿ ಏ.17ರಂದು ನಡೆಯಲಿರುವ 'ಬ್ರಿಡ್ಜ್ ಟು ಬೆಂಗಳೂರು' ರಾಜತಾಂತ್ರಿಕರ ಜತೆಗಿನ ಸಮಾಲೋಚನೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಪ್ರಿಯಾಂಕ್ ಖರ್ಗೆ, ಉದ್ಯಮಿ ಕಿರಣ್ ಮಜುಂದಾರ್ ಷಾ ಭಾಗವಹಿಸಲಿದ್ದಾರೆ.

‘ನವ ಸಂಕಲ್ಪ’ಕ್ಕೆ ಮೋದಿ ಕರೆ

ಆದಿಚುಂಚನಗಿರಿ: ಶ್ರೀಗುರು ಭೈರವೈಕ್ಯ ಮಂದಿರ ಉದ್ಘಾಟನೆ

ಪ್ರಮುಖ ಅಂಶಗಳು
- ಕನ್ನಡದಲ್ಲೇ ಭಾಷಣ ಶುರು ಮಾಡಿದ ಪ್ರಧಾನಿ
- ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರೊಂದಿಗೆ ಉಭಯ ಕುಶಲೋಪರಿ

● ಸಿದ್ದು ಆರ್.ಜಿ.ಹಳ್ಳಿ

ಆದಿಚುಂಚನಗಿರಿ (ಮಂಡ್ಯ): ನಾಥ ಪಂಥದ ಶೈವ ಮಠವಾದ ಆದಿಚುಂಚನ ಗಿರಿಯ 71ನೇ ಪೀಠಾಧಿಪತಿ ಬಾಲಗಂಗಾಧರನಾಥ ಸ್ವಾಮೀಜಿಯವರ ಗದ್ದುಗೆಯುಳ್ಳ ‘ಶ್ರೀಗುರು ಭೈರವೈಕ್ಯ ಮಂದಿರ’ವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಲೋಕಾರ್ಪಣೆಗೊಳಿಸಿ, ನವ ಸಂಕಲ್ಪಗಳನ್ನು ತೊಡುವಂತೆ ಜನರಿಗೆ ಕರೆ ನೀಡಿದರು.

‘ಕರ್ನಾಟಕದ ಎಲ್ಲ ಸಹೋದರ, ಸಹೋದರಿಯರಿಗೆ ನನ್ನ ನಮಸ್ಕಾರಗಳು’ ಎಂದು ಕನ್ನಡದಲ್ಲೇ ಭಾಷಣ ಶುರು ಮಾಡಿದ ಅವರು, ‘ಜಲ ಸಂರಕ್ಷಣೆ ಮಾಡುವುದು, ತಾಯಿಯ ಹೆಸರಿನಲ್ಲಿ ಸಸಿ ನೆಡುವುದು, ಸ್ವಚ್ಛತೆ ಕಾಪಾಡುವುದು, ಸ್ವದೇಶಿ ಮತ್ತು ಆತ್ಮನಿರ್ಭರಕ್ಕೆ ಒತ್ತು ನೀಡುವುದು, ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವುದು, ರಾಸಾಯನಿಕ ಮುಕ್ತ ಕೃಷಿಯಲ್ಲಿ ತೊಡಗುವುದು, ಆರೋಗ್ಯ, ಯೋಗ–ಕ್ರೀಡೆ–ಫಿಟ್‌ನೆಸ್‌ಗೆ ಒತ್ತು ನೀಡುವುದು ಹಾಗೂ ಸೇವಾ ಭಾವನೆ ಬೆಳೆಸಿಕೊಳ್ಳುವ ನವ ಸಂಕಲ್ಪಗಳನ್ನು ತೊಡಬೇಕು’ ಎಂದರು.

‘ಮಠವು ಅನ್ನ, ಅಕ್ಷರ, ಆರೋಗ್ಯ, ಅಧ್ಯಾತ್ಮ, ಆಶ್ರಯ, ಅರಣ್ಯ, ಆಕಳು, ಅನುಕಂಪ ಮತ್ತು ಅನುಬಂಧ ಎಂಬ ನವ ಸಿದ್ಧಾಂತಗಳಡಿ ಕೆಲಸ ಮಾಡುತ್ತಿದೆ. ಭೈರವೈಕ್ಯ ಮಂದಿರ ಉದ್ಘಾಟನೆ, ಸಂತರ ಸಾನ್ನಿಧ್ಯ ಮತ್ತು ಜನರ ದರ್ಶನ ಮಾಡಲು ಸಿಕ್ಕ ಅಪೂರ್ವ ಅನುಭವ ನನ್ನೊಂದಿಗೆ ಸದಾ ಇರುತ್ತದೆ’ ಎಂದರು.

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರೊಂದಿಗೆ ಉಭಯ ಕುಶಲೋಪರಿ ನಡೆಸಿ, ‘ಸೌಂದರ್ಯಲಹರೀ ಮತ್ತು ಶಿವಮಹಿಮ್ನಃ ಸ್ತೋತ್ರಮ್’ ಗ್ರಂಥವನ್ನು ಬಿಡುಗಡೆ ಮಾಡಿದರು.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿಯಲ್ಲಿ ಬುಧವಾರ ಏರ್ಪಡಿಸಿದ್ದ ‘ಶ್ರೀಗುರು ಭೈರವೈಕ್ಯ ಮಂದಿರ’ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಶ್ರೀಮಠದ ವತಿಯಿಂದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನವಿಲು ಪ್ರತಿಕೃತಿ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ನಿರ್ಮಲಾನಂದನಾಥ ಸ್ವಾಮೀಜಿ, ಸ್ವಾಮಿ ಪರಮಾತ್ಮಾನಂದ ಸರಸ್ವತಿ, ಎಚ್‌.ಡಿ. ಕುಮಾರಸ್ವಾಮಿ, ಆರ್‌.ಅಶೋಕ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ: ಅನೂಪ್ ರಾಘ. ಟಿ.

ನವಿಲಿನ ಸ್ಮರಣಿಕೆ; ಮೋದಿ ಸಂತಸ

ಶ್ರೀಮಠದ ವತಿಯಿಂದ ನಿರ್ಮಲಾನಂದನಾಥ ಸ್ವಾಮೀಜಿ ಅವರು ಪ್ರಧಾನಿ ಮೋದಿ ಅವರಿಗೆ ಶಾಲು ಹೊದಿಸಿ, ರುದ್ರಾಕ್ಷಿ ಹಾರ ಹಾಕಿ, ನವಿಲು ಪ್ರತಿಕೃತಿಯ ಸ್ಮರಣಿಕೆ ನೀಡಿ ಸನ್ಮಾನಿಸಿದರು.

‘ರಾಷ್ಟ್ರೀಯ ಪಕ್ಷಿ ನವಿಲು ಶಾಂತಿ ಮತ್ತು ಸೌಂದರ್ಯದ ಸಂಕೇತ. ಭಗವಾನ್ ಸುಬ್ರಹ್ಮಣ್ಯ ಸ್ವಾಮಿಯ ವಾಹನ. ನನ್ನ ಸರ್ಕಾರಿ ವಸತಿ ಗೃಹದಲ್ಲಿ ತುಂಬಾ ನವಿಲುಗಳಿವೆ. ಅವುಗಳೊಂದಿಗೆ ಗೆಳೆತನ ಬೆಳೆದಿದೆ. ಆದಿಚುಂಚನಗಿರಿಯ ‘ಮಯೂರವನ’ದಲ್ಲಿ ನವಿಲುಗಳ ಸಂರಕ್ಷಣೆ ಮಾಡುತ್ತಿರುವುದು ಸಂತಸ ತಂದಿದೆ’ ಎಂದು ಮೋದಿ ಹೇಳಿದರು.

‘ಗೌಡರಿಂದ ರಾಗಿಮುದ್ದೆ ಲೋಕಪ್ರಿಯ’

‘ರಾಗಿಮುದ್ದೆ ಲೋಕಪ್ರಿಯವಾಗಲು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರೇ ಕಾರಣ. ಊಟದಲ್ಲಿ ಸಿರಿಧಾನ್ಯ ಹೆಚ್ಚು ಬಳಸುವುದರಿಂದ ಬೊಜ್ಜಿನ ಸಮಸ್ಯೆಯಿಂದ ಪಾರಾಗಬಹುದು. ಇಲ್ಲಿನ ಪ್ರಧಾನ ಬೆಳೆ ಕಬ್ಬು ಆಗಿರುವುದರಿಂದ ಮಂಡ್ಯವನ್ನು ‘ಸಕ್ಕರೆ ನಗರ’, ‘ಮಧುರ ಮಂಡ್ಯ’ ಎಂದು ಕರೆಯುತ್ತಾರೆ. ಇಲ್ಲಿನ ಜನರ ಮಾತಿನಲ್ಲೂ ಸಿಹಿ ಕಾಣುತ್ತದೆ. ಸ್ವಾಗತಿಸುವ ರೀತಿ ಹೃದಯ ಮುಟ್ಟುತ್ತದೆ’ ಎಂದು ಪ್ರಧಾನಿ ಬಣ್ಣಿಸಿದರು.

ಕೋರ್ಟ್ ಮೆಟ್ಟಿಲೇರಿದ ಹರಿಹರ ಪೀಠದ ಸಂಘರ್ಷ

ಪ್ರಜಾವಾಣಿ ವಾರ್ತೆ

ಹರಿಹರ (ದಾವಣಗೆರೆ): ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಪೀಠಾಧಿಪತಿಗಳ ಪದಚ್ಯುತಿ ಮತ್ತು ಟ್ರಸ್ಟ್ ರಚನೆಯ ಬೆನ್ನಲ್ಲೇ ಪೀಠದ ನಿಯಂತ್ರಣಕ್ಕಾಗಿ ಉಭಯ ಬಣಗಳು ಕೋರ್ಟ್ ಮೆಟ್ಟಿಲೇರಿವೆ.

ಟ್ರಸ್ಟಿಗಳು ಮತ್ತು ಉಚ್ಚಾಟಿತ ವಚನಾನಂದ ಶ್ರೀಗಳು ಪರಸ್ಪರರ ವಿರುದ್ಧ ದಾವಣಗೆರೆ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ಕೋರ್ಟ್ ಹಾಗೂ ಹರಿಹರದ ಪ್ರಧಾನ ಸಿವಿಲ್ ನ್ಯಾಯಾಲಯಗಳಲ್ಲಿ ಕೇವಿಯಟ್ ಸಲ್ಲಿಸಿದ್ದಾರೆ.

ಟ್ರಸ್ಟ್ ಪರವಾಗಿ ಸಲ್ಲಿಸಿರುವ ಕೇವಿಯಟ್‌ನಲ್ಲಿ ಮ್ಯಾನೇಜಿಂಗ್ ಟ್ರಸ್ಟಿ ಬಿ.ಸಿ.ಉಮಾಪತಿ ಮತ್ತು ಕಾರ್ಯದರ್ಶಿ ಜ್ಯೋತಿ ಪ್ರಕಾಶ್ ಕೆ.ಎಂ. ಪಕ್ಷಗಾರರಾಗಿದ್ದಾರೆ. ಶ್ರೀಗಳನ್ನು ಪದಚ್ಯುತಗೊಳಿಸಲಾಗಿದೆ. ಇದರ ವಿರುದ್ಧ ಶ್ರೀಗಳು ದಾವೆ ಹೂಡಿ, ಟ್ರಸ್ಟ್‌ಗೆ ಅಂತಹ ಅಧಿಕಾರವಿಲ್ಲ ಎಂದು ಹೇಳಿ ಏಕಪಕ್ಷೀಯವಾಗಿ ತಡೆಯಾಜ್ಞೆ ತರುವುದನ್ನು ತಡೆಯುವುದು ಟ್ರಸ್ಟ್‌ನ ಮುಖ್ಯ ಉದ್ದೇಶವಾಗಿದೆ.

‘ತಮ್ಮನ್ನು ಮಠದ ಚಟುವಟಿಕೆಗಳಿಂದ ದೂರವಿಡಲು ಟ್ರಸ್ಟ್ ಏಕಪಕ್ಷೀಯ ಆದೇಶ ಪಡೆಯುವ ಸಾಧ್ಯತೆ ತಪ್ಪಿಸಲು, ತಮ್ಮ ವಾದವನ್ನೂ ಆಲಿಸಬೇಕು’ ಎಂದು ವಚನಾನಂದ ಶ್ರೀಗಳು ಕೇವಿಯಟ್ ಸಲ್ಲಿಸಿದ್ದಾರೆ.

‘ಎಳೆದು ಹೊರಹಾಕುತ್ತೇವೆ’: ‘ಶ್ರೀಗಳು ಮಠದಿಂದ ತಾವಾಗಿಯೇ ಹೊರನಡೆದರೆ ಶಾಲು ಹೊದಿಸಿ ಗೌರವಯುತವಾಗಿ ಕಳಿಸುತ್ತೇವೆ. ಇಲ್ಲವಾದರೆ ಎಳೆದು ಹೊರಹಾಕುತ್ತೇವೆ’ ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ಯುವ ಘಟಕದ ಅಧ್ಯಕ್ಷ ಕಿಚಡಿ ಕೊಟ್ರೇಶ್ ಹಾಗೂ ಕಾರ್ಯದರ್ಶಿ ಬಿ.ಆರ್. ಕರಿಬಸಪ್ಪ ತಿಳಿಸಿದರು.

‘ಸಂಸ್ಕೃತಿ, ಸಂಸ್ಕಾರವಿದ್ದರೆ ವಚನಾನಂದ ಸ್ವಾಮೀಜಿ ತಕ್ಷಣವೇ ಪೀಠ ತೊರೆಯಲಿ’ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಕೆ.ಆರ್. ಪುರ ಮಾರುಕಟ್ಟೆ: ರೈತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸಂಚಾರ ದಟ್ಟಣೆಯ ನೆಪದಲ್ಲಿ ರೈತರಿಗೆ ಹಾಗೂ ವ್ಯಾಪಾರಸ್ಥರಿಗೆ ನೀಡುತ್ತಿರುವ ಕಿರುಕುಳವನ್ನು ನಿಲ್ಲಿಸುವಂತೆ, ಸಂತೆಗೆ ಮೂಲಸೌಕರ್ಯಗಳನ್ನು ಒದಗಿಸುವಂತೆ ಆಗ್ರಹಿಸಿ ವಿವಿಧ ರೈತಪರ ಸಂಘಟನೆಗಳ ಕಾರ್ಯಕರ್ತರು ಕೆ.ಆರ್. ಪುರ ಸಂತೆ ಮೈದಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

‘ಕೆ.ಆರ್.ಪುರ ಸಂತೆ ಮೈದಾನದಲ್ಲಿ ನಮ್ಮ ಪೂರ್ವಜರ ಕಾಲದಿಂದಲೂ ದೂರದ ಊರುಗಳಿಂದ ಹಣ್ಣು, ತರಕಾರಿ, ಹೂವು, ಕೃಷಿ ಉತ್ಪನ್ನಗಳನ್ನು ಹಳೆ ಮದ್ರಾಸ್ ರಸ್ತೆ ಬದಿಯಲ್ಲಿ ವ್ಯಾಪಾರ ವಹಿವಾಟು ನಡೆಸಿಕೊಂಡು ಜೀವನ ನಿರ್ವಹಣೆ ಮಾಡಲಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಕೆ.ಆರ್.ಪುರ ಸಂಚಾರ ಪೊಲೀಸರು ರಸ್ತೆ ಬದಿಯಲ್ಲಿ ವ್ಯಾಪಾರ ಮಾಡದಂತೆ ತೊಂದರೆ ನೀಡುತ್ತಿದ್ದಾರೆ’ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

‘ಪೊಲಿಸರು ಅನಗತ್ಯ ಹಾಗೂ ಅನವಶ್ಯಕ ನಿಯಮಗಳನ್ನು ಜರುಗಿಸಲು ಮುಂದಾಗಿದ್ದಾರೆ. ಸಂಚಾರ ದಟ್ಟಣೆ ನೆಪದಲ್ಲಿ ವ್ಯಾಪಾರಿಗಳನ್ನು ಸ್ಥಳದಿಂದ ಸ್ಥಳಾಂತರ ಮಾಡುತ್ತಿದ್ದಾರೆ’ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಹೊಸಕೋಟೆ ತಾಲ್ಲೂಕು ಅಧ್ಯಕ್ಷ ಟಿ.ಎಸ್.ಹಕ್ಕಲೇಗೌಡ ದೂರಿದರು.

‘ಸಂತೆ ಮೈದಾನದಲ್ಲಿ ಮೂಲಸೌಕರ್ಯಗಳಿಲ್ಲದೆ ಪರದಾಡುವಂತಾಗಿದೆ. ಕುಡಿಯುವ ನೀರಿನ ಸಮಸ್ಯೆ, ಶೌಚಾಲಯ ಸಮಸ್ಯೆಯಿಂದ ವಾಸನೆ ಬೀರುವುದು ಸಾಮಾನ್ಯವಾಗಿದೆ. ಸುಗಮ ವಾಹನ ಸಂಚಾರಕ್ಕೆ ಕಾಂಕ್ರೀಟ್ ರಸ್ತೆ ಬೇಕಾಗಿದೆ. ಮಳೆ ನೀರು ಸರಾಗವಾಗಿ ಹರಿಯಲು ಚರಂಡಿ ವ್ಯವಸ್ಥೆ ಕಲ್ಪಿಸಬೇಕು. ಅಕ್ರಮ ಚಟುವಟಿಕೆಗಳನ್ನು ತಡೆಯಲು ಸಿ.ಸಿ.ಟಿ.ವಿ ಕ್ಯಾಮೆರಾ ಹಾಗೂ ಬೀದಿ ದೀಪಗಳನ್ನು ಅಳವಡಿಸಬೇಕು. ವಾಹನ ನಿಲುಗಡೆಗೆ ಸ್ಥಳಾವಕಾಶ ಕಲ್ಪಿಸಬೇಕು. ಪ್ರತಿದಿನ ರಾಸಾಯನಿಕ ಸಿಂಪಡಣೆ ಮಾಡಬೇಕು. ರೈತರಿಗೆ ವಿಶ್ರಾಂತಿ ಗೃಹ ನಿರ್ಮಾಣ ಮಾಡಬೇಕು’ ಎಂದು ವ್ಯಾಪಾರಿ ಅಸ್ಲಂಬಾಬು ಒತ್ತಾಯಿಸಿದರು. ಮುಖಂಡರಾದ ಕೆಂಚೇಗೌಡ, ಅಂಜನಮೂರ್ತಿ, ಲಕ್ಷ್ಮಣ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಸುಚಿತ್ರಾ ಹಿರಣ್ಣಯ್ಯ ನಾಟಕೋತ್ಸವ: ಬೆಳಿಗ್ಗೆ 10ಕ್ಕೆ ಉದ್ಘಾಟನೆ ಸಮಾರಂಭ: ಅತಿಥಿಗಳು: ಎಚ್.ಎನ್. ನರಹರಿ ರಾವ್, ರಾಘವೇಂದ್ರ ರಾವ್, ಪ್ರಕಾಶ್ ಬೆಳವಾಡಿ, ಬಾಬು ಹಿರಣ್ಣಯ್ಯ, ವೃಷಾಂಕ್ ಭಟ್, 11ಕ್ಕೆ ಮಾಸ್ಟರ್ ಕ್ಲಾಸ್: ಸಿಂಧು ಶ್ರೀನಿವಾಸಮೂರ್ತಿ, ಸಂಜೆ 6.15ಕ್ಕೆ ಡೊಳ್ಳು ಕುಣಿತ, ಸಂಜೆ 7ಕ್ಕೆ ‘ಜ್ಞಾತಪರ್ವ’ ನಾಟಕ ಪ್ರದರ್ಶನ, ಆಯೋಜನೆ ಹಾಗೂ ಸ್ಥಳ: ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ



ಮಾಸ್ಟರ್ ಹಿರಣ್ಣಯ್ಯ

ಬಲಗೈ ಸಮುದಾಯಗಳಿಗೆ ಕಾರ್ಯಾಗಾರ: ಅಧ್ಯಕ್ಷತೆ: ಜ್ಞಾನಪ್ರಕಾಶ ಸ್ವಾಮೀಜಿ, ಆಯೋಜನೆ: ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10.30

‘ಶ್ರೀಕೃಷ್ಣ ವಿಜಯ’ ನಾಟಕ ಪ್ರದರ್ಶನ: ಅಭಯ ಆಂಜನೇಯ ಸ್ವಾಮಿ ಕೃಪಾ ಪೋಷಿತ ನಾಟಕ ಮಂಡಳಿ, ಚಲುವನಾರಾಯಣಸ್ವಾಮಿ ಕೃಪಾ ಪೋಷಿತ ನಾಟಕ ಮಂಡಳಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಮಧ್ಯಾಹ್ನ 2

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಸುಮಂತ್ ಮಂಜುನಾಥ್, ಮಾಳವಿ ಮಂಜುನಾಥ್, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಸಾಯಿ ವಿಘ್ನೇಶ್, ಬಿ.ಕೆ. ರಘು, ತುಮಕೂರು ರವಿಶಂಕರ್, ಸುನಾದ್ ಆನೂರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 4.30ರಿಂದ

ವಿದ್ಯಾರ್ಥಿಗಳಿಗೆ ಸನ್ಮಾನ: ಅತಿಥಿ: ಮಧು ಬಂಗಾರಪ್ಪ, ಅಧ್ಯಕ್ಷತೆ: ಎಸ್.ಎಸ್. ರಾಮದಾಸ್, ಆಯೋಜನೆ ಹಾಗೂ ಸ್ಥಳ: ಎಂಇಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿಪೂರ್ವ ಕಾಲೇಜು, ಮಲ್ಲೇಶ್ವರ, ಬೆಳಿಗ್ಗೆ 10

ಭರತನಾಟ್ಯ ಪ್ರದರ್ಶನ: ಶಿವಲೀಲಾ ಸಂಗೀತ ಮತ್ತು ನೃತ್ಯ ಅಕಾಡೆಮಿಯ ವಿದ್ಯಾರ್ಥಿಗಳು, ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, 5ನೇ ಬಡಾವಣೆ ಜಯನಗರ, ಸಂಜೆ 5.15

‘ಶ್ರೀಕೃಷ್ಣಸಂಧಾನ’ ನಾಟಕ ಪ್ರದರ್ಶನ: ಆಯೋಜನೆ: ನಾಡಮ್ಮದೇವಿ ಕಲಾಬಳಗ ಟ್ರಸ್ಟ್, ಸ್ಥಳ: ಸಪ್ಲಮ್ಮ ದೇವಸ್ಥಾನದ ಮುಂಭಾಗ, ಕೋಡಿಚಿಕ್ಕನಹಳ್ಳಿ, ಸಂಜೆ 6

33ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಅಮೃತಾ ಮುರಳಿ, ಪಿಟೀಲು: ಎಚ್.ಎನ್. ಭಾಸ್ಕರ್, ಮೃದಂಗ: ಅರುಣಪ್ರಕಾಶ್ ಕೃಷ್ಣನ್, ಘಟ: ಓಂಕಾರ್ ಜಿ. ರಾವ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30ರಿಂದ

‘ಸಮಗ್ರ ಮಹಾಭಾರತ’ ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ ಹಾಗೂ ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6.30

26ನೇ ವರ್ಷದ ಪ್ರವಚನ ವಾಹಿನಿ: ಭಾಗವತದ ಸಂದೇಶ: ಅಶೋಕಾಚಾರ್ಯ ಜೋಶಿ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

‘ಮಹಾಭಾರತದಲ್ಲಿ ಬರುವ ಪಾತ್ರಗಳ ಪರಿಚಯ’ ಗಮಕ ವ್ಯಾಖ್ಯಾನ: ಜಯಂತಿ ಗೋಪಾಲ್, ಉಪಸ್ಥಿತಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಯುವಜನ ಸಂಘ, ಹೊಂಬೇಗೌಡನಗರ, ಸಂಜೆ 6.30

ದಾಸರ ಪದಗಳ ಗಾಯನ: ಸರಸ್ವತಿ, ಶ್ರುತಿ ಮತ್ತು ಸಂಗಡಿಗರು, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಏರೋಸ್ಪೇಸ್ ಕಂಪನಿಯಲ್ಲಿ ಊಟ ಮಾಡಿದ ನಂತರ ವಾಂತಿ, ಭೇದಿ ಶುರು

90ಕ್ಕೂ ಹೆಚ್ಚು ಕಾರ್ಮಿಕರು ಅಸ್ವಸ್ಥ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಏರೋಸ್ಪೇಸ್ ಕೈಗಾರಿಕಾ ಪ್ರದೇಶದಲ್ಲಿರುವ ಸಾಸ್ಮೋಸ್ ಏರೋಸ್ಪೇಸ್ ಕಂಪನಿಯಲ್ಲಿ ಬುಧವಾರ ಆಹಾರ ಸೇವಿಸಿದ 722 ಕಾರ್ಮಿಕರ ಪೈಕಿ 90ಕ್ಕೂ ಹೆಚ್ಚು ಕಾರ್ಮಿಕರು ಅಸ್ವಸ್ಥಗೊಂಡಿದ್ದಾರೆ.

ವಿಮಾನಗಳ ಬಿಡಿಭಾಗ ತಯಾರಿಸುವ ಈ ಕಂಪನಿಯಲ್ಲಿ ಬುಧವಾರ ಮಧ್ಯಾಹ್ನ ಕಾರ್ಮಿಕರು ಅನ್ನ ಹಾಗೂ ಸಾರು ಸೇವಿಸಿದ್ದರು. ಕೆಲಸ ಮುಗಿಸಿ ಮನೆಗಳಿಗೆ ತೆರಳಿದ ನಂತರ ಹಲವರಲ್ಲಿ ವಾಂತಿ, ಭೇದಿ ಲಕ್ಷಣ ಕಾಣಿಸಿಕೊಂಡಿವೆ. ಆಹಾರದ ಗುಣಮಟ್ಟದ ಬಗ್ಗೆ ಅನುಮಾನ ವ್ಯಕ್ತವಾಗಿದ್ದು, ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ.

ಕಂಪನಿ ಸಿಬ್ಬಂದಿ ತಕ್ಷಣ ಅಸ್ವಸ್ಥ ಕಾರ್ಮಿಕರನ್ನು ದೇವನಹಳ್ಳಿಯ ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಿದ್ದಾರೆ. 47 ಕಾರ್ಮಿಕರನ್ನು ದೇವನಹಳ್ಳಿಯ ಆಕಾಶ್ ಆಸ್ಪತ್ರೆಗೆ ಹಾಗೂ 50 ಜನರು ನ್ಯೂ ಮಾನಸ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಾಸ್ಮೋಸ್ ಏರೋಸ್ಪೇಸ್ ಕಂಪನಿ

ಅಸ್ವಸ್ಥಗೊಂಡ ಎಲ್ಲ ಕಾರ್ಮಿಕರಿಗೂ ವೈದ್ಯರು ಚಿಕಿತ್ಸೆ ನೀಡುತ್ತಿದ್ದು, ಹೆಚ್ಚಿನವರು ಅಪಾಯದಿಂದ ಪಾರಾಗಿದ್ದಾರೆ. ಎಲ್ಲರ ಆರೋಗ್ಯವೂ ಸ್ಥಿರವಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಲಕ್ಕಾ ಕೃಷ್ಣ ರೆಡ್ಡಿ ತಿಳಿಸಿದ್ದಾರೆ.

‘ಬುಧವಾರ ಮುಂಜಾನೆ ಸಾಸ್ಮೋಸ್ ಏರೋಸ್ಪೇಸ್ ಕಂಪನಿಯಲ್ಲಿ ಕೆಲಸ ಮಾಡುವ ಕಾರ್ಮಿಕರಲ್ಲಿ ಆರೋಗ್ಯದಲ್ಲಿ ಏರುಪೇರಾಗಿದ್ದು, ಕಂಪನಿಯಲ್ಲಿ ನೀಡಿದ್ದ ಆಹಾರ ಸೇವಿಸಿ ತೊಂದರೆಯಾಗಿರುವ ಬಗ್ಗೆ ರೋಗಿಗಳು ಮಾಹಿತಿ ನೀಡಿದ್ದಾರೆ’ ಎಂದು ನ್ಯೂ ಮಾನಸ ಆಸ್ಪತ್ರೆಯ ಡಾ.ನರಸಾರೆಡ್ಡಿ ಹೇಳಿದರು.

‘ರೋಗಿಗಳ ದೇಹದಲ್ಲಿ ಲವಣಾಂಶ ಹಾಗೂ ತೇವಾಂಶ ಕಡಿಮೆಯಾಗಿದ್ದು ಪ್ರಥಮ ಚಿಕಿತ್ಸೆ ನೀಡಲಾಗಿದೆ. ಈಗಾಗಲೇ ರಕ್ತ ಮತ್ತು ಮೂತ್ರ ಮಾದರಿಗಳನ್ನು ಪರೀಕ್ಷೆಗೆ ಕಳುಹಿಸಿದ್ದೇವೆ. ಒಳ ರೋಗಿಗಳಾಗಿ ನಾಲ್ವರಿಗೆ ಹೆಚ್ಚಿನ ಚಿಕಿತ್ಸೆ ಅಗತ್ಯವಿದೆ’ ಎಂದು ತಿಳಿಸಿದ್ದಾರೆ.

ತಪ್ಪಿತಸ್ಥರ ವಿರುದ್ಧ ಕ್ರಮ

ತಾಲ್ಲೂಕು ವೈದ್ಯಾಧಿಕಾರಿಗಳು ಹಾಗೂ ಸರ್ಕಾರಿ ಆಸ್ಪತ್ರೆಯ ವೈದ್ಯರು ರೋಗಿಗಳ ಆರೋಗ್ಯದ ಮೇಲೆ ನಿಗಾ ಇಟ್ಟಿದ್ದಾರೆ. ರಕ್ತ ಮತ್ತು ಮೂತ್ರ ಪರೀಕ್ಷೆಗೆ ಕಳುಹಿಸಲಾಗಿದೆ. ಕಂಪನಿಯ ಆಹಾರ ಮಾದರಿಗಳನ್ನು ಕೂಡ ಪರಿಶೀಲನೆಗೆ ಕಳುಹಿಸಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಲಕ್ಕಾ ಕೃಷ್ಣ ರೆಡ್ಡಿ ತಿಳಿಸಿದ್ದಾರೆ.

ಸಿದ್ಧರಾಮರಿಗೆ 'ಬಸವ', ದೇವನೂರಗೆ 'ಪಂಪ'

ಭಾನುಕೀರ್ತಿ ಭಟ್ಟಾರಕರಿಗೆ ಭಗವಾನ್ ಮಹಾವೀರ ಶಾಂತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2025-26ನೇ ಸಾಲಿನ ವಿವಿಧ ಪ್ರಶಸ್ತಿಗಳನ್ನು ಬುಧವಾರ ಘೋಷಿಸಿದೆ.

'ಬಸವ ರಾಷ್ಟ್ರೀಯ ಪುರಸ್ಕಾರ'ಕ್ಕೆ ಬೀದರ್ ಜಿಲ್ಲೆಯ ಬಸವಕಲ್ಯಾಣದ ಕೌಠಾ(ಬಿ) ಬಸವ ಯೋಗಾಶ್ರಮದ ಬೆಲ್ದಾಳ ಸಿದ್ದರಾಮ ಶರಣರು, 'ಶ್ರೀ ಭಗವಾನ್ ಮಹಾವೀರ ಶಾಂತಿ ರಾಷ್ಟ್ರೀಯ ಪ್ರಶಸ್ತಿ'ಗೆ ಮಂಡ್ಯದ ಕಂಬದಹಳ್ಳಿಯ ಜೈನ ಮಠದ ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿ ಭಾಜನರಾಗಿದ್ದಾರೆ. ಈ ಎರಡೂ ಪ್ರಶಸ್ತಿಗಳು ತಲಾ ₹10 ಲಕ್ಷ ನಗದು ಒಳಗೊಂಡಿವೆ.

ಬೆಲ್ದಾಳ ಸಿದ್ದರಾಮ ಶರಣರು

'ಪಂಪ ಪ್ರಶಸ್ತಿ'ಗೆ ಸಾಹಿತಿ ದೇವನೂರ ಮಹಾದೇವ (ಮೈಸೂರು), 'ಸಂಗೊಳ್ಳಿ ರಾಯಣ್ಣ ಪ್ರಶಸ್ತಿ'ಗೆ ಪ್ರಗತಿಪರ ಚಿಂತಕ ಸಿದ್ದನಗೌಡ ಪಾಟೀಲ (ಧಾರವಾಡ), 'ಅಕ್ಕಮಹಾದೇವಿ ಪ್ರಶಸ್ತಿ'ಗೆ ಸಾಮಾಜಿಕ ಹೋರಾಟಗಾರ್ತಿ ಕೆ.ನೀಲಾ (ಕಲಬುರಗಿ), ಕಾಯಕಯೋಗಿ ಶ್ರೀ ಸಿದ್ಧರಾಮೇಶ್ವರ ಪ್ರಶಸ್ತಿ'ಗೆ ಸಾಹಿತಿ ಪ್ರೊ.ಎಸ್.ಜಿ. ಸಿದ್ಧರಾಮಯ್ಯ (ತುಮಕೂರು) ಅವರನ್ನು ಆಯ್ಕೆ ಮಾಡಲಾಗಿದೆ.

'ಪ್ರೊ.ಕೆ.ಜಿ. ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ'ಗೆ ಲೇಖಕ ಅಲ್ಲಾಬಕ್ಷ ಮೀರಾಸಾಹೇಬ ಮಿರ್ಜಿ (ವಿಜಯಪುರ), 'ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ'ಗೆ ಲೇಖಕಿ ಸುಕನ್ಯಾ ಮಾರುತಿ (ಬಳ್ಳಾರಿ), 'ಡಾ. ಗುಬ್ಬಿ ವೀರಣ್ಣ ಪ್ರಶಸ್ತಿ'ಗೆ ಕಲಾವಿದೆ ಜಿ.ವಿ. ಶಾರದಾ (ತುಮಕೂರು), 'ಬಿ.ವಿ. ಕಾರಂತ ಪ್ರಶಸ್ತಿ'ಗೆ ರಂಗಕರ್ಮಿ ಪ್ರಸನ್ನ (ಶಿವಮೊಗ್ಗ) ಹಾಗೂ 'ಡಾ. ಸಿದ್ದಲಿಂಗಯ್ಯ ಸಾಹಿತ್ಯ ಪ್ರಶಸ್ತಿ'ಗೆ ಸಾಹಿತಿ ಗಂಗಾರಾಂ ಚಂಡಾಳ (ಕೋಲಾರ) ಆಯ್ಕೆಯಾಗಿದ್ದಾರೆ.

ಕಲಾ ಪ್ರಶಸ್ತಿ ವಿಭಾಗದಲ್ಲಿ 'ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ'ಗೆ ಕಲಾವಿದ ವಿ.ಹರಿರಾಮ್ (ಬೆಂಗಳೂರು), 'ಜಕಣಾಚಾರಿ ಪ್ರಶಸ್ತಿ'ಗೆ ಆಶೋಕ್ ಗುಡಿಗಾರ್ (ಶಿವಮೊಗ್ಗ), 'ಜಾನಪದ ಶ್ರೀ ಪ್ರಶಸ್ತಿ'ಗೆ ಕಲಾವಿದರಾದ ಎಂ. ಮಹದೇವಸ್ವಾಮಿ (ಮಂಡ್ಯ) ಹಾಗೂ ಬಿ. ಲಕ್ಷ್ಮಣ ಗುತ್ತೇದಾರ (ಯಾದಗಿರಿ) ಆಯ್ಕೆಯಾಗಿದ್ದಾರೆ.

ಸಂಗೀತ-ನೃತ್ಯ ಪ್ರಶಸ್ತಿ ವಿಭಾಗದಲ್ಲಿ 'ಕುಮಾರವ್ಯಾಸ ಪ್ರಶಸ್ತಿ'ಗೆ ಕಲ್ಲಿನಾಥ ಶಾಸ್ತ್ರಿ (ಗದಗ) ಹಾಗೂ 'ಶಾಂತಲಾ ನಾಟ್ಯರಾಣಿ ಪ್ರಶಸ್ತಿ'ಗೆ ಪ್ರತಿಭಾ ಪ್ರಹ್ಲಾದ್ (ಮೈಸೂರು) ಭಾಜನರಾಗಿದ್ದಾರೆ. ಈ ಪ್ರಶಸ್ತಿಗಳು ತಲಾ ₹5 ಲಕ್ಷ ನಗದು ಒಳಗೊಂಡಿವೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮಯಾವಕಾಶ ಪಡೆದು, ಪ್ರಶಸ್ತಿ ಪ್ರದಾನ ಸಮಾರಂಭವನ್ನು ಶೀಘ್ರದಲ್ಲಿ ಆಯೋಜಿಸಲಾಗುವುದು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದ್ದಾರೆ.


ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿ

ದೇವನೂರ ಮಹಾದೇವ

ಎಸ್‌ಜಿ. ಸಿದ್ಧರಾಮಯ್ಯ


ಸಿದ್ದನಗೌಡ ಪಾಟೀಲ

ಕೆ. ನೀಲಾ

ಸುಕನ್ಯಾ ಮಾರುತಿ

ಪ್ರತಿಭಾ ಪ್ರಹ್ಲಾದ್


ಪ್ರಸನ್ನ

ಕಲ್ಲಿನಾಥ ಶಾಸ್ತ್ರಿ

ವಿ.ಹರಿರಾಮ್

ಜಿ.ವಿ. ಶಾರದಾ

ಆಶೋಕ್ ಗುಡಿಗಾರ್

ಬಿ. ಲಕ್ಷ್ಮಣ ಗುತ್ತೇದಾರ

ಗಂಗಾರಾಂ ಚಂಡಾಳ

'ಹಿಂದಿಗೆ ಅಂಕ ಕೊಡಿ'

ಬೆಂಗಳೂರು: ಪ್ರಸಕ್ತ 2025-26ನೇ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ವಿಷಯಗಳಿಗೆ ಗ್ರೇಡ್ ಬದಲಿಗೆ ಅಂಕ ನೀಡುವಂತೆ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಗ್ರೇಡಿಂಗ್ ವ್ಯವಸ್ಥೆಯನ್ನು ಪ್ರಶ್ನಿಸಿ ಚಿಕ್ಕಮಗಳೂರಿನ ಸಹನಾ ಆರ್.ನಾಯ್ಕ್ ಸೇರಿದಂತೆ ಮೂವರು ವಿದ್ಯಾರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಆರ್.ವಿ. ನಾಯ್ಕ್ ಅವರ ವಾದ ಪುರಸ್ಕರಿಸಿರುವ ನ್ಯಾಯಪೀಠ, 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ವಿಷಯಗಳಿಗೆ ಗ್ರೇಡ್ ಬದಲಿಗೆ ಅಂಕಗಳನ್ನು ನೀಡುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ ಅರ್ಜಿ ಇತ್ಯರ್ಥಪಡಿಸಿದೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ (ಕೆಎಸ್‌ಇಎಬಿ) ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಅಂಕಗಳ ಬದಲಿಗೆ ಗ್ರೇಡ್ ನೀಡಬೇಕೆಂದು ರಾಜ್ಯ ಸರ್ಕಾರ ಇತ್ತೀಚೆಗಷ್ಟೇ ಅಧಿ ಸೂಚನೆ ಹೊರಡಿಸಿತ್ತು. ಸರ್ಕಾರದ ಈ ನಿರ್ಧಾರಕ್ಕೆ ಕನ್ನಡಪರ ಸಂಘಟನೆ ಗಳು, ಸಾಹಿತಿ, ಲೇಖಕರು ಬೆಂಬಲ ವ್ಯಕ್ತಪಡಿಸಿದ್ದರು. ಬಿಜೆಪಿಯ ನಾಯಕರು ವಿರೋಧ ತೋರಿದ್ದರು.

ರಾಮನ್ ಸಂಶೋಧನಾ ಸಂಸ್ಥೆ
ಬೆಂಗಳೂರು – 560080.
ADVT. No. PhD ADMISSION / 2026 / 01
ರಾಮನ್ ಸಂಶೋಧನಾ ಸಂಸ್ಥೆಯು ಭಾರತ ಸರ್ಕಾರದ ಅನುದಾನದೊಂದಿಗೆ ಮೂಲಭೂತ ವಿಜ್ಞಾನ ಸಂಶೋಧನೆಗಳಲ್ಲಿ ತೊಡಗಿರುವ ಒಂದು ಪ್ರಮುಖ ಸ್ವಾಯತ್ತ ಸಂಸ್ಥೆಯಾಗಿದ್ದು, ಈ ಸಂಸ್ಥೆಯು ಭೌತಶಾಸ್ತ್ರ ವಿಭಾಗದ ವಿವಿಧ ಶಾಖೆಗಳಲ್ಲಿ ಸ್ನಾತಕೋತ್ತರ (ಪಿಹೆಚ್.ಡಿ.) ಪದವಿಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತದೆ.
ಹೆಚ್ಚಿನ ವಿವರಗಳಿಗೆ ವೀಕ್ಷಿಸಿ:
https://www.rri.res.in/careers/phd-programme

ಯೋಗೀಶಗೌಡ ಪ್ರಕರಣ; ಆಗಿದ್ದೇನು?

2016

ಜೂನ್ 15: ಸಪ್ತಾಪುರದ ಉದಯ ಜಿಮ್ ಬಳಿ ಯೋಗೀಶಗೌಡ ಗೌಡರ್ ಅವರನ್ನು ಕೊಚ್ಚಿ ಕೊಲೆ

ಜೂನ್ 17: ಬಸವರಾಜ ಮುತ್ತಗಿ, ವಿಕ್ರಮ ಬಳ್ಳಾರಿ, ಕೀರ್ತಿಕುಮಾರ ಕುರಹಟ್ಟಿ, ಸಂದೀಪ ಸವದತ್ತಿ, ವಿನಾಯಕ ಕಟಗಿ ಹಾಗೂ ಮಹಾಬಳೇಶ ಹೊಂಗಲ್ ಬಂಧನ.

2017

ನ. 17: ಪ್ರಕರಣದ ವಿಚಾರಣೆಯನ್ನು 4ನೇ ಜಿಲ್ಲಾ ಕೋರ್ಟ್‌ನಿಂದ ಬೇರೆಡೆ ವರ್ಗಾಯಿಸಬೇಕು' ಎಂದು ಕೋರಿ ಯೋಗೀಶಗೌಡ ಗೌಡರ್ ಪತ್ನಿ ಮಲ್ಲಮ್ಮ ಗೌಡರ್ ಹಾಗೂ ಸೋದರ ಗುರುನಾಥಗೌಡ ಗೌಡರ್ ಅವರಿಂದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಚ್‌.ಜಿ ರಮೇಶ ಅವರಿಗೆ ಪತ್ರ.

ನ. 23: 'ಇಡೀ ಪ್ರಕರಣದಲ್ಲಿ ಸಚಿವ ವಿನಯ ಕುಲಕರ್ಣಿ ಪಾತ್ರ ಇದೆ' ಎಂದು ಯೋಗೀಶಗೌಡ ಗೌಡರ್ ಸಹೋದರ ಗುರುನಾಥ ಗೌಡರ್ ಆರೋಪ.

ನ. 27: ಆರೋಪಿಗಳೊಂದಿಗೆ ರಾಜಿಸಂಧಾನಕ್ಕೆ ಡಿವೈಎಸ್ಪಿ ಬಿ.ಪಿ. ಚಂದ್ರಶೇಖರ ಒತ್ತಡ ಹೇರಿದ್ದರು ಎಂದು ಆರೋಪಿಸಿ ಯೋಗೀಶಗೌಡ ಗೌಡರ್ ಸಹೋದರ ಗುರುನಾಥಗೌಡ ಗೌಡರ್‌ರಿಂದ ಎಸ್‌ಪಿಗೆ ದೂರು.

ಡಿ. 3: ಡಿವೈಎಸ್‌ಪಿಗಳಾದ ತುಳಜಪ್ಪ ಸುಲ್ಫಿ ಹಾಗೂ ಬಿ.ಕೆ.ಚಂದ್ರಶೇಖರ ಹಸ್ತಕ್ಷೇಪ ಕುರಿತು ಬೆಳಗಾವಿ ಹೆಚ್ಚುವರಿ ಎಸ್‌ಪಿ ಅವರಿಂದ ತನಿಖೆ.

2018

ಜ. 23: ಪ್ರಕರಣವನ್ನು ಸಿಬಿಐಗೆ ಒಪ್ಪಿಸಲು ಕೋರಿ ಸಲ್ಲಿಸಿದ್ದ ಅರ್ಜಿಯಲ್ಲಿ ಪ್ರತಿವಾದಿಯನ್ನಾಗಿಸಬೇಕು ಎಂದು ಯೋಗೀಶಗೌಡ ಗೌಡರ್ ಪತ್ನಿ ಮಲ್ಲಮ್ಮ ಗೌಡರ್ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಕೆ.

ಮಾ. 1: ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ನಿರ್ದೇಶನ ಕೋರಿ ಗುರುನಾಥಗೌಡ ಗೌಡರ್ ಮತ್ತು ತುಂಗಮ್ಮ (ಯೋಗೀಶಗೌಡ ಗೌಡರ್ ತಾಯಿ) ಸಲ್ಲಿಸಿದ್ದ ರಿಟ್ ಅರ್ಜಿ ಹೈಕೋರ್ಟ್‌ನಿಂದ ವಜಾ.

ಏ. 10: ಪ್ರಕರಣದಲ್ಲಿ ಸಾಕ್ಷ್ಯನಾಶ ಹಾಗೂ ಸಾಕ್ಷಿಗಳಿಗೆ ಬೆದರಿಕೆ ಒಡ್ಡಿದ ಆರೋಪದಡಿ ವಿನಯ ಕುಲಕರ್ಣಿ, ಡಿವೈಎಸ್ಪಿಗಳಾದ ತುಳಜಪ್ಪ ಸುಲ್ಫಿ, ಬಿ.ಪಿ. ಚಂದ್ರಶೇಖರ ವಿರುದ್ಧ ಉಪನಗರ ಠಾಣೆಯಲ್ಲಿ ಪ್ರಕರಣ ದಾಖಲು.

ಜು. 1: ಆರೋಪಿಗಳಿಗೆ ಜಾಮೀನು ರದ್ದತಿ ಕೋರಿ ಸರ್ಕಾರ ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿ ವಜಾ.

2019

ಸೆ. 6: ಪ್ರಕರಣವನ್ನು ಸಿಬಿಐಗೆ ವಹಿಸಿದ ರಾಜ್ಯ ಸರ್ಕಾರ. ಪ್ರಕರಣ ಸಿಬಿಐಗೆ ವಹಿಸದಂತೆ ಆರೋಪಿ ಬಸವರಾಜ ಮುತ್ತಗಿ ಮೊರೆ. ತನಿಖೆಗೆ ಹೈಕೋರ್ಟ್ ತಡೆ. 'ಸುಪ್ರೀಂ'ನಿಂದ ತೆರವು.

2020

ಮಾ. 7: ಪ್ರಕರಣಕ್ಕೆ ಸಂಬಂಧಿಸಿದಂತೆ ದಿನೇಶ, ಅಶ್ವತ್ಥ, ಸುನೀಲಕುಮಾರ್, ನಾಜೀರ್ ಅಹ್ಮದ್, ಶಾ ನವಾಜ್, ನೂತನ್ ಮತ್ತು ಹರ್ಷಿತ್ ಬಂಧನ.

ಸೆ. 26: ವಿನಯ ಕುಲಕರ್ಣಿ ಸೋದರ ವಿಜಯ ಕುಲಕರ್ಣಿ ಸೇರಿ ಹಲವರ ವಿಚಾರಣೆ.

ನ. 5: ಸಿಬಿಐ ಅಧಿಕಾರಿಗಳು ವಿನಯ ಕುಲಕರ್ಣಿ ಅವರನ್ನು ಧಾರವಾಡದ ಅವರ ನಿವಾಸದಲ್ಲಿ ಸುದೀರ್ಘ ವಿಚಾರಣೆ ನಡೆಸಿ, ನಂತರ ಬಂಧಿಸಿದರು. ಅವರನ್ನು ಬೆಳಗಾವಿಯ ಹಿಂಡಲಗಾ ಜೈಲಿಗೆ ಕಳುಹಿಸಲಾಯಿತು.

2021

ಫೆಬ್ರುವರಿ 22: ಸಿಬಿಐ ನ್ಯಾಯಾಲಯಕ್ಕೆ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಿ, ವಿನಯ ಕುಲಕರ್ಣಿ ಅವರನ್ನು 15ನೇ ಆರೋಪಿಯನ್ನಾಗಿ ಹೆಸರಿಸಿತು.

ಆಗಸ್ಟ್ 20: ಸುಪ್ರೀಂ ಕೋರ್ಟ್ ವಿನಯ ಕುಲಕರ್ಣಿ ಅವರಿಗೆ ಷರತ್ತುಬದ್ಧ ಜಾಮೀನು ಮಂಜೂರು.

2024

ಏಪ್ರಿಲ್ 8: ಸೆಷನ್ಸ್ ನ್ಯಾಯಾಲಯ ನಿಗದಿಪಡಿಸಿರುವ ದೋಷಾರೋಪಣೆಯಲ್ಲಿ ದೋಷಗಳಿವೆ' ಎಂದು ಆಕ್ಷೇಪಿಸಿ ವಿನಯ ಕುಲಕರ್ಣಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿದ ಹೈಕೋರ್ಟ್.

ಮೇ 7: ಧಾರವಾಡ ಪ್ರವೇಶಕ್ಕೆ ಹೈಕೋರ್ಟ್ ಅನುಮತಿ ಪಡೆದು ಶಾಸಕ ವಿನಯ ಕುಲಕರ್ಣಿ ತಮ್ಮ ಧಾರವಾಡಕ್ಕೆ ಬಂದು ಮತ ಚಲಾಯಿಸಿದರು.

2025

ಜೂನ್ 6: ಸಾಕ್ಷ್ಯ ನಾಶ ಮತ್ತು ಸಾಕ್ಷಿಗಳ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ವಿನಯ ಕುಲಕರ್ಣಿ ಅವರಿಗೆ ನೀಡಿದ್ದ ಜಾಮೀನು ರದ್ದು.

ಜೂನ್ 13: ಸುಪ್ರೀಂ ಕೋರ್ಟ್ ಶರಣಾಗಲು ನೀಡಿದ್ದ ಸಮಯಾವಕಾಶ ವಿಸ್ತರಿಸಲು ನಿರಾಕರಿಸಿದ ನಂತರ, ವಿನಯ ಕುಲಕರ್ಣಿ ಅವರು ನ್ಯಾಯಾಲಯಕ್ಕೆ ಶರಣಾಗಿ ಮತ್ತೆ ನ್ಯಾಯಾಂಗ ಬಂಧನಕ್ಕೆ ಒಳಗಾದರು.

2026

ಏ.2: ಯೋಗೇಶ್‌ಗೌಡ ಗೌಡರ್ ಕೊಲೆ ಪ್ರಕರಣದ ವಿಚಾರಣೆಯನ್ನು ಜನಪ್ರತಿನಿಧಿಗಳ ವಿಶೇಷ ಸೆಷನ್ಸ್ ನ್ಯಾಯಾಲಯ ಪೂರ್ಣಗೊಳಿಸಿತು.

ಏ.15: ತೀರ್ಪು ಪ್ರಕಟ

ಮರ್ಯಾದೆಗೇಡು ಹತ್ಯೆ ತನಿಖೆ: ಪ್ರಕರಣ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಹುಕ್ಕೇರಿ ತಾಲ್ಲೂಕಿನ ನದಿಗುಡಿಕೇತ್ರ ಗ್ರಾಮದ ಮರ್ಯಾದೆಗೇಡು ಹತ್ಯೆ ಪ್ರಕರಣವನ್ನು ಹೆಚ್ಚಿನ ತನಿಖೆಗೆ ಮಹಾರಾಷ್ಟ್ರದ ಸಾಂಗ್ಲಿ ಠಾಣೆಗೆ ಹಸ್ತಾಂತರಿಸಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಹೇಳಿದರು.

'ಸತ್ಯವ್ವ ಹೆಳವರ (24) ಅವರು ಕ್ಷತ್ರಿಯ ಜಾತಿಯ ಪ್ರಿಯಕರನ ಜತೆ ಸಾಂಗತ್ಯ ಬೆಳೆಸಿದ್ದಕ್ಕೆ ಕುಟುಂಬ ಸದಸ್ಯರೇ ಬಲವಂತದಿಂದ ವಿಷ ಕುಡಿಸಿ ಕೊಲೆ ಮಾಡಿದ್ದರು. ಈ ಸಂಬಂಧ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಬುಧವಾರ ಸುದ್ದಿಗಾರರಿಗೆ ತಿಳಿಸಿದರು. 'ಸಾಂಗ್ಲಿ ಜಿಲ್ಲೆಯಲ್ಲಿ ಪ್ರಕರಣದ ಬೆಳವಣಿಗೆಗಳು ನಡೆದಿರು ವುದರಿಂದ, ತನಿಖೆ ಸಾಂಗ್ಲಿ ಠಾಣೆ ಪೊಲೀಸರಿಗೆ ಹಸ್ತಾಂತರಿಸಲಾಗುತ್ತಿದೆ' ಎಂದರು.

'5 ದಿನ ಹಲವೆಡೆ ಬಿಸಿ ಗಾಳಿ'

ಬೆಂಗಳೂರು: ರಾಜ್ಯದ ವಿವಿಧೆಡೆ ಗುರುವಾರದಿಂದ ಐದು ದಿನ ತಾಪಮಾನ ಮತ್ತಷ್ಟು ಏರಿಕೆಯಾಗುವ ಜತೆಗೆ, ಬಿಸಿ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ವಿಜಯಪುರ, ಗದಗ, ಧಾರವಾಡ, ಬಾಗಲಕೋಟೆ ಮತ್ತು ಕೊಪ್ಪಳ ಜಿಲ್ಲೆಗಳಿಗೆ ಐದು ದಿನಗಳು 'ಯೆಲ್ಲೊ ಅಲರ್ಟ್' ಘೋಷಿಸಲಾಗಿದ್ದು, ಈ ಜಿಲ್ಲೆಗಳಲ್ಲಿ ಬಿಸಿ ಗಾಳಿ ಬೀಸುವ ಸಂಭವವಿದೆ. ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಕೆಲವೆಡೆ ಬಿಸಿ ಗಾಳಿ ಬೀಸಲಿದೆ ಎಂದು ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಮತ್ತು ಹಾಸನ ಜಿಲ್ಲೆಯ ಒಂದೆರಡು ಕಡೆ ಗುರುವಾರದಿಂದ ಐದು ದಿನ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಬುಧವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ (44 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ. ಅಲ್ಲಿ ಸಾಮಾನ್ಯಕ್ಕಿಂತ 4.1 ಡಿಗ್ರಿ ಸೆಲ್ಸಿಯಸ್ ತಾಪಮಾನ ಏರಿಕೆಯಾಗಿದೆ. ವಿಜಯಪುರದಲ್ಲಿ 40.6 ಡಿಗ್ರಿ ಸೆಲ್ಸಿಯಸ್ ಹಾಗೂ ರಾಯಚೂರಿನಲ್ಲಿ 40 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ವರದಿಯಾಗಿದೆ.

ಬೆಂಗಳೂರಿನಲ್ಲಿ ತಾಪಮಾನ 36.6 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದೆ. ಮುಂದಿನ 2 ದಿನಗಳಲ್ಲಿ 37 ಡಿಗ್ರಿ ಸೆಲ್ಸಿಯಸ್‌ಗೆ ಏರಿಕೆಯಾಗುವ ಸಾಧ್ಯತೆಯಿದೆ ಎಂದಿದೆ.

ಬಾಯ್ಲರ್ ಸ್ಫೋಟ: ಮೃತರ ಸಂಖ್ಯೆ 20ಕ್ಕೆ ಏರಿಕೆ

ಸಕ್ತಿ (ಛತ್ತೀಸಗಢ): ಇಲ್ಲಿನ ವೇದಾಂತ ವಿದ್ಯುತ್ ಸ್ಥಾವರ ಘಟಕದಲ್ಲಿ ಬಾಯ್ಲರ್ ಸ್ಫೋಟಗೊಂಡಿದ್ದರಿಂದ ಮೃತಪಟ್ಟವರ ಸಂಖ್ಯೆ ಬುಧವಾರ 20 ಕ್ಕೆ ಏರಿಕೆಯಾಗಿದೆ.

ಬಾಯ್ಲರ್‌ನ ಸ್ಟೀಲ್ ಟ್ಯೂಬ್ ಸ್ಫೋಟಗೊಂಡ ಕಾರಣ ಮಂಗಳವಾರ ನಾಲ್ವರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದರು. ತೀವ್ರವಾಗಿ ಗಾಯಗೊಂಡಿದ್ದ ಇತರೆ 9 ಕಾರ್ಮಿಕರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು.

ಬುಧವಾರ ಇನ್ನೂ ಏಳು ಮಂದಿ ಮೃತಪಟ್ಟಿದ್ದರಿಂದ ಸಾವಿನ ಸಂಖ್ಯೆ 20ಕ್ಕೆ ತಲುಪಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜ್ಯ ಚುನಾವಣಾ ಆಯೋಗ, ಕರ್ನಾಟಕ
ನಂ.16, 2ನೇ ಮತ್ತು 3ನೇ ಮಹಡಿ, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು–560 080. ದೂರವಾಣಿ: 080–22205189/193
ಇ–ಮೇಲ್: sec.karnataka@ka.gov.in/karsec@gmail.com
No: SECK/ADMN/ETND/2/2026-ADMN ದಿನಾಂಕ: 15-04-2026
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ಕಛೇರಿಯಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ 5 ನಗರಪಾಲಿಕೆಗಳ ಮತದಾರರಿಗೆ ಗುರುತಿನ ಚೀಟಿಯ ಮುದ್ರಣಕ್ಕೆ ಸಂಬಂಧಿಸಿದಂತೆ ಕೆಪಿಪಿ ಪೋರ್ಟಲ್ ಮುಖಾಂತರ ಇ–ಟೆಂಡರ್ ನ್ನು (ಟೆಂಡರ್ ಸಂ.KSEC/2026-27/SE0005) ಕರೆಯಲಾಗಿದ್ದು, ಇ–ಪೋರ್ಟಲ್ ಮೂಲಕ ಟೆಂಡರ್ ನ್ನು **ದಿನಾಂಕ: 23–04–2026 ರಂದು ಸಂಜೆ 5.00 ಗಂಟೆ** ಒಳಗೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗೆ ಸಂಬಂಧಿಸಿದಂತೆ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ನಲ್ಲಿ https://kppp.karnataka.gov.in ಪಡೆಯಬಹುದಾಗಿರುತ್ತದೆ ಅಥವಾ ಕಛೇರಿ ವೇಳೆಯಲ್ಲಿ ಆಯೋಗದ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.
ಸಹಿ/–
ಶಾಖಾಧಿಕಾರಿ,
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ
ವಾಸಾಸಂಇ/ವಾ.ಪ್ರ/202/ಎಎಎ/2026–27

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602
ಸಂಖ್ಯೆ: ಕಕ್ರೀಪ್ರಾ/ಪಿ5/ 01/ 2026–27 ದಿನಾಂಕ: 15.04.2026
ತರಬೇತುದಾರರ ಗುತ್ತಿಗೆ ನೇಮಕಾತಿಗೆ ಅರ್ಜಿ ಆಹ್ವಾನ
ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣ, ತುಮಕೂರು ಇಲ್ಲಿನ ಶೂಟಿಂಗ್ ರೇಂಜ್ ನಲ್ಲಿ ಕ್ರೀಡಾಪಟುಗಳಿಗೆ ತರಬೇತಿ ನೀಡಲು ಶೂಟಿಂಗ್ ತರಬೇತುದಾರರ ಸೇವೆಯನ್ನು ಆರು ತಿಂಗಳ ಅವಧಿಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಪಡೆಯಲು ಭಾರತದ ಅರ್ಹ ನಾಗರೀಕರಿಂದ ಅರ್ಜಿಯನ್ನು ಆಹ್ವಾನಿಸಿದೆ.
ಅರ್ಜಿ ಮತ್ತು ಇನ್ನಿತರೆ ಪೂರಕ ದಾಖಲೆಗಳನ್ನು ದಿನಾಂಕ: 22–04–2026 ರಂದು ಸಂಜೆ 4.00 ಗಂಟೆಯೊಳಗೆ ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–56001 ಇವರಿಗೆ ಸಲ್ಲಿಸಬಹುದು.
ಅರ್ಜಿ ನಮೂನೆ ಹಾಗೂ ವಿವರಗಳನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವೆಬ್‌ಸೈಟ್ www.dyes.karnataka.gov.in ನಲ್ಲಿ ಪಡೆಯಬಹುದು.
ಸಹಿ/–
ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ಕ್ರೀಡಾ ಪ್ರಾಧಿಕಾರ
DIPR/CP/187/Zen/2026-27

ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ
ನಂ.24, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು – 560024, ಫೋನ್ ನಂ. . 8431235858 / 8431235867
ಇ–ಮೇಲ್ : : ifablimited@gmail.com, ವೆಬ್‌ಸೈಟ್ :-www.ifabindia.org
IFAB/2025-26/PM/WORK_INDENTI/CALL-3 Date: 11.04.2026
IFAB/2025-26/PM/WORK_INDENT3/CALL-3 Date: 11.04.2026
ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತದ ಬಲವರ್ಧನೆ ಯೋಜನೆಯ ಸಿವಿಲ್ ಕಾಮಗಾರಿಗಳಿಗೆ ಹಾಗೂ ಡಬಲ್ ಡೀಪ್ ರ್‍ಯಾಕಿಂಗ್ ಸಿಸ್ಟಮ್, ಪ್ಯಾಲೆಟ್‌ಗಳು, ಕನ್ವೇಯರ್ ಬೆಲ್ಟ್ ಸಿಸ್ಟಮ್ ಇತ್ಯಾದಿಗಳನ್ನು ಒಳಗೊಂಡಂತೆ ತಾಂತ್ರಿಕ ಉಪಕರಣಗಳ ಪೂರೈಕೆ ಮತ್ತು ಸ್ಥಾಪನೆ ಮತ್ತು ಹೂವಿನ ಶೇಕರಣಾ ಕೋಲ್ಡ್ ರೂಮ್‌ಗಳ ನಿರ್ಮಾಣ ಟೆಂಡರ್ ಪ್ರಕಟಣೆ
IFAB ಲಿಮಿಟೆಡ್ ನಿಂದ ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಎರಡು ಬಿಡ್ ಸಿಸ್ಟಮ್ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತದಲ್ಲಿ RIDF ಅಡಿಯಲ್ಲಿ ಸಿವಿಲ್ ಕಾಮಗಾರಿಗಳಿಗೆ **(IFAB/2025-26/PM/WORK_INDENT1/CALL-3)** ಹಾಗೂ ಟಬಲ್ ಡೀಪ್ ರ್‍ಯಾಕಿಂಗ್ ಸಿಸ್ಟಮ್, ಪ್ಯಾಲೆಟ್‌ಗಳು, ಕನ್ವೇಯರ್ ಬೆಲ್ಟ್ ಸಿಸ್ಟಮ್, ಇತ್ಯಾದಿ ಸೇರಿದಂತೆ ತಾಂತ್ರಿಕ ಉಪಕರಣಗಳ ಪೂರೈಕೆ ಮತ್ತು ಸ್ಥಾಪನೆ ಹಾಗೂ ಹೂವಿನ ಸಂಗ್ರಹಣೆ ಕೋಲ್ಡ್ ರೂಮ್‌ಗಳ ನಿರ್ಮಾಣ **(IFAB/2025-26/PM/WORK_INDENT3/CALL-3)**ಕ್ಕಾಗಿ **ದಿ: 11.04.2026** ರಂದು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ವಿವರ ಮತ್ತು ದಾಖಲೆಗಳು ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ದಿನಾಂಕ: 11.04.2026 ರಿಂದ ಲಭ್ಯವಿರುತ್ತದೆ, ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 23.04.2026 ರ ಸಂಜೆ 5.00 ಗಂಟೆ** ಆಗಿರುತ್ತದೆ.
ವಾ.ಸಾ.ಸಂ.ಇ/ವಾಪ್ರ/178/ಶಿರಡಿ ಸಾಯಿ/2026–27 ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ
BELAGAVI URBAN DEVELOPMENT AUTHORITY, BELAGAVI.
ಫ್ಯಾಕ್ಸ/ದೂರವಾಣಿ: 0831–2470342, 2470257 E-mail: belagavibuda@gmail.com
No BUDA/PWD/E-TENDER/2026-27/93 ದಿನಾಂಕ: 15–04–2026
ಟೆಂಡರ ಪ್ರಕಟಣೆ (e-procurement ಮುಖಾಂತರ)
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಾವಳಿಗಳಲ್ಲಿನ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಅನ್ವಯ ಇ–ಪ್ರೋಕ್ಯೂರಮೆಂಟ–2 ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಆಸಕ್ತ ಮತ್ತು ಅರ್ಹ ಗುತ್ತಿಗೆದಾರರು ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು, ಕಾರ್ಯಕಾರಿ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಇವರಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ, **(ದೂರವಾಣಿ ಸಂಖ್ಯೆ: 0831–2470342)** ಮತ್ತುಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ: kppp.karanataka.gov.in ರಲ್ಲಿ ಪಡೆಯಬಹುದು.

Sl No	Name of Work	Indent No	EMD Amt in Rupees
1	E Auction for the deposit BUDA Fund for Maximum one year Period (Around 60.00 Crore) only Public sector Banks should participate	BGMUDA/2026-27/ AUCTION146	2,10,000/-

ಟೆಂಡರ್ ಫಾರ್ಮ ಬೆಲೆ ಇ–ಪ್ರೋಕ್ಯೂರಮೆಂಟ್‌ದಲ್ಲಿದ್ದಂತೆ:
1) ಆಕ್ಷನ್ ಕ್ವಾರೀಸ್ ಸಲ್ಲಿಸಲು ಕೊನೆಯ ದಿನಾಂಕ: 08–05–2026 ರಂದು ಸಾಯಂಕಾಲ 4.30 ಗಂಟೆವರೆಗೆ
2) ಆಕ್ಷನ್‌ನಲ್ಲಿ ಭಾಗವಹಿಸುವ ಕೊನೆಯ ದಿನಾಂಕ: 14.05.2026 ರಂದು ಸಾಯಂಕಾಲ 4.30 ಗಂಟೆವರೆಗೆ
3) ಆಕ್ಷನ್ ಪ್ರಾರಂಭ ದಿನಾಂಕ: 15.05.2026 ರಂದು ಮುಂಜಾನೆ 10.00 ಗಂಟೆಗೆ.
4) ಆಕ್ಷನ್ ಮುಕ್ತಾಯ ದಿನಾಂಕ: 16.05.2026 ರಂದು ಸಾಯಂಕಾಲ 04.00 ಗಂಟೆಗೆ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ
ವಾ.ಸಾ.ಇ./ಬೆಳಗಾವಿ/102/ 2026–27/ದೇಶಪಾಂಡೆಪಬ್ಲಿಸಿಟಿ
ಸಹಿ/– ಆಯುಕ್ತರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರಬೆಳಗಾವಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು – 560 009. ದೂ.ಸಂಖ್ಯೆ : 080–22265383, website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–04/178/2026–27 ದಿನಾಂಕ: 15.04.2026
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ
ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ (ಸಿವಿಲ್/ವಿದ್ಯುತ್) ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಕಾಮಗಾರಿಗಳ ಹೆಸರು : (1) ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕು ಹರಳಾಪುರ ಕೈಗಾರಿಕಾ ಪ್ರದೇಶದ ಉಪ ಬಡಾವಣೆಯಲ್ಲಿ ಆರ್‌ಸಿಸಿ ಬಾಕ್ಸ್ ಚರಂಡಿ ನಿರ್ಮಾಣ ಹಾಗೂ ಜಿಟಿಟಿಸಿ ಕಾಲೇಜಿಗೆ ಹಂಚಿಕೆಯಾಗಿರುವ ನಿವೇಶನ ಸಂಖ್ಯೆ 22ಸಿ & ಡಿ, 8, 9 ಮತ್ತು 10 ರ ಪಕ್ಕದಲ್ಲಿ 12.00 ಮೀ ಅಗಲದ ರಸ್ತೆಯನ್ನು ಬಲಪಡಿಸುವ ಕಾಮಗಾರಿ. (ಪ.ಪಂ). (2ನೇ ಕರೆ).
(2) ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಹನಗವಾಡಿ 2ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ಉಪ ಬಡಾವಣೆಯ ನಿವೇಶನ ಸಂಖ್ಯೆ 90 ರಲ್ಲಿ ಆರ್‌ಸಿಸಿ ಬಾಕ್ಸ್ ಚರಂಡಿ, ಆರ್‌ಸಿಸಿ ಬಾಕ್ಸ್ ಕಲ್ವರ್ಟ್ ನಿರ್ಮಾಣ, ಹೆಚ್‌ಡಿಪಿಇ ನೀರು ಸರಬರಾಜು ಕೊಳವೆ ಮಾರ್ಗದೊಂದಿಗೆ 12.00 ಮೀಟರ್ ಅಗಲದ ರಸ್ತೆ ನಿರ್ಮಾಣ ಮಾಡುವ ಕಾಮಗಾರಿ. (ಪ.ಜಾ). (2ನೇ ಕರೆ).
.ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 29.04.2026 ಸಂಜೆ 4.00 ಗಂಟೆಯವರೆಗೆ
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/199/Zen/2026-27

ಮಹಾನಗರ ಪಾಲಿಕೆ, ಕಲಬುರಗಿ
ದೂ.: 08472/ 278675 ಫ್ಯಾಕ್ಸ : 08472 / 260776 ಇ ಮೇಲ್– itstaff_ulb_gulbarga@yahoo.com
No: KMP/EE/TS-02/ 15th FC/ 2026-27 ದಿನಾಂಕ: 15.04.2026
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ.
ಸಂಖ್ಯೆ: 01/2026–27
1) ಕಾಮಗಾರಿಯ ವಿವರ : ಕಲಬುರಗಿ ಮಹಾನಗರ ಪಾಲಿಕೆಯಿಂದ 2024–25ನೇ ಸಾಲಿನ 15ನೇ ಹಣಕಾಸು ಆಯೋಗದ ಉಳಿತಾಯ ಮೊತ್ತದ ಕ್ರಿಯಾ ಯೋಜನೆಯ ಅನುದಾನದಲ್ಲಿ 2024–25ನೇ ಸಾಲಿನ 15ನೇ ಹಣಕಾಸು ಆಯೋಗದ ಪರಿಷ್ಕೃತ ಕ್ರಿಯಾ ಯೋಜನೆಯ ಅನುದಾನದಲ್ಲಿ, 2024–25 & 2025–26ನೇ ಸಾಲಿನ 15ನೇ ಹಣಕಾಸು ಆಯೊಗದ ಪರಿಷ್ಕೃತ ಕ್ರಿಯಾ ಯೋಜನೆಯ ಅನುದಾನದಲ್ಲಿ, 2022–23, 2023–24 ಮತ್ತು 2024–25ನೇ ಸಾಲಿನ 15ನೇ ಹಣಕಾಸು ಆಯೋಗದ ಉಳಿತಾಯ ಮೊತ್ತದ ಕ್ರಿಯಾ ಯೋಜನೆಯ ಅನುದಾನದಲ್ಲಿ ಹಾಗೂ 2025–26ನೇ ಸಾಲಿನ 15ನೇ ಹಣಕಾಸು ಆಯೋಗದ ಕ್ರಿಯಾ ಯೋಜನೆಯ ಅನುದಾನದಲ್ಲಿ ಅನುಮೋದನೆಗೊಂಡ ಒಟ್ಟು (14) ಕಾಮಗಾರಿಗಳಿಗೆ ಕೆ.ಪಿ.ಪಿ. ಪ್ರೋರ್ಟಲ್–2.0 ನಲ್ಲಿ ಕೆ.ಟಿ.ಪಿ.ಪಿ ರ ಪ್ರಕಾರ ಕೆ.ಡಬ್ಲ್ಯೂ–1,3&4 ರ ಮೂಲಕ 7 ದಿನಗಳ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಕನಿಷ್ಠ **ಮೊತ್ತ ರೂ. 5.00 ಲಕ್ಷಗಳು ಹಾಗೂ ಗರಿಷ್ಠ ಮೊತ್ತ : ರೂ. 121.00 ಲಕ್ಷಗಳು.** 3) ಗುತ್ತಿಗೆದಾರರ ಅರ್ಹತೆ ವಿವರಃ 3&4ನೇ ದರ್ಜೆ ಮತ್ತು ಹೆಚ್ಚು, 4) ಟೆಂಡರ ಅರ್ಜಿಯ ಬೆಲೆ ರೂ. ಕೆ.ಪಿ.ಪಿ.ಪಿ ಪ್ರೋರ್ಟಲ್–2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. : ಕನಿಷ್ಠ ರೂ. 10,500.00 ಗಳು ಹಾಗೂ ಗರಿಷ್ಠ ರೂ. 1,59,700.00 ಗಳು. 5) ಪೂರ್ವಭಾವಿ ಸಭೆ ದಿನಾಂಕ: 21.04.2026 ರಂದು ಬೆಳಿಗ್ಗೆ 11:00 ಗಂಟೆಗೆ. 6) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 21.04.2026 ರಂದು ಸಾಯಂಕಾಲ 4:30 ಗಂಟೆಗೆ. 6) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: 22.04.2026 ರಂದು ಸಾಯಂಕಾಲ 04:35 ಗಂಟೆಗೆ. 7) ಆರ್ಥಿಕ ಬಿಡ್ ತೆರೆಯುವ ದಿನಾಂಕ: 23.04.2026 ರಂದು ಬೆಳಿಗ್ಗೆ 11:30 ಗಂಟೆಗೆ. ನಿಗದಿಪಡೆಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 8) ಹೆಚ್ಚಿನ ವಿವರಗಳಿಗೆ : ಕಾರ್ಯಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 9) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ http://www.kalaburagicity.mrc.gov.in/
Note: All subsequent corrigendum/amendment shall be published only on website and not in press. Hence, tenderers are advoised to always be in touch with our said website until the tender is finally opened.
ಸಹಿ/– ಕಾರ್ಯಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/35/ಕೆ.ಎಸ್.ಎಂ.ಸಿ.&ಎ/2025–26

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)
ಬೆವಿಕಂ ವಿಚಾರಣೆ ಸಂಖ್ಯೆ: **ಬೆವಿಕಂ/2026–27/ಐಎನ್‌ಡಿ0225**ರ ಮೂಲಕ ಬೆವಿಕಂನ ಬೆಂಗಳೂರು ಮಹಾನಗರ ಕ್ಷೇತ್ರ ಉತ್ತರ ವಲಯಕ್ಕೆ ಅವಶ್ಯಕವಿರುವ 100ಕೆವಿಎ ಮತ್ತು 250ಕೆವಿಎ ವಿತರಣಾ ಪರಿವರ್ತಕಗಳಿಗೆ ಸೂಕ್ತವಾದ **ಎಲ್.ಟಿ ಡಿಸ್ಟ್ರಿಬ್ಯೂಷನ್ ಬಾಕ್ಸ್‌ಗಳನ್ನು** ಟೆಂಡರ್ ನಿರ್ದಿಷ್ಟತೆ, ಜಿ.ಟಿ.ಪಿ ಮತ್ತು ರೇಖಾ ಚಿತ್ರಗಳ ಪ್ರಕಾರ ಖರೀದಿಸಲು ಟೆಂಡರ್‌ಗಳನ್ನು ಆಹ್ವಾನಿಸಿದೆ.
ಬಿಡ್ ದಾಸ್ತಾವೇಜು ಲಭ್ಯತೆಯ ದಿನಾಂಕ: **16.04.2026**. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **15.05.2026 ಸಂಜೆ 5:00 ಗಂಟೆವರೆಗೆ**. ಬಿಡ್ ದಾಸ್ತಾವೇಜು ತೆರೆಯುವಿಕೆ ದಿನಾಂಕ: **16.05.2026 ರಂದು ಸಂಜೆ 5:15 ಗಂಟೆಗೆ**.
ಟೆಂಡರಿನ ಸಂಬಂಧಿಸಿದ ವಿಚಾರಣೆ ಬಗ್ಗೆ ವಿವರಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in.** ನಲ್ಲಿ ಪಡೆಯಬಹುದು. ಆಸಕ್ತ ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಾಗಿ ಬಿಡ್ಡುದಾರರು ಕೆಪಿಪಿ ಸಹಾಯವಾಣಿ: **(+91-8046010000, +91-8068948777)** ಸಂಪರ್ಕಿಸಿ ಅಥವಾ ಇ–ಮೇಲ್: **support@eprochelpdesk.com** ನಿಂದ ಸಹಾಯವನ್ನು ಪಡೆದುಕೊಳ್ಳಬಹುದು.
ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಚೇರಿಯಿಂದ ಪಡೆಯಬಹುದು.
ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿದ್ಯುತ್), ಖರೀದಿ, ನಿಗಮ ಕಾರ್ಯಾಲಯ, ಬೆ.ವಿ.ಕಂ, 2ನೇ ಮಹಡಿ, ಕೆ.ಆರ್. ವೃತ್ತ, ಬೆಂಗಳೂರು– 560001.
ವಿದ್ಯುತ್ ಸಂಬಂಧಿತ ದೂರಗಳಿಗೆ ಕರೆಮಾಡಿ : 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ.

ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಕೆ.ಆರ್. ವೃತ್ತ, ನೃಪತುಂಗ ರಸ್ತೆ, ಬೆಂಗಳೂರು–560 001.ದೂರವಾಣಿ: 080–22291847
ಸಂಖ್ಯೆ : ಶಾಶಿಇ/2026–27/ಇಂಡ್0661 ದಿನಾಂಕ:10.04.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕೆಪಿಪಿ ಪೋರ್ಟಲ್ ಮೂಲಕ ಮಾತ್ರ
ನಿರ್ದೇಶಕರು ಮೈನಾರಿಟಿ ಆಯುಕ್ತರ ಕಚೇರಿ ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು 01. ಇವರು ಕೆಟಿಪಿಪಿ ಕಾಯ್ದೆ 1999ರ ಅನ್ವಯ ತಯಾರಕರು/ ಡೀಲರ್/ ಪೂರೈಕೆದಾರರ ಸಂಸ್ಥೆಗಳಿಂದ 2026-27ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಪಾದರಕ್ಷೆಗಳನ್ನು ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಟೆಂಡರ್ ಆಹ್ವಾನಿಸಿದೆ.
ಈ ಟೆಂಡರ್ https://kppp.karnataka.gov.in ನಲ್ಲಿ ನೋಂದಾಯಿತ ಸಂಸ್ಥೆಗಳು ದಿನಾಂಕ: 27.04.2026 ರ ಸಂಜೆ 5.30 ಗಂಟೆಯೊಳಗೆ ಇ–ಪೋರ್ಟಲ್‌ನಲ್ಲಿ ಅರ್ಜಿಯನ್ನು ಅಪ್‌ಲೋಡ್ ಮಾಡಬಹುದಾಗಿದೆ. ವಿವರವಾದ ದಸ್ತಾವೇಜುಗಳನ್ನು ವೆಬ್‌ಸೈಟ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಂಡು ಇ–ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬಹುದು.
ಸಹಿ/–
ನಿರ್ದೇಶಕರು (ಮೈನಾರಿಟಿ)
ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಇಲಾಖೆ
ವಾಸಾಸಂಇ/ವಾಪ್ರ/ಜಿಎ/156/2026–27

ಕರ್ನಾಟಕ ಸರಕಾರ
ಜಿಲ್ಲಾ ಆರೋಗ್ಯ ಮತ್ತು ಕು.ಕ. ಸೊಸೈಟಿ
ಜಿಲ್ಲಾ ಆರೊಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
ಉತ್ತರ–ಕನ್ನಡ, ಕಾರವಾರ–581301 Email: rchoukannada@gmail.com
No. DPMU/NHM/ RBSK/14/2026-27. DATE: 15-04-2026
ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ ಮುಖಾಂತರ ಮಾತ್ರ)
ವಿಷಯ: ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ 2026–27 ನೇ ಆರ್ಥಿಕ ಸಾಲಿಗೆ ಷರತ್ತಿಗೊಳಪಟ್ಟು ಹೊರಗುತ್ತಿಗೆ ಆಧಾರದ ಮೇಲೆ ಎಲ್ಲ 11 ತಾಲೂಕುಗಳಿಗೆ ಚಾಲಕರೊಂದಿಗೆ ಟ್ಯಾಕ್ಸಿ ವಾಹನಗಳ ಸೇವೆಯನ್ನು ಒದಗಿಸುವ ಕುರಿತು.
ಉತ್ತರ ಕನ್ನಡ ಜಿಲ್ಲೆಯ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ 2026–27 ನೇ ಆರ್ಥಿಕ ಸಾಲಿಗೆ ಷರತ್ತಿಗೊಳಪಟ್ಟು ಹೊರಗುತ್ತಿಗೆ ಆಧಾರದ ಎಲ್ಲ 11 ತಾಲೂಕುಗಳಿಗೆ ಪ್ರತಿ ತಾಲೂಕಿಗೆ ಚಾಲಕರೊಂದಿಗೆ 02 ಟ್ಯಾಕ್ಸಿ ವಾಹನಗಳ ಸೇವೆಯನ್ನು ಪೂರೈಸಲು ಅರ್ಹ ಸಂಸ್ಥೆ/ಏಜನ್ಸಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ನೋಡಬಹುದಾಗಿದೆ.
ಟೆಂಡರ್ ಪ್ರಾರಂಭದ ದಿನಾಂಕ: 16–04–2026, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02–05–2026, ಒಟ್ಟು ಟೆಂಡರ್ ಮೊತ್ತ: 92.40 ಲಕ್ಷ, ಇ.ಎಂ.ಡಿ ಮೊತ್ತ: 1,84,800/–
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಉತ್ತರಕನ್ನಡ, ಕಾರವಾರ
DIPR/KWR/KSMCA/51/ 26-27 Dt. 15.04.2026

ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆಗಳ ಆಯುಕ್ತರು ರವರ ಕಛೇರಿ
ವಾಣಿಜ್ಯ ತೆರಿಗೆ ಕಾರ್ಯಾಲಯ–1, ಗಾಂಧಿನಗರ, ಬೆಂಗಳೂರು–560009.
ಸಾರ್ವಜನಿಕ ಪ್ರಕಟಣೆ
ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಕಾಯ್ದೆ 1976ರ ಪ್ರಕರಣ 10ರ ಅನ್ವಯ ವೃತ್ತಿ ತೆರಿಗೆ ಪಾವತಿ ಮಾಡುವ ಬಗ್ಗೆ.
1. ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಕಾಯ್ದೆ 1976ರ ಅಡಿಯಲ್ಲಿ ತೆರಿಗೆ ಪಾವತಿಸಲು ಬಾಧ್ಯಸ್ಥರಾಗಿರುವ ಎಲ್ಲಾ ವ್ಯಕ್ತಿಗಳು ನೋಂದಣಿ/ಎನ್‌ರೋಲ್‌ಮೆಂಟ್ ಪಡೆದು ತೆರಿಗೆ ಪಾವತಿಸತಕ್ಕದ್ದು.
2. ನೋಂದಣಿ ಪಡೆಯಲು ಅಥವಾ ಎನ್‌ರೋಲ್‌ಮೆಂಟ್ ಮಾಡಿಕೊಳ್ಳಲು ಬಾಧ್ಯತೆ ಹೊಂದಿರುವ ಪ್ರತಿ ಉದ್ಯೋಗದಾತ / ಸ್ವಯಂ ಉದ್ಯೋಗ ನಡೆಸುವ ಪ್ರತಿ ವ್ಯಕ್ತಿಯು ತನ್ನ ವೃತ್ತಿ, ವ್ಯಾಪಾರ, ಆಜೀವಿಕೆ ಮತ್ತು ಉದ್ಯೋಗ ಪ್ರಾರಂಭಿಸಿದ 30 (ಮೂವತ್ತು) ದಿನಗಳ ಒಳಗಾಗಿ ನೋಂದಣಿ / ಎನ್‌ರೋಲ್ ಮೆಂಟನ್ನು ಆನ್‌ಲೈನ್ ಮುಖಾಂತರ ಪಡೆದು ತೆರಿಗೆ ಪಾವತಿಸತಕ್ಕದು.
3. ಈಗಾಗಲೇ ಎನ್‌ರೋಲ್‌ಮೆಂಟ್ ಹೊಂದಿರುವ ಉದ್ಯೋಗದಾತರು / ಸ್ವಯಂ ಉದ್ಯೋಗಸ್ಥರು 2026–2027ನೇ ಸಾಲಿನ ವೃತ್ತಿ ತೆರಿಗೆಯನ್ನು ದಿನಾಂಕ: 30–04–2026 ರ ಒಳಗಾಗಿ ಪಾವತಿಸತಕ್ಕದ್ದು.
4. 2026ರ ಕರ್ನಾಟಕ ಅಧಿನಿಯಮ ಸಂಖ್ಯೆ. 22 ದಿನಾಂಕ: 27.03.2026 ರನ್ವಯ ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ 1976ರ ಪ್ರಕರಣ 10ಕ್ಕೆ ಮಾಡಲಾದ ತಿದ್ದುಪಡಿಯ ಮೂಲಕ ಅನುಷ್ಠಾನಗೊಳಿಸಲಾದ ಬದಲಾವಣೆಗಳು:–.
(I) ಎನ್‌ರೋಲ್‌ಮೆಂಟ್ ಹೊಂದಿರುವ (ದಾಖಲಾದ) ವ್ಯಕ್ತಿಗಳು (EC ಪ್ರಮಾಣ ಪತ್ರ) ಸಂದಾಯ ಮಾಡಬೇಕಾದ ತೆರಿಗೆಯನ್ನು ಪಾವತಿಸಿದ್ದಲ್ಲಿ ರಿಟರ್ನ್ ಸಲ್ಲಿಸುವುದು ಅಗತ್ಯವಿರುವುದಿಲ್ಲ.
(ii) ವಾಣಿಜ್ಯ ತೆರಿಗೆಗಳ ಆಯುಕ್ತರ ಅಧಿಸೂಚನೆ ಸಂಖ್ಯೆ. ಪಿಟಿ/ಸಿಆರ್/09/2025–26 ದಿನಾಂಕ: 01–04–2026 ತೆರಿಗೆಯಿಂದ ವಿನಾಯತಿ ಹೊಂದಿರುವ ದಾಖಲಾದ (enrolled) ವ್ಯಕ್ತಿಗಳು ಅಂದರೆ ಹಿರಿಯ ನಾಗರಿಕರು, ವಿಕಲಚೇತನ ವ್ಯಕ್ತಿಗಳು, ಮಾಜಿ ಸೈನಿಕರು ಮುಂತಾದವರು ಸದರಿ ಅಧಿಸೂಚನೆಯನ್ವಯ ನಿಯಮಿಸಿರುವ ದಾಖಲಾತಿಗಳನ್ನು ಸಲ್ಲಿಸಿದ್ದಲ್ಲಿ ರಿಟರ್ನ್ ಸಲ್ಲಿಸುವುದು ಅಗತ್ಯವಿರುವುದಿಲ್ಲ.
5. ಸದರಿ ಕಾಯ್ದೆಯಡಿ ನೋಂದಣಿ / ಎನ್‌ರೋಲ್‌ಮೆಂಟ್ ಬಾಧ್ಯತೆ ಹಾಗೂ ತೆರಿಗೆ ದರಗಳ ಬಗ್ಗೆ ತಿಳಿದುಕೊಳ್ಳಲು ಇಲಾಖೆಯ ಜಾಲತಾಣ: gst.karnataka.gov.in ಅಥವಾ ptax.karnataka.gov.in ಇಲ್ಲಿಗೆ ಭೇಟಿ ನೀಡಬಹುದು.
ಸಹಿ/–
ವಾಣಿಜ್ಯ ತೆರಿಗೆಗಳ ಆಯುಕ್ತರು, (ಕರ್ನಾಟಕ), ಬೆಂಗಳೂರು
DIPR/CP/Zen/184/2026-27

ಮೆಟ್ರೊ ಬೈಯಪ್ಪನಹಳ್ಳಿ ವಿಭಾಗ: ಅಧಿಕಾರಿಗಳ ಸಂಘರ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಆರ್‌ಸಿಎಲ್ ಬೈಯಪ್ಪನಹಳ್ಳಿ ವಿಭಾಗದಲ್ಲಿ ಅಧಿಕಾರಿಗಳ ನಡುವಿನ ಸಂಘರ್ಷದಿಂದ ನಿರ್ವಹಣಾ ಕಾಮಗಾರಿ ಕುಂಠಿತಗೊಂಡಿದೆ. ಗುತ್ತಿಗೆ ಆಧಾರದಲ್ಲಿ ನೇಮಕಗೊಂಡ ಇಬ್ಬರು ಅಧಿಕಾರಿಗಳು ಕಾಯಂ ನೌಕರರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ನೌಕರರು ದೂರು ನೀಡಿದ್ದಾರೆ.

‘ತಾಂತ್ರಿಕ ಅರ್ಹತೆ ಇಲ್ಲದಿದ್ದರೂ ತಮ್ಮ ಪ್ರಭಾವ ಬಳಸಿ ಬೈಯಪ್ಪನಹಳ್ಳಿ ವಿಭಾಗದ ಪ್ರಧಾನ ವ್ಯವಸ್ಥಾಪಕ ಮತ್ತು ಉಪ ಪ್ರಧಾನ ವ್ಯವಸ್ಥಾಪಕರಾಗಿ ನೇಮಕಗೊಂಡಿರುವ ಇಬ್ಬರಿಂದ ಸಮಸ್ಯೆ ಆಗಿದೆ. ನಾವು ರಾಜ್ಯ ಸರ್ಕಾರದ ಅಧೀನದಲ್ಲಿ ಬರುವ ಉದ್ಯೋಗಿಗಳಲ್ಲ. ನಮಗೆ ಇಲ್ಲಿನ ಮೆಟ್ರೊ ನಿಯಮಗಳು ಅನ್ವಯಿಸುವುದಿಲ್ಲ. ನಾವು ಕೇಂದ್ರ ಸರ್ಕಾರದ ಅಡಿಯಲ್ಲಿ ಬರುವ ಅಧಿಕಾರಿಗಳು ಎಂದು ಹೇಳುತ್ತಿರುವ ಈ ಇಬ್ಬರು ಅಧಿಕಾರಿಗಳು ಇತರ ಅಧಿಕಾರಿಗಳಿಗೆ ನಿಯಮಬಾಹಿರವಾಗಿ ಕೆಲಸ ಮಾಡಲು ಸೂಚನೆ ನೀಡುತ್ತಿದ್ದಾರೆ’ ಎಂದು 15 ಅಧಿಕಾರಿಗಳು ಸಹಿ ಹಾಕಿ ಸಲ್ಲಿಸಿರುವ ಪತ್ರದಲ್ಲಿ ತಿಳಿಸಲಾಗಿದೆ.

‘ಕುಮಾರ್ ಡಿ, ಮತ್ತು ಅಭಿಜಿತ್ ಭಟ್ಟಾಚಾರ್ಯ ಎಂಬ ಇಬ್ಬರು ಅಧಿಕಾರಿಗಳು ನಿಗಮದ ದೈನಂದಿನ ಚಟುವಟಿಕೆಗಳಿಗೆ ಅಡ್ಡಿಯಾಗಿದ್ದಾರೆ. ಅವರು ಕರೆದಾಗ ಹೋಗದೇ ಇದ್ದರೆ ಅಶಿಸ್ತು ಮತ್ತು ಕರ್ತವ್ಯ ನಿರ್ವಹಣೆ ವಿಫಲ ಹೆಸರಿನಲ್ಲಿ ಷೋಕಾಸ್ ನೋಟಿಸ್ ನೀಡುವ ಬೆದರಿಕೆ ಹಾಕುತ್ತಿದ್ದಾರೆ. ಇದು ಕೆಲಸದ ಮೇಲೆ ಪರಿಣಾಮ ಬೀರುತ್ತಿದೆ. ನಿತ್ಯದ ಕಾರ್ಯ ಚಟುವಟಿಕೆಗೆ ಅಡ್ಡಿಯಾಗಿದೆ. ಹಲವು ಕಾಮಗಾರಿಗಳು ಪೂರ್ಣಗೊಳ್ಳದೆ ಕುಂಟುತ್ತಿವೆ’ ಎಂದು ಆರೋಪಿಸಲಾಗಿದೆ.

‘ನಾವು ಮೊದಲಿನಿಂದಲೂ ರೈಲು ಸಂಚಾರ ಅಂತ್ಯಗೊಂಡ ಬಳಿಕ ರಾತ್ರಿ 12 ರಿಂದ ನಿರ್ವಹಣೆ ಕಾಮಗಾರಿ ಮತ್ತು ಪರಿಶೀಲನೆ ಮಾಡುತ್ತಿದ್ದೇವೆ. ಇದು ರೈಲು ಸಂಚಾರ ಆರಂಭವಾದಾಗಿನಿಂದಲೂ ನಡೆದುಕೊಂಡು ಬಂದ ನಿಯಮ. ಆದರೆ ಇದನ್ನು ಈ ಇಬ್ಬರೂ ಅಧಿಕಾರಿಗಳು ಒಪ್ಪುತ್ತಿಲ್ಲ. ನೀವು ಎಂ.ಡಿ ಮತ್ತು ತಾಂತ್ರಿಕ ನಿರ್ದೇಶಕರ ಸೂಚನೆಯಂತೆ ಕೆಲಸ ಮಾಡುವುದಾದರೆ ನಿಮಗೆ ಇಲ್ಲಿ ಕೆಲಸವಿಲ್ಲ. ವರ್ಗಾವಣೆ ಮಾಡಿಸಿಕೊಂಡು ಹೋಗಿ ಎಂದು ಹೇಳುತ್ತಿದ್ದಾರೆ’ ಎಂದು ಪತ್ರದಲ್ಲಿ ಅಧಿಕಾರಿಗಳು ದೂರಿದ್ದಾರೆ.

‘ಯುವಕರಲ್ಲಿ ಮಾನವೀಯತೆ ಹೆಚ್ಚಲಿ’

ಒಳ್ಳೆಯ ಗುಣಗಳು ಇಲ್ಲದಿದ್ದರೆ ಅದು ಜೀವನದ ಶಿಕ್ಷಣವಲ್ಲ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಮ್ಮಿಕೊಂಡಿದ್ದ ಕಾರ್ಯಕ್ರಮ
- 41 ಕೃತಿಗಳ ಬಿಡುಗಡೆ

ಬೆಂಗಳೂರು: ‘ವೈಚಾರಿಕತೆ, ವೈಜ್ಞಾನಿಕತೆ ಹಾಗೂ ಮಾನವೀಯತೆ ನಮ್ಮಲ್ಲಿ ಬರಬೇಕು. ಈ ಗುಣಗಳು ಇಲ್ಲದಿದ್ದರೆ ಅದು ಜೀವನದ ಶಿಕ್ಷಣವಲ್ಲ. ಬದುಕುವ ದಾರಿ ಮಾತ್ರ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕದ ಬಹುಮುಖ ಪರಂಪರೆಯನ್ನು ಪ್ರತಿನಿಧಿಸುವ ಕನ್ನಡ ಸಾಮರಸ್ಯದ ನೆಲೆಗಳ 41 ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಯುವಕರಲ್ಲಿ ಮಾನವೀಯತೆ ಹೆಚ್ಚಾಗಬೇಕೆನ್ನುವ ನಿಟ್ಟಿನಲ್ಲಿ, ಇಂದು ಜನಾರ್ಪಣೆಗೊಂಡಿರುವ ಪುಸ್ತಕಗಳು ಪ್ರಯೋಜನಕಾರಿಯಾಗಲಿವೆ. ಇವು ಯುವಜನರನ್ನು ತಲುಪದೇ ಹೋದರೆ, ಅದರಿಂದ ಬದಲಾವಣೆಯಾಗದೆ ಹೋದರೆ, ಅದರ ಉದ್ದೇಶ ಸಫಲವಾಗುವುದಿಲ್ಲ’ ಎಂದರು.

‘ಇಂದಿನ ಪೀಳಿಗೆ ಪಂಪ, ಕನಕದಾಸರು, ಬಸವಣ್ಣ, ಕುವೆಂಪು ಮುಂತಾದ ಮಹನೀಯರ ಬಗ್ಗೆ ತಿಳಿದುಕೊಳ್ಳಬೇಕು. ಅದಕ್ಕಾಗಿಯೇ ಈ ಪುಸ್ತಕಗಳನ್ನು ಹೊರತರಲಾಗಿದೆ. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಸರಿಯಾಗಿ ಅರ್ಥ ಮಾಡಿಕೊಂಡಾಗ ಮಾತ್ರ ಸಮ ಸಮಾಜ ನಿರ್ಮಾಣ ಸಾಧ್ಯ’ ಎಂದು ಹೇಳಿದರು.

‘ವಿದ್ಯಾರ್ಥಿಗಳಿಗೆ ಸೌಹಾರ್ದ, ಸಾಮರಸ್ಯದ ವಾತಾವರಣದ ಅರಿವು ಮೂಡಿಸಲು 100 ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಲಾಗಿತ್ತು. ಈಗ 41 ಪುಸ್ತಕ ಬಿಡುಗಡೆ ಆಗಿದ್ದು, ನವೆಂಬರ್ ವೇಳೆಗೆ ಇನ್ನೂ 59 ಪುಸ್ತಕ ಬಿಡುಗಡೆ ಮಾಡಲಾಗುತ್ತದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದರು.

ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಶಾಸಕ ರಿಜ್ವಾನ್ ಅರ್ಷದ್, ಸಾಹಿತಿ ಬರಗೂರು ರಾಮಚಂದ್ರಪ್ಪ, ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಮಂಜುನಾಥ್ ಉಪಸ್ಥಿತರಿದ್ದರು.

‘ದೇವರು ಇದ್ದಾನೆ, ಇಲ್ಲ ಎಂದು ವಾದಿಸಲ್ಲ’

‘ದೇವರು ಇದ್ದಾನೆ, ಇಲ್ಲ ಎಂದು ನಾವು ವಾದ ಮಾಡುವುದಿಲ್ಲ. ಮನುಷ್ಯತ್ವ ಇಲ್ಲದೆ ಹೋದರೆ ಏನು ಪ್ರಯೋಜನ. ಎಲ್ಲ ಧರ್ಮದಲ್ಲೂ ಎಲ್ಲರನ್ನೂ ಪ್ರೀತಿ ಮಾಡಿ ಎಂದು ಹೇಳಲಾಗಿದೆ. ಯಾರೂ ದ್ವೇಷ ಮಾಡಿ ಎಂದು ಹೇಳಿಲ್ಲ. ದ್ವೇಷಿಸಿ ಎಂದೂ ಹೇಳುವವರು ಇದ್ದಾರೆ. ಅವರಿಂದ ಎಚ್ಚರಿಕೆಯಿಂದ ಇರಿ. ಅವರೆಲ್ಲ ರಾಜಕೀಯಕ್ಕಾಗಿ ಮಾತನಾಡುತ್ತಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ದೇವರು, ದೇವಸ್ಥಾನಗಳ ಬಗ್ಗೆ ಬಸವಣ್ಣನವರಿಗೆ ನಂಬಿಕೆ ಇರಲಿಲ್ಲ. ಕುವೆಂಪುರವರು ಗುಡಿ, ಚರ್ಚ್, ಮಸೀದಿಗಳನ್ನು ಬಿಟ್ಟು ಹೊರಬರಲು ಕರೆ ನೀಡಿದರು. ಮನುಷ್ಯತ್ವವಿಲ್ಲದೆ ಪೂಜೆ ಮಾಡಿದರೆ ಫಲ ದೊರಕುವುದಿಲ್ಲ’ ಎಂದರು.

‘ಕರ್ನಾಟಕದ ಸಂಸ್ಕೃತಿಯ ವಿವರ’

ಪುರುಷೋತ್ತಮ ಬಿಳಿಮಲೆ

‘ಕನ್ನಡದ ಬಹುಮುಖಿ ಪರಂಪರೆಯನ್ನು ಗುರುತಿಸಿ, ಪರಿಚಯಿಸುವ ಉದ್ದೇಶದಿಂದ ಕನ್ನಡ ಸಾಮರಸ್ಯದ ನೆಲೆಗಳು ಶೀರ್ಷಿಕೆಯಡಿ ಪುಸ್ತಕಗಳನ್ನು ಸಿದ್ಧಪಡಿಸಲಾಗಿದೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದರು.

‘1990ರ ನಂತರ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಬೆಳವಣಿಗೆಗಳು ಕನ್ನಡವನ್ನು ಏಕಮುಖವಾಗಿಸಿವೆ. ಭಾಷೆಯು ಮಾರುಕಟ್ಟೆ ಕೇಂದ್ರಿತವಾದಾಗ ಹೀಗಾಗುತ್ತದೆ. ಇಂಥ ಸಂದರ್ಭದಲ್ಲಿ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಎಲ್ಲರೂ ಹೊಣೆಯರಿತು ಕೆಲಸ ಮಾಡಬೇಕಾಗಿದೆ. ಹೊಸ ತಲೆಮಾರಿನ ಕನ್ನಡಿಗರಿಗೆ, ಮುಖ್ಯವಾಗಿ ವಿದ್ಯಾರ್ಥಿಗಳಿಗೆ, ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಸಮನ್ವಯದ ನೆಲೆಗಳ ಕುರಿತು ಸರಳವಾಗಿ ತಿಳಿಸಿಕೊಡುವಂಥ ಪುಸ್ತಕಗಳನ್ನು ಪ್ರಾಧಿಕಾರ ಪ್ರಕಟಿಸಿದೆ’ ಎಂದರು.

DEVARAJ URS TRUCK TERMINAL LTD.
(A Government of Karnataka Undertaking)
3rd Floor, TTMC “B” Block, K. H. Road, Shanthinagar, Bangalore – 560 027
Phone No.: 080-2223753/58

PUBLIC NOTICE

WHEREAS the Schedule property was allotted to one Sri B. Mudappa S/o Late Basetty represented by his General Power of Attorney holder Sri M. Veeresh Kumar S/o Sri B. Mudappa vide allotment letter bearing No. DDTTL/B.42/92-93 dated 03.06.1992. Later the company had also executed a Lease cum Sale Agreement dated 20.04.1994 registered as document No. 290/1994-95 in the office of Sub-registrar, Rajajinagar, Bangalore in favour of the above said Sri B. Mudappa S/o Late Basetty represented by his General Power of Attorney holder Sri M. Veeresh Kumar S/o Sri B. Mudappa. Presently the khatha is respect of the said property stands in the name of Sri M. Veeresh Kumar S/o Late Mudappa.

WHEREAS the said Sri B. Mudappa S/o Late Basetty died on 01.04.1997. The said Sri B. Mudappa S/o Late Basetty in his lifetime executed WILL dated 18.05.1994 bequeathing the Schedule property in favour of one of his Son Sri M. Veeresh Kumar S/o Late Muddappa. On the basis of the said WILL dated 18.05.1994, the above said Sri M. Veeresh Kumar S/o Late Muddappa sought for execution of Sale deed in his favour. Further Vide Affidavit dated 06.03.2026, the above said (1) M. VASANTHA KUMAR S/o Late B. Mudappa, aged about 87 years, presently residing at No. 342, Nyaya Marga, 2nd Stage, Siddarthanagar, Mysore – 570 011 (2) SRI S. RAVI PRAKASH S/o Sri B. Sreekantaiah and Late Ushadevi, Aged about 61 Years, presently residing at No. 8/B, 7th Main, SFHS Layout, BTM 2nd Stage, Bangalore – 560 076, (3) SMT ASHA UMAMAHESH D/o Sri B. Sreekantaiah and Late Ushadevi, Aged about 56 years, residing at No. 24, Shiva Sannidhi, 4th Main, NAL Layout, Jayanagar 4th T Block, Bangalore – 560 041, (4) SMT. UMADEVI D/o Late B. Mudappa, aged about 81 years, presently residing at No. 41/D, Ashwath Villa, 5th Cross, Paparam Road, Nazarbad, Mysore 570 010, (5) M. MAHESH KUMAR S/o Late B. Mudappa, aged about 79 years, presently residing at Mahanandi Dairy Farm, Chamundi Hill Road, Mysore - 570 011 (6) SMT NANDINI D/o Late B. Mudappa, aged about 76 years, presently residing at No. 41E, Paparam Road, 5th Cross, Nazarbad, Mysore – 570 010 (7) M. SOMESH KUMAR S/o Late B. Mudappa, aged about 72 years, presently residing at No. 1319/14 K255, Mahanandi Dairy Farm, Chamundi Hill Road, Mysore - 570 011 (8) M. RAMESH KUMAR S/o Late B. Mudappa, aged about 70 years, presently residing at No. 314, 5th A cross, Sanmarga, Behind JSS Public School, Siddarthnagara, Mysore – 570 011 and (9) SMT. SHOBA RANI D/o Late B. Mudappa, aged about 68 years, presently residing at No. 41/C, Ashwath Villa, 5th Cross, Paparam Road, Nazarbad, Mysore – 570 010 who are also the legal heirs of Sri B. Mudappa S/o Late Basetty, have also stated that, they have the knowledge of the execution and contents of the WILL dated 18.05.1994 and agreed for execution of registered Conveyance/Sale deed in favour of Sri M. Veeresh Kumar S/o Late Muddappa.

NOTICE IS HEREBY GIVEN to the general public that any person having any claim, interest, or objection regarding the said WILL dated 18.05.1994 or execution of registered Sale deed in favour of Sri M. Veeresh Kumar S/o Late Muddappa in respect of the Schedule property is hereby required to file their written objections along with the supporting documents within 15 days from the date of publication of this notice with the undersigned. If no objections are received within the stipulated period, it shall be presumed that no such objections exist and the matter will be proceeded in accordance with the law to execute the registered Sale deed in favour of Sri M. Veeresh Kumar S/o Late Muddappa in respect of the Schedule property.

SCHEDULE PROPERTY

ALL THE PART AND PARCEL OF the Property bearing No. 11063, Site No. B/42/23, present e-khatah No. 88588050035, measuring East to West 21 x 67.4 Feet and North to South 6.4 x 20.54 Feet totally measuring 595.374 Square feet situated at 2nd Main Road, D. Devaraj Urs Truck Terminal Ltd, Yeshwanthapura and bounded on the

East by : Road
West by : Site No. B-41
North by : Site No. B-43
South by : Road

Date: 16.03.2026
Place: Bengaluru

Sd/- (MANAGING DIRECTOR)
DDUTTL, BANGALORE

ಸಾರ್ವಜನಿಕ ಆಸ್ಪತ್ರೆ, ಗುಬ್ಬಿ
ತುಮಕೂರು ಜಿಲ್ಲೆ.
ಟೆಂಡರ್ ಪ್ರಕಟಣೆ

ವಿಷಯ : ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್ ಡಿ /ನಾನ್ ಕ್ಲಿನಿಕಲ್ ನೌಕರರ ಸೇವೆಗಾಗಿ ಟೆಂಡರ್ (e-procurement)

2026-27ನೇ ಸಾಲಿನ ಗ್ರೂಪ್ ‘ಡಿ’ /ನಾನ್ ಕ್ಲಿನಿಕಲ್ ಹೊರಗುತ್ತಿಗೆ ಸೇವೆಗಾಗಿ Karnataka public procurement portal ನಲ್ಲಿ ಟೆಂಡರ್ ಸಂಖ್ಯೆ: DHFWS/2026-27/SE2144 ರಲ್ಲಿ ಟೆಂಡರ್ ಕರೆಯಲಾಗಿದ್ದು, ದಿನಾಂಕ: 24-04-2026ರ ಸಂಜೆ 4.00ಗಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ. ವೆಬ್‌ಸೈಟ್ http//Kppp.karnataka.gov.in ಹೆಚ್ಚಿನ ಮಾಹಿತಿಗಾಗಿ ಕಛೇರಿಯಲ್ಲಿ ಸಂಪರ್ಕಿಸ ಬಹುದಾಗಿರುತ್ತದೆ.

ಸಹಿ/- ಮುಖ್ಯ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ,
ಗುಬ್ಬಿ ತುಮಕೂರು ಜಿಲ್ಲೆ.

DIPR/TUM/23/KSMCA/2026-27

ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಕೋಲಾರ ಜಿಲ್ಲೆ-563 101
Email: ddwcdkolar@gmail.com, Phone no: 08152-222753
ಕ್ರ.ಸಂ: ಜಿಮರಘಕೋ/ಐಸಿಪಿಎಸ್/ಆಡಳಿತ/ಟೆಂಡರ್/2026-27
ದಿನಾಂಕ: 04.04.2026

ಇ-ಟೆಂಡರ್ ಪ್ರಕಟಣೆ
ಹೊರಗುತ್ತಿಗೆ ಆಧಾರದ ಮೇಲೆ ಮಾನವಸಂಪನ್ಮೂಲ ಸೇವೆಯನ್ನು ಇ-ಟೆಂಡರ್ ಮೂಲಕ ಪಡೆಯುವ ಬಗ್ಗೆ ಟೆಂಡರ್ ಅಧಿಸೂಚನೆ

ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು ಮಿಷನ್ ವಾತ್ಸಲ್ಯ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೋಲಾರ ಹಾಗೂ ಅಧೀನ ಸಂಸ್ಥೆಗಳಾದ ಸರ್ಕಾರಿ ಬಾಲಕರ ಬಾಲಮಂದಿರ, ಸರ್ಕಾರಿ ಬಾಲಕಿಯರ ಬಾಲಮಂದಿರ, ಸರ್ಕಾರಿ ವೀಕ್ಷಣಾಲಯ, ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿ, ಪ್ಲೇಸ್ ಆಫ್ ಸೇಫ್ಟಿ, ಸರ್ಕಾರಿ ವಿಶೇಷ ದತ್ತು ಸಂಸ್ಥೆಗಳಿಗೆ ಹೊರ ಸಂಪನ್ಮೂಲ ಏಜೆನ್ಸಿಯಿಂದ **2026-27ನೇ** ಸಾಲಿಗೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000ರ ಪ್ರಕಾರ e-Procurement ಮೂಲಕ ಮಾನವ ಸಂಪನ್ಮೂಲ ಸೇವೆ ಒದಗಿಸಲು ಅರ್ಹತೆಯುಳ್ಳ ಮತ್ತು ವಿವಿಧ ಕಾಯ್ದೆಗಳ ಕಾನೂನಿನ ಅಡಿಯಲ್ಲಿ ನೋಂದಣಿಯಾಗಿರುವ ವ್ಯಕ್ತಿಗಳು / ಸಂಸ್ಥೆಗಳಿಂದ e-Portal ಮೂಲಕ ಅರ್ಜಿ ಆಹ್ವಾನಿಸಲಾಗಿದೆ. (1) ಟೆಂಡರ್ ಪ್ರಕಟಣೆ **ದಿನಾಂಕ: 09.04.2026** (2) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: **06.05.2026ರ ಸಂಜೆ 05.00 ಗಂಟೆಯೊಳಗೆ** (3) ತಾಂತ್ರಿಕ ಲಕೋಟೆ ತೆರೆಯುವ ವೇಳೆ ಮತ್ತು ದಿನಾಂಕ: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **ದಿನಾಂಕ:08.05.2026** (4) ಹಣಕಾಸಿನ ಲಕೋಟೆಯನ್ನು ತೆರೆಯುವ ವೇಳೆ ಮತ್ತು ದಿನಾಂಕ: **16.05.2026ರ ಸಂಜೆ 04.00 ಗಂಟೆಗೆ** (5) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: ಟೆಂಡರ್ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: **ರೂ.2,48,000/-** (ಎರಡು ಲಕ್ಷದ ನಲವತ್ತೆಂಟು ಸಾವಿರ ರೂಪಾಯಿಗಳು ಮಾತ್ರ) **(6)** ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೋಲಾರ ಹಾಗೂ 08 ಅಧೀನ ಸಂಸ್ಥೆಗಳ ಟೆಂಡರ್ ನ ಅಂದಾಜು ಮೊತ್ತ ಒಟ್ಟು: **ರೂ.1,64,97,214/-** **(ಒಂದು ಕೋಟಿ ಅರವತ್ತನಾಲ್ಕು ಲಕ್ಷದ ತೊಂಭತ್ತೇಳು ಸಾವಿರದ ಇನ್ನೂರ ಹದಿನಾಲ್ಕು ರೂಪಾಯಿಗಳು ಮಾತ್ರ). Website: https://kppp.karnataka.gov.in ಹೆಚ್ಚಿನ** ಮಾಹಿತಿಗಾಗಿ: ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೋಲಾರ ರವರನ್ನು ಸಂಪರ್ಕಿಸುವುದು.

ಸಹಿ/- ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:24/ಕೆಎಸ್‌ಎಂಸಿಎ/2026-27

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ
MAHARANI CLUSTER UNIVERSITY
ಅರಮನೆ ರಸ್ತೆ, ಬೆಂಗಳೂರು – 560001. Email:mcublr@gmail.com

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯವು ಅರ್ಹ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಈ ಕೆಳಕಂಡ ಟೆಂಡರ್ ಆಹ್ವಾನಿಸಿದೆ.

MCU/2026-27/IND0003, Date: 08.04.2026
Supply, Installation and Maintenance of CCTV Cameras at Maharani Cluster University Campus, Bengaluru.

ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ **https://kppp.karnataka.gov.in** ಗೆ ಭೇಟಿ ನೀಡಬಹುದಾಗಿದೆ.
Sd/-
Registrar
ಡಿಐಪಿಆರ್/ಸಿಪಿ/191/ಸಿಸಿಎಲ್/2026-27

(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಬಂಗಾರಪೇಟೆ.
ದೂರವಾಣಿ ಸಂ: 08153-255409 ಇ-ಮೇಲ್: cdpobangarpet@gmail.com
ಸಂಖ್ಯೆ:ತಾಪಂಬಂ:ಕಂಅ:ಮ:ಟೆಂಡರ್:2026-27 ದಿನಾಂಕ: 08.04.2026

ಟೆಂಡರ್ ಪ್ರಕಟಣೆ

ಮಹಿಳಾ ಮತ್ತು ಅಭಿವೃದ್ಧಿ ಇಲಾಖೆ, ಬಂಗಾರಪೇಟೆ ಶಿಶು ಅಭಿವೃದ್ಧಿ ಯೋಜನಾ ಕಛೇರಿಯಲ್ಲಿ 2026-27ನೇ ಸಾಲಿಗೆ 1 ಕಂಪ್ಯೂಟರ್ ಆಪರೇಟರ್, 1 ಮೆಸ್ಸೆಂಜರ್ ಹುದ್ದೆಗಳನ್ನು ಹೊರ ಸಂಪನ್ಮೂಲ ಏಜನ್ಸಿಯಿಂದ ಪಡೆಯಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇಚ್ಛೆ ಉಳ್ಳವರು ದಿನಾಂಕ: 22.04.2026, ಸಮಯ:ಸಂಜೆ: 05:00 ಗಂಟೆಯೊಳಗೆ ಇ-ಟೆಂಡರ್ ಸಲ್ಲಿಸಲು Karnataka Public Procurement Portal Website Address: https://kppp.karnataka.gov.in ನಲ್ಲಿ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ವಿವೇಕಾನಂದ ನಗರ ಬಸ್‌ಸ್ಟಾಪ್, ಯೂನಿಯನ್ ಬ್ಯಾಂಕ್ ಕಟ್ಟಡ, ಬಂಗಾರಪೇಟೆ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು,
ಬಂಗಾರಪೇಟೆ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:2/ಕೆಎಸ್‌ಎಂಸಿಎ/2026-27

ಚಿತ್ರಾವಳಿ

ಕೋರಮಂಗಲದಲ್ಲಿರುವ ಸೇಂಟ್ ಫ್ರಾನ್ಸಿಸ್ ಪದವಿ ಕಾಲೇಜಿನ ಕನ್ನಡ ವಿಭಾಗವು ಬುಧವಾರ ಹಮ್ಮಿಕೊಂಡಿದ್ದ ಮುಖವೀಣೆ ಕಲಾ ಪ್ರದರ್ಶನ ಕಾರ್ಯಕ್ರಮದಲ್ಲಿ ಕಲಾವಿದ ಅಂಜಿನಪ್ಪ ಅವರು ಮುಖವೀಣಾ ವಾದನ ಪ್ರಸ್ತುತಪಡಿಸಿದರು

ನಗರದ ದಿ ಲೀಲಾ ಪ್ಯಾಲೆಸ್‌ನಲ್ಲಿ ಟಾಟಾ ಸಮೂಹದ ‘ಜೋಯಾ’ ಆಭರಣ ಮಳಿಗೆಯನ್ನು ಜೋಯಾ ‘ಬಿಸಿನೆಸ್ ಹೆಡ್’ ಅಮನ್‌ಪ್ರೀತ್ ಅಹ್ಲುವಾಲಿಯ ಅವರು ಬುಧವಾರ ಉದ್ಘಾಟಿಸಿದರು —ಪ್ರಜಾವಾಣಿ ಚಿತ್ರ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Hotel

REQUIRED
3-star Resort in Doddaballapura Required Staff for service of Chef, Receptionist, Security & Room Service persons and Drivers.
Contact No. 9036097979/ 080-48517264

Teachers/ Professors

WANTED HIGH School BEd qualified Math&Science Teacher, Ph-8217227181, mail-imageenglishschool@gmail.com, Add-JP Nagr 6th Phase, B'Lore-78

BUILDERS ESSENTIAL

Water Proofing

'WE-FIX' LEAKING ROOF, SUMP, SKYLIGHT, BATHROOM, TILING, HOUSE PAINTING, ROOF COOL EPOXY COATING, MACBOND. 9448572697

REAL ESTATE SELLING

Flat

Sahakarnagar

NEW FULL APARTMENT BUILDING SALE 7.5 CR. 13,000 Sqft
9 Apt's (2 & 4 BHK's). Built-up on 2400 sft site, Ideal for Rental Income, Service Apartments Corporate Guest House. 1.5 km from. Hebbal Flyover near SAHAKARNAGAR. OWNER- 98800-53505

Koramangala

3 BHK for Sale in Adugodi 5th Fl, 1780 Sqft, Semi Furnished Brindavan Apts,14K/ sqft negotiable Contact number to 9845021360

PERSONAL

Change of Name

I, POULOMI ROY BANERJEE have changed my name to POULOMI ROY BERA vide affidavit dated: 14/4/2026 Before Notary Manohar Jeerige Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

EDUCATION SUCCESS ಕ್ಲಾಸಿಫೈಡ್ಸ್

CONNECT ಕ್ಲಾಸಿಫೈಡ್ಸ್

ನಯನ ಸಭಾಂಗಣದಲ್ಲಿ ರಂಗಚಂದಿರ ಸಂಸ್ಥೆ ಆಯೋಜಿಸಿದ್ದ ಎಸ್‌.ಜಿ. ಸಿದ್ಧರಾಮಯ್ಯ ಅವರ ಮಹಾಮನೆ ನಾಟಕ ಜನಾರ್ಪಣೆ ಕಾರ್ಯಕ್ರಮದಲ್ಲಿ ಬೇಲೂರು ರಘುನಂದನ್‌, ಶಿವರಾಮಯ್ಯ, ಕೆ.ವಿ.ನಾಗರಾಜಮೂರ್ತಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಮಹಾಮನೆಗೂ, ಸದನಕ್ಕೂ ಹೋಲಿಕೆ ಬೇಡ: ಶಿವರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಹಪರದ ಚರ್ಚೆ ನಡೆಯುತ್ತಿದ್ದ ಮಹಾಮನೆಗೂ, ಅಧ್ಯಕ್ಷರೇ ಸಭಾತ್ಯಾಗ ಮಾಡುವ ಈಗಿನ ಸದನಗಳಿಗೂ ಅಜಗಜಾಂತರ ವ್ಯತ್ಯಾಸವಿದೆ' ಎಂದು ಚಿಂತಕ ಶಿವರಾಮಯ್ಯ ಹೇಳಿದರು.

ನಯನ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಸಮಾರಂಭದಲ್ಲಿ ಎಸ್‌.ಜಿ. ಸಿದ್ಧರಾಮಯ್ಯ ಅವರ 'ಮಹಾಮನೆ' ನಾಟಕ ಜನಾರ್ಪಣೆಗೊಳಿಸಿ ಅವರು ಮಾತನಾಡಿದರು.

'ಬಸವಣ್ಣ ಅವರು ಎಲ್ಲ ಸಮುದಾಯದವರನ್ನು ಒಳಗೊಂಡು ವಚನಕಾರರೊಂದಿಗೆ ಮಹಾಮನೆಯಲ್ಲಿ ಮುಕ್ತವಾಗಿ ಮಾತನಾಡುತ್ತಿದ್ದರು. ಅಲ್ಲಿ ಸಮಾಜದ ಎಲ್ಲ ಸ್ತರಗಳ ಜನರ ಚರ್ಚೆಗಳು ಒಳಿತಿನ ಕುರಿತೇ ಇರುತ್ತಿದ್ದವು. ಮಹಾಮನೆಯ ಪರಿಕಲ್ಪನೆಯಲ್ಲಿ ಮೂಡಿ ಬಂದ ಸಂಸತ್ತು, ವಿಧಾನಸಭೆಗಳಲ್ಲಿ ನಡೆಯುವ ಚರ್ಚೆಗಳಲ್ಲಿ ಜಗಳಗಳನ್ನೇ ನೋಡುತ್ತಿದ್ದೇವೆ' ಎಂದು ಬೇಸರ ವ್ಯಕ್ತಪಡಿಸಿದರು.

ಎಸ್‌.ಜಿ.ಸಿದ್ದರಾಮಯ್ಯ ಮಾತನಾಡಿ, 'ಮಹಾಮನೆ ಎಲ್ಲರನ್ನೂ ಒಳಗೊಂಡ ಮನೆಯೇ ಆಗಿತ್ತು. ಈಗಲೂ ಚಾತುರ್ವರ್ಣ ವ್ಯವಸ್ಥೆ ನಮ್ಮಲ್ಲಿ ಜೀವಂತವಾಗಿದೆ. ದೇವಸ್ಥಾನದ ಒಳಕ್ಕೆ ಬಿಡದ ಘಟನೆಗಳನ್ನು ಕಾಣುತ್ತಿರುವುದು ಬೇಸರದ ಸಂಗತಿ. ಇದೇ ಕಾರಣದಿಂದ ಮಹಾಮನೆ, ವಚನಗಳ ಮಹತ್ವ ತಿಳಿಸಲು ನಾಟಕ ರಚಿಸಿದೆ' ಎಂದರು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಲೇಖಕ ಬೇಲೂರು ರಘುನಂದನ ಪುಸ್ತಕ ಕುರಿತು ಮಾತನಾಡಿದರು. ಕಸಾಪ ನಗರ ಅಧ್ಯಕ್ಷ ಎಂ.ಪ್ರಕಾಶಮೂರ್ತಿ, ರಾಧಾಕೃಷ್ಣ ಹೆಗಡೆ, ಬಿ.ಎಸ್‌. ವಿದ್ಯಾರಣ್ಯ ಉಪಸ್ಥಿತರಿದ್ದರು.

ಲೇಖಕಿ ಎಚ್‌.ಎಲ್‌. ಪುಷ್ಪ, ಪದ್ಮಾ ಟಿ. ಚಿನ್ಮಯಿ, ವಡವಾಟಿ ಶಾರದಾ ಭರತ್‌, ಕಾವೇರಿ ಶ್ರೀಧರ್‌, ಭಾಸ್ಕರ್‌ ಕುಪ್ಪೂರು ಅವರಿಗೆ ರಂಗಗೌರವ ಸಲ್ಲಿಸಲಾಯಿತು.

ಸಾಂಸ್ಕೃತಿಕ ಮುನ್ನೋಟ

'ಲವ್‌ ಲೆಟರ್ಸ್‌' ನಾಳೆ ಪ್ರದರ್ಶನ

ಬೆಂಗಳೂರು: ಎ.ಆರ್‌.ಗರ್ನಿ ಅವರ 'ಲವ್‌ ಲೆಟರ್ಸ್‌–ನಿನ್ನ ಪ್ರೀತಿಯ ನಾನು' ಏ.17ರಂದು ರಾತ್ರಿ 7.30ಕ್ಕೆ ಪ್ರೆಸ್ಟೀಜ್‌ ಸೆಂಟರ್‌ ಫಾರ್‌ ಪರ್ಫಾರ್ಮಿಂಗ್‌ ಆರ್ಟ್ಸ್‌ನಲ್ಲಿ ಪ್ರದರ್ಶನಗೊಳ್ಳಲಿದೆ.

ವೆಂಕಟೇಶ್‌ ಪ್ರಸಾದ್‌ ಅವರ ರೂಪಾಂತರ ಮತ್ತು ನಿರ್ದೇಶನದಲ್ಲಿ ಕಿಶೋರ್‌ ಕುಮಾರ್‌ ಮತ್ತು ಸಿರಿ ರವಿಕುಮಾರ್‌ ಪ್ರದರ್ಶನ ನೀಡಲಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.

'ಲವ್‌ ಲೆಟರ್ಸ್‌'

'ಮಾಯಾದ್ವೀಪ' 18ಕ್ಕೆ

ಬೆಂಗಳೂರು: 'ಪ್ರಜಾವಾಣಿ' ಸಹಯೋಗದಲ್ಲಿ ನಡೆಯುತ್ತಿರುವ 'ವೀಕೆಂಡ್‌' ನಾಟಕೋತ್ಸವದಲ್ಲಿ ಈ ವಾರಾಂತ್ಯ ಏ.18ರಂದು ಸಂಜೆ 6.30ಕ್ಕೆ ವಿಲಿಯಂ ಶೇಕ್ಸ್‌ಪಿಯರ್‌ ಅವರ 'ಟೆಂಪೆಸ್ಟ್‌' ನಾಟಕದ ಕನ್ನಡ ರೂಪಾಂತರ 'ಮಾಯಾದ್ವೀಪ' ಬಸವೇಶ್ವರನಗರದ ಕೆ.ಇ.ಎ ಪ್ರಭಾತ್‌ ರಂಗಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ.

ಪುನೀತ್‌ ರಂಗಾಯಣ ಅವರ ರಂಗಪಠ್ಯ, ವಿನ್ಯಾಸ, ನಿರ್ದೇಶನದ ಈ ರೂಪಾಂತರವನ್ನು ನೆನಪು ಟ್ರಸ್ಟ್‌ ಪ್ರಸ್ತುತಪಡಿಸಲಿದೆ.

'ಮಾಯಾದ್ವೀಪ'ದ ದೃಶ್ಯ

18ರಿಂದ ಸಂಗೀತೋತ್ಸವ

ಬೆಂಗಳೂರು: ಕಿರ್ಲೋಸ್ಕರ್‌ ಕಾಲೊನಿಯ ಶ್ರೀ ತ್ಯಾಗರಾಜ ಗಾನಸಭಾ ಟ್ರಸ್ಟ್‌ ವತಿಯಿಂದ ಶಂಕರ ಜಯಂತಿ, ಸುವರ್ಣ ಮಹೋತ್ಸವ ಮತ್ತು ಸಂಗೀತೋತ್ಸವ ಏ. 18ರಿಂದ 21ರವರೆಗೆ ರಾಜಾಜಿನಗರದ ಬಾಲಮೋಹನ ವಿದ್ಯಾಮಂದಿರಲ್ಲಿ ಹಮ್ಮಿಕೊಳ್ಳಲಾಗಿದೆ.

ಬಿ.ಕೆ. ಚಂದ್ರಮೌಳಿ ಸ್ಮರಣಾರ್ಥ ಏ.18ರಂದು ಸಂಜೆ 6ರಿಂದ ನಡೆಯುವ ಕಛೇರಿಯಲ್ಲಿ ಎಲ್‌. ವಿ. ಮುಕುಂದ್‌ ಕೊಳಲು, ಜೆ.ಕೆ. ಶ್ರೀಧರ್‌ ಪಿಟೀಲು, ಬಿ.ಸಿ. ಮಂಜುನಾಥ್‌ ಮೃದಂಗ, ಎ.ಎಸ್‌. ಎನ್‌.ಸ್ವಾಮಿ ಖಂಜಿರ, ಸ್ಕಂದ ಮಂಜುನಾಥ್‌ ಘಟ, ಭಾಗ್ಯಲಕ್ಷ್ಮೀ ಎಂ.ಕೃಷ್ಣ ಮೋರ್ಸಿಂಗ್‌, ಉದಯರಾಜ್‌ ಕರ್ಪೂರ್‌ ತಬಲ, ಶ್ರೀಧರ ವಿ. ಡೋಲಕ್‌, ಕಾರ್ತಿಕ್‌ ಮಣಿ ಡ್ರಮ್ಸ್‌ ನುಡಿಸಲಿದ್ದಾರೆ.

ಏ.19ರಂದು ಗುರುವರ್ಯರ ಕುರಿತ ಸಂಗೀತ ಕಛೇರಿಯಲ್ಲಿ ರೇಖಾ ಪ್ರಸಾದ್‌ ಗಾಯನ, ಸಂಜೀವ್‌ ಕುಮಾರ್‌ ಪಿಟೀಲು, ಬಾಲಸುಬ್ರಹ್ಮಣ ಜಿ.ಎಚ್‌. ಅವರ ಮೃದಂಗ ಇರಲಿದೆ. 20ರಂದು ವಾಗೀಶ್‌ ಕೃಷ್ಣ ಗಾಯನ, ಅನಂತಪದ್ಮನಾಭ ಎಸ್‌.ಪಿ. ಪಿಟೀಲು, ಶಿವಶಂಕರಸ್ವಾಮಿ ಎಚ್‌.ಎಲ್‌. ಮೃದಂಗ, ವ್ಯಾಸವಿಠ್ಠಲ ಸಿ.ಪಿ. ಖಂಜಿರ ಇರಲಿದೆ. ಏ.21ರಂದು ಸಂಜೆ 6ಕ್ಕೆ ಎಸ್‌.ಪಿ. ಪಳನಿವೇಲ್‌ ಮತ್ತು ಆರ್‌. ಪ್ರಭಾವತಿ ಪಳನಿವೇಲ್‌ರಿಂದ ನಾಗಸ್ವರ, ಬಿಕ್ಕಂಪತ್ತಿ ಬಿ.ಆರ್‌. ವೆಂಕಟೇಶ್‌ ಮತ್ತು ಕಡಪರಥಂ ಸಿ. ಸುಧಾಕರ್‌ರಿಂದ ತವಿಲ್‌ ಇರಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

19ಕ್ಕೆ ಎರಡು ನಾಟಕ

ಬೆಂಗಳೂರು: ವಿಶ್ವಪಥ ಕಲಾ ಸಂಗಮ ತಂಡವು ಏ.19ರಂದು ಮಲ್ಲತ್ತಹಳ್ಳಿ ಕಲಾಗ್ರಾಮದಲ್ಲಿ ಎರಡು ನಾಟಕಗಳನ್ನು ಪ್ರದರ್ಶಿಸಲಿದೆ.

ರಾಜೇಂದ್ರ ಕಾರಂತ ರಚಿಸಿರುವ 'ಮುದ್ದಣ್ಣನ ಪ್ರಮೋಷನ್‌ ಪ್ರಸಂಗ' ನಾಟಕವು ಅಶೋಕ್‌ ಬಿ. ನಿರ್ದೇಶನದಲ್ಲಿ ಸಂಜೆ 5ಕ್ಕೆ ಪ್ರದರ್ಶನಗೊಳ್ಳಲಿದೆ. ಎಚ್‌. ಡುಂಡಿರಾಜ್‌ ರಚನೆಯ 'ಪುಕ್ಕಟೆ ಸಲಹೆ' ಸಂಜೆ 7ಕ್ಕೆ ಪ್ರದರ್ಶನಗೊಳ್ಳಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

19ಕ್ಕೆ ಕನ್ನಡ ಸಾಹಿತ್ಯ, ಸಂಗೀತ ಸಂಭ್ರಮ

ಬೆಂಗಳೂರು: ಸಿದ್ಧರಹಳ್ಳಿಯ ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌, ಬಿ. ಕೃಷ್ಣಪ್ಪ ಟ್ರಸ್ಟ್‌, ಅನಿಕೇತನ ಕನ್ನಡ ಬಳಗದಿಂದ ರಾಜ್ಯಮಟ್ಟದ ಕನ್ನಡ ಸಾಹಿತ್ಯ, ಸಂಗೀತ ಸಂಭ್ರಮ ಕಾರ್ಯಕ್ರಮವನ್ನು ಏ. 19ರಂದು ಬೆಳಿಗ್ಗೆ 9.45ರಿಂದ ಗಾಂಧೀಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಶಾಂತಿವಾಸು ಸರ್ವಾಧ್ಯಕ್ಷತೆ ವಹಿಸಲಿದ್ದಾರೆ. ಎಂ.ವಿ. ಶಿವಪ್ರಸಾದ್‌ಗೆ 80ರ ಅಭಿನಂದನೆ, ಎಂ.ಪಿ.ವಿ. ವೀರೇಶ್‌ಗೆ 50ರ ಅಭಿನಂದನೆಗಳು, ವಿವಿಧ ಗೋಷ್ಠಿ, ಗಾಯನ, ದತ್ತಿ ಪ್ರಶಸ್ತಿ ಪ್ರದಾನ, ಪುಸ್ತಕಗಳ ಬಿಡುಗಡೆ, ವಸಂತ ಕವಿಗೋಷ್ಠಿಗಳು ಜರುಗಲಿವೆ.

21ಕ್ಕೆ 'ಜೀಕೆ ಮಾಸ್ತರರ ಪ್ರಣಯ ಪ್ರಸಂಗ'

ಬೆಂಗಳೂರು: ಚಂದ್ರಶೇಖರ ಕಂಬಾರರ ಕಾದಂಬರಿ 'ಜೀಕೆ ಮಾಸ್ತರರ ಪ್ರಣಯ ಪ್ರಸಂಗ'ವನ್ನು ರಂಗಪಠ್ಯವಾಗಿ ರೂಪಾಂತರಿಸಲಾಗಿದ್ದು, ಈ ನಾಟಕ ಏ. 21ರಂದು ರಾತ್ರಿ 7.30ಕ್ಕೆ ಜೆ.ಪಿ. ನಗರದ ರಂಗಶಂಕರದಲ್ಲಿ ಪ್ರದರ್ಶನಗೊಳ್ಳಲಿದೆ.

ಭಾಸ್ಕರ್‌ ನೀನಾಸಂ ನಿರ್ದೇಶಿಸಿರುವ ಈ ನಾಟಕವನ್ನು ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗತಂಡ ಅಭಿನಯಿಸಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ಫಾರೂಕ್‌ ಮಾಲೀಕತ್ವದ ಘಟಕ ಸ್ವಾಧೀನಕ್ಕೆ ನೋಟಿಸ್‌

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್‌ ಮುಖಂಡ ಬಿ.ಎಂ. ಫಾರೂಕ್‌ ಮಾಲೀಕತ್ವದ ಮೆ. ಫಿಜಾ ಗ್ಲೋಬಲ್‌ ಆಗ್ರೋವೆಂಚರ್ಸ್‌ ಸಂಸ್ಥೆಯ ಹಿಡಿತದಲ್ಲಿರುವ ಪೂಜೇನಹಳ್ಳಿ ಸಮಗ್ರ ಶೀತಲ ಸರಪಳಿ ಘಟಕವನ್ನು ಕೆಪೆಕ್‌ಗೆ ವಾಪಸ್‌ ಮಾಡಿ, ಜಾಗ ಖಾಲಿ ಮಾಡುವಂತೆ ಸ್ವಾಧೀನ ಅಧಿಕಾರಿ ಸಿ.ಎನ್‌. ಶಿವಪ್ರಕಾಶ್‌ ನೋಟಿಸ್‌ ನೀಡಿದ್ದಾರೆ.

ಕೆಪೆಕ್‌ ಸಂಸ್ಥೆಯು ತನ್ನ ಆಂತರಿಕ ಸಂಪನ್ಮೂಲ ಹಾಗೂ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ದೇವನಹಳ್ಳಿ ತಾಲ್ಲೂಕಿನ ಕನ್ನಮಂಗಲ ಗ್ರಾಮದ ಪೂಜೇನಹಳ್ಳಿ ತೋಟಗಾರಿಕಾ ಕ್ಷೇತ್ರದಲ್ಲಿ ₹27.50 ಕೋಟಿ ವೆಚ್ಚದಲ್ಲಿ ಸಮಗ್ರ ಶೀತಲ ಸರಪಳಿ ಘಟಕವನ್ನು ನಿರ್ಮಿಸಿತ್ತು.

15 ವರ್ಷಗಳ ಅವಧಿಗೆ ವಾರ್ಷಿಕ ₹1.55 ಕೋಟಿ ಪರವಾನಗಿ ಶುಲ್ಕದ ಆಧಾರದ ಮೇಲೆ ಕಾರ್ಯಾಚರಣೆ ಮತ್ತು ನಿರ್ವಹಣೆ ಒಪ್ಪಂದವನ್ನು ಮೆ. ಫಿಜಾ ಗ್ಲೋಬಲ್‌ ಆಗ್ರೋವೆಂಚರ್ಸ್‌ ಸಂಸ್ಥೆಯೊಂದಿಗೆ 2024ರಲ್ಲಿ ಮಾಡಿಕೊಂಡು ಈ ಸಂಸ್ಥೆಗೆ ವಹಿಸಲಾಗಿತ್ತು.

ಮೊದಲ ವರ್ಷ ಶೇ 10ರಷ್ಟು ಮಾತ್ರ ಫಿಜಾ ಗ್ಲೋಬಲ್‌ ಆಗ್ರೋವೆಂಚರ್ಸ್‌ ಪಾವತಿಸಿದ್ದು, ಉಳಿದ ಮೊತ್ತ ಪಾವತಿ ಮಾಡಿರಲಿಲ್ಲ. ಬಾಕಿ ಮೊತ್ತವು ₹2.48 ಕೋಟಿಗೆ ಏರಿದ್ದು, ಪ್ರತಿದಿನ ₹50,969 ಹೆಚ್ಚಾಗುತ್ತಿದೆ. ಅಲ್ಲದೇ ಉದ್ದೇಶಿತ ಕೆಲಸಕ್ಕಾಗಿ ಸೌಲಭ್ಯವನ್ನು ಬಳಸದೇ ಅನ್ಯ ಉದ್ದೇಶಕ್ಕೆ ಬಳಸಲಾಗಿದೆ. ವಿದ್ಯುತ್‌ ಬಿಲ್‌ ಪಾವತಿ ಮಾಡದ ಕಾರಣ ವಿದ್ಯುತ್‌ ಸಂಪರ್ಕವನ್ನು ಬೆಸ್ಕಾಂ ಕಡಿತಗೊಳಿಸಿದೆ. ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳನ್ನು ಪಾಲನೆ ಮಾಡಿಲ್ಲ. ಬಾಳೆಹಣ್ಣು ಸಂಸ್ಕರಣಾ ಹಾಲ್‌ನಲ್ಲಿ ದಾಖಲೆಗಳಿಲ್ಲದ ಸಿದ್ಧ ಉಡುಪುಗಳು ಪತ್ತೆಯಾಗಿದ್ದವು.

ಈ ಎಲ್ಲ ಕಾರಣಗಳಿಗಾಗಿ 2025ರ ಜುಲೈ 28ರಂದು ಒಪ್ಪಂದ ರದ್ದುಗೊಳಿಸಲಾಗಿತ್ತು. ಆದರೆ, ಈ ಆವರಣವನ್ನು ತೊರೆಯದೇ ಆಕ್ರಮಿಸಿಕೊಂಡಿದ್ದು, ನೋಟಿಸ್‌ ನೀಡಿದರೂ ವಿಚಾರಣೆಗೆ ಹಾಜರಾಗಿರಲಿಲ್ಲ.

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಆಕ್ರಮಣದಾರರನ್ನು ಒಕ್ಕಲೆಬ್ಬಿಸುವ) ಕಾಯ್ದೆ, 1974 ರ ಕಲಂ 5 ರ ಉಪ-ಕಲಂ (1) ರ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಾನು ಈ ಮೂಲಕ ಮೆಸರ್ಸ್‌ ಫಿಜಾ ಗ್ಲೋಬಲ್‌ ಆಗ್ರೋವೆಂಚರ್ಸ್‌ ಪ್ರೈವೆಟ್‌ ಲಿಮಿಟೆಡ್‌ ಮತ್ತು ಅದರ ಎಲ್ಲಾ ಸಂಬಂಧಿತ ವ್ಯಕ್ತಿಗಳಿಗೆ ಈ ಆದೇಶ ಪ್ರಕಟವಾದ ನಲವತ್ತೈದು ದಿನಗಳೊಳಗೆ ಆ ಸಾರ್ವಜನಿಕ ಆವರಣವನ್ನು ಖಾಲಿ ಮಾಡಬೇಕು. ವಿಫಲವಾದರೆ ಬಲಪ್ರಯೋಗದ ಮೂಲಕ ಒಕ್ಕಲೆಬ್ಬಿಸಲಾಗುವುದು. ಅನಧಿಕೃತ ಆಕ್ರಮಣದ ಅವಧಿಯ ಹಾನಿ ಮತ್ತು ಬಾಕಿ ಶುಲ್ಕವನ್ನು ಭೂಕಂದಾಯ ಬಾಕಿಯಂತೆ ವಸೂಲಿ ಮಾಡಲಾಗುವುದು' ಎಂದು ಕೆಪೆಕ್‌ ವ್ಯವಸ್ಥಾಪಕ ನಿರ್ದೇಶಕರೂ ಸ್ವಾಧೀನ ಅಧಿಕಾರಿಯೂ ಆಗಿರುವ ಸಿ.ಎನ್‌. ಶಿವಪ್ರಕಾಶ್‌ ಆದೇಶದಲ್ಲಿ ತಿಳಿಸಿದ್ದಾರೆ.

ಶಾಂತಿನಗರ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು

ಚಿತ್ರ: ಬಿ.ಕೆ.ಜನಾರ್ದನ

ಸಿ.ಎಂ ಕಪ್‌ ಫುಟ್‌ಬಾಲ್‌ ಶಾಂತಿನಗರ ಚಾಂಪಿಯನ್‌

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಪ್ರದರ್ಶನ ತೋರಿದ ಶಾಂತಿನಗರ ತಂಡವು ರಾಜಾಜಿನಗರ ತಂಡವನ್ನು ಮಣಿಸಿ, ಎರಡನೇ ಆವೃತ್ತಿಯ ಸಿಎಂ ಕಪ್‌ ಫುಟ್‌ಬಾಲ್‌ ಟೂರ್ನಿಯ ಪ್ರಶಸ್ತಿ ಎತ್ತಿ ಹಿಡಿಯಿತು.

ಬೆಂಗಳೂರು ಫುಟ್‌ಬಾಲ್‌ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಫೈನಲ್‌ ಪಂದ್ಯದಲ್ಲಿ ಶಾಂತಿನಗರ ತಂಡವು 6–3ರಿಂದ ಗೆಲುವು ಸಾಧಿಸಿತು. ಅದರೊಂದಿಗೆ ಸತತ ಎರಡನೇ ಬಾರಿ ಚಾಂಪಿಯನ್‌ ಆಯಿತು.

ಟೂರ್ನಿಯುದ್ದಕ್ಕೂ ಅಮೋಘ ಪ್ರದರ್ಶನ ನೀಡಿದ್ದ ಶಾಂತಿನಗರ ತಂಡದ ಮಗೇಶ್‌ ಎಸ್‌. (5ನೇ ಹಾಗೂ 27ನೇ ನಿ.) ಫೈನಲ್‌ನಲ್ಲೂ ಅವಳಿ ಗೋಲು ಗಳಿಸಿ ಮಿಂಚಿದರು. ವಿನಯ್‌ ಟಿ. (11ನೇ ನಿ.), ಅಜಯ್‌ ಅಲೆಕ್ಸ್‌ (37ನೇ ನಿ.), ರೋಶನ್‌ ಸಿಂಗ್‌ (70ನೇ ನಿ.) ಹಾಗೂ ಕ್ರಿಸ್‌ ಅಂಥೋನಿ (88ನೇ ನಿ.) ತಲಾ ಒಂದು ಗೋಲು ಹೊಡೆದರು. ಮಗೇಶ್‌ ಅವರು ಟೂರ್ನಿಯ ಪ್ರತಿಭಾವಂತ ಆಟಗಾರ ಗೌರವಕ್ಕೂ ಭಾಜನರಾದರು.

ರಾಜಾಜಿನಗರ ತಂಡದ ಕವಿಅರಸನ್‌ (25ನೇ ನಿ.) ಹಾಗೂ ಮೋನಿಷ್‌ ಕುಮಾರ್‌ ಜಿ. (60ನೇ ಹಾಗೂ 90+3ನೇ ನಿ.) ಹೋರಾಟ ತೋರಿದರಾದರೂ ಗೆಲುವು ಒಲಿಯಲಿಲ್ಲ.

ಚಾಂಪಿಯನ್‌ ಶಾಂತಿನಗರ ತಂಡಕ್ಕೆ ₹2 ಲಕ್ಷ ನಗದು ಬಹುಮಾನ ನೀಡಲಾಯಿತು. ರನ್ನರ್ಸ್‌ಅಪ್‌ ರಾಜಾಜಿನಗರ ತಂಡ ₹1 ಲಕ್ಷ ಹಾಗೂ ಸೆಮಿಫೈನಲ್‌ ತಲುಪಿದ್ದ ಕೆ.ಆರ್‌.ಪುರ ಮತ್ತು ರಾಜರಾಜೇಶ್ವರಿನಗರ ತಂಡಗಳು ₹25 ಸಾವಿರ ಪಡೆದವು.

ವೈಯಕ್ತಿಕ ಪ್ರಶಸ್ತಿಗಳು: ಉತ್ತಮ ಗೋಲ್‌ಕೀಪರ್‌: ಅಜಿತ್‌ ಕುಮಾರ್‌ (ಶಿವಾಜಿನಗರ), ಉತ್ತಮ ಡಿಫೆಂಡರ್‌: ಆನಂದ್‌ ಜೆ. (ಕೆ.ಆರ್‌.ಪುರ), ಉತ್ತಮ ಫಾರ್ವರ್ಡ್‌ ಆಟಗಾರ: ಕವಿಅರಸನ್‌ (ರಾಜಾಜಿನಗರ), ಉತ್ತಮ ಮಿಡ್‌ಫೀಲ್ಡರ್‌ ಆಟಗಾರ: ಎ.ಆಕಾಶ್‌ (ರಾಜರಾಜೇಶ್ವರಿನಗರ), ಟೂರ್ನಿಯ ಪ್ರತಿಭಾವಂತ ಆಟಗಾರ: ಮಗೇಶ್‌ ಎಸ್‌. (ಶಾಂತಿನಗರ).

ಅತಿ ಹೆಚ್ಚು ಗೋಲು: ಕವಿಅರಸನ್‌ (10 ಗೋಲು) (ರಾಜಾಜಿನಗರ), ಉದಿತ್‌ ಜಿ. (8 ಗೋಲು) (ರಾಜಾಜಿನಗರ) ಹಾಗೂ ಸಚಿನ್‌ ಆರ್‌. (7 ಗೋಲು), ಸಿ.ವಿ.ರಾಮನ್‌ ನಗರ.

ಪಕ್ಷದಿಂದ ಜಬ್ಬಾರ್ ಅಮಾನತು

ಕಾಂಗ್ರೆಸ್‌ನಲ್ಲಿ ಪಕ್ಷ ವಿರೋಧಿ ಚಟುವಟಿಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಜಬ್ಬಾರ್

ಬೆಂಗಳೂರು: ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರನ್ನು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವ ಸ್ಥಾನದಿಂದ ಅಮಾನತು ಮಾಡಲಾಗಿದೆ.

'ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಇತ್ತೀಚೆಗೆ ನಡೆದ ಉಪ ಚುನಾವಣೆ ಸಂದರ್ಭದಲ್ಲಿ ಜಬ್ಬಾರ್ ಅವರು ನಡೆಸಿದ ಪಕ್ಷ ವಿರೋಧಿ ಚಟುವಟಿಕೆ ಪರಿಗಣಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಪಕ್ಷದ ಪ್ರಾಥಮಿಕ ಸದಸ್ಯತ್ವ ಸ್ಥಾನದಿಂದ ಅಮಾನತು ಮಾಡಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಉಪ ಚುನಾವಣೆಯಲ್ಲಿ ಟಿಕೆಟ್ ಆಕಾಂಕ್ಷಿಆಗಿದ್ದ ಜಬ್ಬಾರ್, ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಶಾಮನೂರು ಪರ ಪ್ರಚಾರದಲ್ಲಿ ಭಾಗವಹಿಸದೆ ದೂರ ಉಳಿದಿದ್ದರು.

ನಂತರದ ರಾಜಕೀಯ ಬೆಳವಣಿಗೆ ಯಲ್ಲಿ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ಅವರು ರಾಜೀನಾಮೆ ನೀಡಿದ್ದರು. ಅದನ್ನು ಅಂಗೀಕರಿಸಿದ್ದ ಡಿ.ಕೆ. ಶಿವಕುಮಾರ್, ಅಲ್ಪಸಂಖ್ಯಾತ ಘಟಕವನ್ನೇ ವಿಸರ್ಜಿಸಿದ್ದರು.

ಅಮಾನತು ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಜಬ್ಬಾರ್, 'ಚುನಾವಣೆಯ ಫಲಿತಾಂಶಕ್ಕೂ ಮೊದಲೇ ಯಾಕೆ ಈ ಕ್ರಮ ಎನ್ನುವುದೂ ಗೊತ್ತಿಲ್ಲ ಶಾಮನೂರು ಶಿವಶಂಕರಪ್ಪ ಅವರು ತೀರಿಕೊಂಡ ನಂತರ ನಾವೆಲ್ಲ, ಅವರ ಕುಟುಂಬಕ್ಕೇ ಯಾಕೆ ಟಿಕೆಟ್ ಕೊಡಬೇಕು? ಒಂದು ವೇಳೆ ಅಲ್ಪಸಂಖ್ಯಾತರಿಗೆ ಕೊಡಲಿಲ್ಲವೆಂದರೆ, ಬೇರೆ ಸಮುದಾಯಕ್ಕೆ ಕೊಡಿ ಎಂಬ ಒತ್ತಾಯವೂ ಇತ್ತು. ಕುರುಬರಿಗೆ ಕೊಡಿ, ಗೆಲ್ಲಿಸಿಕೊಂಡು ಬರುತ್ತೇವೆ ಎಂದೂ ಹೇಳಿದ್ದೆವು' ಎಂದರು.

ನಸೀರ್ ಭೇಟಿಯಾದ ಸಚಿವ ಜಮೀರ್

ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ವಜಾಗೊಂಡಿರುವ ವಿಧಾನ ಪರಿಷತ್ ಸದಸ್ಯ ನಸೀರ್ ಅಹಮದ್ ಅವರನ್ನು ಸಚಿವ ಜಮೀರ್ ಅಹಮದ್ ಖಾನ್ ಭೇಟಿ ಮಾಡಿ ಚರ್ಚೆ ನಡೆಸಿದರು.

ನಸೀರ್ ಅವರ ಸರ್ಕಾರಿ ನಿವಾಸಕ್ಕೆ ಬುಧವಾರ ಬೆಳಿಗ್ಗೆ ತೆರಳಿದ ಜಮೀರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಮಂಗಳವಾರ ರಾತ್ರಿ ನಡೆಸಿದ ಮಾತುಕತೆಯ ವಿವರವನ್ನು ಹಂಚಿಕೊಂಡಿದ್ದಾರೆ. ನಂತರ ಮಾತನಾಡಿದ ಜಮೀರ್, 'ನಸೀರ್ ಅಹಮದ್ ಪಕ್ಷದಲ್ಲಿ ತುಂಬಾ ಹಿರಿಯರು. ಅವರನ್ನು ಹುದ್ದೆಯಿಂದ ವಜಾ ಮಾಡಿದ್ದರಿಂದ ನನಗೂ ಬಹಳ ನೋವಾಗಿದೆ. ಹೀಗಾಗಿ, ಅವರನ್ನು ಸಮಾಧಾನಪಡಿಸಲು ಪ್ರಯತ್ನಿಸಿದ್ದೇನೆ' ಎಂದರು.

ಪಕ್ಷ ವಿರೋಧಿ ಚಟುವಟಿಕೆಗೆ ದಾಖಲೆ ಕೊಡಿ: ಜಬ್ಬಾರ್

'ಪಕ್ಷ ವಿರೋಧಿ ಚಟುವಟಿಕೆ ನಡೆಸಿರುವುದಕ್ಕೆ ಯಾವುದಾದರೂ ಆಡಿಯೊ, ವಿಡಿಯೊ ಸೇರಿದಂತೆ ಏನೇ ಸಾಕ್ಷ್ಯ, ದಾಖಲೆ ಇದ್ದರೆ ತೋರಿಸಲಿ' ಎಂದು ಅಬ್ದುಲ್ ಜಬ್ಬಾರ್ ಆಗ್ರಹಿಸಿದರು.

'ಯಾರು ಹೇಳದಿದ್ದರೂ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ನಾನೇ ರಾಜೀನಾಮೆ ನೀಡಿದ್ದೇನೆ. ಅಧ್ಯಕ್ಷರು ಯಾವುದು ಅಶಿಸ್ತು, ಯಾರು ಕೆಲಸ ಮಾಡಿಲ್ಲವೆಂದು ಹೇಳಲಿ. ಮುಖ್ಯಮಂತ್ರಿ ಬಣದ ನಾಯಕರೇ ಗುರಿ ಎಂದೇನೂ ಇಲ್ಲ. ಇಲ್ಲಿ ಟಿಕೆಟ್ ಯಾರು ಕೊಟ್ಟರು? ಆವತ್ತು ಡಯಾಸ್ ಮೇಲೆ ನಿಂತು ಬಿಜೆಪಿ ಗೆಲ್ಲಿಸಿ ಎಂದವರ ಮೇಲೆ ಯಾಕೆ ಕ್ರಮ ತೆಗೆದುಕೊಂಡಿಲ್ಲ' ಎಂದೂ ಪ್ರಶ್ನಿಸಿದರು.

'ಈಗ ಬೇರೆ ಕುದುರೆಗಳು ಬಂದಿವೆ. ಇದೊಂದು ರೇಸ್. ಈಗ ಅವರ ಕುದುರೆಗಳು ಮುಂದೆ ಇವೆ' ಎಂದು ಸೂಚ್ಯವಾಗಿ ಹೇಳಿದರು.

ದೊರೆ ತಪ್ಪಿಗೆ ದಂಡ ಇಲ್ಲ: ರಾಜಣ್ಣ ವ್ಯಂಗ್ಯ

ಮಧುಗಿರಿ (ತುಮಕೂರು): ಮಧುಗಿರಿಯ ಕಾಂಗ್ರೆಸ್ ಶಾಸಕ ಕೆ.ಎನ್. ರಾಜಣ್ಣ ಮತ್ತೆ ಪಕ್ಷದ ಹೈಕಮಾಂಡ್ ನಿರ್ಧಾರದ ವಿರುದ್ಧ ಧ್ವನಿ ಎತ್ತಿದ್ದಾರೆ.

ದಾವಣಗೆರೆ ಚುನಾವಣೆ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲಿಗರ ವಿರುದ್ಧ ಹೈಕಮಾಂಡ್ ಕ್ರಮ ತೆಗೆದು- ಕೊಳ್ಳುತ್ತಿರುವ ಬಗ್ಗೆ ಬುಧವಾರ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಅವರು, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೆಸರು ಹೇಳದೆ ವಾಗ್ದಾಳಿ ನಡೆಸಿದರು.

ಕೆ.ಎನ್.ರಾಜಣ್ಣ

ಕಾಂಗ್ರೆಸ್ ಪಕ್ಷದಲ್ಲಿ ಶಿಸ್ತು ಪಾಲನೆ ಹಾಗೂ ಮುಸ್ಲಿಂ ಸಮುದಾಯದ ನಾಯಕರ ವಿರುದ್ಧ ತೆಗೆದುಕೊಳ್ಳುತ್ತಿರುವ ಕ್ರಮದ ಬಗ್ಗೆ ಮಾತನಾಡಿದ ಅವರು, 'ರಾಹುಲ್ ಗಾಂಧಿ ಯಾರೆಂದು ಗೊತ್ತಿಲ್ಲ ಎಂದು ಹೇಳಿದ್ದ ಸದ್ಗುರು ಜಗ್ಗಿ ವಾಸುದೇವ್ ಜತೆ ವೇದಿಕೆ ಹಂಚಿಕೊಂಡವರು ಯಾರು' ಎಂದು ಖಾರವಾಗಿ ಪ್ರಶ್ನಿಸಿದರು.

'ಕಾಂಗ್ರೆಸ್ ಪಕ್ಷದ ನಾಯಕ ಗೊತ್ತಿಲ್ಲ ಎನ್ನುವ ಜಗ್ಗಿ ವಾಸುದೇವ್ ಜತೆ ವೇದಿಕೆ ಹಂಚಿಕೊಂಡಾಗ ಪಕ್ಷದ ಶಿಸ್ತು ಮೀರುವುದಿಲ್ಲವೆ' ಎಂದು ರಾಜಣ್ಣ ಪ್ರಶ್ನಿಸಿದರು. 'ದೊರೆ ಮಾಡಿದ್ದಕ್ಕೆ ದಂಡ ಇಲ್ಲ' ಎಂಬ ಗಾದೆ ಮಾತನ್ನೂ ಅವರು ಹೇಳಿದರು.

'ಮುಂದಿನ ಗುರಿ ನಾನೇ ಎಂಬ ಪ್ರಚಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ ಗುರಿ ನಾನೇ ಎಂದು ಮಾಧ್ಯಮಗಳಲ್ಲಿ ಬರುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಚರ್ಚಿಸಿದ್ದು, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಗುರುವಾರ ಭೇಟಿ ಮಾಡುತ್ತೇನೆ' ಎಂದು ಸಚಿವ ಬಿ.ಝೆಡ್. ಜಮೀರ್ ಅಹಮದ್ ಖಾನ್ ಹೇಳಿದರು.

ಅಬ್ದುಲ್ ಜಬ್ಬಾರ್ ಹಾಗೂ ನಸೀರ್ ಅಹಮದ್ ವಿರುದ್ಧ ಕ್ರಮ ಜರುಗಿಸಿದ ಬೆನ್ನಲ್ಲೇ, ಜಮೀರ್ ವಿರುದ್ಧವೂ ಕಾಂಗ್ರೆಸ್ ಹೈಕಮಾಂಡ್ ಕ್ರಮ ಕೈಗೊಳ್ಳಬಹುದು ಎಂಬ ವದಂತಿ ಹಬ್ಬಿದೆ.



ಜಮೀರ್

ಈ ಬಗ್ಗೆ ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ಮೇಲಿನಂತೆ ಪ್ರತಿಕ್ರಿಯಿಸಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಕಾಂಗ್ರೆಸ್‌ನಲ್ಲಿ ನಾನು ಬಹಳ ಸಣ್ಣವನು. ಯಾವತ್ತೂ ನಾನು ಜಾತಿ ರಾಜಕಾರಣ ಮಾಡಿಲ್ಲ. ಯಾರೂ ಕೂಡ ನನ್ನ ಹೆಸರು ಹೇಳಿ ಆರೋಪ ಮಾಡಿಲ್ಲ. ಆರೋಪ ಮಾಡುವುದಾದರೆ ಹೆಸರು ಹೇಳಬೇಕಲ್ಲವೇ? ಯಾರೂ ಹೆಸರು ಹೇಳದೆಯೇ ನನ್ನ ಬಗ್ಗೆ ಹೇಳಿದರೆ ಹೇಗೆ' ಎಂದು ಮರು ಪ್ರಶ್ನೆ ಹಾಕಿದರು.

'ರಾಜಕಾರಣಕ್ಕೆ ಬಂದ ಮೇಲೆ ಯಾರೂ ಜಾತಿ ಮಾಡಬಾರದು, ಅದು ಮನೆಯಲ್ಲಿರಬೇಕು. ರಾಜಕಾರಣದಲ್ಲಿ ಜಾತಿ ಮಾಡಿದರೆ ಹುಳ ಬಿದ್ದು ಸಾಯುತ್ತಾರೆ. ನಾನು ಹಣೆ ಬರಹವನ್ನು ನಂಬಿದ್ದು, ಅದನ್ನು ದೇವರು ಬರೆದಿದ್ದಾನೆ. ನನಗೆ 62 ವರ್ಷ ಆಯಿತು. ರಾಜಕಾರಣದಲ್ಲಿ ಯಾರೂ ಗೂಟ ಹೊಡೆದುಕೊಂಡು ಇರುವುದಿಲ್ಲ. ಯುವಕರು ಬೆಳೆದರೆ ನನಗೂ ಖುಷಿಯೇ' ಎಂದರು.

'ನಾನು ಕೇರಳಕ್ಕೆ ಮೋಜು ಮಸ್ತಿ ಮಾಡಲು, ಕಳ್ಳಾಟ ಆಡಲು ಹೋಗಿರಲಿಲ್ಲ. ಪಕ್ಷದ ಕೆಲಸ ಮಾಡಲು ಹೋಗಿದ್ದೆ. ನಾನೇನಾದರೂ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಮಜಾ ಅನುಭವಿಸಲು ಹೋಗಿದ್ದರೆ ತಪ್ಪು. ಹಗಲು ರಾತ್ರಿ, ಬಿಸಿಲು ಎನ್ನದೆ ಅಲ್ಲಿ ಕೆಲಸ ಮಾಡಿದ್ದೇನೆ. ದಿನಕ್ಕೆ 350 ಕಿ.ಮೀ. ಪ್ರಯಾಣ ಮಾಡಿ ಚುನಾವಣಾ ಪ್ರಚಾರ ಮಾಡಿದ್ದೇನೆ. ಹೈಕಮಾಂಡ್ ಕೆಲಸ ಮಾಡಲು ಹೇಳಿದ್ದಕ್ಕೆ ನಾನು ಅಲ್ಲಿಗೆ ಹೋಗಿದ್ದೆ' ಎಂದು ಹೇಳಿದರು.

'ಏಪ್ರಿಲ್ 7ರವರೆಗೆ ಕೇರಳದಲ್ಲಿ ಇರಲು ಹೇಳಿದ್ದರು. ಆದರೆ, ಮುಖ್ಯಮಂತ್ರಿ ಕರೆ ಮಾಡಿ ಪ್ರಚಾರ ಮಾಡು ಅಂದಿದ್ದಕ್ಕೆ ನಾನು ಬಾಗಲಕೋಟೆಗೆ ಹೋದೆ. ದಾವಣಗೆರೆ ದಕ್ಷಿಣ ಕ್ರೇತ್ರಕ್ಕೂ ಹೋಗಿದ್ದೆ. ಕರೆದರೆ ಮತ್ತೆ ಪ್ರಚಾರಕ್ಕೆ ಹೋಗುತ್ತಿದ್ದೆ. ಈ ಬಗ್ಗೆ ಮುಖ್ಯಮಂತ್ರಿ ಜೊತೆ ಮಂಗಳವಾರ ಚರ್ಚೆ ಮಾಡಿದ್ದೇನೆ' ಎಂದರು.

ಸುದ್ದಿ 2 ನಿಮಿಷ

ಮತಪತ್ರ ಬಳಕೆ: ರಾಜ್ಯಪಾಲರ ಅಸ್ತು

ಬೆಂಗಳೂರು: ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ವಿದ್ಯುನ್ಮಾನ ಮತ ಯಂತ್ರಗಳ ಬದಲಿಗೆ ಮತಪತ್ರ (ಬ್ಯಾಲೆಟ್) ಬಳಸುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರ ರೂಪಿಸಿದ್ದ ಮಸೂದೆಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅಂಕಿತ ಹಾಕಿದ್ದಾರೆ.

ಈ ಉದ್ದೇಶಕ್ಕಾಗಿ ತಂದಿದ್ದ ಮಸೂದೆಗೆ ವಿಧಾನಮಂಡಲ ಅನುಮೋದನೆ ನೀಡಿತ್ತು. ಮಸೂದೆಗೆ ಅಂಕಿತ ಬಿದ್ದಿರುವುದರಿಂದ ಇದು ಕಾಯ್ದೆಯಾಗಲಿದ್ದು, ಮುಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಪತ್ರ ಬಳಕೆಗೆ ಅನುವಾಗಲಿದೆ. ಸಂವಿಧಾನದ 326ನೇ ವಿಧಿ ಅಡಿ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ಚುನಾವಣೆ ನಡೆಸುವುದನ್ನು ಖಚಿತಪಡಿಸಿಕೊಳ್ಳಬೇಕಿದೆ. ಮುಖ್ಯವಾಗಿ, ಮತದಾರರ ಮತಪತ್ರದ ಗೋಪ್ಯತೆ ಕಾಪಾಡುವುದು ಹಾಗೂ ಮತದಾರರನ್ನು ದಬ್ಬಾಳಿಕೆ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸಿ, ಆ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯವನ್ನು ಸುರಕ್ಷಿತಗೊಳಿಸುವುದು ರಾಜ್ಯ ಸರ್ಕಾರದ ಉದ್ದೇಶ. ಇವಿಎಂ ಕಾರ್ಯನಿರ್ವಹಣೆಯ ಕುರಿತು ಕಳವಳ ವ್ಯಕ್ತವಾಗಿದ್ದು, ಸಾರ್ವಜನಿಕ ನಂಬಿಕೆ ಮರುಸ್ಥಾಪಿಸಲು ಸದೃಢ ರಕ್ಷಣಾ ಮತದಾನ ಪದ್ಧತಿಗೆ ಮರಳುವುದು ಅವಶ್ಯಕ ಎಂದೂ ತಿದ್ದುಪಡಿ ಮಸೂದೆ ಪ್ರಸ್ತಾಪಿಸಿತ್ತು.

ಜಿಲ್ಲಾ ಪಂಚಾಯಿತಿ ಪ್ರತಿಯೊಂದು ಮತ ಕ್ಷೇತ್ರದಲ್ಲಿ ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಮತದಾರರ ಪಟ್ಟಿ ಸಿದ್ಧಪಡಿಸುವ ಹೊಣೆಯನ್ನು ಉಪ ವಿಭಾಗಾಧಿಕಾರಿಗೆ ನೀಡಲಾಗಿದೆ. ಕೇಂದ್ರ ಚುನಾವಣಾ ಆಯೋಗದ ಮತದಾರರ ಪಟ್ಟಿ ಆಧರಿಸಿ ಸ್ಥಳೀಯ ಸಂಸ್ಥೆಗಳ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತಿತ್ತು. ಅದನ್ನು ಕೈಬಿಡಲಾಗಿದೆ. ರಾಜ್ಯ ಚುನಾವಣಾ ಆಯೋಗವೇ ಪ್ರತ್ಯೇಕವಾಗಿ ಮತದಾರರ ಪಟ್ಟಿ ಸಿದ್ಧಪಡಿಸುವ ಅವಕಾಶ ಸಿಗಲಿದೆ.

ಒಳ ಏಟು: ಸಿ.ಎಂ.ಗೆ ಮಾಹಿತಿ ಕೊಟ್ಟ ಸಚಿವ ಮಲ್ಲಿಕಾರ್ಜುನ್

ಬೆಂಗಳೂರು: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ಆರೋಪದ ಮೇಲೆ ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರನ್ನು ಪಕ್ಷದಿಂದ ಅಮಾನತು ಮಾಡಿದ ಬೆನ್ನಲ್ಲೇ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ಸಿದ್ದರಾಮಯ್ಯ ಅವರನ್ನು ಬುಧವಾರ ಭೇಟಿ ಮಾಡಿದ ಮಲ್ಲಿಕಾರ್ಜುನ್, ಉಪ ಚುನಾವಣೆಯಲ್ಲಿ ನಡೆದಿರುವ ಬೆಳವಣಿಗೆಗಳ ಕುರಿತು ಮಾಹಿತಿ ನೀಡಿದ್ದಾರೆ. ಅಲ್ಪಸಂಖ್ಯಾತ ಸಮುದಾಯದ ನಾಯಕರ ಒಳ ಏಟಿನ ಬಗ್ಗೆಯೂ ಪ್ರಸ್ತಾಪಿಸಿ, ಚುನಾವಣಾ ಫಲಿತಾಂಶದ ಮೇಲೆ ಆಗಬಹುದಾದ ಪರಿಣಾಮಗಳ ಕುರಿತಂತೆ ಅರ್ಧ ಗಂಟೆಗೂ ಹೆಚ್ಚು ಹೊತ್ತು ಮಾತುಕತೆ ನಡೆಸಿದ್ದಾರೆ. ಉಪ ಚುನಾವಣೆ ನಂತರದ ಬೆಳವಣಿಗೆಗಳ ಬಗ್ಗೆಯೂ ಮಲ್ಲಿಕಾರ್ಜುನ್ ಚರ್ಚಿಸಿದ್ದಾರೆ. ಅದಕ್ಕೂ ಮೊದಲು ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ಮತ್ತು ಶಾಸಕ ರಿಜ್ವಾನ್ ಅರ್ಷದ್ ಅವರನ್ನು ಕರೆಯಿಸಿಕೊಂಡ ಸಿದ್ದರಾಮಯ್ಯ ಮಾತುಕತೆ ನಡೆಸಿದರು. ಅಬ್ದುಲ್ ಜಬ್ಬಾರ್ ಪಕ್ಷ ವಿರೋಧಿ ಚಟುವಟಿಕೆ ನಡೆಸಿರುವುದು, ಅವರ ಪಾತ್ರವೇನು ಎಂಬ ಬಗ್ಗೆ ವಿವರಣೆ ಪಡೆದರು. ಜಬ್ಬಾರ್ ಹೊರತುಪಡಿಸಿ ಇತರ ನಾಯಕರು ಪಕ್ಷ ವಿರೋಧಿಯಾಗಿ ನಡೆದುಕೊಂಡಿದ್ದಾರೆಯೇ ಎಂಬ ಬಗ್ಗೆಯೂ ಮಾಹಿತಿ ಪಡೆದರು ಎಂದು ಮೂಲಗಳು ತಿಳಿಸಿವೆ.

ಚಿಟಿಕೆ ಸುದ್ದಿ

ದ್ವೇಷ ಭಾಷಣ: ಪುನೀತ್ ಕೆರೆಹಳ್ಳಿ ಬಂಧನ, ಬಿಡುಗಡೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ಸಮಾಜದಲ್ಲಿ ದ್ವೇಷ ಉಂಟು ಮಾಡುವ ಭಾಷಣ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ಆರೋಪಕ್ಕೆ ಸಂಬಂಧಿಸಿ ಹಿಂದುತ್ವಪರ ಸಂಘಟನೆಯ ಕಾರ್ಯಕರ್ತ ಪುನೀತ್ ಕೆರೆಹಳ್ಳಿ- ಯನ್ನು ಬೆಳ್ತಂಗಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪುನೀತ್ ಕೆರೆಹಳ್ಳಿ

ಬೆಂಗಳೂರಿನ ಬಸವನಗುಡಿಯ ಆತನ ಕಚೇರಿಯಿಂದ ಪುನೀತ್ ಕೆರೆಹಳ್ಳಿಯನ್ನು ಬಂಧಿಸಿ ಬೆಳ್ತಂಗಡಿ ಠಾಣೆಗೆ ಕರೆತರಲಾಯಿತು. ಇಲ್ಲಿ ಧ್ವನಿ ಮಾದರಿ ಸಂಗ್ರಹಿಸಿದ ಬಳಿಕ ಠಾಣೆ ಜಾಮೀನಿನ ಮೇಲೆ ಬುಧವಾರ ಬಿಡುಗಡೆ ಮಾಡಲಾಗಿದೆ.

ಬೆಳ್ತಂಗಡಿಯ ಕಸಬಾ ಗ್ರಾಮದ ಹುಣ್ಸೆಕಟ್ಟೆ ನಿವಾಸಿ ಜೋರಮ್ ಬಬೋರ್ಝು ಎಂಬುವರು 2025ರ ಆಗಸ್ಟ್ 7ರಂದು ಬೆಳ್ತಂಗಡಿ ಠಾಣೆಗೆ ದೂರು ನೀಡಿದ್ದರು. ಪ್ರಕರಣದ ಸಂಬಂಧ ಮೂರು ಬಾರಿ ನೋಟಿಸ್ ಜಾರಿ ಮಾಡಿದರೂ ವಿಚಾರಣೆಗೆ ಹಾಜರಾಗದ ಹಿನ್ನೆಲೆಯಲ್ಲಿ ಬೆಳ್ತಂಗಡಿ ನ್ಯಾಯಾಲಯ ಕೆರೆಹಳ್ಳಿ ವಿರುದ್ಧ ಬಂಧನ ವಾರಂಟ್ ಜಾರಿ ಮಾಡಿತ್ತು.

ಜೋಕಾಲಿ ಸೀರೆ ಕುತ್ತಿಗೆಗೆ ಸುತ್ತಿಕೊಂಡು ಬಾಲಕ ಸಾವು

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕಾರೇಕುರ ಗ್ರಾಮದ ವಿಜಯಕುಮಾರ್ ಅವರ ಮನೆಯಲ್ಲಿ ಕಟ್ಟಿದ್ದ ಜೋಕಾಲಿ ಸೀರೆ ಕುತ್ತಿಗೆಗೆ ಸುತ್ತಿಕೊಂಡು, ಅವರ ಪುತ್ರ ಭೂಮಿತ್ (7) ಬುಧವಾರ ಮೃತಪಟ್ಟ. ಪೋಷಕರು ಪಕ್ಕದ ಮನೆಯಲ್ಲಿದ್ದಾಗ ದುರ್ಘಟನೆ ನಡೆದಿದೆ. ಮೈಸೂರಿನ ಜಿಲ್ಲಾಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಬಾಲಕ ಮೃತಪಟ್ಟಿದ್ದ. ಅಸಹಜ ಸಾವು ಪ್ರಕರಣ ದಾಖಲಾಗಿದೆ ಎಂದು ಟೌನ್ ಠಾಣೆ ಸಿಪಿಐ ಬಿ.ಜಿ. ಕುಮಾರ್ ತಿಳಿಸಿದ್ದಾರೆ.

ಮಂಜಿನ ಮಡಿಕೇರಿ...

ಪ್ರಜಾವಾಣಿ ಚಿತ್ರ: ರಂಗಸ್ವಾಮಿ

ಬಿರು ಬೇಸಿಗೆಯ ಈ ದಿನಗಳಲ್ಲಿ 'ಮಂಜಿನ ನಗರಿ' ಮಡಿಕೇರಿಯ ಬೆಟ್ಟ, ಗುಡ್ಡಗಳು ಹಿಮದ ಚಾದರ ಹೊದ್ದುಕೊಂಡಂತೆ ಬುಧವಾರ ಕಂಡುಬಂದವು. ರಾಜಾಸೀಟ್ ಉದ್ಯಾನದ ತುದಿಯಂಚಿನಲ್ಲಿ ಈ ದೃಶ್ಯ ಕ್ಯಾಮೆರಾಕ್ಕೆ ಸೆರೆಯಾಯಿತು

'ಮುಸ್ಲಿಮರಿಗೆ ಕಾಂಗ್ರೆಸ್ ಅನಿವಾರ್ಯವಲ್ಲ'

ತನ್ವೀರ್ ಸೇಠ್

ಬೆಂಗಳೂರು: 'ನಮಗೆ (ಮುಸ್ಲಿಮರಿಗೆ) ಕಾಂಗ್ರೆಸ್ ಅನಿವಾರ್ಯ ವಲ್ಲ. ಕಾಂಗ್ರೆಸ್‌ಗೂ ಮುಸ್ಲಿಮರು ಅನಿವಾರ್ಯವಲ್ಲ' ಎಂದು ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಹೇಳಿದರು. ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ಆರೋಪದ ಮೇಲೆ ಪಕ್ಷ ತೆಗೆದುಕೊಂಡ ಕ್ರಮದ ಕುರಿತು ಪ್ರತಿಕ್ರಿಯಿಸಿದ ಅವರು, 'ಯಾರು ತಪ್ಪು ಮಾಡಿದ್ದಾರೊ ಅವರನ್ನು ಕರೆದು ಮಾತನಾಡುವುದು ಒಳ್ಳೆಯದು. ಅದನ್ನು ಬಿಟ್ಟು ಹೀಗೆ ಮಾಡುವುದು ಸರಿಯಲ್ಲ' ಎಂದರು. 'ನನ್ನ ನಂತರ ಮುಸ್ಲಿಂ ಸಮುದಾಯದವರಿಗೆ ಟಿಕೆಟ್ ಎಂದು ಶಿವಶಂಕರಪ್ಪನವರೇ ಹೇಳಿದ್ದರು. ಹೀಗಾಗಿ, ಅಲ್ಪಸಂಖ್ಯಾತರಿಗೆ ಟಿಕೆಟ್ ಕೇಳಿದ್ದೆವು' ಎಂದೂ ಹೇಳಿದರು.

'ಕಾಂಗ್ರೆಸ್‌ಗೆ ಕೈಕೊಟ್ಟ ಮುಸ್ಲಿಮ್ ಮುಖಂಡರು'

ಮಾಗಡಿ: ದಾವಣಗೆರೆ ಉಪಚುನಾವಣೆಯಲ್ಲಿ ಪಕ್ಷದ ಅಲ್ಪಸಂಖ್ಯಾತ ಮುಖಂಡರು ಕಾಂಗ್ರೆಸ್ ಅಭ್ಯರ್ಥಿ ಪರ ಕೆಲಸ ಮಾಡಲಿಲ್ಲ. ಹಾಗಾಗಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದವರ ವಿರುದ್ಧ ಹೈಕಮಾಂಡ್ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿದೆ ಎಂದು ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದರು.

ಮೋದಿ ಮುಂದೆ 18 ಬೇಡಿಕೆ ಇಟ್ಟ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದವರ ವರ್ಗಗಳ ಪಟ್ಟಿಯಲ್ಲಿರುವ ಜಾತಿಗಳಿಗೆ ಮೀಸಲಾತಿ ಪ್ರಮಾಣವನ್ನು ಶೇಕಡ 56ಕ್ಕೆ ಹೆಚ್ಚಿಸಿ ರಾಜ್ಯ ಸರ್ಕಾರ ತೆಗೆದುಕೊಂಡಿರುವ ನಿರ್ಣಯವನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸುವುದೂ ಸೇರಿ ಒಟ್ಟು 18 ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಸಲ್ಲಿಸಿದರು.

ಮಂಡ್ಯ ಜಿಲ್ಲೆಯ ಆದಿಚುಂಚನಗಿರಿ ಮಠದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬೆಂಗಳೂರಿಗೆ ಆಗಮಿಸಿದ ಮೋದಿ ಅವರನ್ನು ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದ ಸಿದ್ದರಾಮಯ್ಯ ಮನವಿ ಪತ್ರವನ್ನೂ ನೀಡಿದರು.

ದೇಶದ ಒಟ್ಟು ಬೆಳವಣಿಗೆಯಲ್ಲಿ ಕರ್ನಾಟಕ ಪ್ರಧಾನ ಸ್ತಂಭವಾಗಿದೆ. ದೇಶದ ಬೊಕ್ಕಸಕ್ಕೆ ಅತಿ ಹೆಚ್ಚಿನ ಕೊಡುಗೆ ನೀಡುತ್ತಿದೆ. ಸಾಮಾಜಿಕ, ಆರ್ಥಿಕ ಬೆಳವಣಿಗೆಯಲ್ಲಿ ಮುಂಚೂಣಿಯಲ್ಲಿದೆ. ಆದರೆ, ಹಲವು ಯೋಜನೆಗಳು ಬಹಳ ಕಾಲದಿಂದ ನನೆಗುದಿಯಲ್ಲಿರುವುದರಿಂದ ಈ ಕುರಿತು ತುರ್ತು ಗಮನ ಹರಿಸಬೇಕು ಎಂದು ಮನವಿ ಪತ್ರದಲ್ಲಿ ಮುಖ್ಯಮಂತ್ರಿ ಪ್ರತಿಪಾದಿಸಿದ್ದಾರೆ.

ಪ್ರಮುಖ ಬೇಡಿಕೆಗಳು

- ರಾಜ್ಯ ಸರ್ಕಾರ ಅನುಮೋದನೆ ನೀಡಿರುವ ಇತರ ಹಿಂದುಳಿದ ಜಾತಿಗಳನ್ನು (ಒಬಿಸಿ) ಕೇಂದ್ರದ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಬೇಕು. ಈ ಸಂಬಂಧ ಕೇಂದ್ರ ಸರ್ಕಾರ ಹಿಂದೆ ಕೇಳಿರುವ ಸ್ಪಷ್ಟನೆಗಳಿಗೆ ರಾಜ್ಯ ಸರ್ಕಾರ ಈಗಾಗಲೇ ಉತ್ತರ ನೀಡಿದೆ.
- ಕೋಲಾರದಲ್ಲಿ ರೈಲ್ವೆ ಕೋಚ್ ತಯಾರಿಕಾ ಕಾರ್ಖಾನೆ ಸ್ಥಾಪಿಸುವ ಘೋಷಣೆ ಇನ್ನೂ ಈಡೇರಿಲ್ಲ. ಇದಕ್ಕೆ ರಾಜ್ಯ 1,123 ಎಕರೆ ಜಮೀನು ಒದಗಿಸಲಿದೆ. ಇದನ್ನು ಸ್ಥಾಪಿಸುವುದರಿಂದ ಹಿಂದುಳಿದಿರುವ ಕೋಲಾರ ಭಾಗದಲ್ಲಿ ಕೈಗಾರಿಕಾ ಅಭಿವೃದ್ಧಿ ಆಗಲಿದ್ದು, ಉದ್ಯೋಗ ಸೃಷ್ಟಿಯಾಗಲಿದೆ.
- ಹೈಸ್ಪೀಡ್ ರೈಲು ಕಾರಿಡಾರ್‌ಗೆ ಮೈಸೂರು–ಬೆಂಗಳೂರು ವಿಭಾಗವನ್ನು ಸೇರಿಸಬೇಕು. ಇದರಿಂದ ಪ್ರಾದೇಶಿಕ ಅಭಿವೃದ್ಧಿಯಲ್ಲಿ ಸಮತೋಲನ ಸಾಧಿಸಲು ಸಾಧ್ಯವಾಗುತ್ತದೆ. ರೈಲ್ವೆ ಸಂಪರ್ಕ ಜಾಲವೂ ವೃದ್ಧಿಯಾಗಲಿದೆ.
- ಕೇಂದ್ರ ಸರ್ಕಾರ ವಾಗ್ದಾನ ಮಾಡಿರುವಂತೆ ಬೆಂಗಳೂರು ಉಪನಗರ ರೈಲು ಯೋಜನೆಗೆ ಅನುದಾನ ಬಿಡುಗಡೆ ಮಾಡಬೇಕು. ಬೆಂಗಳೂರು–ಮುಂಬೈ ಹೈಸ್ಪೀಡ್ ರೈಲು ಕಾರಿಡಾರ್ ಅನ್ನು ಆರಂಭಿಸುವುದರ ಜತೆಗೆ ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದ ಪ್ರದೇಶಕ್ಕೂ ಸಂಪರ್ಕ ಕಲ್ಪಿಸಬೇಕು.
- ಬೆಂಗಳೂರು ನಗರದ ಮೂಲಸೌಕರ್ಯ ಬಲಪಡಿಸಲು ₹6,000 ಕೋಟಿ ಅನುದಾನ ನೀಡಬೇಕು.
- 2,000 ಮೆಗಾ ವಾಟ್ ಸಾಮರ್ಥ್ಯದ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಅರಣ್ಯ ಪರಿಸರ ಮತ್ತು ವನ್ಯಜೀವಿ ಮಂಡಳಿಯಿಂದ ಅನುಮೋದನೆ ಕೊಡಿಸಬೇಕು.
- ಶುದ್ಧ ಕುಡಿಯುವ ನೀರಿನ ಯೋಜನೆ ಜಲಜೀವನ್ ಮಿಷನ್ ಅಡಿ ಕೇಂದ್ರದ ಪಾಲು ₹17,554 ಕೋಟಿಯನ್ನು ಕೂಡಲೇ ಬಿಡುಗಡೆ ಮಾಡಬೇಕು. ಇದಕ್ಕೆ ಸಂಬಂಧಿಸಿದ ನೀತಿ–ನಿಯಮಗಳ ಸಮಸ್ಯೆ ಇತ್ಯರ್ಥಗೊಳಿಸಬೇಕು.
- ಕಲ್ಯಾಣ ಕರ್ನಾಟಕದ 371 ಜೆ ಅಡಿ ಪ್ರತಿ ವರ್ಷ ಕೇಂದ್ರ ₹5,000 ಕೋಟಿ ಅನುದಾನ ನೀಡಬೇಕು. ಆ ಭಾಗದ ಪ್ರತಿಯೊಂದು ಜಿಲ್ಲೆಯಲ್ಲಿ ಕನಿಷ್ಠ ಒಂದು ಸಾರ್ವಜನಿಕ ವಲಯದ ಉದ್ಯಮ ಸ್ಥಾಪಿಸಬೇಕು

ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಸಿದ್ದರಾಮಯ್ಯ ಜತೆ ಮೋದಿ ಅವರು ಆತ್ಮೀಯವಾಗಿ ಮಾತನಾಡಿದರು ಪಿಐಬಿ ಚಿತ್ರ

ನೀರಾವರಿ ಕುರಿತ ಬೇಡಿಕೆಗಳೇನು?

- ಕೇಂದ್ರ ಸರ್ಕಾರ ಕೃಷ್ಣಾ ಜಲ ವಿವಾದ ನ್ಯಾಯಮಂಡಳಿ ತೀರ್ಪು– 2ರ ಅಧಿಸೂಚನೆ ಹೊರಡಿಸಬೇಕು. ಕರ್ನಾಟಕದ ಪಾಲಿನ 173 ಟಿಎಂಸಿ ಅಡಿ ನೀರನ್ನು ಬಳಸಿಕೊಳ್ಳಲು ನೆರವಾಗಬೇಕು. ಕೃಷ್ಣಾ ಮೇಲ್ದಂಡೆ 3ನೇ ಹಂತವನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಬೇಕು.
- ಗೋದಾವರಿ–ಕಾವೇರಿ, ಬೇಡ್ತಿ–ವರದಾ ನದಿಗಳ ಜೋಡಣೆ ಯೋಜನೆಯಲ್ಲಿ ಕರ್ನಾಟಕಕ್ಕೆ ಕನಿಷ್ಠ 40ರಿಂದ 45 ಟಿಎಂಸಿ ಅಡಿ ನೀರು ಹಂಚಿಕೆ ಆಗುವಂತೆ ಕ್ರಮ ವಹಿಸಬೇಕು.
- ಬೆಂಗಳೂರು ನಗರದ ಕುಡಿಯುವ ನೀರಿಗಾಗಿ 67 ಟಿಎಂಸಿ ಅಡಿ ಸಾಮರ್ಥ್ಯದ 400 ಮೆಗಾವ್ಯಾಟ್ ಜಲವಿದ್ಯುತ್ ಉತ್ಪಾದನೆಯ ಮೇಕೆದಾಟು ಯೋಜನೆಗೆ ಅನುಮೋದನೆ ನೀಡಲು ಕೇಂದ್ರ ಜಲಶಕ್ತಿ ಸಚಿವಾಲಯ ಮತ್ತು ಜಲ ಆಯೋಗಕ್ಕೆ ನಿರ್ದೇಶನ ನೀಡಬೇಕು.
- 2023ರ ಕೇಂದ್ರ ಬಜೆಟ್‌ನಲ್ಲಿ ಘೋಷಿಸಿದಂತೆ ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿಯನ್ನು ಕೂಡಲೇ ಬಿಡುಗಡೆ ಮಾಡಬೇಕು. ಯೋಜನೆಗೆ ರಾಷ್ಟ್ರೀಯ ಸ್ಥಾನಮಾನ ನೀಡಬೇಕು.

'ಐದು ವರ್ಷವೂ ಸಿದ್ದರಾಮಯ್ಯ ಸಿ.ಎಂ'

ಮೈಸೂರು: 'ಸಿದ್ದರಾಮಯ್ಯ ಅವರೇ ಐದು ವರ್ಷವೂ ಮುಖ್ಯಮಂತ್ರಿ ಆಗಿರುತ್ತಾರೆ' ಎಂದು ಪುತ್ರ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಬುಧವಾರ ಪತ್ರಕರ್ತರಿಗೆ ಪ್ರತಿಕ್ರಿಯಿಸಿ, 'ಇದನ್ನು ತಂದೆಯವರೇ ವಿಧಾನಮಂಡಲ ಅಧಿವೇಶನದ- ಲ್ಲಿಯೇ ಸ್ಪಷ್ಟಪಡಿಸಿರುವುದರಿಂದ ಬೇರೆ ಚರ್ಚೆಯೇ ಇಲ್ಲ. ಎರಡೂವರೆ ವರ್ಷದಿಂದಲೂ ಹೇಳುತ್ತಿದ್ದೇನೆ. ಈಗಲೂ ಹೇಳುತ್ತೇನೆ. ಅವರ ಮಾತೇ ನನ್ನದೂ' ಎಂದರು.

'ಸಚಿವ ಸಂಪುಟ ಪುನರ್ ರಚಿಸಬೇಕೆಂದು ಕೇಳಲು ಶಾಸಕರು ದೆಹಲಿಗೆ ಹೋಗಿದ್ದಾರೆ. ಸರ್ಕಾರ, ಸಿ.ಎಂ ಸ್ಥಾನ ಭದ್ರವಾಗಿದೆ. ಎಷ್ಟು ಸಲ ಇದನ್ನು ಸ್ಪಷ್ಟಪಡಿಸಲಿ' ಎಂದು ಕೇಳಿದರು.

'ಸರ್ಕಾರಕ್ಕೆ ಮೂರು ವರ್ಷ ಆಗುತ್ತಿರುವುದರಿಂದ ಪುನರ್‌ರಚನೆ ಕೇಳುತ್ತಿದ್ದಾರೆ. ಇದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ. ನಾನು ಸಚಿವ ಸ್ಥಾನದ ಆಕಾಂಕ್ಷಿಯಲ್ಲ. ತಂದೆ ಸಿ.ಎಂ ಆಗಿರುವವರೆಗೂ ನಾನು ಕೇಳುವುದಿಲ್ಲ' ಎಂದರು.

'ಪುತ್ರನನ್ನು ಮುಖ್ಯಮಂತ್ರಿ ಹಣ ವಸೂಲಿಗೆ ಇಟ್ಟುಕೊಂಡಿದ್ದಾರೆ' ಎಂಬ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ, 'ಅದಕ್ಕೆ ಸಾಕ್ಷ್ಯ ಕೊಡಲಿ. ವರ್ಗಾವಣೆ ದಂಧೆ ಎನ್ನುತ್ತಾರೆ, ಸಾಕ್ಷ್ಯ ಇದೆಯೇ? ಸಾಕ್ಷ್ಯ ಕೊಟ್ಟು ಆರೋಪ ಮಾಡಿದರೆ ಬೆಲೆ' ಎಂದರು.

'ಸಂಘಟಿತ ಪ್ರಯತ್ನ, ಪೂರ್ವಭಾವಿ ಪರೀಕ್ಷೆ ಗಂಭೀರ ಪರಿಗಣನೆಯಿಂದ 2ನೇ ಪಿಯು ಸಾಧನೆ'

ಶೇ 100 ಫಲಿತಾಂಶದ ಗುರಿ: ಸಚಿವ ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಘಟಿತ ಪ್ರಯತ್ನ, ಪೂರ್ವಭಾವಿ ಪರೀಕ್ಷೆಯ ಗಂಭೀರ ಪರಿಗಣನೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯ ಮಾದರಿಯಲ್ಲೇ ವಿದ್ಯಾರ್ಥಿ- ಗಳನ್ನು ಸಜ್ಜುಗೊಳಿಸಿದ್ದರಿಂದ ಈ ಬಾರಿಯ ದ್ವಿತೀಯ ಪಿಯು ಪರೀಕ್ಷೆಯಲ್ಲಿ ದಾಖಲೆ ಫಲಿತಾಂಶ ಬಂದಿದೆ' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅಭಿಪ್ರಾಯಪಟ್ಟರು.

ಪಿಯು ಫಲಿತಾಂಶದ ಕುರಿತು 'ಪ್ರಜಾವಾಣಿ' ಜತೆ ಅವರು ಸುದೀರ್ಘವಾಗಿ ಮಾತನಾಡಿದರು. ಅದರ ಸಂಕ್ಷಿಪ್ತ ರೂಪ ಇಲ್ಲಿದೆ.

'ಪಿಯು ಪರೀಕ್ಷೆ– 1ರಲ್ಲಿ ಶೇ 86.48ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಪಿಯು ಪರೀಕ್ಷೆ– 2ರ ಬಳಿಕ ಉತ್ತೀರ್ಣ ಪ್ರಮಾಣ ಶೇ 95ರಷ್ಟು ಆಗಲಿದೆ. ಮುಂದಿನ ದಿನಗಳಲ್ಲಿ ಶೇ 100ರಷ್ಟು ಫಲಿತಾಂಶ ಬರಬೇಕು ಎಂಬುದು ನನ್ನ ಆಶಯ. ಉತ್ತಮ ಶಿಕ್ಷಣ ನೀಡದೆ, ಒಳ್ಳೆಯ ವ್ಯಕ್ತಿಗಳನ್ನು ರೂಪಿಸಲು ಸಾಧ್ಯವಿಲ್ಲ. ಇದನ್ನು ಅರ್ಥ ಮಾಡಿಕೊಂಡು ಮಕ್ಕಳಿಗೆ ಶಿಕ್ಷಣ ನೀಡಲು ಬದ್ಧರಾಗಿದ್ದೇವೆ' ಎಂದು ತಿಳಿಸಿದರು.

'ಇದುವರೆಗೆ ಪೂರ್ವಭಾವಿ ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ವಿದ್ಯಾರ್ಥಿಗಳ ಕಲಿಕಾ ಮಟ್ಟಕ್ಕೆ ಅನುಗುಣವಾಗಿ ಸ್ಥಳೀಯವಾಗಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ನೀಡಲಾಗುತ್ತಿತ್ತು. ಇದರಿಂದಾಗಿ ಅವರಿಗೆ ಅಂತಿಮ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಲು ಸಾಧ್ಯವಾಗುತ್ತಿರಲಿಲ್ಲ. ಈ ಬಾರಿ ಪೂರ್ವಭಾವಿ ಪರೀಕ್ಷೆಗೂ ರಾಜ್ಯಮಟ್ಟದಿಂದಲೇ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿ ಎಲ್ಲ ಕಾಲೇಜುಗಳಿಗೆ ಕಳುಹಿಸಲಾಯಿತು. ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳು ಕೂಡ ಅದಕ್ಕೆ ಅನುಗುಣವಾಗಿ ಸಿದ್ಧತೆ ನಡೆಸಿದರು. ಇದರಿಂದಾಗಿ ಅವರ ಕಲಿಕಾ ಮಟ್ಟ ಸುಧಾರಣೆಯಾಯಿತು. ಹೀಗಾಗಿ ವಾರ್ಷಿಕ ಪರೀಕ್ಷೆಯ ಶೇಕಡವಾರು ಫಲಿತಾಂಶ ಹೆಚ್ಚಾಗಿದೆ' ಎಂದು ಅವರು ವಿಶ್ಲೇಷಿಸಿದರು.

ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಕರಿಗೆ ತರಬೇತಿ ಕೊಡಿಸಲಾಯಿತು. 'ಪ್ರಶ್ನೆಗಳ ಬ್ಯಾಂಕ್' ತಯಾರಿಸಿ ಅದಕ್ಕೆ ತಕ್ಕಂತೆ ಪೂರ್ವಭಾವಿ ಪರೀಕ್ಷೆ ನಡೆಸಲಾಯಿತು. 2025ರ ಮೇ 14 ರಂದು 'ಮಕ್ಕಳ ದಿನಾಚರಣೆ'ಯ ದಿನ ಎಲ್ಲ ಶಾಲೆಗಳಲ್ಲಿ ಪೋಷಕರ ಸಭೆ ನಡೆಸಿ, ಮಕ್ಕಳ ಕಲಿಕೆಯಲ್ಲಿ ಪೋಷಕರ ಪಾತ್ರ ಎಷ್ಟು ಮಹತ್ವದ್ದು ಎಂದು ಮನವರಿಕೆ ಮಾಡಿಕೊಡಲಾಯಿತು. ಇದಾದ ನಂತರ ಮಕ್ಕಳ ಮೇಲೆ ವಿಶೇಷ ಗಮನ ಹರಿಸಲು ಪೋಷಕರು ಮುತುವರ್ಜಿ ವಹಿಸಿದರು ಎಂದು ತಿಳಿಸಿದರು.

'ಮೊದಲು ಸಾಮೂಹಿಕವಾಗಿ ನಕಲು ಮಾಡಿಸುವ ವ್ಯವಸ್ಥೆ ಇತ್ತು. ನಾವು ಬಂದ ನಂತರ ವೆಬ್ ಕಾಸ್ಟಿಂಗ್ ವ್ಯವಸ್ಥೆ ಜಾರಿ ಮಾಡುವ ಮೂಲಕ ಇದಕ್ಕೆ ಕಡಿವಾಣ ಹಾಕಲಾಯಿತು. ಇದರಿಂದಾಗಿ ಫಲಿತಾಂಶ ಕುಸಿಯಿತು. ಸಮುದ್ರದಲ್ಲಿ ಮುಳುಗುವ ಸ್ಥಿತಿಯಲ್ಲಿ ಇದ್ದೆವು. ಅಂತಿಮ ಒಂದು ವರ್ಷಕ್ಕೆ ಸೀಮಿತವಾಗಿ ಶೇ 20ರಷ್ಟು ಕೃಪಾಂಕ ನೀಡುವ ತೀರ್ಮಾನ ತೆಗೆದುಕೊಳ್ಳಲಾಯಿತು. ಇದಕ್ಕೆ ಟೀಕೆ–ಟಿಪ್ಪಣಿಗಳು ಬಂದವು. ಆದರೆ, ಇದಕ್ಕೆಲ್ಲ ತಲೆ ಕೆಡಿಸಿಕೊಳ್ಳದೆ ಕೆಲಸ ಮಾಡಿದ್ದರಿಂದ ಈಗ ಅದರ ಪ್ರತಿಫಲ ಕಾಣುತ್ತಿದ್ದೇವೆ' ಎಂದರು.

'1 ಕೋಟಿ 16 ಲಕ್ಷ ಮಕ್ಕಳ ಭವಿಷ್ಯ ರೂಪಿಸುವ ಜವಾಬ್ದಾರಿ ನಮ್ಮ ಮೇಲಿದೆ. ಶಾಲೆಗಳಿಗೆ ಉಚಿತವಾಗಿ ನೀರು, ವಿದ್ಯುತ್ ನೀಡುವ ಮೂಲಕ ಸಾಯಂಕಾಲ ವಿಶೇಷ ತರಗ- ತಿಗಳನ್ನು ನಡೆಸಲಾಯಿತು. ತಮ್ಮ ಜವಾಬ್ದಾರಿ ಏನು ಎಂದು ಪೋಷಕರಿಗೂ ಮನವರಿಕೆ ಮಾಡಿಕೊಡಲಾಯಿತು. ಇದರಿಂದಾಗಿ ಕಳೆದ ವರ್ಷ 1.64 ಲಕ್ಷ ಇದ್ದ ಅನುತ್ತೀರ್ಣವಾದ ಮಕ್ಕಳ ಸಂಖ್ಯೆ ಈ ವರ್ಷ 84 ಸಾವಿರಕ್ಕೆ ಇಳಿದಿದೆ. ಕಳೆದ ಬಾರಿ ಎಲ್ಲ ವಿಷಯಗಳಲ್ಲಿ ಅನುತ್ತೀರ್ಣರಾದವರ ಸಂಖ್ಯೆ 30 ಸಾವಿರ ಇತ್ತು. ಈ ಬಾರಿ 1,700 ಇದೆ' ಎಂದರು.

'ಶೋಭಾ ಮೋದಿ ಸರ್ಟಿಫಿಕೇಟ್ ಕೇಳಲಿ'

'ಪ್ರಧಾನಿ ನರೇಂದ್ರ ಮೋದಿ ಹೆಸರಿನಲ್ಲಿ ಕನ್ನಡಿಗರ ಓಟು ತೆಗೆದುಕೊಳ್ಳುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ನನ್ನ ಸರ್ಟಿಫಿಕೇಟ್ ಕೇಳುವ ಹಕ್ಕಿಲ್ಲ. ಮೊದಲು ಮೋದಿ ಅವರ ಸರ್ಟಿಫಿಕೇಟ್ ಕೇಳಲಿ' ಎಂದು ಮಧು ಬಂಗಾರಪ್ಪ ಸವಾಲು ಹಾಕಿದರು.

'ಬೆಂಗಳೂರಿನ ಜನರು ಅತಿ ಹೆಚ್ಚು ತೆರಿಗೆ ಕಟ್ಟುತ್ತಿದ್ದಾರೆ. ನಮ್ಮ ಮತದಾರರ ಪಾಲಿನ ತೆರಿಗೆ ಹಣ ವಾಪಸ್ ಕೊಡಿ ಎಂದು ಮೋದಿ ಅವರನ್ನು ಕೇಳದ ಅವರಿಗೆ ಕೇಂದ್ರ ಸಚಿವರಾಗುವ ಯೋಗ್ಯತೆ ಇಲ್ಲ. ನಾವು ತೃತೀಯ ಭಾಷೆ ಕೈಬಿಟ್ಟಿಲ್ಲ. ಹಿಂದಿ ಶಿಕ್ಷಕರು ಮಕ್ಕಳಿಗೆ ಹಿಂದಿ ಕಲಿಸುತ್ತಾರೆ. ಶೋಭಾ, ಸಿ.ಟಿ.ರವಿ ಅವರು ಮಾತನಾಡುವ ಹಿಂದಿ ಕೇಳಿದವರು, ಅವರ ನಿಘಂಟಿನಿಂದ ಹಿಂದಿಯನ್ನೇ ತೆಗೆಯುತ್ತಾರೆ' ಎಂದು ವ್ಯಂಗ್ಯವಾಡಿದರು.

ಅತಿಥಿ ಶಿಕ್ಷಕರ ಗೌರವಧನ ಹೆಚ್ಚಳಕ್ಕೆ ಕ್ರಮ

ಅತಿಥಿ ಶಿಕ್ಷಕರಿಗೆ ತಿಂಗಳಿಗೆ ₹12 ಸಾವಿರ ನೀಡಿದ್ದು ಅದನ್ನು ಹೆಚ್ಚಿಸಲು ಕ್ರಮಕೈಗೊಳ್ಳಲಾಗುವುದು ಎಂದು ಮಧು ಬಂಗಾರಪ್ಪ ತಿಳಿಸಿದರು.

ಸೋಶಿಯಲ್ ಮೀಡಿಯಾ ಈ ದೇಶದ ದೊಡ್ಡ ವಿಲನ್. 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳನ್ನು ನಿರ್ಬಂಧಿಸಲು ಕಾಯ್ದೆ ಜಾರಿಗೊಳಿಸಲಾಗುವುದು ಎಂದರು.

'ಈಗ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸುವ ಮೂಲಕ ಒಂದೇ ಕಡೆ ಪಿಯುಸಿವರೆಗೆ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದೇವೆ. ಸರ್ಕಾರಿ ಶಾಲಾ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗಬೇಕು ಎಂಬ ಉದ್ದೇಶದಿಂದ ಶೈಕ್ಷಣಿಕ ವರ್ಷದ ಆರಂಭದಲ್ಲೇ 51 ಸಾವಿರ ಅತಿಥಿ ಶಿಕ್ಷಕರನ್ನು ನೇಮಕ ಮಾಡಲಾಯಿತು' ಎಂದು ಹೇಳಿದರು.

ದಾಖಲಾತಿ ಹೆಚ್ಚಳಕ್ಕೆ 'ಶಾಲೆ ಚಲೋ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿಸಲು ಶಾಲಾ ಚಲೋ ಎಂಬ ದಾಖಲಾತಿ ಆಂದೋಲನವನ್ನು ರಾಜ್ಯ ವ್ಯಾಪಿ ಆರಂಭಿಸಲು ಶಾಲಾ ಶಿಕ್ಷಣ ಇಲಾಖೆ ಮುಂದಾಗಿದೆ.

ಕಳೆದ ಕೆಲವು ವರ್ಷಗಳಿಂದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ದಾಖಲಾತಿಯಲ್ಲಿ ಕುಸಿತ ಕಂಡು ಬಂದಿದೆ. ಸಾರ್ವಜನಿಕ ವಿಶ್ವಾಸವನ್ನು ಮತ್ತೆ ಕಟ್ಟಿಕೊಡುವುದು ಹಾಗೂ ಗುಣಮಟ್ಟದ ಶಿಕ್ಷಣ ಬಲಪಡಿಸುವ ಉದ್ದೇಶದಿಂದ ಈ ಆಂದೋಲನ ನಡೆ- ಸಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಈ ಕಾರಣದಿಂದ 2026–27ನೇ ಶೈಕ್ಷಣಿಕ ಸಾಲಿನಲ್ಲಿ ದಾಖಲಾತಿ ಹೆಚ್ಚಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮೊದಲಿಗೆ ಯುಡಿಐಎಸ್‌ಇ + ಆಧಾರದ ಮೇಲೆ ಕಡಿಮೆ ದಾಖಲಾತಿಯ ಶಾಲೆಗಳ ಪಟ್ಟಿ ಅಂತಿಮಗೊಳಿಸಲಾಗುವುದು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಟ್ರ್ಯಾಕಿಂಗ್ ವ್ಯವಸ್ಥೆ ಜಾರಿಗೊಳಿಸಲಾಗುತ್ತದೆ ಎಂದು ಹೇಳಿದೆ.

'ಶಾಲಾ ಚಲೋ' ಜತೆಗೆ 'ಪ್ರವೇಶೋತ್ಸವ' ಹಮ್ಮಿ- ಕೊಳ್ಳಲಾಗುವುದು. ಎಸ್‌ಡಿಎಂಸಿ, ಪಂಚಾಯಿತಿ, ಅಂಗನವಾಡಿ ಸಿಬ್ಬಂದಿ ಹಾಗೂ ಹಳೆಯ ವಿದ್ಯಾರ್ಥಿಗಳ ಸಹಭಾಗಿತ್ವ ಪಡೆಯಲಾಗುವುದು. ಪೋಷಕರಲ್ಲಿ ಸರ್ಕಾರಿ ಶಾಲೆಗಳ ಮೇಲಿನ ವಿಶ್ವಾಸವನ್ನು ಹೆಚ್ಚಿಸಲು ತೆರೆದ ಮನೆ ದಿನ, ಕಲಿಕಾ ಫಲಿತಾಂಶ ಪ್ರದರ್ಶನ, ಫಲಿತಾಂಶ ಫಲಕ ಹಾಗೂ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳ ಕುರಿತು ಪ್ರಚಾರದಂತಹ ಕ್ರಮಗಳನ್ನು ಜಾರಿಗೊಳಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಪ್ರಮುಖ ಚಟುವಟಿಕೆ

- ಗುಣಮಟ್ಟದ ಶಿಕ್ಷಣ ಸುಧಾರಣೆಗೆ ಎಫ್‌ಎಲ್‌ಎನ್ ಕಾರ್ಯಕ್ರಮ ಜಾರಿಗೊಳಿಸಲಾಗುವುದು. ಶಿಕ್ಷಕರ ಸಾಮರ್ಥ್ಯವೃದ್ಧಿ ಹಾಗೂ ಹೊಣೆಗಾರಿಕೆ ವ್ಯವಸ್ಥೆ ಬಲಪಡಿಸಲಾಗುವುದು. ಮೂಲಸೌಕರ್ಯ ಸುಧಾರಣೆಗಾಗಿ ಎಲ್ಲಾ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಖಚಿತಪಡಿಸಿ, ಮಕ್ಕಳ ಸ್ನೇಹಿ ವಾತಾವರಣ ನಿರ್ಮಿಸಲಾಗುವುದು.
- ವಿದ್ಯಾರ್ಥಿಗಳನ್ನು ಆಕರ್ಷಿಸಲು ಕ್ರೀಡೆ, ಸಾಂಸ್ಕೃತಿಕ ಹಾಗೂ ವಿಜ್ಞಾನದ ಚಟುವಟಿಕೆಗಳನ್ನು ವಿಸ್ತರಿಸಲಾಗುತ್ತಿದೆ. ಜನ್ಮದಿನ ಆಚರಣೆ, ಸಮವಸ್ತ್ರ ವಿತರಣೆ, ಚಟುವಟಿಕೆ ದಿನಗಳ ಮೂಲಕ ಮಕ್ಕಳಲ್ಲಿ ಶಾಲೆಯ ಮೇಲಿನ ಆಸಕ್ತಿ ಹೆಚ್ಚಿಸಲಾಗುವುದು.
- ಶಾಲೆ ಬಿಟ್ಟ ಮಕ್ಕಳನ್ನು ಮನೆ ಮನೆಗೆ ಭೇಟಿ ನೀಡಿ ಪುನಃ ಶಾಲೆಗೆ ಕರೆತರಲು ಬ್ರಿಡ್ಜ್ ಕೋರ್ಸ್‌ಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಸರ್ಕಾರಿ ಶಾಲೆಗಳ ಸಾಧನೆಗಳನ್ನು ಪ್ರಚಾರ ಮಾಡಲಾಗುವುದು.
- ಶಿಕ್ಷಕರನ್ನು ದಾಖಲಾತಿ ರಾಯಭಾರಿಗಳನ್ನಾಗಿ ನೇಮಿಸಿ, ದಾಖಲಾತಿ ಗುರಿ ಸಾಧನೆಗೆ ಜವಾಬ್ದಾರಿಗಳನ್ನು ನೀಡಲಾಗುತ್ತಿದೆ. ಜಿಲ್ಲಾ ಹಂತದಲ್ಲಿ ಪ್ರತಿ ತಿಂಗಳ ಪ್ರಗತಿ ಪರಿಶೀಲನೆ, ವಿಭಾಗ ಮಟ್ಟದಲ್ಲಿ ನಿಯಮಿತ ವಿಮರ್ಶಾ ಸಭೆ ನಡೆಯಲಿವೆ.

ತಮಿಳುನಾಡು: ಟಿವಿಕೆಯತ್ತ ಎಲ್ಲರ ಚಿತ್ತ

• ಬಿ.ಎಸ್.ಅರುಣ್

ದೇಶದ ಯಾವುದೇ ರಾಜ್ಯಕ್ಕೆ ಹೋಲಿಸಿದರೆ ತಮಿಳುನಾಡಿನ ರಾಜಕೀಯ ಬಹಳ ಭಿನ್ನ. ಇಲ್ಲಿ ಪ್ರಾದೇಶಿಕ ಪಕ್ಷಗಳದ್ದೇ ಕಾರುಬಾರು. ತಮ್ಮ ಮೈತ್ರಿಕೂಟದಲ್ಲಿ ರಾಷ್ಟ್ರೀಯ ಪಕ್ಷಗಳು ಎಷ್ಟು ಸೀಟುಗಳಲ್ಲಿ ಸ್ಪರ್ಧಿಸಬೇಕೆಂದು ಈ ಪಕ್ಷಗಳು ನಿರ್ಧರಿಸುತ್ತವೆ. 1967ರಲ್ಲಿ ಕಾಂಗ್ರೆಸ್‌ನ ಆಡಳಿತ ಕೊನೆಗೊಂಡ ನಂತರ ಇಲ್ಲಿಯವರೆಗೂ ಯಾವುದೇ ರಾಷ್ಟ್ರೀಯ ಪಕ್ಷ ಇಲ್ಲಿ ಅಧಿಕಾರಕ್ಕೆ ಬಂದಿಲ್ಲ ಮತ್ತು ಸದ್ಯದಲ್ಲಿ ಬರುವ ಸೂಚನೆಯೂ ಇಲ್ಲವೇ ಇಲ್ಲ.

ಏಪ್ರಿಲ್ 23ರಂದು ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರಾರೂಢ ಡಿಎಂಕೆ ಪಕ್ಷದ ನೇತೃತ್ವದ 'ಸೆಕ್ಯುಲರ್ ಪ್ರೋಗ್ರೆಸ್ಸಿವ್ ಅಲಯನ್ಸ್' (ಎಸ್‌ಪಿಎ) ಮತ್ತು ಎಐಎಡಿಎಂಕೆ ನೇತೃತ್ವದ 'ನ್ಯಾಷನಲ್ ಡೆಮಾಕ್ರಟಿಕ್ ಅಲಯನ್ಸ್' (ಎನ್‌ಡಿಎ) ನಡುವೆ ತೀವ್ರ ಹಣಾಹಣಿ ನಡೆಯಲಿದೆ. ಆದರೂ, ಈ ಬಾರಿ ಹೊಸದಾಗಿ ಪಕ್ಷ ಕಟ್ಟಿ ಕಣಕ್ಕೆ ಧುಮುಕಿರುವ ತಮಿಳು ಸಿನಿಮಾ ನಟ ವಿಜಯ್ ರಾಜ್ಯದ ರಾಜಕೀಯ ರಂಗದಲ್ಲಿ ಬಿರುಗಾಳಿ ಎಬ್ಬಿಸಿದ್ದಾರೆ. ರಾಜ್ಯದ ಎಲ್ಲಾ 234 ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಅವರ ಟಿವಿಕೆ ಪಕ್ಷ ಅಧಿಕಾರಕ್ಕೆ ಬರುವುದೋ ಅಥವಾ ಎಷ್ಟು ಸೀಟು ಗೆಲ್ಲಬಹುದು, ಯಾವ ಮೈತ್ರಿಕೂಟಕ್ಕೆ ಹಾನಿ ಉಂಟುಮಾಡಬಹುದು ಎನ್ನುವುದು ಕುತೂಹಲಕಾರಿ ಅಂಶವಾಗಿದೆ.

ಇದಲ್ಲದೆ ಒಂದೆರಡು ಚಿಕ್ಕ ಪಕ್ಷಗಳು ಸ್ಪರ್ಧೆಯಲ್ಲಿವೆ. ತೀವ್ರ ಪೈಪೋಟಿ ಇರುವ ಕ್ಷೇತ್ರಗಳಲ್ಲಿ ಈ ಪಕ್ಷಗಳು ಕೂಡ ನಿರ್ಣಾಯಕ ಪಾತ್ರ ವಹಿಸಬಹುದು. ಒಟ್ಟು 24 ಪಕ್ಷಗಳಿರುವ ಎಸ್‌ಪಿಎ ಮೈತ್ರಿಕೂಟದಲ್ಲಿ ಡಿಎಂಕೆ 164 ಕ್ಷೇತ್ರಗಳಲ್ಲಿ ಕಣಕ್ಕಿಳಿದಿದ್ದರೆ, ಕಾಂಗ್ರೆಸ್‌ಗೆ 28 ಸ್ಥಾನ ಕೊಟ್ಟಿದೆ. ಎನ್‌ಡಿಎ ಮೈತ್ರಿಕೂಟದಲ್ಲಿ ಎಐಎಡಿಎಂಕೆ 169 ಸ್ಥಾನಗಳಲ್ಲಿ ಮತ್ತು ಬಿಜೆಪಿ 27ರಲ್ಲಿ ಹೋರಾಡಲಿವೆ. ಇಲ್ಲಿ ಗಮನ ಸೆಳೆಯುವ ಅಂಶವೆಂದರೆ 121 ಸೀಟುಗಳಲ್ಲಿ ಕಟ್ಟಾ ವಿರೋಧಿಗಳಾದ ಡಿಎಂಕೆ ಹಾಗೂ ಎಐಎಡಿಎಂಕೆ ನೇರ ಎದುರಾಳಿಗಳಾಗಿರುವುದು.

ಅನೇಕರ ಪ್ರಕಾರ ಈ ಚುನಾವಣೆ ಹಿಂದಿನ ಬೇರೆ ಯಾವುದೇ ಮತ ಸಮರಕ್ಕಿಂತ ವಿಭಿನ್ನ. ಏಕೆಂದರೆ, ಚೊಚ್ಚಲ(12.51 ಲಕ್ಷ) ಮತ್ತು ಯುವ (1.18 ಕೋಟಿ) ಮತದಾರರು ಚುನಾವಣೆಯ ದಿಕ್ಕನ್ನು ಬದಲಿಸಬಲ್ಲರು ಎಂದು ಹೇಳಲಾಗುತ್ತಿದೆ. ಭಾರೀ ಸಂಖ್ಯೆಯಲ್ಲಿ ಯುವ ಸಮುದಾಯವನ್ನು ಆಕರ್ಷಿಸಿರುವ ವಿಜಯ್‌ಗೆ ಈ ಮತದಾರರು ಮತ ನೀಡುತ್ತಾರಾ ಎಂದು ಕಾದುನೋಡಬೇಕಿದೆ.

ಪುರುಷರಿಗಿಂತ 12 ಲಕ್ಷಕ್ಕೂ ಹೆಚ್ಚು ಸಂಖ್ಯೆಯಲ್ಲಿರುವ ಮಹಿಳಾ ಮತದಾರರು (ಇವರು ಒಟ್ಟು ಮತದಾರರಲ್ಲಿ ಶೇ.51 ರಷ್ಟಿದ್ದಾರೆಂದು ಅಂದಾಜು) ಈ ಬಾರಿ ಮತ್ತೆ ನಿರ್ಣಾಯಕ ಪಾತ್ರ ವಹಿಸುವುದರಲ್ಲಿ ಅನುಮಾನವಿಲ್ಲ. ಈ ಕಾರಣದಿಂದಲೇ ಅವರ ಮತ ಸೆಳೆಯಲು ಎಲ್ಲಾ ಪಕ್ಷಗಳೂ ಭರಪೂರ ಯೋಜನೆಗಳನ್ನು ಘೋಷಿಸಿವೆ.

2021ರ ವಿಧಾನಸಭಾ ಚುನಾವಣೆಯಲ್ಲಿ ಒಟ್ಟು 159 ಸ್ಥಾನ ಗಳಿಸಿದ ಎಸ್‌ಪಿಎ ಬಣ (ಡಿಎಂಕೆ 133, ಕಾಂಗ್ರೆಸ್ 18) ಭಾರೀ ಜಯಗಳಿಸಿತು. ಎನ್‌ಡಿಎ 75 ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು (ಎಐಎಡಿಎಂಕೆ 66, ಪಿಎಂಕೆ 5, ಬಿಜೆಪಿ 4). ಡಿಎಂಕೆ ಗುಂಪು ಶೇ. 45.38 ಮತಗಳಿಸಿದರೆ, ಎಐಎಡಿಎಂಕೆ ತಂಡಕ್ಕೆ ಶೇ. 39.71 ಮತ ಬಂದಿತ್ತು.

ರಾಜ್ಯದ ಎಲ್ಲಾ 39 ಕ್ಷೇತ್ರಗಳಲ್ಲಿ 2024ರ ಲೋಕಸಭೆ ಚುನಾವಣೆಯಲ್ಲಿ ಸೋತ ಎಐಎಡಿಎಂಕೆ ಬಣ ಭಾರಿ ಹಿನ್ನಡೆ ಅನುಭವಿಸಿತು. ಎಲ್ಲಾ ಸ್ಥಾನಗಳಲ್ಲಿ ಗೆದ್ದ ಡಿಎಂಕೆ ಕೂಟ ಶೇ 46.97 ಮತಗಳಿಸಿದರೆ, ಎಐಎಡಿಎಂಕೆ ಗುಂಪಿಗೆ ಶೇ 23.05ಮತ್ತು ಎನ್‌ಡಿಎಗೆ ಶೇ 18.28 ಮತಗಳು ಬಂದಿದ್ದವು. ಕಳೆದ ಲೋಕಸಭೆ ಚುನಾವಣೆಯಲ್ಲಿ ಶೇ 8ರಷ್ಟು ಮತ ಪಡೆದಿದ್ದ ಎನ್‌ಟಿಕೆ ಪಕ್ಷದ ಸೀಮನ್ ಇತರರ ಮತ ಕಸಿಯಬಹುದೆಂದು ನಿರೀಕ್ಷಿಸಲಾಗಿದೆ. ಜಯಲಲಿತಾ ಆಪ್ತರಾಗಿದ್ದ ಶಶಿಕಲಾ ಮತ್ತು ಅವರ ಸಂಬಂಧಿ ಟಿಟಿವಿ ದಿನಕರನ್ ಅವರ ಪಕ್ಷಗಳೂ ಕಣದಲ್ಲಿವೆ.

ತನ್ನ ಕಾರ್ಯಕರ್ತರ ಪಡೆಯಿಂದ ರಾಜ್ಯಾದ್ಯಂತ ಬೂತ್ ಮಟ್ಟದ ಉತ್ತಮ ನಿರ್ವಹಣೆ ಮತ್ತು ಬಲಿಷ್ಠ ಪಕ್ಷ ಸಂಘಟನೆ ಹೊಂದಿರುವ ಡಿಎಂಕೆ ಸತತ ಎರಡನೇ ಬಾರಿಗೆ ಪಟ್ಟಕ್ಕೇರುವ ಆಸೆಯಿಂದ ಎದುರು ನೋಡುತ್ತಿದೆ. ಇತ್ತೀಚಿನ ದಶಕಗಳಲ್ಲಿ ಯಾವುದೇ ಪಕ್ಷ/ಕೂಟ ಸತತ ಎರಡನೇ ಬಾರಿಗೆ ಗೆದ್ದಿಲ್ಲ. ಮುಖ್ಯಮಂತ್ರಿ ಸ್ಟಾಲಿನ್ ಜನಪ್ರಿಯತೆ, ತನ್ನ ಸರಕಾರದ ಯೋಜನೆಗಳು, ದ್ರಾವಿಡ ಸಂಸ್ಕೃತಿಗೆ ಒತ್ತು, ಜಾತ್ಯತೀತತೆ, ಫೆಡರಲ್ ಹಕ್ಕುಗಳು ಮುಂತಾದವುಗಳನ್ನು ಡಿಎಂಕೆ ಚುನಾವಣೆಯ ಮುಖ್ಯ ಅಂಶಗಳನ್ನಾಗಿಸಿದೆ. ಆದರೆ ಡಿಎಂಕೆ ಪಕ್ಷ ವಿರೋಧಿ ಅಲೆಯನ್ನು ಕೂಡ ಎದುರಿಸುತ್ತಿದೆ. ಹಣದುಬ್ಬರ, ಸರಕಾರದ ಮೇಲಿನ ರೈತರ ಸಿಟ್ಟು ಪಕ್ಷಕ್ಕೆ ತಲೆನೋವಾಗಿದೆ.

2016ರ ನಂತರ ಯಾವುದೇ ಚುನಾವಣೆಯನ್ನು ಗೆಲ್ಲದ ಎಐಎಡಿಎಂಕೆ ಮತ್ತು ಅದರ ನಾಯಕ, ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಪಳನಿಸ್ವಾಮಿಯವರಿಗೆ ಈ ಕದನ 'ಮಾಡು ಇಲ್ಲವೆ ಮಡಿ' ಎಂಬಂತಾಗಿದೆ. ನಾಯಕಿ ಮತ್ತು ಮಾಜಿ ಮುಖ್ಯಮಂತ್ರಿ ಜಯಲಲಿತ ಸಾವಿನ ನಂತರ ಜನರ ಜೊತೆಗಿನ ಪಕ್ಷದ ಭಾವನಾತ್ಮಕ ಸಂಬಂಧ ಕಡಿದು ಹೋಗಿದೆ. ಆದರೂ ರಾಜ್ಯದಲ್ಲಿ ಅದರಲ್ಲೂ ಪಶ್ಚಿಮ ಹಾಗೂ ದಕ್ಷಿಣ ತಮಿಳುನಾಡಿನಲ್ಲಿ ಉತ್ತಮ ಕೇಡರ್ ಹೊಂದಿರುವ ಈ ಪಕ್ಷದ ಮತಗಳಿಕೆ ಗಣನೀಯವಾಗಿ ಕಡಿಮೆಯಾಗಿಲ್ಲ. ಜೊತೆಗೆ ಬಿಜೆಪಿ ಮತ್ತಿತರ ಪಕ್ಷಗಳ ಮೈತ್ರಿ ತನ್ನ ಪ್ರಭಾವವನ್ನು ವಿಸ್ತರಿಸಲು ಮತ್ತು ಪಕ್ಷಕ್ಕೆ ಆರ್ಥಿಕ ಸಂಪನ್ಮೂಲ ಹೆಚ್ಚಿಸುವುದರಲ್ಲಿ ಸಹಾಯವಾಗುತ್ತದೆ.

ವಿಶ್ಲೇಷಣೆ

ತಮಿಳುನಾಡು ಜನತೆ ಈ ಚುನಾವಣೆಯಲ್ಲಿ ಎದುರು ನೋಡುತ್ತಿರುವುದು ನಟ ಜೋಸೆಫ್ ವಿಜಯ್‌ರವರ ಪ್ರಭಾವ ಎಷ್ಟರ ಮಟ್ಟಿಗೆ ಆಗುತ್ತದೆಂದು. ಇದುವರೆಗೆ ಭಾರತದಲ್ಲಿ ಎಂಜಿಆರ್ ಮತ್ತು ಎನ್‌ಟಿಆರ್ ಮಾತ್ರ ಮೊದಲ ಪ್ರಯತ್ನದಲ್ಲೆ ಮುಖ್ಯಮಂತ್ರಿ ಆದವರು. ನಗರ ಪ್ರದೇಶಗಳಲ್ಲಿ ಸಾಕಷ್ಟು ಜನಪ್ರಿಯತೆ ಗಳಿಸಿರುವ ವಿಜಯ್ ಅವರು 15ರಿಂದ 40ರವರೆಗಿನ ವಯಸ್ಸಿನ ಅಭಿಮಾನಿ ಬಳಗವನ್ನು ಹೊಂದಿದ್ದಾರೆ. ವಿಜಯ್‌ಗೆ ಹೆಚ್ಚಾಗಿ ಅಲ್ಪಸಂಖ್ಯಾತರ ಅದರಲ್ಲೂ ಕ್ರೈಸ್ತ ಮತದಾರರ ಮತಗಳು ಬೀಳುತ್ತವೆಂದು ಅಂದಾಜು ಮಾಡಲಾಗಿದೆ. ಇದನ್ನು ತಡೆಯಲು ಸ್ಟಾಲಿನ್ ಅವರು ಈ ಎರಡೂ ಸಮುದಾಯಗಳ ನಾಯಕರ ಸಂಪರ್ಕದಲ್ಲಿದ್ದಾರೆ ಎನ್ನಲಾಗುತ್ತಿದೆ.

ಕೆಲವರ ಪ್ರಕಾರ, ವಿಜಯ್‌ರ ಚಿತ್ತ ಈ ಬಾರಿಗಿಂತ 2029ರ ಲೋಕಸಭೆ ಮತ್ತು 2031ರ ವಿಧಾನಸಭಾ ಚುನಾವಣೆಯತ್ತ ಇದೆ. ಟಿವಿಕೆಯ ದೌರ್ಬಲ್ಯವೇನೆಂದರೆ ಸರಿಯಾದ ಕಾರ್ಯಕರ್ತರ ಪಡೆ, ಕೆಳಮಟ್ಟದ ಸಂಘಟನೆ, ಬೂತ್ ಮಟ್ಟದ ನಿರ್ವಹಣೆ, ವಿಜಯ್ ಬಿಟ್ಟರೆ ಬೇರೆ ಯಾರೂ ಮತ ಸೆಳೆಯುವ ನಾಯಕ ಅಥವಾ ನಿರ್ದಿಷ್ಟ ಸಿದ್ಧಾಂತ ಇಲ್ಲದಿರುವುದು. ತಮ್ಮ ಭಾಷಣಗಳಲ್ಲಿ ಡಿಎಂಕೆ ಸರಕಾರ ರಾಜ್ಯವನ್ನು ದಿವಾಳಿಯತ್ತ ದೂಡುತ್ತಿದೆ ಎಂದು ದೂರುತ್ತಿದ್ದ ವಿಜಯ್ ಈಗ ಬಜೆಟ್ ಭರಿಸಲಾರದಷ್ಟು ವೆಚ್ಚದ ಘೋಷಣೆಗಳನ್ನು ಪ್ರಣಾಳಿಕೆಯಲ್ಲಿ ಮಾಡಿದ್ದಾರೆ.

ಈ ಬಾರಿಯ ಕಾಳಗದಲ್ಲಿ ಒಂದು ರೀತಿಯ ಅನಿಶ್ಚಿತತೆಯನ್ನು ತಂದಿರುವ ವಿಜಯ್ ಸ್ಪರ್ಧೆ, ಅವರು ವಿಜಯಿಯಾಗುತ್ತಾರೊ, ಕಿಂಗ್ ಮೇಕರ್ ಆಗುತ್ತಾರೊ ಅಥವಾ ಕೇವಲ ಇತರರ ಮತ ಕಸಿಯುತ್ತಾರೊ (ವೋಟ್ ಕಟರ್) ನೋಡಬೇಕು. ಮೇಲ್ನೋಟಕ್ಕೆ 40 ವಯಸ್ಸಿನವರೆಗಿನ ಮತದಾರರು ವಿಜಯ್ ಅಭಿಮಾನಿ ಬಳಗ ಆಗಿರುವುದರಿಂದ ಮತ್ತು ಇವರು ಹೆಚ್ಚಾಗಿ ಎಐಎಡಿಎಂಕೆ-ಬಿಜೆಪಿ ಮತದಾರರಾಗಿರುವುದರಿಂದ, ಈ ಎರಡು ಪಕ್ಷಗಳ ಮತಗಳೇ ಹೆಚ್ಚಾಗಿ ಟಿವಿಕೆಗೆ ಹೋಗಬಹುದು ಎನ್ನಲಾಗಿದೆ.

ಇನ್ನು ಜಾತಿ ಲೆಕ್ಕಾಚಾರಕ್ಕೆ ಬಂದರೆ, ರಾಜ್ಯದ ಮಧ್ಯ ಮತ್ತು ದಕ್ಷಿಣ ಭಾಗದಲ್ಲಿ ದೇವರ್ ಸಮುದಾಯ ಎಐಎಡಿಎಂಕೆಗೆ, ಉತ್ತರದಲ್ಲಿ ವಣ್ಣಿಯಾರ್ ಎಐಎಡಿಎಂಕೆ-ಪಿಎಂಕೆಗೆ ಮತ್ತು ಪಶ್ಚಿಮ(ಕೊಂಗು)ದಲ್ಲಿ ಗೌಂಡರ್ ಸಮುದಾಯ ಎಐಎಡಿಎಂಕೆ-ಬಿಜೆಪಿಗೆ ಹೆಚ್ಚಾಗಿ ಒಲವು ತೋರಿಸುತ್ತಾರೆ. ಆದರೆ ಡಿಎಂಕೆ ಈ ಎಲ್ಲಾ ಭಾಗಗಳಲ್ಲೂ ಮತ್ತು ಸಮುದಾಯಗಳಲ್ಲೂ ತನ್ನದೆ ಆದ ಮತಬ್ಯಾಂಕ್ ಹೊಂದಿದೆ.

ಚೆನ್ನೈನಲ್ಲಿ ಡಿಎಂಕೆ ಅತಿ ಬಲಶಾಲಿ. ಟಿವಿಕೆ ಕೂಡ ಚೆನ್ನೈ ಸೇರಿದಂತೆ ಅನೇಕ ಭಾಗಗಳಲ್ಲಿ ಮತ್ತು ಸಮುದಾಯಗಳಲ್ಲಿ ತನ್ನ ಬಲ ತೋರಿಸಲು ಕಾತುರವಾಗಿದೆ. ದಲಿತ ಸಮುದಾಯ ಸರಿಸುಮಾರು ಎಲ್ಲಾ ಪ್ರದೇಶಗಳಲ್ಲೂ ವ್ಯಾಪಕವಾಗಿ ಹರಡಿದೆ. ಒಟ್ಟಿನಲ್ಲಿ ಈ ಚುನಾವಣೆಯ ಮುಖ್ಯ ಆಕರ್ಷಣೆ ನಟ ವಿಜಯ್. ಆದರೆ ಡಿಎಂಕೆ ಜಯದ ಆತ್ಮವಿಶ್ವಾಸದಲ್ಲಿದೆ.

(ಲೇಖಕ: ಪತ್ರಕರ್ತ)

ರಾಜ್ಯಪಾಲ ಸೈಯದ್ ಅತಾ ಹಸನೈನ್ ಅವರು ಸಾಮ್ರಾಟ್ ಚೌಧರಿ ಅವರಿಗೆ ಲೋಕ ಭವನದಲ್ಲಿ ಪ್ರಮಾಣವಚನ ಬೋಧಿಸಿದರು — ಪಿಟಿಐ ಚಿತ್ರ

ಮುಖ್ಯಮಂತ್ರಿಯಾಗಿ ಸಾಮ್ರಾಟ್ ಪ್ರಮಾಣ

ಪಟ್ನಾ (ಪಿಟಿಐ): ಬಿಹಾರದ 24ನೇ ಮುಖ್ಯಮಂತ್ರಿಯಾಗಿ ಸಾಮ್ರಾಟ್ ಚೌಧರಿ ಅವರು ಬುಧವಾರ ಪ್ರಮಾಣವಚನ ಸ್ವೀಕರಿಸಿದರು.

ಈ ಮೂಲಕ ಮೊದಲ ಬಾರಿಗೆ ಬಿಜೆಪಿಯ ನಾಯಕರೊಬ್ಬರು ರಾಜ್ಯದ ಅಧಿಕಾರದ ಗದ್ದುಗೆ ಹಿಡಿದಿದ್ದಾರೆ. ರಾಜ್ಯಪಾಲರಾದ ಸೈಯದ್ ಅತಾ ಹಸನೈನ್ ಅವರು ಸಾಮ್ರಾಟ್(57) ಅವರಿಗೆ ಲೋಕ ಭವನದಲ್ಲಿ ಪ್ರಮಾಣವಚನ ಬೋಧಿಸಿದರು.

ಇದೇ ವೇಳೆ, ಜೆಡಿಯು ನಾಯಕರಾದ ಬಿಜೇಂದ್ರ ಪ್ರಸಾದ್ ಯಾದವ್ ಮತ್ತು ವಿಜಯ್ ಕುಮಾರ್ ಚೌಧರಿ ಪ್ರಮಾಣವಚನ ಸ್ವೀಕರಿಸಿದರು. ಈ ಇಬ್ಬರಿಗೂ ಉಪ ಮುಖ್ಯಮಂತ್ರಿ ಸ್ಥಾನ ಕಲ್ಪಿಸಲಾಗಿದೆ.

ಜೆಡಿಯು ಮುಖ್ಯಸ್ಥ, ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್, ಕೇಂದ್ರ ಸಚಿವರಾದ ಜೆ.ಪಿ ನಡ್ಡಾ ಮತ್ತು ಚಿರಾಗ್ ಪಾಸ್ವಾನ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟ ಅಧಿಕಾರದಲ್ಲಿದ್ದು, ಜೆಡಿಯು ಮುಖ್ಯಸ್ಥ ನಿತೀಶ್ ಮುಖ್ಯಮಂತ್ರಿಯಾಗಿದ್ದಾಗ ಸಾಮ್ರಾಟ್ ಚೌಧರಿ ಮತ್ತು ಬಿಜೆಪಿಯ ಇನ್ನೊಬ್ಬ ನಾಯಕ ವಿಜಯ್ ಕುಮಾರ್ ಸಿನ್ಹಾ ಅವರು ಉಪಮುಖ್ಯಮಂತ್ರಿಗಳಾಗಿದ್ದರು. ಈ ಬಾರಿ ಉಪಮುಖ್ಯಮಂತ್ರಿ ಸ್ಥಾನ ಜೆಡಿಯು ಪಾಲಾಗಿದೆ.

'ಪ್ರಧಾನಿ ನರೇಂದ್ರ ಮೋದಿ ಮತ್ತು ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಮಾದರಿಯ ಆಡಳಿತವು ಬಿಹಾರದಲ್ಲಿ ಮುಂದುವರಿಯಲಿದೆ' ಎಂದು ಸಾಮ್ರಾಟ್ ಹೇಳಿದರು.

ಸಾಮ್ರಾಟ್ ಚೌಧರಿ ಅವರು ಗೃಹ, ಕಂದಾಯ ಸೇರಿದಂತೆ 30 ಖಾತೆಗಳನ್ನು ತಮ್ಮ ಬಳಿ ಇಟ್ಟುಕೊಂಡಿದ್ದಾರೆ.

ಸಚಿವ ಸಂಪುಟ ಶೀಘ್ರ ವಿಸ್ತರಣೆ

ಪ್ರಸ್ತುತ ಸಚಿವ ಸಂಪುಟದಲ್ಲಿ ವಿವಿಧ ಜಾತಿ–ಸಮುದಾಯಗಳ ಪ್ರಾತಿನಿಧ್ಯ ಇಲ್ಲದಿರುವುದರಿಂದ. ಶೀಘ್ರದಲ್ಲಿ ಸಚಿವ ಸಂಪುಟ ವಿಸ್ತರಣೆಯಾಗಲಿದೆ.

ಮುಖ್ಯಮಂತ್ರಿ ಸಾಮ್ರಾಟ್ ಅವರು ಪ್ರಬಲ ಹಿಂದುಳಿದ ವರ್ಗವಾಗಿರುವ ಕೊಯೇರಿ ಸಮುದಾಯದವರಾಗಿದ್ದು, ಅವರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲು ಇದು ಪ್ರಮುಖ ಮಾನದಂಡವಾಗಿತ್ತು ಎಂದು ಮೂಲಗಳು ತಿಳಿಸಿವೆ.

ಸಿಬಿಎಸ್‌ಇ 10ನೇ ತರಗತಿ ಶೇ 93.7ರಷ್ಟು ಪಾಸ್

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 10ನೇ ತರಗತಿಯ ಪರೀಕ್ಷಾ ಫಲಿತಾಂಶವನ್ನು ಬುಧವಾರ ಪ್ರಕಟಿಸಿದ್ದು, ಒಟ್ಟಾರೆ ಶೇ 93.70ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಕಳೆದ ವರ್ಷ ಶೇ 93.66ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು.

ಈ ವರ್ಷದಿಂದ ಸಿಬಿಎಸ್‌ಇ 10ನೇ ತರಗತಿಗೆ ಎರಡು ಆವೃತ್ತಿಗಳ ಬೋರ್ಡ್ ಪರೀಕ್ಷೆಗಳನ್ನು ಪ್ರಾರಂಭಿಸಿದೆ. ಇದರಲ್ಲಿ ಮೊದಲ ಆವೃತ್ತಿಯ ಪರೀಕ್ಷೆ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿದ್ದು, ಅದರ ಫಲಿತಾಂಶವನ್ನು ಮಂಡಳಿ ಈಗ ಪ್ರಕಟಿಸಿದೆ.

ಬಾಲಕಿಯರ ಮೇಲುಗೈ: ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿದ್ದು, ಶೇ 94.99ರಷ್ಟು ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದಾರೆ. ಇದು ಬಾಲಕರ ತೇರ್ಗಡೆ ಪ್ರಮಾಣಕ್ಕಿಂತ (ಶೇ 92.69) ಶೇ 2.3ರಷ್ಟು ಹೆಚ್ಚಾಗಿದೆ. ಪರೀಕ್ಷೆ ಬರೆದ ಲಿಂಗತ್ವ ಅಲ್ಪಸಂಖ್ಯಾತರ ಪೈಕಿ ಶೇ 87.50 ರಷ್ಟು ಉತ್ತೀರ್ಣರಾಗಿದ್ದಾರೆ.

ಒಟ್ಟಾರೆ 55,368 ವಿದ್ಯಾರ್ಥಿಗಳು ಶೇ 95ಕ್ಕಿಂತ ಹೆಚ್ಚು ಹಾಗೂ 2,21,574 ವಿದ್ಯಾರ್ಥಿಗಳು ಶೇ 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. 1.47 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ವರ್ಷ ಪೂರಕ ಪರೀಕ್ಷೆ (ಕಂಪಾರ್ಟ್‌ಮೆಂಟ್) ವಿಭಾಗದಲ್ಲಿ ಅರ್ಹತೆ ಪಡೆದಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ವರ್ಷ 1.6 ಕೋಟಿ ಉತ್ತರ ಪುಸ್ತಕಗಳನ್ನು ದಾಖಲೆ ಸಮಯದಲ್ಲಿ ಮೌಲ್ಯಮಾಪನ ಮಾಡಿ ಒಂದು ತಿಂಗಳು ಮುಂಚಿತವಾಗಿ ಫಲಿತಾಂಶ ನೀಡಲಾಗಿದೆ ಎಂದು ಮಂಡಳಿಯ ಪರೀಕ್ಷಾ ನಿಯಂತ್ರಕ ಸಂಯಮ್ ಭಾರದ್ವಾಜ್ ತಿಳಿಸಿದ್ದಾರೆ. ಈ ವರ್ಷ 24.71 ಲಕ್ಷ ವಿದ್ಯಾರ್ಥಿಗಳು 10ನೇ ತರಗತಿ ಪರೀಕ್ಷೆ ಬರೆದಿದ್ದರು. 8,074 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು.

ಕೇಂದ್ರೀಯ ವಿದ್ಯಾಲಯ ಮೇಲುಗೈ

ಕೇಂದ್ರೀಯ ವಿದ್ಯಾಲಯಗಳು (ಶೇ 99.57), ನವೋದಯ ವಿದ್ಯಾಲಯಗಳು (ಶೇ 99.42) ಅತ್ಯುತ್ತಮ ಸಾಧನೆಗೈದಿವೆ. ಖಾಸಗಿ ಶಾಲೆಗಳು ಶೇ 93.77, ಅನುದಾನಿತ ಶಾಲೆಗಳು ಶೇ 91.01ರಷ್ಟು ಫಲಿತಾಂಶ ಪಡೆದಿವೆ.

ವಿಶೇಷ ಅಗತ್ಯವುಳ್ಳ ಮಕ್ಕಳು (ಸಿಡಬ್ಲ್ಯುಎಸ್‌ಎನ್) ಶೇ 96.24 ರಷ್ಟು ಫಲಿತಾಂಶ ಪಡೆದಿದ್ದಾರೆ. ಅವರಲ್ಲಿ 91 ವಿದ್ಯಾರ್ಥಿಗಳು ಶೇ 95ಕ್ಕಿಂತ ಹೆಚ್ಚು ಮತ್ತು 452 ವಿದ್ಯಾರ್ಥಿಗಳು ಶೇ 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ.

ಬೆಂಗಳೂರು ವಲಯ: ಶೇ 98.91ರಷ್ಟು ಉತ್ತೀರ್ಣ

ಒಂದನೇ ಪುಟದಿಂದ...

ಬೆಂಗಳೂರು ವಲಯದಿಂದ ಒಟ್ಟು 1,01,660 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಈ ಪೈಕಿ, 1,00,554 ಮಂದಿ ಉತ್ತೀರ್ಣರಾಗಿದ್ದಾರೆ. ಬಾಲಕಿಯರು ಶೇ 99.43ರಷ್ಟು, ಬಾಲಕರು ಶೇ 98.5ರಷ್ಟು ತೇರ್ಗಡೆ ಆಗಿದ್ದಾರೆ. ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ 54,963 ಬಾಲಕರಲ್ಲಿ 54,864 ಮಂದಿ ಹಾಜರಾಗಿದ್ದು, 54,023 ಮಂದಿ ತೇರ್ಗಡೆಯಾಗಿದ್ದಾರೆ. ನೋಂದಣಿ ಮಾಡಿಕೊಂಡಿದ್ದ 46,843 ಹುಡುಗಿಯರ ಪೈಕಿ, 46,796 ಪರೀಕ್ಷೆಗೆ ಹಾಜರಾಗಿದ್ದು, 46,531 ಉತ್ತೀರ್ಣರಾಗಿದ್ದಾರೆ.

'2025-26ರ ಶೈಕ್ಷಣಿಕ ವರ್ಷದ ಫಲಿತಾಂಶವು ವಿದ್ಯಾರ್ಥಿಗಳು ಸಾಮರ್ಥ್ಯ ಆಧಾರಿತ ಮೌಲ್ಯಮಾಪನಕ್ಕೆ ಉತ್ತಮವಾಗಿ ಸಿದ್ಧರಾಗಿರುವುದಕ್ಕೆ ಸಾಕ್ಷಿ' ಎಂದು ಸಿಬಿಎಸ್‌ಇ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಕರ್ನಾಟಕದ ಹಲವು ಶಾಲೆಗಳು ಶೇ 100 ಫಲಿತಾಂಶ ದಾಖಲಿಸಿವೆ. ಅನೇಕ ವಿದ್ಯಾರ್ಥಿಗಳು ಶೇ 99 ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಬನ್ನೇರುಘಟ್ಟ ರಸ್ತೆಯ ಶ್ರೀ ಚೈತನ್ಯ ಟೆಕ್ನೋ ಶಾಲೆಯ ಕಲ್ವಿ ಜಯೀತಾ 500ಕ್ಕೆ 499 ಅಂಕ ಗಳಿಸಿದ್ದಾರೆ.

'ನಾನು ಪ್ರತಿದಿನ ಐದು ಗಂಟೆ ಓದುತ್ತಿದ್ದೆ. ವರ್ಷವಿಡೀ ಏಕಾಗ್ರತೆಯಿಂದ ಅಭ್ಯಾಸ ಮಾಡಿದ್ದೆ. ಮುಂದೆ ವಿಜ್ಞಾನ ವಿಭಾಗವನ್ನು ಆಯ್ಕೆ ಮಾಡಿಕೊಂಡು ಜೆಇಇ ಪರೀಕ್ಷೆ ಬರೆದು ಐಐಟಿ ಸೇರುವ ಗುರಿ ಹೊಂದಿದ್ದೇನೆ. ಕೃತಕ ಬುದ್ಧಿಮತ್ತೆ, ಕಂಪ್ಯೂಟರ್ ಸೈನ್ಸ್ ಅಥವಾ ಏರೋಸ್ಪೇಸ್ ಎಂಜಿನಿಯರಿಂಗ್ ಕ್ಷೇತ್ರ ಆರಿಸಿಕೊಳ್ಳುವ ಗುರಿ ಹೊಂದಿದ್ದೇನೆ' ಎಂದರು.

ಲೋಕಸಭಾ ಕ್ಷೇತ್ರ ಪುನರ್ ವಿಂಗಡಣೆ: 2011ರ ಜನಗಣತಿ ಆಧಾರದಲ್ಲಿ ಕ್ರಮ

ಉತ್ತರದ ರಾಜ್ಯಗಳಿಗೆ ಲಾಭ– ದಕ್ಷಿಣಕ್ಕೆ ಹೊಡೆತ

ಪ್ರಜಾವಾಣಿ ವಾರ್ತೆ

ನವದೆಹಲಿ: 2011ರ ಜನಗಣತಿ ಆಧಾರದಲ್ಲಿ ಕ್ಷೇತ್ರಗಳ ಪುನರ್ ವಿಂಗಡಣೆ ಪ್ರಕ್ರಿಯೆ ನಡೆದಾಗ ಲೋಕಸಭೆಯಲ್ಲಿ ದಕ್ಷಿಣದ ಐದು ರಾಜ್ಯಗಳ ಪಾಲು ಶೇ 20.1ರಿಂದ ಶೇ 18ಕ್ಕೆ ಕುಸಿಯಲಿದೆ. ಬಿಹಾರ ಹಾಗೂ ಉತ್ತರ ಪ್ರದೇಶ ರಾಜ್ಯಗಳ ಪಾಲು ಶೇ 22.1ರಿಂದ ಶೇ 25.1ಕ್ಕೆ ಏರಿಕೆಯಾಗಲಿದೆ.

ಕೇಂದ್ರ ಸರ್ಕಾರವು ಗುರುವಾರ ಮಂಡಿಸಲಿರುವ 'ಸಂವಿಧಾನ (131ನೇ ತಿದ್ದುಪಡಿ) ಮಸೂದೆ-2026'ರ ಪ್ರಕಾರ, ಸಂಸದರ ಸಂಖ್ಯೆ ಗರಿಷ್ಠ 850ಕ್ಕೆ ಏರಿಕೆಯಾದರೆ, ಲೋಕಸಭೆಯಲ್ಲಿ ರಾಜ್ಯಗಳ ಅನುಪಾತದಲ್ಲಿ ಗಣನೀಯವಾಗಿ ಬದಲಾವಣೆ ಆಗಲಿದೆ. ಉತ್ತರದ ರಾಜ್ಯಗಳಲ್ಲಿ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಹಾಗೂ ಅನುಪಾತದಲ್ಲಿ ಭಾರಿ ಹೆಚ್ಚಳವಾದರೆ, ದಕ್ಷಿಣದ ರಾಜ್ಯಗಳ ಅನುಪಾತ ಕಡಿಮೆ ಆಗಲಿದೆ.

ಈ ಸಂವಿಧಾನ ತಿದ್ದುಪಡಿ ಮಸೂದೆ ಬಗ್ಗೆ ವಿಪಕ್ಷಗಳ ನಾಯಕರು ಹಾಗೂ ದಕ್ಷಿಣದ ರಾಜ್ಯಗಳ ಜನಪ್ರತಿನಿಧಿಗಳು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಏಕೆಂದರೆ, ಶೇ 33 ಮಹಿಳಾ ಕೋಟಾವನ್ನು ಜಾರಿಗೊಳಿಸಲು ಜನಸಂಖ್ಯೆಯನ್ನು ಆಧಾರವಾಗಿ ಪರಿಗಣಿಸುವ ಅಸ್ತಿತ್ವದಲ್ಲಿರುವ ನಿಬಂಧನೆಯಲ್ಲಿ ಯಾವುದೇ ಬದಲಾವಣೆಯನ್ನು ಈ ಮಸೂದೆ ಪ್ರಸ್ತಾಪಿಸುವುದಿಲ್ಲ. 2011ರ ಜನಗಣತಿಯ ಆಧಾರದಲ್ಲೇ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆ ನಡೆಯಲಿದೆ ಎಂದು ಕೇಂದ್ರ ಸರ್ಕಾರ ಪುನರುಚ್ಚರಿಸಿದೆ. ವಿಪಕ್ಷಗಳ ಆರೋಪ ತಳ್ಳಿ ಹಾಕಿರುವ ಕೇಂದ್ರ ಸರ್ಕಾರ, ದಕ್ಷಿಣದ ರಾಜ್ಯಗಳಲ್ಲಿ ಕ್ಷೇತ್ರಗಳ ಸಂಖ್ಯೆ ಹೆಚ್ಚಳ ಆಗಲಿದೆ ಎಂದೂ ಸ್ಪಷ್ಟಪಡಿಸಿದೆ.

ಜನಸಂಖ್ಯಾ ನಿಯಂತ್ರಣದಲ್ಲಿ ಉತ್ತಮ ಸಾಧನೆ ಮಾಡಿರುವ ದಕ್ಷಿಣದ ರಾಜ್ಯಗಳ ಹಿತಾಸಕ್ತಿಗಳಿಗೆ ಈ ಮಸೂದೆ ಮಾರಕವಾಗಿದೆ ಎಂದು ವಿರೋಧ ಪಕ್ಷಗಳು ದೂಷಿಸಿವೆ. ಪಂಜಾಬ್, ಹರಿಯಾಣ ಹಾಗೂ ಈಶಾನ್ಯ ರಾಜ್ಯಗಳಿಗೆ ಹೋಲಿಸಿದರೆ ಉತ್ತರ ಪ್ರದೇಶ ಹಾಗೂ ಬಿಹಾರ ರಾಜ್ಯಗಳು ಹೆಚ್ಚಿನ ಸ್ಥಾನಗಳನ್ನು ಹಾಗೂ ಅನುಪಾತಗಳನ್ನು ಪಡೆಯಲಿವೆ.

ಸಂವಿಧಾನ (131ನೇ ತಿದ್ದುಪಡಿ) ಮಸೂದೆ- 2026ರ 81(2)(ಎ) ಪರಿಚ್ಛೇದಕ್ಕೆ ತಿದ್ದುಪಡಿಯನ್ನು ಪ್ರಸ್ತಾಪಿಸುವುದಿಲ್ಲ. ಈ ಪರಿಚ್ಛೇದದ ಪ್ರಕಾರ, ರಾಜ್ಯದ ಕ್ಷೇತ್ರ ಸಂಖ್ಯೆ ಮತ್ತು ಜನಸಂಖ್ಯೆಯ ನಡುವಿನ ಅನುಪಾತವು ಸಾಧ್ಯವಾದಷ್ಟು ಎಲ್ಲ ರಾಜ್ಯಗಳಿಗೆ ಒಂದೇ ಆಗಿರುವ ರೀತಿಯಲ್ಲಿ ಪ್ರತಿ ರಾಜ್ಯಕ್ಕೂ ಲೋಕಸಭಾ ಸ್ಥಾನಗಳನ್ನು ಹಂಚಿಕೆ ಮಾಡಬೇಕು.

ಮಹಿಳಾ ಮೀಸಲಾತಿ ಮಸೂದೆಗೆ ಸಂಬಂಧಿಸಿದಂತೆ ಕೇಂದ್ರವು ಹಲವು ಪಕ್ಷಗಳ ಜತೆಗೆ ಸಮಾಲೋಚನೆ ನಡೆಸಿ ವಿಶ್ವಾಸ ಮೂಡಿಸುವ ಪ್ರಯತ್ನ ನಡೆಸಿತ್ತು. ಲೋಕಸಭೆಯಲ್ಲಿನ ಸ್ಥಾನಗಳ ಸಂಖ್ಯೆಯನ್ನು ಎಲ್ಲ ರಾಜ್ಯಗಳಿಗೆ ಶೇ 50ರಷ್ಟು ಹೆಚ್ಚಿಸಲಾಗುವುದು ಎಂದು ಸರ್ಕಾರ ಭರವಸೆ ನೀಡಿತ್ತು. ಆದರೆ, ಇದಕ್ಕೆ ಕಾಂಗ್ರೆಸ್, ಡಿಎಂಕೆ, ಸಿಪಿಎಂ ಮತ್ತು ಎಎಪಿಯಂತಹ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದ್ದವು.

ಲೋಕಸಭಾ ಕ್ಷೇತ್ರ ಮರುವಿಂಗಡಣೆ ಬಳಿಕ

ಯಾವ ರಾಜ್ಯಗಳಿಗೆ ಲಾಭ

ರಾಜ್ಯ	ಈಗಿರುವ ಕ್ಷೇತ್ರಗಳು	ಅನುಪಾತ (ಶೇ)	ಕ್ಷೇತ್ರಗಳ ಹೆಚ್ಚಳ	ಅನುಪಾತ (ಶೇ)	ಹೆಚ್ಚಳ (ಶೇ)
ಉತ್ತರ ಪ್ರದೇಶ	80	14.7	140	16.5	1.7
ಬಿಹಾರ	40	7.4	73	8.6	1.2
ರಾಜಸ್ಥಾನ	25	4.6	48	5.6	1
ಮಧ್ಯ ಪ್ರದೇಶ	29	5.3	51	6	0.7
ಮಹಾರಾಷ್ಟ್ರ	48	8.8	79	9.3	0.5

ಯಾವ ರಾಜ್ಯಗಳಿಗೆ ನಷ್ಟ

ರಾಜ್ಯ	ಈಗಿನ ಕ್ಷೇತ್ರಗಳು	ಅನುಪಾತ (ಶೇ)	ಸೀಟು ಹೆಚ್ಚಳ	ಅನುಪಾತ (ಶೇ)	ಕುಸಿತ (ಶೇ)
ಕರ್ನಾಟಕ	28	5.5	42	4.96	0.56
ತಮಿಳುನಾಡು	9	7.2	51	6	1.2
ಕೇರಳ	20	3.7	23	2.7	1
ಆಂಧ್ರ ಮತ್ತು ತೆಲಂಗಾಣ*	42	7.7	59	6.9	0.8
ಒಡಿಶಾ	21	3.9	29	3.4	0.5
ಪಶ್ಚಿಮ ಬಂಗಾಳ	42	7.7	64	7.5	0.2

(*ತೆಲಂಗಾಣ ರಾಜ್ಯ ಸ್ಥಾಪನೆಯಾಗಿದ್ದು 2014ರಲ್ಲಿ. 2011ರ ಜನಗಣತಿ ಸಂದರ್ಭದಲ್ಲಿ ಅವಿಭಜಿತ ಆಂಧ್ರ ಪ್ರದೇಶವಿತ್ತು)

ನಾವು ಮೊದಲಿನಿಂದಲೂ ಮಹಿಳಾ ಮೀಸಲಾತಿಗೆ ಬೆಂಬಲಿಸುತ್ತಾ ಬಂದಿದ್ದೇವೆ. ಈ ಹಿಂದಿನ ತಿದ್ದುಪಡಿ ಕಾಯ್ದೆಯನ್ನೆ ಅನುಷ್ಠಾನಗೊಳಿಸಬೇಕು ಎಂಬುದು ನಮ್ಮ ಒತ್ತಾಯವಾಗಿದೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಪ್ರಧಾನಿ ನರೇಂದ್ರ ಮೋದಿ ಅವರು ನೀಡುತ್ತಿರುವ ಎಲ್ಲ ಭರವಸೆಗಳಿಗೆ ಈ ಮಸೂದೆ ವಿರುದ್ಧವಾಗಿದೆ. ಈ ಮಸೂದೆಯಿಂದಾಗಿ, ದಕ್ಷಿಣ, ವಾಯವ್ಯ ಮತ್ತು ಪೂರ್ವ ರಾಜ್ಯಗಳು ಲೋಕಸಭೆಯಲ್ಲಿ ತಮ್ಮ ಬಲ ಕಳೆದುಕೊಳ್ಳಲಿವೆ. ಪ್ರಧಾನಿ ಭರವಸೆಗಳನ್ನು ನಂಬುವ ಹಾಗಿಲ್ಲ

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ತಮಿಳುನಾಡಿನಲ್ಲಿ ಪ್ರಸ್ತುತ 39 ಸಂಸದರು ಇದ್ದಾರೆ. ಸಂಸದರ ಸಂಖ್ಯೆಯನ್ನು 58ಕ್ಕೆ ಏರಿಸುವುದಾಗಿ ಕೇಂದ್ರ ಸರ್ಕಾರ ಹೇಳಿತ್ತು. ಕ್ಷೇತ್ರ ಪುನರ್ ವಿಂಗಡಣೆ ಬಳಿಕ, ಸಂಸದರ ಸಂಖ್ಯೆ 46ಕ್ಕೆ ಹೆಚ್ಚಳ ಆಗಲಿದೆ. ಇದು ಭ್ರಮೆ ಹೊರತು ಬೇರೇನೂ ಇಲ್ಲ. ಆದರೆ, ಉತ್ತರ ಪ್ರದೇಶದಲ್ಲಿ ಸಂಸದರ ಸಂಖ್ಯೆ 80ರಿಂದ 140ಕ್ಕೆ ಜಿಗಿಯಲಿದೆ. ಮಸೂದೆಯನ್ನು ವಿರೋಧಿಸುತ್ತಿರುವ ದಕ್ಷಿಣದ ರಾಜ್ಯಗಳ ಧ್ವನಿಯನ್ನು ನಿಗ್ರಹಿಸಲಾಗುತ್ತಿದೆ

ಪಿ.ಚಿದಂಬರಂ, ರಾಜ್ಯಸಭೆಯ ಕಾಂಗ್ರೆಸ್ ಸದಸ್ಯ

ವಿಪಕ್ಷಗಳ ಸಡ್ಡು: ಕೇಂದ್ರಕ್ಕೆ ಅಗ್ನಿಪರೀಕ್ಷೆ

ನವದೆಹಲಿ: ಸಂಸತ್‌ನಲ್ಲಿ ಗುರುವಾರ ಮಂಡನೆಯಾಗಲಿರುವ ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆ ಕುರಿತ 'ಸಂವಿಧಾನ (131ನೇ ತಿದ್ದುಪಡಿ) ಮಸೂದೆ- 2026'ರಲ್ಲಿನ ಅವಕಾಶಗಳ ವಿರುದ್ಧ ಮತ ಹಾಕುವುದಕ್ಕೆ ವಿರೋಧ ಪಕ್ಷಗಳು ಬುಧವಾರ ನಿರ್ಧರಿಸಿವೆ.

'ಕೇಂದ್ರ ಸರ್ಕಾರವು ತನಗೆ ಅನುಕೂಲವಾಗುವಂತೆ ಲೋಕಸಭೆ ಮತ್ತು ವಿಧಾನಸಭೆ ಕ್ಷೇತ್ರಗಳ ಮರುವಿಂಗಡಣೆ ಮಾಡಿ ಅಧಿಕಾರ ಕಸಿದುಕೊಳ್ಳುವ ಪ್ರಯತ್ನದ ಭಾಗವಿದು. ಇದರ ವಿರುದ್ಧ ಮತ ಚಲಾಯಿಸಲಾಗುವುದು' ಎಂದೂ ವಿಪಕ್ಷಗಳು ಗುಡುಗಿವೆ.

ಇದರೊಂದಿಗೆ, ಏ.16ರಿಂದ ಆರಂಭವಾಗಲಿರುವ ಸಂಸತ್‌ನ ಮೂರು ದಿನಗಳ ವಿಶೇಷ ಅಧಿವೇಶನವು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಹಾಗೂ ವಿರೋಧ ಪಕ್ಷಗಳು ಅಭೂತಪೂರ್ವ ಮುಖಾಮುಖಿಯಾಗುವುದಕ್ಕೆ ಸಾಕ್ಷಿಯಾಗಲಿದೆ.

ಅಂಗೀಕಾರ ಸಾಧ್ಯತೆವೇ?: ಲೋಕಸಭೆಯಲ್ಲಿ ಗುರುವಾರ ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆ ಕುರಿತ 'ಸಂವಿಧಾನ (131ನೇ ತಿದ್ದುಪಡಿ) ಮಸೂದೆ- 2026 ಅನ್ನು ಮಂಡಿಸಲಾಗುತ್ತಿದೆ. ಇದು ಅಂಗೀಕಾರವಾಗುವುದಕ್ಕೆ ಮೂರನೇ ಎರಡರಷ್ಟು ಬಹುಮತ ಅಗತ್ಯ.

ಪ್ರಸ್ತುತ ಲೋಕಸಭೆಯ ಸದಸ್ಯ ಬಲ 540 ಇದೆ. ಈ ಪೈಕಿ ಆಡಳಿತಾರೂಢ ಎನ್‌ಡಿಎ ಸಂಸದರ ಸಂಖ್ಯೆ 294 ಹಾಗೂ ವಿಪಕ್ಷಗಳ ಸಂಸದರ ಸಂಖ್ಯೆ 238. ಒಂದು ವೇಳೆ ಎಲ್ಲ 540 ಸಂಸದರು ಅಧಿವೇಶನದಲ್ಲಿ ಹಾಜರಿದ್ದಲ್ಲಿ, ಮಸೂದೆ ಅಂಗೀಕಾರವಾಗಲು 361 ಮತಗಳು ಅಗತ್ಯ. ವಿರೋಧ ಪಕ್ಷಗಳು ಈ ಮಸೂದೆಯನ್ನು ವಿರೋಧಿಸುವುದಾಗಿ ಹೇಳಿವೆ. ಈ ಪೈಕಿ, ಕನಿಷ್ಠ 18 ಪಕ್ಷಗಳ 234 ಸಂಸದರು ಮಸೂದೆ ವಿರುದ್ಧ ಮತ ಹಾಕುವುದಾಗಿ ಸ್ಪಷ್ಟಪಡಿಸಿವೆ. ಮಸೂದೆ ವಿರುದ್ಧ ಮತ ಹಾಕುವುದಕ್ಕಾಗಿ ವಿಪಕ್ಷಗಳು ಒಗ್ಗಟ್ಟಾಗಿವೆ. ಇದು ಮಸೂದೆ ಅಂಗೀಕರಿಸುವ ಸರ್ಕಾರದ ಪ್ರಯತ್ನಕ್ಕೆ ಎದುರಾಗಲಿರುವ ಬಹುದೊಡ್ಡ ತೊಡಕು.

ಖರ್ಗೆ ನಿವಾಸದಲ್ಲಿ ಸಭೆ

ಅಧಿವೇಶನ ವೇಳೆ ಅನುಸರಿಸಬೇಕಾದ ಕಾರ್ಯತಂತ್ರ ಕುರಿತು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ನಡೆದ ವಿಪಕ್ಷಗಳ ನಾಯಕರ ಸಭೆ ನಡೆಯಿತು.

ಕ್ಷೇತ್ರಗಳ ಮರುವಿಂಗಡಣೆ ಹಾಗೂ ಮಹಿಳಾ ಮೀಸಲಾತಿ ಮಸೂದೆ ಮಂಡನೆ ವೇಳೆ, ಅನುಸರಿಸಬೇಕಾದ ಕಾರ್ಯತಂತ್ರ ಕುರಿತು ಚರ್ಚಿಸಲಾಯಿತು. ಸಭೆ ಬಳಿಕ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ ಅವರು, 'ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವುದನ್ನು ನಾವು ವಿರೋಧಿಸುವುದಿಲ್ಲ. ಆದರೆ, ಈ ಕುರಿತ ಮಸೂದೆಯನ್ನು ಮಂಡಿಸಲು ಕೇಂದ್ರ ಅನುಸರಿಸುತ್ತಿರುವ ವಿಧಾನಕ್ಕೆ ನಮ್ಮ ವಿರೋಧವಿದೆ' ಎಂದರು.

ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಕೆ.ಸಿ.ವೇಣುಗೋಪಾಲ್, ಮುಖಂಡರಾದ ಟಿ.ಆರ್.ಬಾಲು(ಡಿಎಂಕೆ), ತೇಜಸ್ವಿ ಯಾದವ್(ಆರ್‌ಜೆಡಿ), ಸಾಗರಿಕಾ ಘೋಷ್(ಟಿಎಂಸಿ), ಸಂಜಯ್ ರಾವುತ್ ಹಾಗೂ ಅರವಿಂದ ಸಾವಂತ್(ಶಿವಸೇನಾ–ಯುಬಿಟಿ), ಸುಪ್ರಿಯಾ ಸುಳೆ(ಎನ್‌ಸಿಪಿ–ಶರದ್ ಪವಾರ್), ಆ್ಯನಿ ರಾಜಾ(ಸಿಪಿಐ), ನೀಲೋತ್ಪಲ್ ಬಸು(ಸಿಪಿಎಂ), ಸಂಜಯ್ ಸಿಂಗ್(ಎಎಪಿ), ಇ.ಟಿ.ಮೊಹಮ್ಮದ್ ಬಷೀರ್(ಐಯುಎಂಎಲ್), ಎನ್.ಕೆ. ಪ್ರೇಮಚಂದ್ರನ್(ಆರ್‌ಎಸ್‌ಪಿ) ಸಭೆಯಲ್ಲಿ ಪಾಲ್ಗೊಂಡಿದ್ದರು. ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ವರ್ಚುವಲ್ ಆಗಿ ಪಾಲ್ಗೊಂಡಿದ್ದರು.

ತ್ರಿವರ್ಣ ಬಣ್ಣದ ರಿಬ್ಬನ್ ಕತ್ತರಿಸಲು ಒಪ್ಪದ ಒಮರ್ ಅಬ್ದುಲ್ಲಾ

ಶ್ರೀನಗರ (ಪಿಟಿಐ): ಕಾರ್ಯಕ್ರಮವೊಂದರ ಉದ್ಘಾಟನೆಗೆ ಹಾಕಲಾಗಿದ್ದ ಕೇಸರಿ–ಬಿಳಿ–ಹಸಿರು ಬಣ್ಣದ ರಿಬ್ಬನ್ ಕತ್ತರಿಸಲು ಜಮ್ಮು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಬುಧವಾರ ನಿರಾಕರಿಸಿದ್ದಾರೆ. ರಿಬ್ಬನ್ ತೆಗೆದು, ಆಯೋಜಕರಿಗೆ ನೀಡಿರುವ ಅವರು, ಅದನ್ನು ಗೌರವಯುತವಾಗಿ ಮಡಚಿ ಇರಿಸುವಂತೆ ಹೇಳಿದ್ದಾರೆ.

ಇಲ್ಲಿನ ಕಾಶ್ಮೀರ್ ಹಾತ್‌ನಲ್ಲಿ 'ನೊ ಯುವರ್ ಆರ್ಟಿಸನ್ಸ್' ಕಾರ್ಯಕ್ರಮದ ಉದ್ಘಾಟನೆಗೆಂದು ಒಮರ್ ಆಗಮಿಸಿದ್ದರು. ರಿಬ್ಬನ್ ಕತ್ತರಿಸಿ ಕಾರ್ಯಕ್ರಮಕ್ಕೆ ಅವರು ಚಾಲನೆ ನೀಡಬೇಕಿತ್ತು.

'ವಂದೇ ಮಾತರಂ' ಹಾಡಲು ನಿರಾಕರಣೆ: ಎಫ್‌ಐಆರ್ ದಾಖಲು

ಇಂದೋರ್ (ಪಿಟಿಐ): 'ವಂದೇ ಮಾತರಂ' ಗೀತೆಯನ್ನು ಹಾಡಲು ನಿರಾಕರಿಸಿ, ಕೋಮು ಸಾಮರಸ್ಯಕ್ಕೆ ಭಂಗ ತಂದ ಆರೋಪದ ಮೇಲೆ ಮಧ್ಯಪ್ರದೇಶದಲ್ಲಿ ಕಾಂಗ್ರೆಸ್‌ನ ಇಬ್ಬರು ಮಹಿಳಾ ಕಾರ್ಪೊರೇಟರ್‌ಗಳ ವಿರುದ್ಧ ಬುಧವಾರ ಪ್ರಕರಣ ದಾಖಲಾಗಿದೆ.

ಇಂದೋರ್ ಮಹಾನಗರ ಪಾಲಿಕೆಯಲ್ಲಿ ಏಪ್ರಿಲ್ 8ರಂದು ಬಜೆಟ್ ಮಂಡಿಸುವ ಸಂದರ್ಭದಲ್ಲಿ ಫೌಜಿಯಾ ಶೇಖ್ ಅಲಿಮ್ ಅವರು ವಂದೇ ಮಾತರಂ ಗೀತೆಯನ್ನು ಹಾಡಿರಲಿಲ್ಲ. ಇಸ್ಲಾಮಿಕ್ ನಂಬಿಕೆಗಳಿಗೆ ವಿರುದ್ಧ ಎಂಬ ಕಾರಣವನ್ನು ಅವರು ನೀಡಿದ್ದರು.

ಕಾಂಗ್ರೆಸ್ ಸೇರಿದ್ದ ಪಕ್ಷೇತರ ಸದಸ್ಯೆ ರುಬಿನಾ ಇಕ್ಬಾಲ್ ಖಾನ್ ಅವರೂ ಫೌಜಿಯಾಗೆ ಬೆಂಬಲ ನೀಡಿ, ವಂದೇ ಮಾತರಂ ಹಾಡಲು ನಿರಾಕರಿಸಿದ್ದರು.

ಮಸೂದೆ ಪ್ರಶ್ನಿಸಿ ಲಿಂಗತ್ವ ಅಲ್ಪಸಂಖ್ಯಾತರಿಂದ 'ಸುಪ್ರೀಂ'ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆ–2026' ವಿರುದ್ಧ ಕರ್ನಾಟಕದ ಆರು ಜನ ಲಿಂಗತ್ವ ಅಲ್ಪಸಂಖ್ಯಾತರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

'ಲಿಂಗತ್ವ ಅಲ್ಪಸಂಖ್ಯಾತರ ಆತ್ಮಗೌರವ, ಸ್ವಲಿಂಗ ನಿರ್ಧಾರಣೆ ಹಾಗೂ ಸಾಂವಿಧಾನಿಕ ಹಕ್ಕನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಈ ಮೇಲ್ಮನವಿ ಸಲ್ಲಿಸಲಾಗಿದೆ' ಎಂದು ಅರ್ಜಿದಾರರು ಹೇಳಿದ್ದು, ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಸ್ವೀಕರಿಸಿದೆ.

ಅಕ್ಕೈ ಪದ್ಮಶಾಲಿ, ರೂಮಿ ಹರೀಶ್, ಅಬೇದ ಬೇಗಮ್, ಪ್ರಕಾಶಿ, ಮೋನಿಕಾ ಹಾಗೂ ನಿತ್ಯಾನಂದ ಈ ಅರ್ಜಿ ಸಲ್ಲಿಸಿದ್ದಾರೆ. ಕೇಂದ್ರ ಸರ್ಕಾರವು ತಿದ್ದುಪಡಿ ಮಸೂದೆಯನ್ನು ಲೋಕಸಭೆ, ರಾಜ್ಯಸಭೆಯಲ್ಲಿ ಮಂಡಿಸಿ, ಇತ್ತೀಚೆಗೆ ಅಂಗೀಕಾರ ಪಡೆದಿತ್ತು. ಇದಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಕಿತ ಹಾಕಿದ್ದಾರೆ.

ಕೇಂದ್ರ ರಚಿಸಿದ ವಕೀಲರ ತಂಡದಲ್ಲಿ ನ್ಯಾ.ಶರ್ಮಾ ಮಕ್ಕಳಿಗೆ ಸ್ಥಾನ: ಕೇಜ್ರಿವಾಲ್

'ವಿಚಾರಣೆಯಿಂದ ನ್ಯಾ.ಶರ್ಮಾ ಹಿಂದೆ ಸರಿಯಲಿ'

ಕೋರ್ಟ್ ಸುದ್ದಿಗಳು

ನವದೆಹಲಿ(ಪಿಟಿಐ): 'ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಅವರ ಮಕ್ಕಳು ಕೇಂದ್ರ ಸರ್ಕಾರ ರಚಿಸಿರುವ ವಕೀಲರ ತಂಡದಲ್ಲಿದ್ದು, ಸಿಬಿಐ ಪರ ಅವರು ನ್ಯಾಯಾಲಯಗಳಿಗೆ ಹಾಜರಾಗುತ್ತಿದ್ದಾರೆ. ಹೀಗಾಗಿ, ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಅವರು ನನ್ನ ವಿರುದ್ಧದ ಪ್ರಕರಣದ ವಿಚಾರಣೆಯಿಂದ ಹಿಂದೆ ಸರಿಯಬೇಕು' ಎಂದು ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಕೋರಿದ್ದಾರೆ.

ಈ ಕುರಿತು ಹೈಕೋರ್ಟ್‌ಗೆ ಸಲ್ಲಿಸಿರುವ ಹೆಚ್ಚುವರಿ ಅಫಿಡವಿಟ್‌ನಲ್ಲಿ ಈ ವಿಚಾರ ಉಲ್ಲೇಖಿಸಿರುವ ಅವರು, 'ಸಿಬಿಐ ಪರ ಹಾಜರಾಗುವುದಕ್ಕಾಗಿ ನ್ಯಾಯಮೂರ್ತಿ ಶರ್ಮಾ ಅವರ ಮಕ್ಕಳಿಗೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮೂಲಕ ಕಾರ್ಯ ಹಂಚಿಕೆಯಾಗುತ್ತಿದೆ' ಎಂದು ವಿವರಿಸಿದ್ದಾರೆ.

ದೆಹಲಿ ಅಬಕಾರಿ ಹಗರಣದಿಂದ ತಮ್ಮನ್ನು ಖುಲಾಸೆ ಮಾಡಿ ದೆಹಲಿಯ ನ್ಯಾಯಾಲಯವೊಂದು ನೀಡಿರುವ ಆದೇಶ ಪ್ರಶ್ನಿಸಿ ಸಿಬಿಐ ಸಲ್ಲಿಸಿರುವ ಮೇಲ್ಮನವಿಯು ನ್ಯಾಯಮೂರ್ತಿ ಶರ್ಮಾ ಅವರು ಇರುವ ಪೀಠದ ಮುಂದಿದೆ.

'ನ್ಯಾಯಮೂರ್ತಿ ಶರ್ಮಾ ಅವರಿಗೆ ಸಂಬಂಧಿಸಿ ಹಿತಾಸಕ್ತಿ ಸಂಘರ್ಷವಿರುವುದು ಆತಂಕ ಹೆಚ್ಚುವಂತೆ ಮಾಡಿದೆ. ಹೀಗಾಗಿ ನ್ಯಾಯಮೂರ್ತಿ ಶರ್ಮಾ ಅವರು ನನ್ನ ವಿರುದ್ಧದ ಮೇಲ್ಮನವಿ ವಿಚಾರಣೆ ನಡೆಸಬಾರದು' ಎಂದು ಕೇಜ್ರಿವಾಲ್ ಅವರು ಏಪ್ರಿಲ್ 14ರಂದು ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಕೋರಿದ್ದಾರೆ.

ಕೇಜ್ರಿವಾಲ್ ಮೇಲ್ಮನವಿಗೆ ವಿರೋಧ ವ್ಯಕ್ತಪಡಿಸಿದ ತುಷಾರ್ ಮೆಹ್ತಾ, 'ನ್ಯಾಯಮೂರ್ತಿ ಶರ್ಮಾ ಅವರು ವಿಚಾರಣೆಯಿಂದ ಹಿಂದೆ ಸರಿಯುವಂತೆ ಕೋರಿರುವ ಕೇಜ್ರಿವಾಲ್ ಹಾಗೂ ಇತರರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿ, ಕ್ರಮ ತೆಗೆದುಕೊಳ್ಳಬೇಕು' ಎಂದು ಪೀಠವನ್ನು ಕೋರಿದರು.

'ಕೇಜ್ರಿವಾಲ್ ವ್ಯಕ್ತಪಡಿಸುತ್ತಿರುವ ಆತಂಕ, ಕಳವಳಕ್ಕೆ ಅರ್ಥವಿಲ್ಲ. ಅವು ಅಪ್ರಬುದ್ಧ ಮನಸಿನ ಚಡಪಡಿಕೆಗಳಷ್ಟೆ. ಇದು ನ್ಯಾಯಾಲಯದ ಗೌರವದ ಪ್ರಶ್ನೆ. ಇಂತಹ ಒತ್ತಡಗಳಿಗೆ ನ್ಯಾಯಮೂರ್ತಿ ಶರ್ಮಾ ಒಳಗಾಗಿ, ವಿಚಾರಣೆಯಿಂದ ಹಿಂದೆ ಸರಿಯಬಾರದು. ಹಾಗೆ ಮಾಡಿದಲ್ಲಿ ಅದು ಕೆಟ್ಟ ಪೂರ್ವನಿದರ್ಶನವಾಗಲಿದೆ' ಎಂದೂ ಮೆಹ್ತಾ, ಪೀಠಕ್ಕೆ ತಿಳಿಸಿದರು.

ಪವನ್ ಖೇರಾಗೆ ಜಾಮೀನುಗೆ 'ಸುಪ್ರೀಂ' ತಡೆ

ನವದೆಹಲಿ(ಪಿಟಿಐ): ಕಾಂಗ್ರೆಸ್ ನಾಯಕ ಪವನ್ ಖೇರಾ ಅವರಿಗೆ ಒಂದು ವಾರದ ಮಟ್ಟಿಗೆ ನಿರೀಕ್ಷಣಾ ಜಾಮೀನು ನೀಡಿ ತೆಲಂಗಾಣ ಹೈಕೋರ್ಟ್ ಹೊರಡಿಸಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಬುಧವಾರ ತಡೆ ನೀಡಿದೆ.

ತೆಲಂಗಾಣ ಹೈಕೋರ್ಟ್ ಆದೇಶ ಪ್ರಶ್ನಿಸಿ ಅಸ್ಸಾಂ ಸರ್ಕಾರ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ, ಪ್ರತಿಕ್ರಿಯೆ ಸಲ್ಲಿಸುವಂತೆ ಪವನ್ ಖೇರಾ ಹಾಗೂ ಇತರರಿಗೆ ನೋಟಿಸ್ ಜಾರಿ ಮಾಡಿದೆ.

ನ್ಯಾಯಮೂರ್ತಿಗಳಾದ ಜೆ.ಕೆ.ಮಾಹೇಶ್ವರಿ ಹಾಗೂ ಎ.ಎಸ್.ಚಂದೂರ್ಕರ್ ಅವರು ಇದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಪತ್ನಿ ರಿನಿಕಿ ಭುಯಾನ್ ಶರ್ಮಾ ಅವರು ವಿದೇಶಗಳಲ್ಲಿ ಆಸ್ತಿ ಹಾಗೂ ಹಲವು ದೇಶಗಳ ಪಾಸ್‌ಪೋರ್ಟ್ ಹೊಂದಿದ್ದಾರೆ. ಈ ಕುರಿತು ಮುಖ್ಯಮಂತ್ರಿ ಶರ್ಮಾ ಅವರು ಚುನಾವಣಾ ಅಫಿಡವಿಟ್‌ನಲ್ಲಿ ಉಲ್ಲೇಖಿಸಿಲ್ಲ ಎಂದು ಏಪ್ರಿಲ್ 5ರಂದು ನಡೆಸಿದ ಸುದ್ದಿಗೋಷ್ಠಿಯಲ್ಲಿ ಪವನ್ ಖೇರಾ ಆರೋಪಿಸಿದ್ದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಬಿಸಿಲಿರುವುದು, ಮೋಡವಿರುವುದು ಸೃಷ್ಟಿಯ ವಿಕಾಸಕ್ಕೆ ಎಷ್ಟು ಅವಶ್ಯಕವೋ, ಕವಿ ಇರುವುದೂ ಅಷ್ಟೇ ಅವಶ್ಯಕ.

-ಕುವೆಂಪು

ಸಂಪಾದಕೀಯ

ಪುನರ್ ವಿಂಗಡಣೆ ಕಹಿಗುಳಿಗೆಗೆ ಮಹಿಳಾ ಪ್ರಾತಿನಿಧ್ಯದ ಸಿಹಿಲೇಪ

'ಮಹಿಳಾ ಮೀಸಲಾತಿ ಕಾಯ್ದೆ 2023'ಕ್ಕೆ ತಿದ್ದುಪಡಿ ಹಾಗೂ ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆಗೆ ಸಂಬಂಧಿಸಿದ ಮಸೂದೆಗಳಿಗೆ ಅಂಗೀಕಾರ ಪಡೆಯುವ ಉದ್ದೇಶದಿಂದ ಏಪ್ರಿಲ್ 16ರಿಂದ 18ರವರೆಗೆ ವಿಶೇಷ ಸಂಸತ್ ಅಧಿವೇಶನ ನಡೆಸಲು ಕೇಂದ್ರ ಸರ್ಕಾರ ಸಜ್ಜಾಗಿದೆ. ಈ ಪ್ರಯತ್ನಗಳ ಹಿಂದಿನ ರಾಜಕೀಯ ಉದ್ದೇಶಗಳು ಅನುಮಾನ ಹುಟ್ಟಿಸುವಂತಿವೆ. ಸಂಸದೀಯ ಪ್ರಾತಿನಿಧ್ಯ ಹಾಗೂ ಒಕ್ಕೂಟ ವ್ಯವಸ್ಥೆಯ ಸಮತೋಲನಕ್ಕೆ ಸಂಬಂಧಿಸಿದಂತೆ ಗಂಭೀರ ಪ್ರಶ್ನೆಗಳಿಗೆ ಸರ್ಕಾರ ಉತ್ತರ ನೀಡುವ ಅಗತ್ಯ ಕಲ್ಪಿಸಿದೆ. 2023ರಲ್ಲಿ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರಗೊಂಡಾಗ, ಮುಂದಿನ ಜನಗಣತಿಯ ನಂತರ ಅದನ್ನು ಜಾರಿಗೊಳಿಸುವುದಾಗಿ ಸರ್ಕಾರ ಹೇಳಿತ್ತು. ಜನಗಣತಿ ಪ್ರಕ್ರಿಯೆ ಈಗಷ್ಟೇ ಆರಂಭವಾಗಿರುವಾಗ, 2011ರ ಜನಗಣತಿಯ ದತ್ತಾಂಶಗಳನ್ನು ಆಧರಿಸಿ 2029ರಲ್ಲಿ ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಮಹಿಳಾ ಪ್ರಾತಿನಿಧ್ಯವನ್ನು ಜನಗಣತಿಗೂ ಸಂಬಂಧ ಕಲ್ಪಿಸಿರುವುದರ ಹಿನ್ನೆಲೆ ಅಸ್ಪಷ್ಟವಾಗಿದೆ. 2024ರ ಲೋಕಸಭೆ ಚುನಾವಣೆಗೆ ಮೊದಲು ಕಾನೂನನ್ನು ಜಾರಿಗೊಳಿಸದೆಯೇ, ಅದರ ಕೀರ್ತಿಯನ್ನು ಈಗ ಪಡೆಯುವುದು ಕೇಂದ್ರ ಸರ್ಕಾರದ ಉದ್ದೇಶ ಆಗಿರುವಂತಿದೆ. ಸರ್ಕಾರಕ್ಕೆ ಆಗಿರುವ ದಿಢೀರ್ ಜ್ಞಾನೋದಯದ ಹಿಂದಿನ ಕಾರಣ ಹಾಗೂ ಮಸೂದೆಗಳ ಮಂಡನೆಗೆ ಆಯ್ಕೆಯಾಗಿರುವ ಸಂದರ್ಭದ ಕುರಿತು ಸರ್ಕಾರ ವಿವರಣೆ ನೀಡಬೇಕಾಗಿದೆ. ಎರಡು ಪ್ರಮುಖ ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ, ಚುನಾವಣೆಯಲ್ಲಿ ಮಹಿಳಾ ಮತದಾರರು ಪ್ರಮುಖ ಪಾತ್ರ ವಹಿಸಲಿದ್ದಾರೆ. ಇಂಥ ಸಂದರ್ಭದಲ್ಲಿ ಮಹಿಳಾ ಪ್ರಾತಿನಿಧ್ಯದ ಕಾನೂನಿನ ಬಗ್ಗೆ ಮಾತನಾಡುವುದು ಚುನಾವಣಾ ನೀತಿಸಂಹಿತೆಯ ಉಲ್ಲಂಘನೆ ಆಗುವುದಿಲ್ಲವೆ?

ಮಹತ್ವದ ಮಸೂದೆಗಳಿಗೆ ತರಾತುರಿಯಲ್ಲಿ ಅಂಗೀಕಾರ ಪಡೆಯಲು ವಿಶೇಷ ಅಧಿವೇಶನ ಕರೆದಿರುವ ಕೇಂದ್ರ ಸರ್ಕಾರದ ನಡೆಯು, ಅದರ ಉದ್ದೇಶದ ಪ್ರಾಮಾಣಿಕತೆಯ ಬಗ್ಗೆ ಅನುಮಾನ ಮೂಡಿಸುವಂತಿದೆ.

ಸರ್ಕಾರದ ನಡೆಯನ್ನು 'ಐತಿಹಾಸಿಕ ಹೆಜ್ಜೆ' ಎಂದು ಬಣ್ಣಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಈ ಪ್ರಯತ್ನದಲ್ಲಿ ಎಲ್ಲ ಪಕ್ಷಗಳೂ ಕೈಜೋಡಿಸಬೇಕೆಂದು ಕೋರಿದ್ದಾರೆ. ಮಹಿಳಾ ಮಸೂದೆ ಅಂಗೀಕಾರಗೊಂಡ ಸಂದರ್ಭದಲ್ಲಿಯೇ ಬಹುತೇಕ ಪಕ್ಷಗಳು ಅದನ್ನು ಬೆಂಬಲಿಸಿದ್ದವು ಹಾಗೂ ಈಗಲೂ ಬೆಂಬಲಕ್ಕೆ ಬದ್ಧವಾಗಿವೆ. ಹೀಗಿರುವಾಗ, ಆ ಪಕ್ಷಗಳ ಗಮನಕ್ಕೆ ತಾರದೆ, ಸಮಾಲೋಚನೆ ನಡೆಸದೆ, ತಿದ್ದುಪಡಿ ಪ್ರಯತ್ನಕ್ಕೆ ಸರ್ಕಾರ ಮುಂದಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ತಿದ್ದುಪಡಿಯ ಅಗತ್ಯ ಏನೆಂಬುದನ್ನು ಪ್ರತಿಪಕ್ಷಗಳಿಗೆ ಮನವರಿಕೆ ಮಾಡಿಕೊಡುವುದು ಸರ್ಕಾರದ ಕರ್ತವ್ಯ. ಆದರೆ, ಪ್ರತಿಪಕ್ಷಗಳನ್ನು ವಿಶ್ವಾಸಕ್ಕೆ ತಗೆದುಕೊಳ್ಳುವ ಪ್ರಯತ್ನವನ್ನು ಸರ್ಕಾರ ನಡೆಸಿಲ್ಲ. ಮಹತ್ವದ ಶಾಸನಕ್ಕೆ ಸಂಬಂಧಿಸಿದಂತೆ ಸಂಸತ್ತಿನ ಒಳಗೆ ಹಾಗೂ ಹೊರಗೆ ಪಕ್ಷಗಳ ಒಮ್ಮತ ಅಥವಾ ಬಹುಮತದ ಅಗತ್ಯವಿದೆ. ವಿರೋಧ ಪಕ್ಷಗಳು ಸರ್ಕಾರವನ್ನು ಬೆಂಬಲಿಸುವಂತೆ ಒತ್ತಾಯ ಸೃಷ್ಟಿಸುವ ಅಥವಾ ಮಹಿಳಾ ಸಬಲೀಕರಣಕ್ಕೆ ಅಡ್ಡಿ ಉಂಟುಮಾಡುವ ಪರಿಸ್ಥಿತಿಯನ್ನು ಸರ್ಕಾರ ಸೃಷ್ಟಿಸಬಾರದು. ಮಹಿಳಾ ಮೀಸಲಾತಿಯ ಉದ್ದೇಶವನ್ನು ಬೆಂಬಲಿಸುವುದು ಎಂದರೆ, ಸರ್ಕಾರಕ್ಕೆ ಅನುಕೂಲಕರ ಸಮಯ, ಷರತ್ತುಗಳು ಮತ್ತು ಅದರ ರಾಜಕೀಯ ಲೆಕ್ಕಾಚಾರಗಳನ್ನು ಒಪ್ಪಿಕೊಳ್ಳುವುದು ಎನ್ನುವಂತೆ ಆಗಬಾರದು.

ಮಹಿಳಾ ಮೀಸಲಾತಿಯ ವಿಷಯವನ್ನು ಕ್ಷೇತ್ರ ಮರುವಿಂಗಡಣೆಯ ಜೊತೆಗೆ ತಳಕು ಹಾಕಿರುವುದು ಕಳವಳಕಾರಿ ಬೆಳವಣಿಗೆ. ಮಹಿಳಾ ಪ್ರಾತಿನಿಧ್ಯವು ಜನಗಣತಿ ಅಥವಾ ಕ್ಷೇತ್ರ ಮರುವಿಂಗಡಣೆಯೊಂದಿಗೆ ತಾರ್ಕಿಕ ಸಂಬಂಧ ಹೊಂದಿಲ್ಲ. ಈಗ ಜನಸಂಖ್ಯೆಯ ಆಧಾರದ ಮೇಲೆ ನಡೆಸಲು ಉದ್ದೇಶಿಸಿರುವ ಪ್ರಕ್ರಿಯೆಯು ಉತ್ತರ ಭಾರತದ ರಾಜ್ಯಗಳಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ ಹಾಗೂ ಜನಸಂಖ್ಯಾ ನಿಯಂತ್ರಣ ಸಾಧಿಸಿರುವ ದಕ್ಷಿಣ ಭಾರತದ ರಾಜ್ಯಗಳ ಹಿತಾಸಕ್ತಿಗೆ ಧಕ್ಕೆ ಉಂಟು ಮಾಡುವಂತಿದೆ. 2011ರ ಜನಗಣತಿಯ ದತ್ತಾಂಶಗಳನ್ನು ಆಧರಿಸಿ ಶೇ 50ರಷ್ಟು ಲೋಕಸಭಾ ಸ್ಥಾನಗಳನ್ನು ಹೆಚ್ಚಿಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ. 2011ರ ಜನಗಣತಿಯೇ ಮರುವಿಂಗಡಣೆಗೆ ಏಕೆ ಆಧಾರವಾಗಬೇಕು ಎನ್ನುವ ಪ್ರಶ್ನೆಗೆ ಸರ್ಕಾರ ಉತ್ತರ ನೀಡಬೇಕಾಗಿದೆ. ಕ್ಷೇತ್ರಗಳ ಮರುವಿಂಗಡಣೆ ಎನ್ನುವುದು ಸಂಖ್ಯಾ ದೃಷ್ಟಿಯಿಂದ ಸ್ಥಾನಗಳ ಮರುಹೊಂದಾಣಿಕೆ ಮಾತ್ರ ಆಗಬಾರದು. ಆ ಪ್ರಕ್ರಿಯೆಯು ರಾಜಕೀಯ ಅಧಿಕಾರದ ಮರುವಿಂಗಡಣೆ ಹಾಗೂ ಸಮತೋಲನವನ್ನು ಆಧರಿಸಿರಬೇಕು. ರಾಜ್ಯಗಳು, ರಾಜಕೀಯ ಪಕ್ಷಗಳೊಂದಿಗಿನ ಸಮಾಲೋಚನೆ ಮತ್ತು ವ್ಯಾಪಕ ಸಾರ್ವಜನಿಕ ಚರ್ಚೆಯ ನಂತರವಷ್ಟೇ ಈ ಪ್ರಕ್ರಿಯೆ ಆರಂಭಗೊಳ್ಳಬೇಕು. ಮೂರು ದಿನಗಳ ವಿಶೇಷ ಅಧಿವೇಶನದ ಮೂಲಕ ಕ್ಷೇತ್ರಗಳ ಮರುವಿಂಗಡಣೆಯನ್ನು ದೇಶದ ಮೇಲೆ ಹೇರಬಾರದು. ಹಾಗೆಯೇ, ಕ್ಷೇತ್ರಗಳ ಮರುವಿಂಗಡಣೆಯ ಕಹಿ ಗುಳಿಗೆಗೆ ಸಿಹಿ ಲೇಪನದಂತೆ ಮಹಿಳಾ ಪ್ರಾತಿನಿಧ್ಯದ ವಿಷಯವನ್ನು ಸರ್ಕಾರ ಬಳಸಬಾರದು.

ಮುಸ್ಲಿಮರಿಗೆ ಅನ್ಯಾಯ, 'ಕೈ'ಗೆ ಗಾಯ



ಗತಿಬಿಂಬ

ವೈ.ಗ. ಜಗದೀಶ್

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಮತ ಚಲಾಯಿಸಿದವರ ಬೆರಳಿನ ಶಾಯಿ ಮಾಸುವ ಮೊದಲೇ, ಕಾಂಗ್ರೆಸ್‌ನ ಕೆಲವು ನಾಯಕರ ಕೈಗಳಿಗೆ 'ಮತದ್ರೋಹ'ದ ಮಸಿ ಮೆತ್ತಿಕೊಂಡಿದೆ. ಮೇ 4ರಂದು ಐದು ರಾಜ್ಯಗಳ ವಿಧಾನಸಭೆ ಹಾಗೂ ಕರ್ನಾಟಕದ ಎರಡು ಕ್ಷೇತ್ರಗಳ ಉಪಚುನಾವಣೆ ಫಲಿತಾಂಶ ಹೊರಬೀಳಲಿದೆ. ಅದಕ್ಕೆ ಮುನ್ನವೇ ರಾಜ್ಯ ರಾಜಕೀಯದಲ್ಲಿ ಬಿರುಗಾಳಿ ಬೀಸತೊಡಗಿದೆ. ತೆರೆಮರೆಗೆ ಸರಿದಿದ್ದ ನಾಯಕತ್ವ ಬದಲಾವಣೆ, ಸಂಪುಟ ಪುನರ್‌ರಚನೆ ವಿಷಯ ಮತ್ತೆ ಮುನ್ನೆಲೆಗೆ ಬಂದಿದೆ.

ದಾವಣಗೆರೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ಬೇಕೆಂಬ ಬೇಡಿಕೆ, ಸಿಗದಿದ್ದಾಗ ಬಂಡಾಯ, ಬಳಿಕ ಕಾಂಗ್ರೆಸ್ ಅಭ್ಯರ್ಥಿ ಸೋಲಿಸಲು ಹಿರಿಯರ ಷಡ್ಯಂತ್ರದ ಆರೋಪ... ಹೀಗೆ ಹಲವು ಬೆಳವಣಿಗೆ ನಡೆದವು. ಅದರ ಬೆನ್ನಲ್ಲೇ, ವಿಧಾನಪರಿಷತ್ತಿನ ಸದಸ್ಯ ಅಬ್ದುಲ್ ಜಬ್ಬಾರ್ ಅವರು ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಸಂಗತಿ ಹೊರಬಿತ್ತು. ನಸೀರ್ ಅಹಮದ್ ಅವರನ್ನು ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ವಜಾ ಮಾಡಲಾಯಿತು. ಜಬ್ಬಾರ್ ಅವರನ್ನು ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವದಿಂದಲೇ ಅಮಾನತು ಮಾಡಲಾಗಿದೆ. ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಝೆಡ್. ಜಮೀರ್ ಅಹಮದ್ ಖಾನ್ ಅವರ ಸ್ಥಾನದ ಮೇಲೆ ಕತ್ತಿ ತೂಗಾಡುತ್ತಿದೆ ಎಂಬ ಮಾತುಗಳು ಸದ್ದು ಮಾಡುತ್ತಿವೆ.

ಕಾಂಗ್ರೆಸ್ ಒಳಗಿನ ಮುಸ್ಲಿಂ ನಾಯಕರ ನಡುವಿನ ಅಸಮಾಧಾನದ ಹೊಗೆ, ಬೆಂಕಿಯಾಗಿ ಸುಡತೊಡಗಿದೆ. ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ಹಾಗೂ ಶಾಸಕ ರಿಜ್ವಾನ್ ಅರ್ಷದ್ ಅವರು ಜಮೀರ್ ಮತ್ತು ನಸೀರ್ ಅವರನ್ನು ಉದ್ದೇಶಿಸಿ ಬಿಟ್ಟ ಬಾಣ, ಕಾಂಗ್ರೆಸ್ ಅನ್ನು ತಲ್ಲಣಕ್ಕೆ ದೂಡಿದೆ. ಬಾಣ ಬಿಟ್ಟವರು ಇಬ್ಬರೇ. ಅವರ ಹಿಂದೆ ಜಮೀರ್ ಪ್ರಭಾವಳಿ ಸಹಿಸದ, ಮೂಲ ಕಾಂಗ್ರೆಸ್‌ನ ಮುಸ್ಲಿಂ ಶಾಸಕರು, ಗದ್ದುಗೆ ಕನವರಿಕೆಯಲ್ಲಿರುವ ಪ್ರಭಾವಿಗಳ 'ಬಿಲ್ವಿದ್ಯೆ'ಯೂ ಕೆಲಸ ಮಾಡಿದೆ.

ಏತನ್ಮಧ್ಯೆ, 30ಕ್ಕೂ ಹೆಚ್ಚು ಶಾಸಕರು ಸಂಪುಟ ಪುನರ್‌ರಚನೆ ಹಾಗೂ ಸಚಿವ ಸ್ಥಾನದ ಬೇಡಿಕೆ ಮುಂದಿಟ್ಟು ದೆಹಲಿಗೆ ಹೋಗಿದ್ದಾರೆ. ಒಮ್ಮೆ ಸಂಪುಟ ಪುನರ್‌ರಚನೆಯಾದರೆ, ಈ ಅವಧಿಯಲ್ಲಿಯೇ ಮುಖ್ಯಮಂತ್ರಿಯಾಗಬೇಕೆಂಬ ತಮ್ಮ ಕನಸು ಈಡೇರದು ಎಂಬ ಗಣಿತ ಗೊತ್ತಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಕಸರತ್ತಿಗೆ ತಡೆಯೊಡ್ಡುತ್ತಲೇ ಬಂದಿದ್ದಾರೆ. ಹೀಗಾಗಿಯೇ, 'ಶಾಸಕರು ದೆಹಲಿಗೆ ಹೋಗಲು ಇದು ಸಕಾಲವಲ್ಲ' ಎಂದು ಪ್ರತಿಪಾದಿಸಿದ್ದಾರೆ. ಶಿವಕುಮಾರ್ ಒತ್ತಡ, ಚುನಾವಣೆ ಸೇರಿದಂತೆ ನಾನಾ ಕಾರಣಗಳಿಂದಾಗಿ ಸಂಪುಟ ಪುನರ್‌ರಚನೆಗೆ ಕಾಲ ಕೂಡಿಲ್ಲ. ಸಂಪುಟ ಪುನರ್‌ರಚನೆ ಮೇ ಮೊದಲ ವಾರ ನಡೆಯಬಹುದು ಎಂಬ ಲೆಕ್ಕಾಚಾರಗಳು ಕಾಂಗ್ರೆಸ್‌ನಲ್ಲಿ ನಡೆದಿವೆ. ದಾವಣಗೆರೆ ಜಗಳ, ಮುಸ್ಲಿಂ ನಾಯಕರ ಪರಸ್ಪರ ಟೀಕೆ, ದೆಹಲಿಗೆ ಶಾಸಕರ ದೌಡು ಇವೆಲ್ಲವೂ ಒಂದು ನೇಯ್ಗೆಯೊಳಗೆ ಹೆಣೆದುಕೊಂಡಿವೆ.

ಶಾಮನೂರು ಶಿವಶಂಕರಪ್ಪ ನಿಧನದಿಂದ ತೆರವಾದ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಗೆ ದಿನಾಂಕ ಘೋಷಣೆಯಾಗುವುದಕ್ಕೆ ಮುನ್ನವೇ, ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ಬೇಕೆಂಬ ಬೇಡಿಕೆ ಶುರುವಾಯಿತು. 'ಇದೊಂದು ಬಾರಿ ಸ್ಪರ್ಧಿಸುವೆ, ಮುಂದಿನ ಬಾರಿ ಮುಸ್ಲಿಂ ಸಮುದಾಯಕ್ಕೆ ಬಿಟ್ಟುಕೊಡುವೆ' ಎಂದು 2023ರಲ್ಲಿ ಶಾಮನೂರು ಅವರೇ ಹೇಳಿದ್ದರು ಎಂಬ ಮಾತುಗಳು ಹರಿದಾಡಿದವು. ಕ್ಷೇತ್ರದಲ್ಲಿರುವ 2.13 ಲಕ್ಷ ಮತದಾರರ ಪೈಕಿ ವೀರಶೈವ–ಲಿಂಗಾಯತರು 55 ಸಾವಿರದಷ್ಟಿದ್ದಾರೆ. ಅಲ್ಲಿ 70 ಸಾವಿರಕ್ಕೂ ಹೆಚ್ಚಿರುವ ಮುಸ್ಲಿಂ ಸಮುದಾಯದವರು ಟಿಕೆಟ್‌ಗೆ ಹಕ್ಕೊತ್ತಾಯ ಮಂಡಿಸಿದ್ದು ನ್ಯಾಯಯುತ.

ಪ್ರಜಾಸತ್ತೆ ಎಂದರೆ, ರಾಜಶಾಹಿ, ವಂಶವಾಹಿ ರಾಜಕಾರಣ ಎಂದೇ ಭಾವಿಸಿರುವ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ, ಕ್ಷೇತ್ರ ತಮ್ಮ ಕುಟುಂಬದ ಸ್ವತ್ತು ಎಂದು ಪ್ರತಿಪಾದಿಸುತ್ತಲೇ ಬಂದರು. ವಿಧಾನಸೌಧದ ಸಚಿವರ ಕೊಠಡಿಗೆ ಬರುವ

ಮುಸ್ಲಿಂ ಸಮುದಾಯದ ಬಹು ದೊಡ್ಡ ಫಲಾನುಭವಿಯಾದ ಕಾಂಗ್ರೆಸ್, ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಸಂದರ್ಭದಲ್ಲಿ ಕೃತಜ್ಞತೆ ಇಲ್ಲದಂತೆ ವರ್ತಿಸಿತು. ಚುನಾವಣೆ ನಂತರವಂತೂ ಪಕ್ಷದಲ್ಲಿ ರಾಜಕೀಯ ಬಿರುಗಾಳಿ ಬೀಸುತ್ತಿದೆ. ಈ ಬಿರುಗಾಳಿಯ ಕೇಂದ್ರದಲ್ಲಿ 'ಮತದ್ರೋಹ'ವಷ್ಟೇ ಇರದೆ, 'ಅಧಿಕಾರ ರಾಜಕಾರಣ'ದ ಕೈವಾಡವೂ ಇದೆ.

ಅಭ್ಯಾಸ ಇರದ, ಸಂಪುಟ ಸಭೆಯಲ್ಲಿ ಪಾಲ್ಗೊಳ್ಳುವ ಆಸಕ್ತಿಯೇ ಇಲ್ಲದ ಅವರು, ವಿಧಾನಮಂಡಲ ಅಧಿವೇಶನದಲ್ಲಿ ಕಾಣಿಸಿದ್ದು ಅಪರೂಪ. ಶಾಸಕರ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರ ಕೊಡುವುದು, ಮಸೂದೆ ಮಂಡಿಸುವುದನ್ನು ಇನ್ಯಾವುದೋ ಸಚಿವರು ನಿಭಾಯಿಸುತ್ತಾ ಬಂದಿದ್ದಾರೆ. ಸಚಿವರಾಗಿ ತಮ್ಮ ಕರ್ತವ್ಯದ ಬಗ್ಗೆ ಗಮನ ಕೊಡದ ಮಲ್ಲಿಕಾರ್ಜುನ ಅವರು ಕುಟುಂಬ ರಾಜಕಾರಣದಲ್ಲಿ ಮಾತ್ರ ಛಲವಂತ. ಅವರ ಪತ್ನಿ ಪ್ರಭಾ ಅವರು ದಾವಣಗೆರೆ ಸಂಸದೆ. ಶಾಸಕ, ಸಚಿವ, ಸಂಸದ ಸ್ಥಾನ ಎಲ್ಲವೂ ತಮ್ಮ ಕುಟುಂಬದ ಬಳಿಯೇ ಇರಬೇಕು ಎಂಬುದು ಅವರ ಆಸೆ.

ಈ ಬಾರಿ ತಮಗೆ ಟಿಕೆಟ್ ಕೊಡಿ ಎಂದು ಮುಸ್ಲಿಂ ಸಮುದಾಯ ಬೇಡಿಕೆ ಇಟ್ಟಿದ್ದು ಸರಿಯಾಗಿಯೇ ಇತ್ತು. ಆದರೆ, ಅದಕ್ಕೆ ಕಾಂಗ್ರೆಸ್ ನಾಯಕರು ಕೈಜೋಡಿಸಲಿಲ್ಲ. ಟಿಕೆಟ್ ಸಿಗದ ಕುದಿ ಒಳಗೊಳಗೆ ಸಿಡಿಯಿತು. ಟಿಕೆಟ್ ಆಕಾಂಕ್ಷಿಗಳಾಗಿದ್ದ ಸಾಧಿಕ್ ಪೈಲ್ವಾನ್ ಸೇರಿ ಹಲವರು ನಾಮಪತ್ರ ಸಲ್ಲಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯಸ್ಥಿಕೆಯಿಂದಾಗಿ ಪೈಲ್ವಾನ್ ಅವರು ಕುಸ್ತಿಯಿಂದ ವಿರಮಿಸಿದರು. ಆದರೆ, ಒಳಬೇಗುದಿ ತಣ್ಣಗಾಗಲಿಲ್ಲ. ಮತದಾನ ಮುಗಿಯುವವರೆಗೂ ಇದ್ದ ಮೌನ ಏಕಾಏಕಿ ಸ್ಫೋಟಿಸಿತು. ಅದರ ಫಲವೇ ಜಬ್ಬಾರ್, ನಸೀರ್ ಅಧಿಕಾರ ಕಳೆದುಕೊಂಡರು.

ಹಾಗೆ ನೋಡಿದರೆ, ಶಾಮನೂರು ಕುಟುಂಬದವರ ವಿರುದ್ಧವೇ ಕ್ರಮ ಜರುಗಿಸಬೇಕಾಗಿತ್ತು. 2024ರ ಲೋಕಸಭೆ ಚುನಾವಣೆಯಲ್ಲಿ ದಾವಣಗೆರೆಯಲ್ಲಿ ತಮ್ಮ ಸೊಸೆ ಪ್ರಭಾ ಅವರನ್ನು ಗೆಲ್ಲಿಸಿಕೊಂಡು ಬರಬೇಕೆಂಬ ಉಮೇದಿನಲ್ಲಿದ್ದ ಶಾಮನೂರು ಅವರು, ಶಿವಮೊಗ್ಗ ಕ್ಷೇತ್ರದಲ್ಲಿ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಮಗ, ಬಿ.ವೈ. ರಾಘವೇಂದ್ರ ಅವರನ್ನು ಗೆಲ್ಲಿಸಿ ಎಂದು ಬಹಿರಂಗವಾಗಿ ಕರೆ ಕೊಟ್ಟಿದ್ದರು. ಈಗಿನ ಉಪಚುನಾವಣೆಯಲ್ಲಿ ಅಭ್ಯರ್ಥಿ ಘೋಷಣೆಗೆ ಮುನ್ನವೇ, ಸಮರ್ಥ ಶಾಮನೂರು ನಾಮಪತ್ರ ಸಲ್ಲಿಸಿದರು. ಮುಸ್ಲಿಂ ಸಮುದಾಯದ ಅಭ್ಯರ್ಥಿಗಳು ಅಸಮಾಧಾನ ತೋರಿದ್ದು ಅಪರಾಧವೆಂಬುದಾದರೆ, ಪಕ್ಷದ ಶಿಸ್ತನ್ನು ಮೀರಿದ ಅಜ್ಜ, ಮೊಮ್ಮಗನ ವಿರುದ್ಧ ಕ್ರಮ ಜರುಗಿಸದೇ ಇದ್ದುದು ಕಾಂಗ್ರೆಸ್‌ನ ಔದಾರ್ಯವಲ್ಲ, ನಿರ್ಲಜ್ಜ ಭಂಡತನ.

ಸಮುದಾಯಕ್ಕೆ ಟಿಕೆಟ್ ಬೇಕೆಂಬ ಹಟ ಹಿಡಿದ ಮುಸ್ಲಿಂ ನಾಯಕರಲ್ಲೂ ಸ್ವಾರ್ಥ ಇದೆ. ನಸೀರ್ ಅಹಮದ್ ವಿಧಾನಪರಿಷತ್ತಿನ ಅವಧಿ ಇದೇ ಜೂನ್‌ಗೆ ಕೊನೆಯಾಗಲಿದೆ. ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿಯಾಗಿದ್ದರೂ ಈಚೆಗಿನ ದಿನಗಳಲ್ಲಿ ಸಿದ್ದರಾಮಯ್ಯ ಜತೆಗೆ ಅವರ ಸಂಬಂಧ ಹಳಸಿತ್ತು. ಮತ್ತೊಂದು ಅವಧಿಗೆ ಪರಿಷತ್ ಸದಸ್ಯರಾಗುವುದು ಕಷ್ಟ ಎಂಬುದು ಅರಿವಾಗಿತ್ತು. ದಾವಣಗೆರೆಯಲ್ಲಿ ಟಿಕೆಟ್ ಬೇಡಿಕೆ ಇಟ್ಟು, ಅದು ಸಿಗದಿದ್ದರೆ ಜುಲೈ ವೇಳೆಗೆ ಕಾಂಗ್ರೆಸ್‌ಗೆ ಲಭ್ಯವಾಗುವ 9 ಸ್ಥಾನಗಳ ಪೈಕಿ ಎರಡನ್ನು ದಕ್ಕಿಸಿಕೊಂಡು, ಅದರಲ್ಲಿ ಒಂದನ್ನು ನಸೀರ್‌ಗೆ ಕೊಡಿಸುವುದು ಈ 'ಟಿಕೆಟ್ ಲಾಬಿ'ಯ ಹಿಂದಿನ ಮತ್ತೊಂದು ಮಗ್ಗುಲು. ಒಂದಕ್ಕೆ ಆಸೆಪಟ್ಟು ಇರುವುದನ್ನೂ ಕಳೆದುಕೊಂಡ ಸ್ಥಿತಿ ನಸೀರ್ ಅವರದ್ದಾಗಿದೆ.

ಪರಿಷತ್ ಸ್ಥಾನದ ಲೆಕ್ಕಾಚಾರದ ಜತೆಗೆ, ಮೇ ಮೊದಲ ವಾರ ನಡೆಯಬಹುದಾದ ಸಂಪುಟ ಪುನರ್ ರಚನೆ ವೇಳೆ ಅವಕಾಶ ಗಿಟ್ಟಿಸಲು ಕೆಲವು ಮುಸ್ಲಿಂ ನಾಯಕರು ಅಡಿಯಿಟ್ಟಿದ್ದು, ಈ ರಾಜಕೀಯ ಪ್ರಹಸನದ ಮತ್ತೊಂದು ಆಯಾಮ. ಹಿಂದೊಮ್ಮೆ ಕಾಂಗ್ರೆಸ್ ಬುಟ್ಟಿಯೊಳಗಿದ್ದ ಮುಸ್ಲಿಂ ಮತ ಬ್ಯಾಂಕ್, ಜನತಾ ಪರಿವಾರ ಪ್ರಬಲಗೊಂಡ ಮೇಲೆ, ಎರಡೂ ಪಕ್ಷದಲ್ಲೂ ಸಮಪ್ರಮಾಣದಲ್ಲಿ ಹಂಚಿಕೆಯಾಗಿತ್ತು. ಜನತಾ ಪರಿವಾರ ವಿಘಟನೆಗೊಂಡು ಜೆಡಿಎಸ್ ರೂಪುಗೊಂಡಾಗಲೂ ಮುಸ್ಲಿಂ ಮತಗಳು ಕೈತಪ್ಪಿರಲಿಲ್ಲ. ಬಿಜೆಪಿ ಜತೆಗೆ ಜೆಡಿಎಸ್ ಸಖ್ಯ ಹಾಗೂ ಸಿದ್ದರಾಮಯ್ಯ ಕಾಂಗ್ರೆಸ್ ಸೇರ್ಪಡೆಯಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಮುಸ್ಲಿಂ ಮತಗಳು ಕಾಂಗ್ರೆಸ್‌ನತ್ತ ಹರಿಯತೊಡಗಿದವು. 2013ರ ಚುನಾವಣೆ ಹೊತ್ತಿಗೆ ಇದು ಮತ್ತಷ್ಟು ಪ್ರಖರಗೊಂಡು, ಕಾಂಗ್ರೆಸ್‌ನ ಕಾಯಂ ಮತಗಳಂತಾದವು. ಜಮೀರ್ ಕಾಂಗ್ರೆಸ್ ಸೇರಿದ ಮೇಲೆ, ತಮ್ಮದೇ ವರ್ಚಸ್ಸು, ಹಣ ಬಲದ ಕಾರಣಕ್ಕೆ ಪ್ರಭಾವಿ ನಾಯಕರಾಗಿ ಗುರ್ತಿಸಿಕೊಂಡು, ಸಮುದಾಯ ಕೇಂದ್ರೀಕರಿಸಿದ ರಾಜಕಾರಣ ಮಾಡಿದರು. ಮುಸ್ಲಿಮರು ಕಾಂಗ್ರೆಸ್ ಅನ್ನು ನಂಬಿದ್ದರಿಂದಲೇ, 2023ರ ವಿಧಾನಸಭೆ ಚುನಾವಣೆಯಲ್ಲಿ ಭಾರಿ ಬಹುಮತ ಆ ಪಕ್ಷಕ್ಕೆ ದಕ್ಕಿತು. ಮುಸ್ಲಿಮರು ಕೊಟ್ಟ ಮಮಕಾರವನ್ನು ದಾವಣಗೆರೆಯಲ್ಲಿ ತೋರಿ, ಋಣ ತೀರಿಸುವ ಕೆಲಸವನ್ನು ಕಾಂಗ್ರೆಸ್ ಮಾಡಲಿಲ್ಲ. ಇದು ಪ್ರಮಾದ. ಈಗ ನಡೆಯುತ್ತಿರುವುದಂತೂ ಕಾಂಗ್ರೆಸ್‌ನ ಆತ್ಮಘಾತುಕ ನಡೆ, ಸಂಘಟನಾತ್ಮಕ ಬೇರುಗಳಿಗೆ ದೊಡ್ಡ ಹೊಡೆತ.

ನಾಯಕತ್ವಕ್ಕಾಗಿ ರಾಜ್ಯದಲ್ಲಿ ನಡೆಯುತ್ತಿರುವ ಕದನ ಈಗ ಮತ್ತೊಂದು ಮಜಲು ತಲಪಿದೆ. ಸಿದ್ದರಾಮಯ್ಯ ಅವರ ಆಪ್ತರನ್ನು ಕಟ್ಟಿಹಾಕಲು ಶಿವಕುಮಾರ್ ಬಣ ನಡೆಸುತ್ತಿರುವ ಯತ್ನದ ಭಾಗ ಇದು ಎಂಬ ಚರ್ಚೆ ಕಾಂಗ್ರೆಸ್ ಪಡಸಾಲೆಯಲ್ಲಿ ಜೋರಾಗಿದೆ. ಸಚಿವರಾಗಿದ್ದ ಕೆ.ಎನ್. ರಾಜಣ್ಣ, ರಾಜಕೀಯ ಕಾರ್ಯದರ್ಶಿಗಳಾಗಿದ್ದ ಕೆ. ಗೋವಿಂದ ರಾಜ, ನಸೀರ್ ಅಹಮದ್ ಅವರನ್ನು ವಜಾಗೊಳಿಸಿದ ಕ್ರಮಗಳು ಇದರ ಸೂಚನೆಗಳು. ಹಾಗೆಂದು ಸಿದ್ದರಾಮಯ್ಯ ಸುಮ್ಮನೆ ಕುಳಿತಿಲ್ಲ. ಎದುರಾಳಿ ದಾಳಕ್ಕೆ ಪ್ರತಿದಾಳ ಉರುಳಿಸುತ್ತಿರುವ ಅವರು, ಹೈಕಮಾಂಡ್ ಸೂಚನೆಗೆ ತಲೆಬಾಗುತ್ತಲೇ ತಮ್ಮ ಸ್ಥಾನಭದ್ರಪಡಿಸಿಕೊಳ್ಳುವತ್ತ ಲಕ್ಷ್ಯ ನೆಟ್ಟಿದ್ದಾರೆ. ಶಿವಕುಮಾರ್ ತಮ್ಮ ಕುರ್ಚಿಯ ಹತ್ತಿರ ಬರದಂತೆ ದಿಗ್ಬಂಧನಕ್ಕೆ ಬೇಕಾದುದನ್ನು ಮಾಡುತ್ತಿದ್ದಾರೆ. ಅಧಿಕಾರದ ವ್ಯಸನದ ನೇರ ಪರಿಣಾಮ ಜನರ ಮೇಲಾಗುತ್ತಿದೆ.

ಕೊನೆಯದಾಗಿ ಇಲ್ಲಿ ಉಲ್ಲೇಖಿಸಲೇಬೇಕಾದ ಒಂದು ಸಂಗತಿ, 'ಮುಸ್ಲಿಮರ ಮತಗಳೇ ಬೇಡ, ಅವರಿಗೆ ಟಿಕೆಟ್ ಕೊಡುವುದಿಲ್ಲ' ಎಂದು ಬಹಿರಂಗವಾಗಿ ಘೋಷಿಸುವ ಬಿಜೆಪಿ ನಾಯಕರು 'ದಾವಣಗೆರೆಯಲ್ಲಿ ಮುಸ್ಲಿಮರಿಗೆ ಅನ್ಯಾಯ ಮಾಡಲಾಗಿದೆ' ಎಂದು ನಿತ್ಯವೂ ಪರಿತಪಿಸಿ, ಪ್ರಚಾರವನ್ನೂ ಮಾಡಿದರು. ಇದು ಆತ್ಮವಂಚನೆಯ ಪರಾಕಾಷ್ಠೆ. ನಾಚಿಕೆಗೇಡಿನ ಚೇಷ್ಟೆ.



ವಾಚಕರ ವಾಣಿ

ಬುದ್ಧ–ಭೀಮರ ಮೈತ್ರಿ–ವಿವೇಕಕ್ಕೆ ಪೆಟ್ಟು

'**ಭಾವಚಿತ್ರ** ವಿವಾದ: ಅಂಬೇಡ್ಕರ್ ಜಯಂತಿ ರದ್ದು' (ಪ್ರ.ವಾ., ಏ. 15) ಸುದ್ದಿ ಓದಿ ಮನಸ್ಸಿಗೆ ಆಘಾತವಾಯಿತು. ಕಳೆದ ಐದು ದಶಕಗಳಿಂದ ದಲಿತರಲ್ಲಿ ವೈಚಾರಿಕ ಪ್ರಜ್ಞೆ ಮೂಡಿಸಲು ಹಾಗೂ ಸಮಾನತೆಯ ಆಶಯಗಳನ್ನು ಅರ್ಥ ಮಾಡಿಸಲು ದಲಿತ ಚಳವಳಿ ದೊಡ್ಡ ಪ್ರಯತ್ನ ಮಾಡಿದೆ. ಹಸಿರುಕ್ರಾಂತಿಯ ಹರಿಕಾರ ಮತ್ತು ಈ ಹೊತ್ತಿನ ಆಹಾರಭದ್ರತೆಗೆ ಬಾಬು ಜಗಜೀವನರಾಂ ಅವರ ದೂರದೃಷ್ಟಿ, ಅವರು ತಂದ ಕಾನೂನುಗಳೇ ಕಾರಣ. ಇಂತಹ ಮಹಾನ್ ವ್ಯಕ್ತಿಯ ಜೊತೆಗೆ ಈ ದೇಶದ ಮಹಾಚೇತನ ಅಂಬೇಡ್ಕರ್ ಅವರನ್ನು ಒಟ್ಟಿಗೆ ಕಾಣುವುದು ನಮ್ಮ ಮನಸ್ಸಿಗೆ ಅರ್ಥಪೂರ್ಣವಾಗಿ ಕಾಣಿಸಬೇಕು. ಆದರೆ, ಈ ಸಮೀಕರಣವನ್ನು ಸಮಸ್ಯೆಯ ರೂಪದಲ್ಲಿ ನೋಡುವುದು ಮಾನಸಿಕ ದೌರ್ಬಲ್ಯದ ಸಂಕೇತದಂತಿದೆ. ಅಪಾರ ನೋವು, ಅವಮಾನ ಅನುಭವಿಸಿದ ನಾವೇ ಈ ಕೃತ್ಯ ಮಾಡಿರುವುದು ದುರದೃಷ್ಟಕರ. ಇದು ಬುದ್ಧನ ಮೈತ್ರಿಭಾವ ಮತ್ತು ಬಾಬಾಸಾಹೇಬರ ಅರಿವು–ವಿವೇಕಕ್ಕೆ ಬಿದ್ದಿರುವ ಪೆಟ್ಟು.

ಸುಬ್ಬು ಹೊಲೆಯಾರ್, ಬೆಂಗಳೂರು

ರೈತ ಚಳವಳಿಯು ಮರುಹುಟ್ಟು ಪಡೆಯಲಿ

'**ಹಸಿರು** ಟವೆಲ್: ಮರುಕಳಿಸಲಿ ವೈಭವ–ಘನತೆ' ಲೇಖನವು (ಲೇ: ಚಂಸು ಪಾಟೀಲ, ಪ್ರ.ವಾ., ಏ. 15) ರೈತ ಸಂಘದ ಸ್ಥಿತಿಗತಿಯನ್ನು ತೆರೆದಿಟ್ಟಿದೆ. ರೈತ ಚಳವಳಿಯು ಒಡೆದಮನೆ ಆಗಿರುವುದು ನಾಡಿನ ದುರಂತವೇ ಸರಿ. ಹಸಿರು ಟವೆಲ್ ಕಂಡರೆ ಜನರು ಸಂಶಯಪಡುವಂತಾಗಿದೆ. ಊರಿಗೊಂದು ಬೀದಿಗೊಂದು ಗುಂಪು ಕಟ್ಟಿಕೊಂಡು ತಾವೇ ನಾಡನ್ನು ಉದ್ಧಾರ ಮಾಡುವುದಾಗಿ ಹೇಳಿದರೆ ಅದು ಭ್ರಮೆಯಲ್ಲದೆ ಬೇರೇನೂ ಅಲ್ಲ. ಈಗಲೂ ಕಾಲ ಮಿಂಚಿಲ್ಲ. ನಾಡಿನ ಏಳಿಗೆಗಾಗಿ ಸ್ಪಷ್ಟ ಧ್ಯೇಯೋದ್ದೇಶ, ನೀಲನಕ್ಷೆ ಸಿದ್ಧಪಡಿಸಿ ಸಶಕ್ತ ನಾಯಕತ್ವ ನೀಡಿದರೆ ರೈತ ಸಂಘ ಮರುಹುಟ್ಟು ಪಡೆಯಲಿದೆ. ಪಾಳೇಗಾರಿಕೆಯ ಸಂಸ್ಕೃತಿಗೆ ನಾಡಿನಲ್ಲಿ ಜಾಗವಿಲ್ಲ; ಸ್ವಯಂಘೋಷಿತ ರೈತ ನಾಯಕರು ಈ ಸತ್ಯ ಅರಿಯಬೇಕಿದೆ.

ವಾಸಣ್ಣ, ಧಾರವಾಡ

ಭ್ರೂಣಹತ್ಯೆ ತಡೆ: ಹೂಲಿ ಗ್ರಾಮ ಮಾದರಿ

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹೂಲಿ ಗ್ರಾಮ ಪಂಚಾಯಿತಿಯಲ್ಲಿ ಹೆಣ್ಣು ಭ್ರೂಣ ಹತ್ಯೆ ತಡೆಯಲು 'ಕುಮಾರಿ ಸಮೃದ್ಧಿ' ಎಂಬ ವಿನೂತನ ಯೋಜನೆ ಜಾರಿಗೊಳಿಸಲಾಗಿದೆ. ಸರ್ಕಾರಿ ನೌಕರರ ಕುಟುಂಬ ಹೊರತುಪಡಿಸಿ ಉಳಿದ ಕುಟುಂಬಗಳಲ್ಲಿ ಮೊದಲ ಹಾಗೂ ಎರಡನೇ (ಸತತ) ಹೆಣ್ಣುಮಗು ಜನಿಸಿದರೆ ಪ್ರತಿ ಮಗುವಿಗೆ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ ₹5,500 ಠೇವಣಿ ಇಡಲಾಗುತ್ತಿದೆ. ಆ ಮೂಲಕ ಮಹಿಳಾ ಸಬಲೀಕರಣ ಮತ್ತು ಆರ್ಥಿಕ ಭದ್ರತೆ ನೀಡುತ್ತಿರುವುದು ಮಾದರಿಯಾದುದು. ರಾಜ್ಯದ ಉಳಿದ ಪಂಚಾಯಿತಿಗಳೂ ಈ ಮಾದರಿಯನ್ನು ಅನುಸರಿಸಲಿ.

ನಾಗಭೂಷಣ ಜೆ.ಟಿ., ಚಳ್ಳಕೆರೆ

'ಪತ್ರಾಗಾರ ಸಾಹಿತ್ಯ' ಪ್ರಕಟಗೊಳ್ಳಲಿ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯು ಆಧುನಿಕ ಇತಿಹಾಸಕ್ಕೆ ಸಂಬಂಧಿಸಿದ ಅಧಿಕೃತ ಸರ್ಕಾರಿ ಮತ್ತು ಖಾಸಗಿ ದಾಖಲೆಗಳನ್ನು ವೈಜ್ಞಾನಿಕವಾಗಿ ಸಂರಕ್ಷಿಸುವ ಕಾರ್ಯದಲ್ಲಿ ತೊಡಗಿದೆ. ಬೆಂಗಳೂರಿನ ಕೇಂದ್ರ ಕಚೇರಿಯ ಜೊತೆಗೆ ಮೈಸೂರು, ಧಾರವಾಡ, ಕಲಬುರಗಿಯಲ್ಲಿ ವಿಭಾಗೀಯ ಕಚೇರಿ ಹೊಂದಿದೆ. ಇಲ್ಲಿರುವ ಐತಿಹಾಸಿಕ ದಾಖಲೆಗಳನ್ನಾಧರಿಸಿ ರಾಷ್ಟ್ರ ಮಟ್ಟದ ನಿಯತಕಾಲಿಕೆ ಪ್ರಕಟಿಸಬೇಕು. ಪತ್ರಾಗಾರ ದಾಖಲೆಗಳನ್ನಾಧರಿಸಿ ಕೈಗೊಂಡ ಸಂಶೋಧನಾ ಕೃತಿಗಳ ಪ್ರಕಟಣೆಗೆ ಆದ್ಯತೆ ನೀಡಿ, ಆರ್ಥಿಕ ನೆರವು ನೀಡಬೇಕು. ಸಾಹಿತ್ಯ ಕೃತಿಗಳ ಪ್ರಕಟಣೆಗೆ, ಪುರಾತತ್ವ ವಿಷಯ ಕುರಿತು ವಿಚಾರ ಸಂಕಿರಣ ಹಾಗೂ ಕಾರ್ಯಾಗಾರಗಳಿಗೆ ನೆರವು ನೀಡಲು ಬೇರೆ ಇಲಾಖೆಗಳಿವೆ. ಇದಕ್ಕೆ ಸಲಹೆ ಮತ್ತು ಮಾರ್ಗದರ್ಶನ ನೀಡಲು ಆಧುನಿಕ ಇತಿಹಾಸ ತಜ್ಞರ ಸಮಿತಿ ರಚಿಸಬೇಕಿದೆ.

ಬಸವರಾಜ ಎನ್. ಅಕ್ಕಿ, ಧಾರವಾಡ

ಸಿಬಿಎಸ್‌ಇ: ಮೊಳಗಲಿ ಕನ್ನಡ ಡಿಂಡಿಮ

ಕೇಂದ್ರೀಯ ಪಠ್ಯಕ್ರಮ ಅನುಸರಿಸುವ ಸಿಬಿಎಸ್‌ಇ ಶಾಲೆಗಳಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಆರನೇ ತರಗತಿಯಿಂದ ತ್ರಿಭಾಷಾ ಸೂತ್ರ ಅನುಸರಿಸಲು ಆದೇಶಿಸಲಾಗಿದೆ. ಈ ನಿಯಮದ ಪ್ರಕಾರ, ಈ ಶಾಲೆಗಳಲ್ಲಿ ಕಲಿಯುವ ಮಕ್ಕಳು ಕನ್ನಡವನ್ನು ಪ್ರಥಮ ಭಾಷೆಯಾಗಿ ಆಯ್ಕೆ ಮಾಡಿಕೊಳ್ಳಬಹುದು. ಇಷ್ಟು ದಿನ ತ್ರಿಭಾಷಾ ಸೂತ್ರದಿಂದ ಕನ್ನಡ ಭಾಷೆ ತುಳಿತಕ್ಕೆ ಒಳಗಾಗಬಹುದು ಎಂಬ ಭಯವು ಇದರಿಂದ ದೂರಾಗಿದೆ. ರಾಜ್ಯದಲ್ಲಿರುವ ಸಿಬಿಎಸ್‌ಇ ಶಾಲೆಗಳು ಕನ್ನಡವನ್ನು ಪ್ರಥಮ ಭಾಷೆಯಾಗಿ ಆಯ್ಕೆ ಮಾಡಿಕೊಳ್ಳುವ ಮಕ್ಕಳಿಗೆ ಕಲಿಯಲು ಅವಕಾಶ ನೀಡಬೇಕು. ಈ ಕುರಿತು ಪಾಲಕರಿಗೂ ಸರಿಯಾದ ಮಾಹಿತಿ ಒದಗಿಸಬೇಕಿದೆ.

ಸುರೇಂದ್ರ ಪೈ, ಭಟ್ಕಳ

ಡಿಜಿಟಲ್ ವ್ಯಸನ; ಮಕ್ಕಳ ಭವಿಷ್ಯಕ್ಕೆ ಕುತ್ತು

ಜೀವನಶೈಲಿಯ ಬದಲಾವಣೆಯಿಂದ ಜನರ ಮಾನಸಿಕ ನೆಮ್ಮದಿಗೆ ಭಂಗವಾಗಿದೆ. ನಿಮ್ಹಾನ್ಸ್ ಸಂಸ್ಥೆಯಲ್ಲಿ ತೆರೆದಿರುವ 'ಟೆಲಿ-ಮನಸ್' ಸಹಾಯವಾಣಿಗೆ ಬರುತ್ತಿರುವ ಕರೆಗಳ ಏರಿಕೆಯೇ ಇದಕ್ಕೆ ಪುಷ್ಟಿ ನೀಡುವಂತಿದೆ (ಪ್ರ.ವಾ., ಏ. 14). ಇದಕ್ಕೆ ಮೂಲ ಕಾರಣ ಪೋಷಕರು. ತಾವು ಪಟ್ಟ ಕಷ್ಟವನ್ನು ಮಕ್ಕಳು ಪಡಬಾರದೆಂದು ಅವರನ್ನು ಪೋಷಿಸುತ್ತಾರೆ. ಮಕ್ಕಳಿಗೆ ಕಷ್ಟಗಳು ಎದುರಾದರೆ ಸಹಜವಾಗಿ ಆತಂಕಕ್ಕೆ ಒಳಗಾಗಿ ಮಾನಸಿಕವಾಗಿ ಕುಗ್ಗುತ್ತಾರೆ.

ಮಕ್ಕಳನ್ನು ಡಿಜಿಟಲ್ ವ್ಯಸನದಿಂದ ದೂರವಿರಿಸಬೇಕು. ಇದಕ್ಕಾಗಿ ಅವರಿಗೆ ಸಾಹಿತ್ಯ ಕೃತಿಗಳನ್ನು ಓದುವ, ನಾಟಕ ನೋಡುವ ಹವ್ಯಾಸ ಬೆಳೆಸಬೇಕು. ಜೀವನಕ್ಕೆ ಧನಾತ್ಮಕ ಲಾಭ ತಂದುಕೊಡುವ ಓದುವ ಅಭಿರುಚಿಯನ್ನು ಪೋಷಕರು ಬೆಳೆಸಿಕೊಳ್ಳಬೇಕು. ಆಗ ಮಕ್ಕಳು ಅದೇ ದಾರಿಯಲ್ಲಿ ಸಾಗುತ್ತಾರೆ. ಗ್ರಾಮೀಣ ಕ್ರೀಡೆಗಳತ್ತ ಅವರ ಮನಸ್ಸನ್ನು ವಾಲಿಸಬೇಕು. ಇದು ಜೀವನದ ನೊಗ ಹೊರಲು ಅನುಕೂಲ.

ಹೆಂದೊರೆ ಸಂಜು, ಶಿರಾ

ಚಾಟಿ

ದ್ರೋಹ ಮುಂದುವರಿಕೆ

ಉತ್ತರ ಭಾರತದಲ್ಲಿ ಜನಸಂಖ್ಯೆ ಜಾಸ್ತಿ; ಅದಕ್ಕೆ ಅಲ್ಲಿ ಲೋಕಸಭಾ ಕ್ಷೇತ್ರಗಳು ಹೆಚ್ಚಾಗಬೇಕು ಎನ್ನುವುದಾದರೆ, ದಕ್ಷಿಣ ಭಾರತದ ರಾಜ್ಯಗಳು ಹೆಚ್ಚು ತೆರಿಗೆ ಸಂಗ್ರಹ ಮಾಡಿದರೂ ಹಣಕಾಸು ಆಯೋಗವು ಕಡಿಮೆ ಹಂಚಿಕೆ ಮಾಡುವುದೇಕೆ? ಹಿಂದಿ ಸಾಮ್ರಾಜ್ಯಶಾಹಿ ವ್ಯವಸ್ಥೆಯು ಮೊದಲಿನಿಂದಲೂ ಇದೇ ರೀತಿ ದಕ್ಷಿಣ ಭಾರತೀಯರಿಗೆ ದ್ರೋಹ ಮಾಡಿಕೊಂಡು ಬಂದಿದೆ.

ಸುಹಾಸ್ ದುಗಾ, 'ಎಕ್ಸ್'ನಿಂದ

ಕಿಡಿನುಡಿ

ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯ ಪ್ರಸ್ತಾವವು ದಕ್ಷಿಣ ರಾಜ್ಯಗಳ ಧ್ವನಿಯನ್ನು ಹತ್ತಿಕ್ಕುವ ಹುನ್ನಾರವಾಗಿದೆ. ಜನಸಂಖ್ಯೆ ನಿಯಂತ್ರಿಸದ ರಾಜ್ಯಗಳಿಗೆ ಇದರ ಹೆಚ್ಚಿನ ಫಲ ಸಿಗಲಿದೆ. ಜನಸಂಖ್ಯೆ ನಿಯಂತ್ರಿಸಿದ ರಾಜ್ಯಗಳ ಪಾಲಿಗೆ ಈ ಪ್ರಸ್ತಾವವು ಉರುಳಾಗಲಿದೆ.

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಚುರುಮುರಿ

ಏಕ್ ಮೇರಾ ಏಕ್ ತೇರಾ!

• ಗುರು ಪಿ.ಎಸ್.

'**ಆಯಿಯೆ... ಆಯಿಯೆ... ಬೈಟಿಯೆ...**' ಶುದ್ಧ ಹಿಂದಿಯಲ್ಲಿ ಆದರದಿಂದ ಸ್ವಾಗತಿಸಿದರು ಉತ್ತರ ಪ್ರದೇಶದ ಎಂಪಿ.

'ಈ ಉರಿ ಬಿಸಿಲಲ್ಲೂ ನಿಮ್ಮ ಮಧುರ ಮಾತು ಕೇಳಿ ಮನದುಂಬಿ ಬಂತು. ಶುಕ್ರಿಯಾ... ಶುಕ್ರಿಯಾ' ಎಂದು ಹಿರಿಹಿರಿ ಹಿಗ್ಗುತ್ತಾ ಬಂದು ಕೂತರು ಕರ್ನಾಟಕದ ಸಂಸದ.

ಉತ್ತರದ ಸಂಸದ ಹಿಂದಿಯಲ್ಲೇ ಮಾತು ಮುಂದುವರಿಸಿದರೆ, ಕರ್ನಾಟಕದ ಎಂಪಿ ತಿಣುಕಾಡುತ್ತಾ ಅರ್ಧ ಕನ್ನಡ, ಅರ್ಧ ಹಿಂದಿಯಲ್ಲಿ ಮಾತಾಡತೊಡಗಿದರು.

'ಇನ್ನೇನು, ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಶುರುವಾಗುತ್ತೆ, ನಿಮ್ಮ ಕರ್ನಾಟಕದ ಸಂಸದರ ಸಂಖ್ಯೆ 28ರಿಂದ 40ಕ್ಕೆ ಏರಬಹುದು. ಆಪ್ ಕೊ ಬಹುತ್ ಖುಷ್ ಹೈನಾ...?'

'ಹಾಂ ಜೀ... ಆದರೆ, ನಾರ್ತ್ ಇಂಡಿಯಾ, ಅಂದ್ರೆ ಈ ಹಿಂದಿ ಬೆಲ್ಟ್‌ನವರ ಸಂಖ್ಯೆ 76 ಪರ್ಸೆಂಟ್ ಜಾಸ್ತಿ ಆದ್ರೆ, ಸೌತ್‌ನವರದು ಶೇ 30ರ ಆಸುಪಾಸು ಅಷ್ಟೇ ಜಾಸ್ತಿ ಆಗುತ್ತಲ್ವ?' ಧೈರ್ಯ ಮಾಡಿ ಕೇಳಿದರು ಕನ್ನಡದ ಎಂಪಿ!

'ಓ ಐಸಾ ನಹಿ ಹೇ ಜೀ... ನಿಮಗೆ ಸರಿಯಾಗಿ ವಿವರಿಸ್ತೀನಿ ದೇಖಿಯೇ' ಎಂದವರೆ, ಜನಸಂಖ್ಯೆ ಆಧಾರದಲ್ಲಿ ದೇಶವನ್ನು 9 ಭಾಗ ಮಾಡಿ ಹೇಳತೊಡಗಿದರು, 'ಏಕ್ ತೇರಾ, ಏಕ್ ಮೇರಾ, ದೋ ತೇರಾ, ದೋ ಮೇರಾ, ತೀನ್ ತೇರಾ, ತೀನ್ ಮೇರಾ... ಬರಾಬರ್, ನೋ ಚೀಟಿಂಗ್...?' ಎಂದು ತೋರಿಸಿದರು. 6 ಭಾಗ ನಾರ್ತ್ ಇಂಡಿಯಾ ಕಡೆಗಿದ್ದರೆ, 3 ಭಾಗ ದಕ್ಷಿಣ ಭಾರತದ ಕಡೆಗಿತ್ತು.

'ಬರಾಬರ್, ಬರಾಬರ್...' ಎಂದು ತಲೆಯಾಡಿಸುತ್ತಾ ಎದ್ದರು ಹೆಮ್ಮೆಯ ಕನ್ನಡಿಗ!

'ಡೌಟ್ ಹೇಯ್ ತೊ ಆಪ್ ಕೆ ಹೈಕಮಾಂಡ್ ಕೊ ಪೂಛಿಯೇ...'

'ಅಯ್ಯೋ ಹೈಕಮಾಂಡ್ ಮುಂದೆ ಬಾಯಿ ಬಿಡೋದಾ? ಉಚ್ಚಾಟನೆ ಮಾಡಿಬಿಡ್ತಾರೆ... ಆಪ್ ಕಾ ಬರಾಬರ್ ಹೈ, ಬರಾಬರ್ ಹೈ, ನೋ ಚೀಟಿಂಗ್, ನೋ ಚೀಟಿಂಗ್' ಎನ್ನುತ್ತಾ ಖುಷಿಯಿಂದ ಹೊರಟರು ಕರ್ನಾಟಕದ ಎಂಪಿ!

25 ವರ್ಷಗಳ ಹಿಂದೆ

ಸೋಮವಾರ, 16-4-2001

• ಸಹ ಸದಸ್ಯರಾಗಿ ಶಿವಪ್ಪ ಕಾಂಗ್ರೆಸ್‌ಗೆ ಸೇರ್ಪಡೆ

ಬೆಂಗಳೂರು, ಏ. 15– ಬಿಜೆಪಿಯಿಂದ ಉಚ್ಚಾಟನೆಗೊಂಡಿದ್ದ ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಹಾಗೂ ಸಕಲೇಶಪುರ ಶಾಸಕ ಬಿ.ಬಿ. ಶಿವಪ್ಪ ಅವರನ್ನು ಇಂದು ಅಧಿಕೃತವಾಗಿ ಕಾಂಗ್ರೆಸ್ ಪಕ್ಷದ ಸಹ ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಯಿತು.

ಮುಖ್ಯಮಂತ್ರಿ ಅವರ ಅಧಿಕೃತ ನಿವಾಸ 'ಅನುಗ್ರಹ'ದಲ್ಲಿ ಕೆಪಿಸಿಸಿ ನೂತನ ಅಧ್ಯಕ್ಷ ಅಲ್ಲಂ ವೀರಭದ್ರಪ್ಪ ಹಾಗೂ ಎಸ್.ಎಂ. ಕೃಷ್ಣ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಸೇರಿದ ನಂತರ ಮಾತನಾಡಿದ ಶಿವಪ್ಪ, 'ನಾನು ಮರಳಿ ಮನೆಗೆ ಬಂದಿದ್ದೇನೆ. ಸೂಕ್ತ ಅವಕಾಶ ಹಾಗೂ ಪ್ರೋತ್ಸಾಹ ಕೊಟ್ಟರೆ ಎಷ್ಟು ಶ್ರಮಪಟ್ಟು ಬಿಜೆಪಿ ಕಟ್ಟಿದೆನೋ ಅದಕ್ಕೂ ಹೆಚ್ಚಿನ ಶ್ರಮವಹಿಸಿ ಕಾಂಗ್ರೆಸ್ ಪಕ್ಷ ಕಟ್ಟಲು ಶ್ರಮಿಸುತ್ತೇನೆ' ಎಂದರು.

75 ವರ್ಷಗಳ ಹಿಂದೆ

ಸೋಮವಾರ, 16-4-1951

• ವಸ್ತು ಪ್ರದರ್ಶನದಲ್ಲಿ ಅಮಿತ ನೂಕುನುಗ್ಗಲು

ಬೆಂಗಳೂರು, ಏ. 15– ಕಬ್ಬನ್ ಪಾರ್ಕಿನಲ್ಲಿ ನಡೆಯುತ್ತಿರುವ ಅಖಿಲ ಭಾರತ ಕೈಗಾರಿಕಾ ಹಾಗೂ ಲಲಿತಕಲಾ ಪ್ರದರ್ಶನ ವೀಕ್ಷಿಸಲು ಇಂದು ಬಂದ ಜನಸಂದಣಿ ಹೆಚ್ಚಿ, ತಡಿಕೆಗಳನ್ನು ಹರಿದು ನಾಲ್ಕು ಬಾಗಿಲುಗಳ ಮೂಲಕ ಪ್ರವೇಶಿಸಿ ಗೊಂದಲವಾಯಿತು.

ಇಂದು ಸಂಜೆ ವೈಜಯಂತಿಮಾಲಾ ಅವರ ನೃತ್ಯವೇರ್ಪಟ್ಟಿತ್ತು. ಸುಮಾರು 6.15ಕ್ಕೆ ಪ್ರದರ್ಶನದ ಮುಂದೆ ಪ್ರೇಕ್ಷಕರ ಸಂಖ್ಯೆ ಬಹಳ ಹೆಚ್ಚಿ, ಟಿಕೆಟ್ ಕೊಡುವ ವ್ಯವಸ್ಥೆ ಸರಿತೂಗದೆ ಜನ ಬಾಗಿಲುಗಳಿಗೆ ಒತ್ತರಿಸುತ್ತಾ ಬಂದರು.

ಬಾಗಿಲು ಬಳಿಯಿದ್ದ ಪೊಲೀಸರು, ಸ್ಕೌಟಿನವರು ಜನರ ಒತ್ತಡವನ್ನು ತಡೆಯಲು ಆಗಲಿಲ್ಲ. ಅಲೆಯೋಪಾದಿಯಲ್ಲಿ ನುಗ್ಗಿದ ಜನರಲ್ಲಿ ಕೆಲವರು ಕೆಳಗೆ ಬಿದ್ದರು. ದೊಡ್ಡ ಬಾಗಿಲುಗಳ ಬಳಿಯಿರುವ ಸಣ್ಣಬಾಗಿಲುಗಳಿಂದಲೂ ಜನ ನುಗ್ಗಿದರು. ಟಿಕೆಟ್ ಬೂತ್‌ಗಳ ತಡಿಕೆಗಳನ್ನು ಹರಿದು ಹಾಕಿ ನುಗ್ಗಿದರು. ಪೊಲೀಸರು ಬೆಲ್ಟ್ ಮತ್ತು ಲಾಠಿ ಎತ್ತಬೇಕಾಯಿತು.

ಸಂಗತ

ಇಂಗ್ಲಿಷ್ ಮೌಲ್ಯಮಾಪನ: ಬೇಕಿದೆ ಸ್ಪಷ್ಟ ಮಾದರಿ

ಪಿಯು ಪರೀಕ್ಷೆಯಲ್ಲಿ ದಾಖಲೆ ಸಂಖ್ಯೆಯ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಆದರೆ, ಇಂಗ್ಲಿಷ್ ಭಾಷಾ ವಿಷಯದಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ.

• ಆರತಿ ಪಟ್ರಮೆ

ದ್ವಿತೀಯ ಪಿಯು ಪರೀಕ್ಷೆಗಳು ಮುಗಿದು ನಿರೀಕ್ಷಿತ ಫಲಿತಾಂಶ ಬಂದಾಗಿದೆ. ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ಶೇ 86.48ರಷ್ಟು ಫಲಿತಾಂಶ ಎಂದು ಸರ್ಕಾರ ಬೀಗುತ್ತಿದೆ. ಮೊದಲೇ ಮೂರು ಮಾದರಿ ಪತ್ರಿಕೆಗಳನ್ನು ಕೊಟ್ಟು, ಶೇ 70ರಷ್ಟು ಪ್ರಶ್ನೆಗಳು ಅದರಿಂದಲೇ ಬರುತ್ತವೆ ಎಂಬುದನ್ನು ಸೂಕ್ಷ್ಮವಾಗಿ ತಿಳಿಸಿ, ಪ್ರಶ್ನೆಕೋಠಿಯಿಂದ ಮಿಕ್ಕುಳಿದ ಶೇ 20–30ರಷ್ಟು ಪ್ರಶ್ನೆಗಳು ಬರುತ್ತವೆ, ಅಷ್ಟಕ್ಕೆ ಚೆನ್ನಾಗಿ ಸಿದ್ಧತೆ ಮಾಡಿಕೊಳ್ಳಿ ಎಂದೆಲ್ಲ ಮೊದಲೇ ಹೇಳಿ ಮಾಡಿದಂಥ ಪರೀಕ್ಷೆಯಿದು.

ಇರಲಿ, ಅನೇಕ ಪದವಿ ಕಾಲೇಜುಗಳಿಗೆ ವಿದ್ಯಾರ್ಥಿಗಳಿಲ್ಲ; ವಿಶ್ವವಿದ್ಯಾಲಯಗಳು ಖಾಲಿ ಹೊಡೆಯುತ್ತಿವೆ. ಅವುಗಳನ್ನು ಭರ್ತಿ ಮಾಡುವುದಕ್ಕಾದರೂ ದ್ವಿತೀಯ ಪಿಯು ಉತ್ತೀರ್ಣ ಆಗುವವರ ಸಂಖ್ಯೆ ಹೆಚ್ಚಾಗಬೇಕು! ಆದರೆ, ಭಾಷಾ ವಿಷಯಗಳಿಗೆ ಬಂದಾಗ ಮಾತ್ರ ಈ ಬಾರಿಯ ಮೌಲ್ಯಮಾಪನ ಇಂಗ್ಲಿಷ್ ಶಿಕ್ಷಕರಿಗೆ ಮುಜುಗರ ಉಂಟುಮಾಡುವಂತಿತ್ತು ಎಂಬುದರಲ್ಲಿ ಸಂಶಯವಿಲ್ಲ. ಕನ್ನಡದಲ್ಲಿ ಐದು ಸಾವಿರ ಮಂದಿಗೆ ನೂರಕ್ಕೆ ನೂರು ಅಂಕಗಳನ್ನು ಕೊಟ್ಟಿರುವ ವ್ಯವಸ್ಥೆ, ಇಂಗ್ಲಿಷ್‌ನಲ್ಲಿ ಬರೀ 27 ಮಂದಿಗಷ್ಟೇ ನೂರಕ್ಕೆ ನೂರು ಅಂಕ ಕೊಟ್ಟಿದೆ. ಇದನ್ನು ವಿದ್ಯಾರ್ಥಿಗಳು ಗಳಿಸಿದ್ದಾರೆ ಎನ್ನುವುದಕ್ಕಿಂತಲೂ ಮೌಲ್ಯಮಾಪಕರು ಕೊಟ್ಟಿದ್ದಾರೆ/ಕೊಟ್ಟಿಲ್ಲ ಎಂದು ಹೇಳುವುದೇ ಹೆಚ್ಚು ಸೂಕ್ತ.



ಭಾಷೆ ಮತ್ತು ಕಲೆಯ ವಿಷಯದಲ್ಲಿ ಪರಿಪೂರ್ಣತೆ ಎಂಬುದು ಇರುವುದಿಲ್ಲ. ಹಾಗಾಗಿ ನೂರಕ್ಕೆ ನೂರು ಅಂಕ ಕೊಡಬಾರದು ಎಂಬುದು ಹಿಂದಿನಿಂದಲೂ ಇದ್ದ ಅಲಿಖಿತ ನಿಯಮ. ಆ ನಿಯಮ ಸಡಿಲವಾಗುತ್ತಾ ಬಂದು, ಚೆನ್ನಾಗಿ ಬರೆದ ಮಕ್ಕಳಿಗೆ ಪೂರ್ಣ ಅಂಕಗಳನ್ನು ಕೊಟ್ಟರೆ ತಪ್ಪಿಲ್ಲ ಎಂಬ ವಾದ ಶುರುವಾಯಿತು. ಗಣಿತದಲ್ಲೋ ವಿಜ್ಞಾನದಲ್ಲೋ ಇಂಥ ಪ್ರಶ್ನೆಗಳಿಗೆ ಇಂಥದ್ದೇ ಉತ್ತರ ಎಂಬ ಸಿದ್ಧ ಮಾದರಿ ಇರುತ್ತದೆ. ಕಾಗುಣಿತ ದೋಷಗಳು, ಅಕ್ಷರ ತಪ್ಪುಗಳು ಅಲ್ಲಿ ಗಣ್ಯವಾಗುವುದಿಲ್ಲ. ಭಾಷೆ ಹಾಗಲ್ಲ. ಒಂದು ಸಣ್ಣ ಚಿಹ್ನೆಗೂ ಅಲ್ಲಿ ಪ್ರಾಮುಖ್ಯತೆ. ಹಾಗಾಗಿ, ಪೂರ್ಣ ಅಂಕಗಳನ್ನು ಕೊಡಲು ಬರುವುದಿಲ್ಲ ಎನ್ನುವುದನ್ನು ಒಪ್ಪಿಕೊಳ್ಳೋಣ. ಆದರೆ, ವರ್ಷಪೂರ್ತಿ ಶ್ರದ್ಧೆಯಿಂದ ಅಭ್ಯಾಸ ಮಾಡಿ, ಕಡಿಮೆಯೆಂದರೂ ಏಳೆಂಟು ಮಾದರಿ ಪತ್ರಿಕೆಗಳಿಗೆ ಉತ್ತರ ಬರೆದು, ಎಲ್ಲೂ ಏನೂ ತಪ್ಪಾಗದಂತೆ ಬರೆಯಬೇಕು ಎಂಬ ಹಟದಿಂದ ಪರೀಕ್ಷೆ ಬರೆದ ಮಕ್ಕಳಿಗೆ ನಿರೀಕ್ಷಿತ ಅಂಕಗಳು ಬಾರದೇ ಹೋದಾಗ ಮೌಲ್ಯಮಾಪನ ವ್ಯವಸ್ಥೆಯನ್ನು ಪ್ರಶ್ನಿಸಬೇಕಾದ ಅನಿವಾರ್ಯತೆ ಇದೆ.

ಇದೀಗ ವಿದ್ಯಾರ್ಥಿಗಳು ಉತ್ತರಪತ್ರಿಕೆಗಳ ಪ್ರತಿಗಳನ್ನು ತರಿಸಿಕೊಳ್ಳುತ್ತಿದ್ದಾರೆ. ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದೇ ಎಂದು ಆಸೆಯಿಂದ ಕೇಳುತ್ತಿದ್ದಾರೆ. ಆ ಉತ್ತರ ಪತ್ರಿಕೆಗಳನ್ನು ನೋಡುವಾಗ ಮೌಲ್ಯಮಾಪಕರ ನಿರ್ಲಕ್ಷ್ಯ ಎದ್ದು ಕಾಣಿಸುತ್ತದೆ. ನಿಯಮದ ಪ್ರಕಾರ, ವಿವರಣಾತ್ಮಕ ಪ್ರಶ್ನೆಗಳಿಗೆ ಮಕ್ಕಳು ಹೆಚ್ಚುವರಿಯಾಗಿ ಬರೆದಿದ್ದರೆ ಯಾವುದರಲ್ಲಿ ಅವರಿಗೆ ಹೆಚ್ಚು ಅಂಕಗಳು ಬಂದಿವೆಯೋ ಅದನ್ನು ಪರಿಗಣಿಸಬೇಕು. ಮೂರು ಪ್ರಶ್ನೆಗೆ ಉತ್ತರಿಸಬೇಕಾದಲ್ಲಿ ಚೆನ್ನಾಗಿ ಓದಿರುವ ಮಕ್ಕಳು ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರುತ್ತಾರೆ. ಇಂಥ ಸಂದರ್ಭದಲ್ಲಿ ಹೆಚ್ಚು ಅಂಕ ಪಡೆದ ಉತ್ತರದ ಬದಲು, ಕಡಿಮೆ ಅಂಕ ಬಂದಿರುವುದನ್ನು ಮೌಲ್ಯಮಾಪಕರು ಪರಿಗಣಿಸಿದ್ದಾರೆ. ಇಂತಹ ತಪ್ಪುಗಳು ಅನೇಕ ವಿದ್ಯಾರ್ಥಿಗಳ ಉತ್ತರಪತ್ರಿಕೆಯಲ್ಲಿ ಇವೆ.

ಇದಕ್ಕಿಂತ ವಿಷಾದದ ಸಂಗತಿಯೆಂದರೆ, ಮೂರು–ನಾಲ್ಕು ಅಂಕಗಳ ಪ್ರಶ್ನೆಗಳ ಉತ್ತರಗಳನ್ನು ಕೆಲವು ಮೌಲ್ಯಮಾಪಕರು ಓದಿರುವಂತೆ ಕಾಣಿಸುತ್ತಿಲ್ಲ. ಪಠ್ಯಪುಸ್ತಕದಲ್ಲಿ ಇರುವ ವಿಷಯಗಳು ಒಳಗೊಳ್ಳುವಂತೆ ಉತ್ತಮ ಪದಪ್ರಯೋಗ, ವಾಕ್ಯರಚನೆಗಳನ್ನು ಮಾಡಿ ಬರೆದಿರುವ ಉತ್ತರಗಳಿಗೆ ನಾಲ್ಕಕ್ಕೆ ಒಂದು ಅಂಕ ಕೊಟ್ಟಿರುವವರಿದ್ದಾರೆ. ಒಬ್ಬ ಮೌಲ್ಯಮಾಪಕ ಒಂದು ದಿನಕ್ಕೆ ಮೌಲ್ಯಮಾಪನ ಮಾಡಬೇಕಾದ ಉತ್ತರಪತ್ರಿಕೆಗಳು ಹೆಚ್ಚೆಂದರೆ ಇಪ್ಪತ್ತು. ಅಲ್ಲಿ ಅನಗತ್ಯ ಧಾವಂತಕ್ಕೆ ಅವಕಾಶವಿಲ್ಲ. ನಮ್ಮೆದುರು ಇರುವ ಉತ್ತರಪತ್ರಿಕೆ ಒಬ್ಬ ವಿದ್ಯಾರ್ಥಿಯ ಭವಿಷ್ಯದ ಪ್ರಶ್ನೆ ಎಂಬ ಎಚ್ಚರದಿಂದ ಮೌಲ್ಯಮಾಪನ ಮಾಡಬೇಕು. ಅದರ ಬದಲು ಮನಸ್ಸಿಗೆ ಬಂದಂತೆ ಅಂಕಗಳನ್ನು ಗೀಚಿದರೆ ಆ ವಿದ್ಯಾರ್ಥಿಗಾಗುವ ನಷ್ಟಕ್ಕೆ ಯಾರು ಹೊಣೆ? ತಮ್ಮದಲ್ಲದ ತಪ್ಪಿಗೆ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕಾಗಿ ಸಾವಿರಾರು ರೂಪಾಯಿ ಖರ್ಚು ಮಾಡಬೇಕು. ಇದು ನ್ಯಾಯವೆ?

ಅನ್ಯಾಯವಾಗಿ ಅಂಕಗಳನ್ನು ಕಳೆದುಕೊಂಡ ಮಕ್ಕಳ ಕಣ್ಣೀರು ನೋಡುವಾಗ ಸಿಟ್ಟು, ಹತಾಶೆ ಕಾಡುತ್ತದೆ. ಜತೆಗೆ ಇತರ ವಿಭಾಗಗಳು, ನಮ್ಮಲ್ಲಿ ಹತ್ತಾರು ಮಂದಿಗೆ ನೂರಕ್ಕೆ ನೂರು ಎಂದು ಬೀಗುವಾಗ, ಇಂಗ್ಲಿಷ್ ಉಪನ್ಯಾಸಕರು ಮೌನವಾಗಿ ಅವರನ್ನು ನೋಡಿಕೊಂಡು ನಿಲ್ಲಬೇಕಾದ ಪರಿಸ್ಥಿತಿ. ನಿರೀಕ್ಷಿತ ಫಲಿತಾಂಶ ಬಾರದೇ ಇದ್ದಾಗ 'ಇಂಗ್ಲಿಷ್ ನಿಂದಾಗಿ ಮಾರ್ಕ್ ಹೋಯಿತು' ಎಂದು ಎಲ್ಲರೂ ಆಡಿಕೊಳ್ಳುವಾಗ ನಾವು ನೆಲನೋಟಕರೇ ಆಗಬೇಕಷ್ಟೇ.

ಭಾಷೆಯಲ್ಲಿ ನೂರಕ್ಕೆ ನೂರು ಅಂಕ ಕೊಡುವುದು ಸರಿ ಎಂದಾದರೆ, ಅರ್ಹ ವಿದ್ಯಾರ್ಥಿಗಳಿಗೆಲ್ಲ ಸಿಗಬೇಕು. ಇಲ್ಲ ಎಂದಾದಲ್ಲಿ ಭಾಷಾ ವಿಷಯಗಳಲ್ಲಿ ಪೂರ್ಣ ಅಂಕಗಳನ್ನು ಕೊಡುವಂತಿಲ್ಲ ಎಂಬುದೇ ನಿಯಮವಾಗಬೇಕು. ರಾಜ್ಯದಲ್ಲಿ ಏಕರೂಪದ ಮೌಲ್ಯಮಾಪನ ವ್ಯವಸ್ಥೆ ಇಲ್ಲದೇ ಹೋದಲ್ಲಿ ಈ ವೈರುಧ್ಯ ಮುಂದಿನ ವರ್ಷಗಳಲ್ಲಿ ಇನ್ನಷ್ಟು ದೊಡ್ಡದಾಗಲಿದೆ. ಮೌಲ್ಯಮಾಪಕರು ಕೂಡ ವಿದ್ಯಾರ್ಥಿಗಳ ಭವಿಷ್ಯವನ್ನು ಗಮನದಲ್ಲಿರಿಸಿಕೊಂಡು ಉತ್ತರ ಪತ್ರಿಕೆ ಪರಿಶೀಲಿಸಬೇಕು.

ಲೇಖಕಿ: ಇಂಗ್ಲಿಷ್ ಉಪನ್ಯಾಸಕಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೆಪಿಎಸ್‌ಸಿ ಆಂತರಿಕ ಅಧ್ವಾನ, ಸರ್ಕಾರದ ಮೌನ

ಸ್ವಚ್ಛವಾಗಲಿ

ಕೆಪಿಎಸ್‌ಸಿ ಸುಧಾರಣೆಯಾಗಬೇಕು ಎಂದರೆ, ಅದರ ಅಧ್ಯಕ್ಷರು, ಸದಸ್ಯರು ಮತ್ತು ಕಾರ್ಯದರ್ಶಿ, ಪರೀಕ್ಷಾ ನಿಯಂತ್ರಕರ ನಡುವಿನ ಸಂಘರ್ಷ ತಪ್ಪಬೇಕು. ರಾಜಕೀಯ ನಂಟು, ಒತ್ತಾಸೆಯೊಂದಿಗೆ ಆಯೋಗಕ್ಕೆ ಅಡಿಯಿಡುವ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಪರೀಕ್ಷಾ ನಿಯಂತ್ರಕರಾಗಿ ಬರುವ ಅಧಿಕಾರಿಗಳ ಮೇಲೆ ವಿಪರೀತ ಒತ್ತಡ ಹೇರುತ್ತಾರೆ. ಅವರನ್ನು ಕೇವಲ ಲಿಪಿಕಾರರಂತೆ ಬಳಸಿಕೊಳ್ಳಲು ಪ್ರಯತ್ನಿಸುತ್ತಾರೆ. ಹೀಗಾಗಿ ಅನೇಕ ಅಧಿಕಾರಿಗಳು ಕೆಪಿಎಸ್‌ಸಿಗೆ ಬರಲು ಹಿಂದೇಟು ಹಾಕುವುದೂ ಇದೆ. ಕೆಪಿಎಸ್‌ಸಿ ಅಧ್ಯಕ್ಷರು, ಸದಸ್ಯರಿಗೆ ಸರ್ಕಾರದ ಪ್ರಭಾವಿಗಳ ಅಭಯ ಇರುವುದೇ ವ್ಯವಸ್ಥೆ ಹಳಿತಪ್ಪಲು ಪ್ರಮುಖ ಕಾರಣ ಎನ್ನುವ ಆರೋಪವಿದೆ

• ರಾಜೇಶ್ ರೈ ಚಟ್ಲ

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಹದಿಮೂರು ವರ್ಷಗಳಲ್ಲಿ 13 ಕಾರ್ಯದರ್ಶಿಗಳು, 12 ಪರೀಕ್ಷಾ ನಿಯಂತ್ರಕರನ್ನು ಕಂಡಿರುವುದೂ ಒಂದು ದಾಖಲೆ. ಅಷ್ಟೇ ಅಲ್ಲ, ಈ ಅವಧಿಯಲ್ಲಿ ಕಾರ್ಯದರ್ಶಿ, ಪರೀಕ್ಷಾ ನಿಯಂತ್ರಕರ ಹುದ್ದೆಗೆ ವರ್ಗಾವಣೆಗೊಂಡವರು ಇಲ್ಲಿನ 'ವ್ಯವಸ್ಥೆ'ಗೆ ಬೆದರಿ, ಅಧಿಕಾರ ಸ್ವೀಕರಿಸದೆ ಪಲಾಯನ ಮಾಡಿದ ಐಎಎಸ್ ಅಧಿಕಾರಿಗಳೂ ಇದ್ದಾರೆ.

'ಆಯೋಗದ ಸಭೆಗಳಲ್ಲಿ ಕಾರ್ಯದರ್ಶಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ನೀಡದೆ, ಆಯೋಗವು ನಿರ್ಣಯಿಸಿದಂತೆ ಸಭಾ ನಡಾವಳಿಗಳನ್ನು ದಾಖಲಿಸುವ ಶೀಘ್ರ ಲಿಪಿಗಾರರ ರೀತಿಯಲ್ಲಿ ಕಾರ್ಯನಿರ್ವಹಿಸಲು ಅಧ್ಯಕ್ಷರು ಮತ್ತು ಸದಸ್ಯರು ಅಪೇಕ್ಷಿಸುತ್ತಾರೆ. ಇದರಿಂದ ಕೆಪಿಎಸ್‌ಸಿಯಲ್ಲಿ ಕೆಲಸ ನಿರ್ವಹಿಸಲು ಐಎಎಸ್ ಅಧಿಕಾರಿಗಳು ಉತ್ಸುಕರಾಗಿಲ್ಲ' ಎಂದು ಕೆಪಿಎಸ್‌ಸಿ ಕಾರ್ಯದರ್ಶಿಯಾಗಿದ್ದ ಕೆ.ಎಸ್.ಲತಾಕುಮಾರಿ ಅವರು ರಾಜ್ಯಪಾಲರಿಗೆ ಪತ್ರ ಬರೆದಿದ್ದರು. ಸಂಸ್ಥೆಯ ಆಂತರಿಕ ಅಧ್ವಾನಕ್ಕೆ ಕನ್ನಡಿ ಹಿಡಿಯಲು ಇದೊಂದೇ ನಿದರ್ಶನ ಸಾಕು.

ಆಯೋಗದ ಅಧ್ಯಕ್ಷ, ಸದಸ್ಯರ ನೇಮಕ ರಾಜಕೀಯ ನಂಟು ಹೊಂದಿರುವುದರಿಂದ ನೇಮಕಾತಿ ಪ್ರಕ್ರಿಯೆಯಲ್ಲಿ 'ರಾಜಿ' ವ್ಯವಹಾರಗಳು ನಿರೀಕ್ಷಿತ. ಹಣ, ಸ್ವಜನಪಕ್ಷಪಾತ ಮತ್ತು ಪ್ರಭಾವದ ಕಾರಣಕ್ಕಾಗಿಯೇ ಈ ಅವ್ಯವಹಾರಗಳು ನಡೆಯುತ್ತವೆ. ಇವು ಪ್ರಜ್ಞಾಪೂರ್ವಕವಾಗಿ, ವ್ಯವಸ್ಥಿತವಾಗಿಯೇ ನಡೆಯುತ್ತಿವೆ. ಎಸ್.ಎಂ.ಕೃಷ್ಣ, ಧರಂಸಿಂಗ್, ಎಚ್.ಡಿ. ಕುಮಾರಸ್ವಾಮಿ, ಸಿದ್ದರಾಮಯ್ಯ, ಬಿ.ಎಸ್.ಯಡಿಯೂರಪ್ಪ ಹೀಗೆ ಎಲ್ಲರ ಅವಧಿಯಲ್ಲಿಯೂ ಈ ಕೃತ್ಯಗಳು ನಡೆದಿವೆ.

ಆಯೋಗವೇ (ಅಧ್ಯಕ್ಷರು ಮತ್ತು ಸದಸ್ಯರು) 'ಸುಪ್ರೀಂ' ಆಗಿರುವುದರಿಂದ ಕಾರ್ಯದರ್ಶಿ ಹುದ್ದೆಯಲ್ಲಿರುವವರು ಎಲ್ಲವನ್ನೂ ಸಂಭಾಳಿಸಿಕೊಂಡು, ನಿಭಾಯಿಸಿಕೊಂಡು ಹೋಗಬೇಕು ಎನ್ನುವುದು ಅಲಿಖಿತ ನಿಯಮ. ಆಯೋಗದ ತಾಳಕ್ಕೆ ತಕ್ಕಂತೆ ಕುಣಿದರಷ್ಟೇ ಹೆಚ್ಚು ದಿನ ಅಲ್ಲಿರಲು ಸಾಧ್ಯ. ಕೆಪಿಎಸ್‌ಸಿ ಸುಧಾರಣೆಗೆ ಟೊಂಕ ಕಟ್ಟಿದ್ದ ಸುಬೋಧ್ ಯಾದವ್, ಸುರಳ್ಕರ್ ವಿಕಾಸ್ ಕಿಶೋರ್, ಕೆ.ಎಸ್.ಲತಾಕುಮಾರಿ ಅವರಿಗೆ ರಾಜ್ಯ ಸರ್ಕಾರ ಹೆಚ್ಚು ದಿನ ಅಧಿಕಾರ ಚಲಾಯಿಸಲು ಅವಕಾಶ ನೀಡಲೇ ಇಲ್ಲ. ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆಗೊಂಡಿದ್ದ ರಾಜೇಂದ್ರಕುಮಾರ್ ಮತ್ತು ಕೆ.ಎಂ.ಜಾನಕಿ ಹುದ್ದೆ ಸ್ವೀಕರಿಸಲೇ ಇಲ್ಲ.

ಆಯೋಗದ ಅಧ್ಯಕ್ಷ–ಸದಸ್ಯರು ಹಾಗೂ ಕಾರ್ಯದರ್ಶಿಗಳ ನಡುವೆ ಸಭಾ ನಡಾವಳಿಗೆ ಸಂಬಂಧಿಸಿ ಸರಿ-ತಪ್ಪುಗಳ ಮೇಲಾಟ ಹಿಂದಿನಿಂದಲೂ ನಡೆಯುತ್ತಿದೆ. ಆಯೋಗದ ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಣಯದ ವಿಚಾರದಲ್ಲಿ ಕಾರ್ಯದರ್ಶಿ ಬೇರೆಯೇ ಅಭಿಪ್ರಾಯ ಹೊಂದಿದ್ದರೂ ಅದನ್ನು ದಾಖಲಿಸಲು ಅವಕಾಶ ಇಲ್ಲ. ಈ ಮನಸ್ತಾಪಗಳು ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡು, ತಾತ್ಕಾಲಿಕ ಆಯ್ಕೆ ಪಟ್ಟಿ, ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆಗೆ ಕಂಟಕವಾಗಿ ಪರಿಣಮಿಸಿದ ಉದಾಹರಣೆಗಳೂ ಸಾಕಷ್ಟಿವೆ. ಈ ಬಿಕ್ಕಟ್ಟಿನ ನಿಲುವು ಆಯೋಗದ ಆಂತರಿಕ ಕಚ್ಚಾಟವನ್ನು ಬಟಾಬಯಲು ಮಾಡಿದೆ.

ಕೆಪಿಎಸ್‌ಸಿ ವ್ಯವಸ್ಥೆ ಸುಧಾರಿಸಲು ಸಾಧ್ಯವಾಗದಷ್ಟು ಕೆಟ್ಟಿದೆ ಎಂಬ ಆರೋಪದ ಮಧ್ಯೆ, ಕಾರ್ಯದರ್ಶಿಯಾಗಿ (2016ರ ಜೂನ್ 25) ವರ್ಗಾವಣೆಯಾಗಿ ಬಂದವರು ಸುಬೋಧ್ ಯಾದವ್. ಕೆಪಿಎಸ್‌ಸಿಯಲ್ಲಿ ತಳವೂರಿದ್ದ ಸಿಬ್ಬಂದಿ ಪೈಕಿ ಶೇ 50ರಷ್ಟು ಮಂದಿಯ ವರ್ಗಾವಣೆ, ಕೆಎಎಸ್ ಮತ್ತು ಇತರ ವಿವಿಧ ಹುದ್ದೆಗಳ ನೇಮಕಾತಿಗೆ ವಾರ್ಷಿಕ ವೇಳಾಪಟ್ಟಿ ಸೇರಿದಂತೆ ಆಮೂಲಾಗ್ರ ಬದಲಾವಣೆಗೆ ಮುಂದಾದದ್ದೇ ಅವರಿಗೆ ಮುಳುವಾಯಿತು. ಎಲ್ಲರ ಮೇಲೆ ನಿಗಾ ಇಡಲು ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಕೆ, ಪ್ರವೇಶ ದ್ವಾರದಲ್ಲಿ ತಪಾಸಣೆಗೆ ಭದ್ರತಾ ಸಿಬ್ಬಂದಿ ನೇಮಕ, ಐದು ತಿಂಗಳಲ್ಲಿ ಎಲ್ಲ ಕಡತಗಳ ವಿಲೇವಾರಿ, ಪರೀಕ್ಷಾ ಶುಲ್ಕ ಪಾವತಿಗೆ ಇ-ವ್ಯವಸ್ಥೆ, ಕ್ಯಾಲೆಂಡರ್ ವರ್ಷದಲ್ಲಿ 12 ಪರೀಕ್ಷೆ ನಡೆಸಲು ವೇಳಾಪಟ್ಟಿ ತಯಾರಿ ಸೇರಿದಂತೆ ಹಲವು ಕ್ರಮಗಳನ್ನು ಅವರು ತೆಗೆದುಕೊಂಡಿದ್ದರು. ಅವರ ಈ 'ಸುಧಾರಣಾ ಕ್ರಮಗಳು' ಆಯೋಗಕ್ಕೆ 'ಅಪಥ್ಯ'ವಾಗಿದ್ದವು. ಆರು ತಿಂಗಳು ತುಂಬುವುದಕ್ಕೂ ಮೊದಲೇ ಸರ್ಕಾರದ ಮೇಲೆ ಒತ್ತಡ ತಂದು ಅವರನ್ನು ಆ ಸ್ಥಾನದಿಂದ ಎತ್ತಂಗಡಿ ಮಾಡುವಲ್ಲಿ ಆಯೋಗ ಯಶಸ್ವಿ ಆಗಿತ್ತು. ಭ್ರಷ್ಟಾಚಾರ ತಡೆಗಟ್ಟುವುದಾಗಿ ಹೇಳುತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಾಮಾಣಿಕ ಅಧಿಕಾರಿಯನ್ನು ವರ್ಗಾವಣೆ ಮಾಡಿ, ಭ್ರಷ್ಟರ ರಕ್ಷಣೆಗೆ ನಿಂತಿದ್ದಾರೆ ಎಂಬ ಆರೋಪ ಆಗ ಚರ್ಚೆಗೂ ಗ್ರಾಸವಾಗಿತ್ತು.

ಅವರ ನಂತರ ಕಾರ್ಯದರ್ಶಿಗಳಾಗಿ ಬಂದವರ ಪೈಕಿ, ಸತ್ಯವತಿ 'ರಾಜಿ' ಮಾಡಿಕೊಳ್ಳದ ನಿಲುವಿನಿಂದಾಗಿ ಆಯೋಗದ ಕೆಂಗಣ್ಣಿಗೆ ಗುರಿಯಾಗಿದ್ದರು. ಸತ್ಯವತಿ ಆಯೋಗದ ಕಾರ್ಯದರ್ಶಿಯಾಗಿದ್ದಾಗ ನೇಮಕಗಳಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವ ಉದ್ದೇಶದಿಂದ ಪ್ರತಿ 15 ದಿನಗಳಿಗೊಮ್ಮೆ ನಾನಾ ನೇಮಕಗಳ ಸ್ಥಿತಿಗತಿಯ ವಿವರಗಳನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸುತ್ತಿದ್ದರು. ಆ ಮೂಲಕ, ಸದಾ ಕೆಟ್ಟ ವಿಚಾರಗಳಿಗೆ ಸುದ್ದಿಯಾಗುತ್ತಿದ್ದ ಆಯೋಗವು ಇತಿಹಾಸದಲ್ಲಿ ಮೊದಲ ಬಾರಿಗೆ ಒಂದಿಷ್ಟು ಸಕಾರಾತ್ಮಕ ಬದಲಾವಣೆ ತರುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆ ಇಟ್ಟಿತ್ತು. ಅಷ್ಟೇ ಅಲ್ಲ, ಆ ಪಟ್ಟಿಯನ್ನು ನಿರಂತರವಾಗಿ ಅಪ್‌ಡೇಟ್ ಮಾಡಲಾಗುತ್ತಿತ್ತು. ಅದರಿಂದ ಅಭ್ಯರ್ಥಿಗಳಿಗೆ ಅನುಕೂಲ ಆಗಿತ್ತು. ಅವರ ನಂತರ ಕಾರ್ಯದರ್ಶಿಯಾದ ಸುರಳ್ಕರ್ ವಿಕಾಸ್ ಕಿಶೋರ್ ಮತ್ತು ಕೆ.ಎಸ್.ಲತಾಕುಮಾರಿ ಕೂಡ ನೇಮಕ ಸ್ಥಿತಿಗತಿ ಪ್ರಕಟಣೆ ಪರಿಪಾಠ ಮುಂದುವರಿಸಿದರು. ವಿಕಾಸ್ ಅವರಂತೂ ಆಯೋಗದ ಅನುಮೋದನೆಗೆ ಕಳುಹಿಸಿದ್ದ ಕಡತಗಳ ವಿವರ, ಸರ್ಕಾರದ ನಾನಾ ಇಲಾಖೆಗಳ ನಡುವೆ ಆಯೋಗ ನಡೆಸುತ್ತಿರುವ ಸಂವಹನದ ವಿವರಗಳನ್ನೂ ಪ್ರತ್ಯೇಕ ಪುಟದಲ್ಲಿ ಪ್ರಕಟಿಸಲು ಆರಂಭಿಸಿದರು. ಆಗ ಅಭ್ಯರ್ಥಿಗಳಿಗೆ ಆಯೋಗದ ಕಾರ್ಯವೈಖರಿ ಬಗ್ಗೆ ವಿಶ್ವಾಸ ಮೂಡುವಂತಾಗಿತ್ತು.

2022ರ ಜುಲೈನಲ್ಲಿ ಆಯೋಗದ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ವಿಕಾಸ್, ಆಯೋಗ ಮತ್ತು ಅಭ್ಯರ್ಥಿಗಳ ನಡುವೆ ಸಂವಹನ ಕೊರತೆ ಇರುವುದನ್ನು ಗಮನಿಸಿ ಆಯೋಗದ ಟ್ವಿಟರ್ ಖಾತೆ ಆರಂಭಿಸಿ, ಯೂಟ್ಯೂಬ್ ಚಾನೆಲ್ ತೆರೆದು ಅಭ್ಯರ್ಥಿಗಳಿಗೆ ಅಗತ್ಯವಿರುವ ಮಾಹಿತಿಯನ್ನು ಮುಕ್ತವಾಗಿ ಹಂಚಿಕೊಳ್ಳಲು ಆರಂಭಿಸಿದರು. ಆಯೋಗದ ಚಟುವಟಿಕೆಯಲ್ಲಿ ಪಾರದರ್ಶಕತೆ ತರಲು ಹಲವು ಕ್ರಮ ಕೈಗೊಂಡರು. ಅದಕ್ಕೆ ಆಯೋಗದ ಅಧ್ಯಕ್ಷರು, ಕೆಲವು ಸದಸ್ಯರು ಆಕ್ಷೇಪ ಎತ್ತಿದಾಗ ಶುರುವಾದ ಬಿಕ್ಕಟ್ಟು ದಿನೇ ದಿನೇ ಹೊಸ ರೂಪ ಪಡೆದು ಸಂಘರ್ಷಕ್ಕೆ ದಾರಿ ಮಾಡಿಕೊಟ್ಟಿತ್ತು. ಅಧ್ಯಕ್ಷರು ಹಲವು ನೇಮಕ ಪ್ರಸ್ತಾವಗಳಿಗೆ ಅನುಮೋದನೆ ನೀಡದೆ ಕಡತಗಳನ್ನು ತಮ್ಮ ಬಳಿಯೇ ಇಟ್ಟುಕೊಂಡಿದ್ದರು. ಸುರಳ್ಕರ್ ಅವರ ವರ್ಗಾವಣೆಯೊಂದಿಗೆ ಆ ಸಂಘರ್ಷ ಅಂತ್ಯವಾಗಿತ್ತು.

ಆದರೆ, ನಂತರ ಬಂದ ಲತಾಕುಮಾರಿ ಅವರೂ ನಾನಾ ಇಲಾಖೆಗಳಿಂದ ಆಯೋಗ ಸ್ವೀಕರಿಸುವ ನೇಮಕ ಪ್ರಸ್ತಾವಗಳು, ಅದಕ್ಕೆ ಆಯೋಗ ನೀಡಿರುವ ಉತ್ತರ ಹೀಗೆ ಇನ್ನೂ ಹಲವು ವಿಚಾರಗಳನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾರಂಭಿಸಿದರು. ಇದರಿಂದ ಅಭ್ಯರ್ಥಿಗಳು ಯಾವ ನೇಮಕಗಳಿಗೆ ಮುಂದಿನ ದಿನಗಳಲ್ಲಿ ಅಧಿಸೂಚನೆ ಹೊರಬೀಳಲಿದೆ ಎಂಬುದನ್ನು ತಿಳಿದು ಅದಕ್ಕೆ ಸಿದ್ಧತೆ ಮಾಡಿಕೊಳ್ಳಲು ಅನುಕೂಲ ಆಗಿತ್ತು. ಆದರೆ, ಕೆಪಿಎಸ್‌ಸಿ ಕಾನೂನು ಕೋಶದ ಮುಖ್ಯಸ್ಥ (ಎಚ್‌ಎಲ್‌ಸಿ) ಹುದ್ದೆಗೆ ನೇಮಕಾತಿ ವಿಷಯದಲ್ಲಿ ಆಯೋಗದ ಅಧ್ಯಕ್ಷ–ಸದಸ್ಯರು ಮತ್ತು ಕಾರ್ಯದರ್ಶಿ ನಡುವೆ ಸಂಘರ್ಷ ಆರಂಭವಾದ ನಂತರ ಆಯೋಗದ ವೆಬ್‌ಸೈಟ್‌ನಲ್ಲಿ ನೇಮಕಾತಿಗಳ ಮಾಹಿತಿ ಅಪ್‌ಡೇಟ್ ಆಗುವುದು ಸ್ಥಗಿತಗೊಂಡಿತು. ಈ ಬೆಳವಣಿಗೆ ತೀವ್ರಗೊಂಡು ಲೋಕಭವನ ಮುಟ್ಟಿತ್ತು. ಕಾರ್ಯದರ್ಶಿಯು ಅಧ್ಯಕ್ಷರ ಸೂಚನೆಯನ್ನೂ ಧಿಕ್ಕರಿಸಿ, ಹಿರಿಯ ಸದಸ್ಯನ ಅಧ್ಯಕ್ಷತೆಯಲ್ಲಿ ಆಯೋಗದ ಸಭೆ ನಡೆಸಿ ಕೆಲವು ನೇಮಕಾತಿಗಳ ಆಯ್ಕೆ ಪಟ್ಟಿಗೆ ಅನುಮೋದನೆಯನ್ನೂ ಪಡೆದುಕೊಂಡಿದ್ದರು. ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿದ್ದ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿ ಹಲವು ತಿಂಗಳುಗಳಿಂದ ಪ್ರಕಟಣೆಗೆ ಬಾಕಿ ಉಳಿದಿತ್ತು. ಅಭ್ಯರ್ಥಿಗಳ ಹಿತದೃಷ್ಟಿಯಿಂದ ಮತ್ತು ಸರ್ಕಾರಕ್ಕೆ ಮುಜುಗರ ಉಂಟಾಗಬಾರದೆಂಬ ಕಾರಣಕ್ಕೆ ಪಟ್ಟಿಗೆ ಸದಸ್ಯರ ಅನುಮೋದನೆ ಪಡೆದು, ಪಟ್ಟಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಸರ್ಕಾರಕ್ಕೆ ಕಳುಹಿಸಿದ್ದರು. ಸಮನ್ವಯದ ಕೊರತೆ, ಮುಸುಕಿನ ಗುದ್ದಾಟ ನಡೆಯುತ್ತಿರುವುದು ಬಹಿರಂಗಗೊಳ್ಳುತ್ತಿದ್ದಂತೆ, ಸರ್ಕಾರದ ಮೇಲೆ ಒತ್ತಡ ತಂದು ಅವರನ್ನೂ ವರ್ಗಾವಣೆ ಮಾಡುವಲ್ಲಿ ಆಯೋಗ ಯಶಸ್ವಿ ಆಗಿತ್ತು.

ಆ ನಂತರ ಕೆ.ರಾಕೇಶ್ ಕುಮಾರ್ ಕಾರ್ಯದರ್ಶಿಯಾದರು. ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ ನಡೆದ ಪೂರ್ವಭಾವಿ ಪರೀಕ್ಷೆಯ ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿದ ಪ್ರಶ್ನೆ–ಉತ್ತರಗಳಲ್ಲಿ ತಪ್ಪುಗಳು ಕಾಣಿಸಿಕೊಂಡ ಕಾರಣಕ್ಕೆ ಆ ಪರೀಕ್ಷೆಯ ರದ್ದತಿಯಿಂದ ಬೊಕ್ಕಸಕ್ಕೆ ₹13.40 ಕೋಟಿ ವೆಚ್ಚವಾಗಿತ್ತು. ಅದೇ ಕಾರಣಕ್ಕೆ ರಾಕೇಶ್‌ಕುಮಾರ್ ಅವರನ್ನು ಕಾರ್ಯದರ್ಶಿ ಹೊಣೆಯಿಂದ ಮುಕ್ತಗೊಳಿಸಿತ್ತು. ನಂತರ ಬಂದ, ರಮಣ್‌ದೀಪ್ ಚೌಧರಿ, ಆರ್.ವೆಂಕಟೇಶ್ ಕುಮಾರ್, ಆರ್. ವಿಶಾಲ್ ಕೂಡಾ ಹೆಚ್ಚು ದಿನ ಇರಲಿಲ್ಲ.

ಪರೀಕ್ಷಾ ನಿಯಂತ್ರಕರದ್ದೂ ಇದೇ ಕಥೆ. ಕೆಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ಮತ್ತು ವ್ಯಕ್ತಿತ್ವ ಪರೀಕ್ಷೆಗಳ (ಸಂದರ್ಶನ) ಗೋಪ್ಯ ವಿಷಯಗಳ ಹೊಣೆಯನ್ನು ಪರೀಕ್ಷಾ ನಿಯಂತ್ರಕರು ನಿಭಾಯಿಸುತ್ತಾರೆ. ಪದೇ ಪದೇ ಪರೀಕ್ಷಾ ನಿಯಂತ್ರಕರ ವರ್ಗಾವಣೆ ಸಾವಿರಾರು ಹುದ್ದೆಗಳ ನೇಮಕಾತಿ ಪ್ರಕ್ರಿಯೆಯ ವಿಳಂಬಕ್ಕೆ ಕಾರಣವಾಗುತ್ತಿದೆ.

ಲೋಕಭವನ ತಲುಪಿದ್ದ 'ಸಂಘರ್ಷ'

ಕೆಪಿಎಸ್‌ಸಿಗೆ ಕೆ.ಎಸ್.ಲತಾಕುಮಾರಿ ಅವರು ಕಾರ್ಯದರ್ಶಿ ಆಗಿದ್ದಾಗ ಅಧ್ಯಕ್ಷ–ಸದಸ್ಯರು ವರ್ಸಸ್ ಕಾರ್ಯದರ್ಶಿ ಸಂಘರ್ಷವು ಎಲ್ಲ ಎಲ್ಲೆಗಳನ್ನೂ ಮೀರಿ ಲೋಕಭವನದ ಕದ ತಟ್ಟಿತ್ತು. ಕರ್ತವ್ಯಲೋಪ ಮತ್ತು ಅಧಿಕಾರ ದುರುಪಯೋಗ, ದುರ್ನಡತೆ ತೋರಿಸುತ್ತಿರುವ ಅಧ್ಯಕ್ಷ ಮತ್ತು ನಾಲ್ವರು ಸದಸ್ಯರ ಸದಸ್ಯತ್ವವನ್ನೇ ಸಂವಿಧಾನದ ವಿಧಿ 317ರಂತೆ ರದ್ದುಪಡಿಸಬೇಕು ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಲತಾಕುಮಾರಿ ಪತ್ರ ಬರೆದಿದ್ದರು. ರಾಜ್ಯ ಹಾಗೂ ಅಭ್ಯರ್ಥಿಗಳ ಹಿತಾಸಕ್ತಿ ಕಾಪಾಡಲು ತಮ್ಮ ಪತ್ರದಲ್ಲಿರುವ ಅಂಶಗಳನ್ನು ರಾಜ್ಯಪಾಲರಿಗೆ ಮನವರಿಕೆ ಮಾಡಬೇಕೆಂದು ಮುಖ್ಯ ಕಾರ್ಯದರ್ಶಿಗೂ ಮನವಿ ಮಾಡಿದ್ದರು. ತಮ್ಮ ಹುದ್ದೆಯ ಜವಾಬ್ದಾರಿಗಳನ್ನು ಅರಿಯಲು ಅಧ್ಯಕ್ಷರು ಮತ್ತು ಕೆಲವು ಸದಸ್ಯರು ವಿಫಲರಾಗಿದ್ದು, ಪರಿಪಕ್ವತೆ ಇಲ್ಲದಿರುವಂತೆ ವರ್ತಿಸುತ್ತಿದ್ದಾರೆ. ತಮ್ಮ ಕಾರ್ಯವ್ಯಾಪ್ತಿಗೆ ಬಾರದಿದ್ದರೂ ಆಯೋಗದ ಗಣಕ ಕೇಂದ್ರದ ಸಿಬ್ಬಂದಿಗೆ ತಾವು ಸೂಚಿಸಿದಂತೆ ಕರ್ತವ್ಯ ನಿರ್ವಹಿಸಲು ಒತ್ತಡ ಹೇರಿರುವುದು ಅಧಿಕಾರ ದುರ್ಬಳಕೆ, ಅಸಾಂವಿಧಾನಿಕ. ಕೆಪಿಎಸ್‌ಸಿ ಅಧ್ಯಕ್ಷರು, ಸದಸ್ಯರ ಈ ವರ್ತನೆಗಳಿಂದ ನೇಮಕಾತಿ ಪ್ರಕ್ರಿಯೆಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಪರೀಕ್ಷೆಗಳಲ್ಲಿ ನಡೆಯುವ ದುರಾಚಾರ ತಡೆಗಟ್ಟಲು ಕಾರ್ಯದರ್ಶಿ ಕೈಗೊಳ್ಳುವ ಕ್ರಮಗಳಿಗೆ ಆಯೋಗದ ಅಧ್ಯಕ್ಷರು ಅನುಮೋದನೆ ನೀಡುವುದಿಲ್ಲ. ಈ ವರ್ತನೆಗಳಿಗೆ ಅವಕಾಶ ನೀಡಿದರೆ ಮುಂದೆ ಪರೀಕ್ಷಾ ಕಾರ್ಯಗಳಲ್ಲಿಯೂ ಇತರ ಅಕ್ರಮಗಳಿಗೆ ದಾರಿ ಆಗಬಹುದು ಎಂದೂ ಹೇಳಿದ್ದರು. ಹೀಗೆ ಕೆಪಿಎಸ್‌ಸಿಯ ಒಳಗಿನ ವಾಸ್ತವ ತೆರೆದಿಟ್ಟಿದ್ದ ಲತಾಕುಮಾರಿ ಅವರನ್ನೇ ಸರ್ಕಾರ ಕೇವಲ ಐದೂವರೆ ತಿಂಗಳಲ್ಲಿ (2023ರ ಸೆ. 14ರಿಂದ 2024ರ ಫೆ.7ರವರೆಗೆ) ವರ್ಗಾವಣೆ ಮಾಡಿದ್ದು ಸೋಜಿಗ.

ಸರ್ಕಾರ, ಅಧಿಕಾರಿಗಳು ಹೊಣೆಗಾರಿಕೆ ಪ್ರದರ್ಶಿಸಲಿ

ಕೆಪಿಎಸ್‌ಸಿ ಎಂಬ ಭ್ರಷ್ಟರ ಸಂಸ್ಥೆಗೆ ಚಿಕಿತ್ಸೆ ನೀಡುವ ಸಲುವಾಗಿ, ಕರ್ನಾಟಕ ಲೋಕಸೇವಾ ಆಯೋಗ ಕಾಯ್ದೆ-1959ಕ್ಕೆ ಕೆಲವು ಅವಶ್ಯಕ ತಿದ್ದುಪಡಿ ಮಾಡಿ ಸಿದ್ಧಪಡಿಸಿದ ಮಸೂದೆಯನ್ನು ರಾಜ್ಯ ಸರ್ಕಾರ ಸಲ್ಲಿಸಿ ವರ್ಷವೇ ಕಳೆದರೂ ರಾಷ್ಟ್ರಪತಿಯವರು ಯಾವುದೇ ಕ್ರಮ ಜರುಗಿಸದಿರುವುದು ಖಂಡಿತ ಉಚಿತವಲ್ಲ. ಇದು ಒಂದು ರಾಜ್ಯದ ಹಾಗೂ ದೇಶದ ಲಕ್ಷಾಂತರ ಯುವಜನರ ಭವಿಷ್ಯ ಮತ್ತು ಜೀವನದ ಹಿತರಕ್ಷಣೆಗೆ ಸಂಬಂಧಿಸಿದ ಸೂಕ್ಷ್ಮ ವಿಷಯ. ರಾಷ್ಟ್ರಪತಿ ಭವನದ ಹಿರಿಯ ಅಧಿಕಾರಿಗಳು ಇಂಥ ಮಸೂದೆಯನ್ನು ತುರ್ತು ವಿಲೇವಾರಿ ಮಾಡುವ ಬಗ್ಗೆ ರಾಷ್ಟ್ರಪತಿಯವರಿಗೆ ಮನವರಿಕೆ ಮಾಡುವ ಅಗತ್ಯ ಮತ್ತು ಅನಿವಾರ್ಯ ಇದೆ.

ಪ್ರಜೆಗಳ ಹಿತರಕ್ಷಣೆ ಮಾಡುವುದರ ಜೊತೆಗೆ ಅವರಿಗೆ ಭದ್ರತೆ, ಸುರಕ್ಷೆ ಮತ್ತು ನೆಮ್ಮದಿಯ ಜೀವನ ಕಲ್ಪಿಸುವುದೇ ನಮ್ಮ ಸಂವಿಧಾನದ ಮೂಲ ಆಶಯ. ಅದರ ಆದ್ಯತೆ ಕೂಡ ಹೌದು. ಜನರಿದ್ದರೆ ದೇಶ, ದೇಶವಿದ್ದರೆ ಸಂವಿಧಾನ, ಸಾಂವಿಧಾನಿಕ ಹುದ್ದೆ, ಅಧಿಕಾರ, ಸೌಲಭ್ಯ ಇತ್ಯಾದಿ. ಹಾಗಾಗಿ ಯಾವುದೇ ಹುದ್ದೆಯಲ್ಲಿದ್ದರೂ ಭಾರತೀಯರ ತೆರಿಗೆ ಹಣದಿಂದ ಸಂಬಳ ಸೌಲಭ್ಯ ಪಡೆಯುತ್ತಿರುವವರು, ತಾವು ನಿರ್ವಹಿಸುತ್ತಿರುವ ಕರ್ತವ್ಯ ಮಾಡುವಾಗ ಯಾವುದೇ ವಿಳಂಬವಿಲ್ಲದೇ, ಪ್ರಸ್ತಾವಿತ ವಿಷಯದಲ್ಲಿನ ಸಮಸ್ಯೆಗಳಿಗೆ ಕಾಲಮಿತಿಯೊಳಗೆ ಸೂಕ್ತ ಕ್ರಮ ಜರುಗಿಸುವ ಹೊಣೆಗಾರಿಕೆಯ ನಡವಳಿಕೆ ಪ್ರದರ್ಶಿಸಲೇಬೇಕು.

ದೇಶದ ಪ್ರಜಾಪ್ರಭುತ್ವದ ಆಡಳಿತ ವ್ಯವಸ್ಥೆಯ ಅಪಸವ್ಯಗಳನ್ನು ನೋಡಿದರೆ ಯಾವುದೇ ಸರ್ಕಾರ, ಸಾಂವಿಧಾನಿಕವಾದ ಉನ್ನತ ಹುದ್ದೆಗಳಲ್ಲಿ ಇರುವವರು ತಮ್ಮ ಕರ್ತವ್ಯಗಳಲ್ಲಿ ಜವಾಬ್ದಾರಿಯುತ ಕಳಕಳಿ, ಪ್ರಾಮಾಣಿಕ ಬದ್ಧತೆಯನ್ನು ತೋರುತ್ತಿಲ್ಲ ಎನ್ನುವುದು ಅತ್ಯಂತ ಕಳವಳಕಾರಿ ಸಂಗತಿ. ಎಲ್ಲರೂ ತಮ್ಮ ತಮ್ಮ ಅಧಿಕಾರ, ಸ್ಥಾನಮಾನ ಉಳಿಸಿಕೊಳ್ಳುವ ಅಥವಾ ಗಳಿಸಿಕೊಳ್ಳುವ ಯೋಚನೆ, ಯೋಜನೆಗಳಲ್ಲೇ ಸದಾಕಾಲವೂ ನಿರತರಾಗಿರುತ್ತಾರೆ.

ಆಡಳಿತ ನಡೆಸುವವರು ಅಧಿಕಾರ ಶಾಶ್ವತ ಅಲ್ಲ ಎಂಬ ಸತ್ಯವನ್ನು ಅರ್ಥೈಸಿಕೊಂಡು ಕೆಪಿಎಸ್‌ಸಿಯಂತಹ ಸಂಸ್ಥೆಗಳನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸಿ, ಲಕ್ಷಾಂತರ ಉದ್ಯೋಗಾಕಾಂಕ್ಷಿಗಳಿಗೆ ಅನುಕೂಲವಾಗುವಂತೆ ಮಾಡಬೇಕು.

ಎಸ್.ಎನ್.ರಮೇಶ್, ಸಾತನೂರು, ಮಂಡ್ಯ

ಪ್ರತಿಕ್ರಿಯೆ

ಯುವಜನರ ಪಾಲಿಗೆ 'ನಿರಾಶಾ ಸೌಧ'

'ಪ್ರಜಾವಾಣಿ'ಯು ಕರ್ನಾಟಕ ಲೋಕಸೇವಾ ಆಯೋಗದ ಕುರಿತು ನಿರಂತರವಾಗಿ ಚರ್ಚೆ ನಡೆಸುತ್ತಿದೆ. ವಿಧಾನಸಭಾ ಅಧಿವೇಶನದಲ್ಲಿಯೂ ಈ ಬಗ್ಗೆ ಚರ್ಚೆ ಆಗಿದೆ. ಕನ್ನಡ ಸಿನೆಮಾವೊಂದರಲ್ಲಿ 'ಯಾರೇ ಕೂಗಾಡಲಿ ಊರೇ ಹೋರಾಡಲಿ' ಹಾಡಿನಲ್ಲಿ 'ಎಮ್ಮೆ' ಕುರಿತು ಅರ್ಥಪೂರ್ಣವಾಗಿ ಬರೆಯಲಾಗಿದೆ. ಎಮ್ಮೆಯಾದರೂ 'ಪ್ರಾಣಿಗಳೇ ಗುಣದಲಿ ಮೇಲು, ಮಾನವನದಕ್ಕಿಂತ ಕೀಳು' ಎನ್ನುವ ಸಾಲುಗಳು ಕನ್ನಡಿಗರ ನಡುವೆ ಪ್ರತಿಧ್ವನಿಸುತ್ತಿವೆ.

ಆ 'ಎಮ್ಮೆ' ಜಾಗಲ್ಲಿ 'ಕೆಪಿಎಸ್‌ಸಿ' ಹಾಕಿದರೆ ವ್ಯತ್ಯಾಸ ಏನೂ ಆಗದು. ಉದ್ಯೋಗ ಸೌಧ ಯುವಜನರ ಪಾಲಿಗೆ ನಿರಾಸೆಯ ಸೌಧವಾಗಿದೆ. ನಮಗೂ ಇದರ ಬಿಸಿ ಏನು ಅಂತ ಗೊತ್ತಾಗಿದೆ. ಏನು ಹೇಳಿದರೂ ಪ್ರಯೋಜನವಿಲ್ಲ, ಕಾಲ ಮಿಂಚಿಹೋಗಿದೆ.

ಪತ್ರಿಕೆಯಲ್ಲಿ ಸಿಬ್ಬಂದಿ ಅಕ್ರಮಗಳ ಕುರಿತು ವಿವರಗಳಿವೆ. ಆದರೆ ಸಾಬೀತು ಮಾಡಲು ಸಾಧ್ಯವಿಲ್ಲದ ಕಾರಣ ಕಾಣದ ಕೈಗಳು ಇಲ್ಲಿ ಬಂದು ಸೇರುತ್ತಿವೆ. ಎಷ್ಟೋ ಬಾರಿ ಸದಸ್ಯರ ಮೇಲೂ ಆಪಾದನೆಗಳು ಬಂದಿವೆ. ಸದಸ್ಯರಾಗಲು ತುಂಬಾ 'ಸಾಹಸಗಳು' ನಡೆಯುತ್ತವೆ ಎಂಬ ಗುಸುಗುಸು ಕೇಳಿ ಬರುತ್ತಿದೆ. ಇವರನ್ನು ತಂದು ಕೂರಿಸುವ ಮಂದಿ ಯಾರು ಎಂಬುದು ಗುಟ್ಟಿನ ವಿಚಾರವೇನಲ್ಲ.

'ವ್ಯಕ್ತಿತ್ವ ಪರೀಕ್ಷೆ' ಎನ್ನುವುದು ಅಭ್ಯರ್ಥಿ ಎಷ್ಟು ಹಣ ಕೊಡುತ್ತಾನೆ ಎಂಬುದರ ಮೇಲೆ ನಿರ್ಧಾರವಾಗಬಾರದು. ಅದು ಆತನ ನಿಜವಾದ ಕಾರ್ಯ ನಿರ್ವಹಣಾ ಸಾಮರ್ಥ್ಯವನ್ನು ಅಳೆಯುವ ಪರೀಕ್ಷೆಯಾಗಬೇಕು.

ನಾಡಿಗೆ ಉತ್ತಮ ಅಧಿಕಾರಿಗಳನ್ನು ಕೊಡುವ ಮಹತ್ತರ ಜವಾಬ್ದಾರಿ ಹೊತ್ತಿರುವ ಕೆಪಿಸಿಎಸ್ ಇನ್ನಾದರೂ ತನ್ನ ತಪ್ಪುಗಳನ್ನು ತಿದ್ದಿಕೊಳ್ಳಲಿ. ಕಳಂಕದಿಂದ ಪಾರಾಗಲು ಸಮರ್ಥರ ಸಮೂಹದೊಂದಿಗೆ ಸಾಗಿ ಯುವಜನರ ಬದುಕಿಗೆ ಬೆಳಕಾಗಲಿ.

ತಿರುಪತಿ ನಾಯಕ್, ಕಲಬುರಗಿ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಗುವೊಂದು ಮಹಡಿಯಿಂದ ರಸ್ತೆಗೆ ಬೀಳುತ್ತಿರುವ ವಿಡಿಯೊ ತುಣುಕನ್ನು 'ಏಷ್ಯಾ ಡಿಕೋಡೆಡ್' ಎಂಬ ಎಕ್ಸ್ ಖಾತೆಯಲ್ಲಿ ಇತ್ತೀಚೆಗೆ ಪೋಸ್ಟ್ ಮಾಡಲಾಗಿದೆ. 'ಕೌಟುಂಬಿಕ ಕಲಹದ ಕಾರಣಕ್ಕೆ ಹಿಂದೂ ವ್ಯಕ್ತಿಯೊಬ್ಬ ಮಗುವನ್ನು ಉದ್ದೇಶಪೂರ್ವಕವಾಗಿ ಮೂರನೇ ಮಹಡಿಯಿಂದ ಕೆಳಗೆ ಎಸೆದಿದ್ದಾನೆ' ಎಂದು ಪೋಸ್ಟ್‌ನಲ್ಲಿ ಪ್ರತಿಪಾದಿಸಲಾಗಿದೆ. ಆದರೆ ಇದು ಸುಳ್ಳು.

ವಿಡಿಯೊದ ಕೀಫ್ರೇಮ್ ಒಂದನ್ನು ರಿವರ್ಸ್ ಸರ್ಚ್ ವಿಧಾನದಲ್ಲಿ ಗೂಗಲ್ ಲೆನ್ಸ್ ಬಳಸಿ ಹುಡುಕಾಡಿದಾಗ, ಹಲವು ಮಾಧ್ಯಮಗಳಲ್ಲಿ ಈ ಘಟನೆಯ ಬಗ್ಗೆ ವರದಿಯಾಗಿರುವ ಲಿಂಕ್‌ಗಳು ಸಿಕ್ಕಿದವು. ಇದು ಬೆಂಗಳೂರಿನಲ್ಲಿ ಏಪ್ರಿಲ್ 6ರಂದು ನಡೆದ ಘಟನೆ. ನಾಯಂಡಹಳ್ಳಿ ಪ್ರದೇಶದ ಮನೆಯೊಂದರಲ್ಲಿ ಮೊದಲ ಮಹಡಿಯಿಂದ ಮಗು ಆಕಸ್ಮಿಕವಾಗಿ ಕೆಳಗಡೆ ರಸ್ತೆಗೆ ಬಿದ್ದು ತೀವ್ರವಾಗಿ ಗಾಯಗೊಂಡಿತ್ತು. ಆ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. 'ಪ್ರಜಾವಾಣಿ' ಸೇರಿದಂತೆ ಹಲವು ಮಾಧ್ಯಮಗಳು ಈ ಪ್ರಕರಣದ ವರದಿ ಮಾಡಿವೆ. ಎಲ್ಲ ವರದಿಗಳಲ್ಲೂ ಮಗು ಆಕಸ್ಮಿಕವಾಗಿ ಕೆಳಗಡೆ ಬಿದ್ದಿದೆ ಎಂದೇ ಉಲ್ಲೇಖ ಇದೆ. ಸಾಮಾಜಿಕ ಜಾಲತಾಣಗಳಲ್ಲಿ ಈ ವಿಡಿಯೊವನ್ನು ಪೋಸ್ಟ್ ಮಾಡಿ ತಪ್ಪು ಅರ್ಥಕೊಡುವಂತೆ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ಕೂಡ ವರದಿ ಮಾಡಿದೆ.

ಪದಬಂಧ 6375

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಜನಿವಾರ ಇಲ್ಲಿದೆ (4)
3.ಯಾವುದೇ ಪ್ರಯೋಜನ ಇಲ್ಲದುದು (4)
5.ಲಯ ಇರುವ ಪ್ರದೇಶ (3)
6.ರಜದಲ್ಲಿ ಬಂದಿರುವ ಅಗಸ (3)
8.ಕೂಪದಲ್ಲಿರುವ ಕಪ್ಪೆ (3)
9.ಕನ್ನ ಹಾಕಿ ಕದ್ದು ತಂದಿರುವ ದರ್ಪಣ (3)
10.ಪದ ಹೇಳಿ ಪಡೆದಿರುವ ಡಿಗ್ರಿ (3)
14.ದೂರನ್ನು ಕೇಳಿಸಿಕೊಂಡಿರುವ ಮುಖಂಡ (3)
15.ಸಮಯ ಸೂಚಕ ಯಂತ್ರ (4)
16.ಬನದಲ್ಲಿ ಆಹುತಿ! (4)

ಮೇಲಿಂದ ಕೆಳಕ್ಕೆ

1.ಪ್ರತಿಫಲಾಕ್ಷೆ ಇಲ್ಲದೆ ನೆರವು ನೀಡುವಿಕೆ (4)
2.ಅತಿಯಾದ ಕುತೂಹಲ (3)
3.ಯಮ ಹಾಕಿರುವ ಸೂತ್ರ (3)
4.ಈತ ಲೆಕ್ಕ ಬರೆಯುವವ (4)
7.ಕರವನ್ನು ಕಡಿಯಲು ಭಲ್ಲೂಕ ಬಂದಿದೆಯಲ್ಲಾ! (3)
8.ಶುಭ ಕಾರ್ಯಗಳಿಗೆ ಕಟ್ಟುವ ಚಪ್ಪರ (3)
9.ವಾಡಿಕೆಯಂತೆ ಬಂದಿರುವ ಗೊಲ್ಲ (4)
11.ನಡುವೆ ಕಸವಿದ್ದಾಗ ಅರಳುವಿಕೆ (4)
12.ಮರದಲ್ಲಿ ಸಿಹಿ! (3)
13.ಬಣದವರು ಹಿಂದು ಮುಂದಾಗಿ ಒಟ್ಟಿರುವ ಮೆದೆ! (3)

6374ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಮೂಢನಂಬಿಕೆ 4.ಜರಡಿ 5.ಅಂಕುಶ 7.ಗೆಹೊ 10.ತತ್ತಿ 11.ಸರಣಿ 12.ಸ್ನಾನ 13.ತತ 15.ಗಮಾರ 18.ವರಾಹ 19.ವಿರೋಧಾಭಾಸ

ಮೇಲಿಂದ ಕೆಳಕ್ಕೆ: 1.ವಿನತ 2.ಮೂಡಿಗೆ 3.ಕೆಅಂ 4.ಜಲತರಂಗ 6.ಶಯನಗೃಹ 8.ಹೊಸಿಲು 9.ಗಣಿತ 14.ತಿವಸ 16.ರವಿ 17.ಸಂಧಾನ

ಸುಡೊಕು 6758

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	3		4	8		2		7
7		4		3			5	
			1			8		3
		7		4				
3		2	9		1		8	
				6				2
1		8	3		4			5
	2					9	7	8
6		9		2			3	

6757 ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1

ನಿಷ್ಕಾಮ ಪ್ರೀತಿ

ನುಡಿ ಬೆಳಗು

ಪಿ.ಚಂದ್ರಿಕಾ

ಬ್ರಹ್ಮಚಾರಿಣಿಯಾಗಿದ್ದ ರಬಿಆ, ದೇವನಲ್ಲಿ ಭಕ್ತಿಯುಳ್ಳವಳೂ ಸದಾಚಾರಿಣಿಯಾದವಳೂ ಆಗಿದ್ದಳು. ಇಸ್ಲಾಂ ಧರ್ಮದಲ್ಲಿ ಬ್ರಹ್ಮಚರ್ಯವನ್ನು ಅನುಸರಿಸುವವರು ತುಂಬಾ ವಿರಳ. ಅಂಥ ವಿರಳರಲ್ಲಿ ರಬಿಆ ಕೂಡ ಒಬ್ಬಳು. ಆಕೆಯನ್ನು ನೋಡಲಿಕ್ಕೆಂದು, ಆಕೆಯ ಮಾತುಗಳನ್ನು ಕೇಳಲಿಕ್ಕೆಂದು ಜನ ತುಂಬಾ ದೂರದ ಊರುಗಳಿಂದ ಬರುತ್ತಿದ್ದರು. ಹಾಗೆ ಆ ಕಾಲಕ್ಕೆ ಸರ್ವಶ್ರೇಷ್ಠರೆಂದು, ಜ್ಞಾನಿಗಳೆಂದು ಹೆಸರು ಪಡೆದಿದ್ದ ಇಬ್ಬರು ಆಕೆಯನ್ನು ಪರೀಕ್ಷಿಸಲೆಂದೇ ಬಂದರು. ಅವರ ಮನಸ್ಸಿನಲ್ಲಿ 'ಈಕೆಯಲ್ಲಿ ಅಂಥಾದ್ದು ಏನಿದೆ? ಅದರಲ್ಲೂ ಒಬ್ಬ ಹೆಣ್ಣಾಗಿ ನಮಗಿಂತ ಆಳವಾದ ಅರಿವು ಈಕೆಯಲ್ಲಿದೆಯೇ?' ಎನ್ನುವ ಉಡಾಫೆ ಕೂಡ ಅವರಲ್ಲಿದ್ದಿತು.

ರಬಿಆಗೆ ಅವರ ನಿಲುವಿನಿಂದಲೇ ಅವರ ಎಲ್ಲಾ ಸಂಗತಿಗಳೂ ತಿಳಿದುಹೋದವು. ಅವರು ಮಾತಾಡಲಿಕ್ಕೆ ಮೊದಲೇ ಆಕೆಯೇ ವಂದಿಸುತ್ತಾ, 'ನೀವು ದೇಶವ್ಯಾಪಿ ಹೆಸರು ಮಾಡಿರುವ ಜ್ಞಾನಿಗಳು. ಮಹಾತ್ಮರೇ, ನಾನು ನಿಮ್ಮಿಂದ ಕೆಲ ವಿಷಯಗಳನ್ನು ತಿಳಿಯಲು ಬಯಸುವೆ. ಮೊದಲಿಗೆ ನನ್ನದೊಂದು ಪ್ರಶ್ನೆಯಿದೆ ಕೇಳಿ. ನೀವು ದೇವರನ್ನು ಪ್ರೀತಿಸುವಿರಾ?' ಎಂದಳು. ಅವರಲ್ಲೊಬ್ಬ ಅತ್ಯಂತ ಹೆಮ್ಮೆಯಿಂದ ಹೇಳಿದ: 'ಅಲ್ಲವೇ, ಅವನನ್ನು ಪ್ರೀತಿಸುವುದರಿಂದ ನಮಗೆ ಸ್ವರ್ಗ ಪ್ರಾಪ್ತಿಯಾಗುತ್ತದೆ'. ರಬಿಆ ನಕ್ಕು, 'ಪ್ರೀತಿಸುವುದೆಂದರೆ ವ್ಯಾಪಾರವೇ? ಅವನು ಸ್ವರ್ಗಪ್ರಾಪ್ತಿ ಮಾಡದಿದ್ದರೆ ನೀವು ಮಾಡಿದ ಪ್ರೀತಿಗೆ ಬೆಲೆಯಿಲ್ಲ ಎಂದು ಆಗುವುದಿಲ್ಲವೇ? ಇದು ಹಣವನ್ನು ಕೊಟ್ಟು ವಸ್ತುವನ್ನು ಕೊಂಡ ಹಾಗೆ ಆದರೆ, ದೇವರಿಗೆ ಮಹತ್ವ ಹೇಗೆ ಸಿಗುವುದು? ಸುಖಕ್ಕಾಗಿ, ಸ್ವಾರ್ಥಕ್ಕಾಗಿ ನಾವು ಏನು ಕೆಲಸವನ್ನಾದರೂ ಮಾಡಬಹುದು ಆದರೆ ಪ್ರೀತಿಯನ್ನಲ್ಲ' ಎನ್ನುತ್ತಾಳೆ.

ಎಲ್ಲ ಬಲ್ಲವರೆಂದುಕೊಂಡವರಿಗೆ ಗರ್ವಭಂಗವಾಗುತ್ತದೆ. ರಬಿಆ ಅದೇ ಪ್ರಶ್ನೆಯನ್ನು ಇನ್ನೊಬ್ಬನಿಗೂ ಹಾಕುತ್ತಾಳೆ: 'ದಯವಿಟ್ಟು ನೀವು ಹೇಳಿ. ದೇವರನ್ನು ಏಕೆ ಪ್ರೀತಿಸಬೇಕು?' ಎರಡನೆಯವ ಮೊದಲಿನವನಿಗಿಂತ ಭಿನ್ನ ಉತ್ತರ ಕೊಡುತ್ತೇನೆ ಎಂದು ಭಾವಿಸಿ ಉತ್ತರಿಸಿದ: 'ದೇವರನ್ನು ಭಜಿಸದಿದ್ದರೆ ಅವನು ನಮ್ಮನ್ನು ನರಕಕ್ಕೆ ದೂಡುತ್ತಾನೆ'.

ರಬಿಆ ನಕ್ಕಳು: 'ಇದನ್ನು ನಾನಂತೂ ಪ್ರೇಮವೆನ್ನಲಾರೆ. ಇದು ಹೆದರಿದವರು ಅದರಿಂದ ಮುಕ್ತಿ ಪಡೆಯಲು ಮಾಡುವ ಭೀತಿಯ ಕಾರ್ಯವಷ್ಟೇ. ಭಜಿಸದಿದ್ದರೆ ನರಕಕ್ಕೆ ದೂಡಲಿಕ್ಕೆ ಅವನು ಕ್ರೂರಿಯೂ ಅಲ್ಲ, ಲಾಲಸಿಯೂ ಅಲ್ಲ'. ಇಬ್ಬರಿಗೂ ಉತ್ತರಿಸಲು ಏನೂ ಇರಲಿಲ್ಲ. ಆದರೂ ಪಟ್ಟುಬಿಡದೆ ಕೇಳಿದರು: 'ರಬಿಆ ಈಗ ಹೇಳು ನೀನು ದೇವರನ್ನು ಯಾಕೆ ಪ್ರೀತಿಸುವೆ?' ಅಲೌಕಿಕ ತೇಜಸ್ಸಿನ ಅವಳ ಮುಖದಲ್ಲಿ ವಿನೀತ ಭಾವವೊಂದು ಥಟ್ಟನೆ ತೋರಿತು: 'ನನ್ನ ಪ್ರೀತಿಗೆ ಯಾವ ಕಾರಣವೂ ಇಲ್ಲ. ಅವನು ನನ್ನನ್ನು ಸ್ವರ್ಗದಲ್ಲಿ ಓಲಾಡಿಸಲಿ, ನರಕದಲ್ಲಿ ಮುಳುಗಿಸಲಿ ನನಗೆ ಯಾವ ವ್ಯತ್ಯಾಸವೂ ತೋರದು. ನನ್ನ ಪಾಲಿಗೆ ಪ್ರೀತಿಯೆಂಬುದು ನಿಷ್ಕಾಮವಾದ ಸೇವೆ ಮಾತ್ರ. ನಾನು ಪ್ರೀತಿಸುತ್ತೇನೆ- ಪ್ರೀತಿಗಾಗಿ ಮಾತ್ರ. ಈಗಲೂ ನನಗೆ ಗೊತ್ತಿಲ್ಲ ಅದು ಭಕ್ತಿಯೇ, ಆರಾಧನೆಯೇ ಏನೆಂದು? ಅನಿಮಿತ್ತವಾದ ನನ್ನ ಪ್ರೀತಿಯನ್ನು ಅವನು ಸ್ವೀಕರಿಸಲಿ ಎಂದೂ ನಾನು ಬಯಸುವುದಿಲ್ಲ. ನನ್ನ ಕೆಲಸ ಅವನನ್ನು ಪ್ರೀತಿಸುವುದು ಮಾತ್ರ'.

ಭಗವಂತ ಮಾತ್ರವೇ ಅಲ್ಲ, ಯಾರ ಕಡೆಗಿನ ಪ್ರೀತಿಯೂ ಏನನ್ನೂ ಬಯಸುವುದಿಲ್ಲ; ತಲ್ಲೀನತೆಯೊಂದನ್ನು ಬಿಟ್ಟು. ತಲ್ಲೀನತೆಯೊಂದಿದ್ದರೆ ನರಕವನ್ನೂ ಸ್ವರ್ಗವಾಗಿಸಿಕೊಳ್ಳುವ ಶಕ್ತಿ ತಾನಾಗೇ ದೊರಕುತ್ತದೆ. ಆಗ ಭಗವಂತನೇ ತಂದೆ ಅವನೇ ತಾಯಿ, ಬಂಧು ಬಳಗ ಎಲ್ಲವೂ ಆಗುತ್ತಾನೆ. ನಿಷ್ಕಾಮ ಪ್ರೀತಿ ಎಂದರೆ ಅದೊಂದು ಅನುಭವ, ಅದು ಅಲೌಕಿಕ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

16 ಏಪ್ರಿಲ್ 2026 ಗುರುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಚತುರ್ದಶಿ ಗಂ. 20-12 **ನಕ್ಷತ್ರ:** ಉತ್ತರಾಭಾದ್ರ ಗಂ. 13-59 ಯೋಗ: ಐಂದ್ರ ಗಂ. 10-38 ಕರಣ: ವಿಷ್ಟಿ ಗಂ. 09-26 ಮೇಷ ಮಾಸದ 03 ನೇ ದಿನ. ಮಳೆ ನಕ್ಷತ್ರ : ಅಶ್ವಿನಿ 1 ನೇ ಪಾದ. **ರಾಹುಕಾಲ :** ಮಧ್ಯಾಹ್ನ 01-30 - 03-00, **ಸೂರ್ಯೋದಯ :** 06-21 ಸೂರ್ಯಾಸ್ತ : 06-40, **ಮುಸ್ಲಿಂ ದಿನಾಂಕ :** 27 ಶವ್ವಾಲ್, ಅದೃಷ್ಟ ಸಂಖ್ಯೆ : 5, 10

ಮೇಷ: ಕರ್ತವ್ಯದಂತಿರುವ ಧಾರ್ಮಿಕ ಕೆಲಸವನ್ನು ಮಾಡುವ ಬಗ್ಗೆ ತೀರ್ಮಾನಿಸುವುದರಿಂದ ಧರ್ಮ ಕಾರ್ಯದಲ್ಲಿ ಆಸಕ್ತಿ ಮೂಡುವುದು. ಮಾಧ್ಯಮಗಳಲ್ಲಿ ಕೆಲಸ ಮಾಡುವವರಿಗೆ ಉತ್ತಮ ದಿನ.

ವೃಷಭ: ಬದುಕಿನಲ್ಲಿ ಹೊಸ ವ್ಯಕ್ತಿಯ ಪ್ರವೇಶವಾಗಲಿದ್ದು, ಅವರಿಂದ ಸಿಗುವ ಸಲಹೆ, ಸಹಕಾರ ಮರೆಯಲಾಗದಂತೆ ಇರುವುದು. ವೃತ್ತಿಪರ ಕಾರ್ಯದಲ್ಲಿ ನಿರ್ದಾಕ್ಷಿಣ್ಯವಾಗಿ ವ್ಯವಹರಿಸಿ.

ಮಿಥುನ: ಸ್ನೇಹಿತರ ಸಲಹೆ ಅಥವಾ ಸ್ವಾರ್ಥದ ಮನೋಭಾವದಿಂದ ಬರುವ ಆಲೋಚನೆಗಳು ದಾರಿತಪ್ಪಿಸಲಿವೆ. ರಾಜಕೀಯ ವ್ಯಕ್ತಿಗಳು ಪರಿಸ್ಥಿತಿಯ ಲಾಭ ಪಡೆದುಕೊಳ್ಳುವರು.

ಕರ್ಕಾಟಕ: ಭೂ ಸಂಬಂಧದ ವ್ಯವಹಾರದಲ್ಲಿ ಹಣ ಹೂಡಿಕೆ ಮಾಡುವ ಮುನ್ನ ಎರಡೆರಡು ಬಾರಿ ಯೋಚಿಸಿ. ನಿಯಮಿತ ಕೆಲಸಕ್ಕೆ ಸೂಕ್ತ ಪ್ರಶಂಸೆ ಸಿಗಲಿದೆ. ಆರೋಗ್ಯದ ಕಡೆಗೆ ಗಮನವಿರಲಿ.

ಸಿಂಹ: ವಿಶೇಷ ವ್ಯಕ್ತಿಗಳ ಭೇಟಿ ಸಂತೋಷ ತರುವುದಲ್ಲದೆ, ನಿಮ್ಮ ಹೊಸ ಯೋಜನೆಗಳಿಗೆ ಚೈತನ್ಯ ತುಂಬುವುದು. ಕಾರ್ಯಸಾಧಕರ ಮನೋಕಾಮನೆಗಳು ಪೂರ್ಣಗೊಳ್ಳಲಿವೆ.

ಕನ್ಯಾ: ನವದಂಪತಿಗೆ ಹರ್ಷದ ಸಮಾಚಾರ ಕೇಳಿ ಬರುವುದರಿಂದ ಮನಸ್ಸಿಗೆ ನೆಮ್ಮದಿ. ಸಮಸ್ಯೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಸಂಧಾನದ ಅಥವಾ ಷರತ್ತುಗಳ ಮೂಲಕ ಬಗೆಹರಿಸಿಕೊಳ್ಳಿ.

ತುಲಾ: ಅಹಂಕಾರಭಾವದ ನಡವಳಿಕೆಯಿಂದ ಸೋಲು ಸಂಭವಿಸುವುದು. ಕುಟುಂಬ ಸದಸ್ಯರ ಆರೋಗ್ಯ ವಿಷಯದಲ್ಲಿನ ಚಿಂತೆ ತಪ್ಪಿದ್ದಲ್ಲ. ಆಡಳಿತ ವರ್ಗದವರಿಗೆ ಸಿಬ್ಬಂದಿಗಳಿಂದ ಪ್ರಶಂಸೆ ದೊರೆಯುತ್ತದೆ.

ವೃಶ್ಚಿಕ: ವೈಯಕ್ತಿಕ ವಿಚಾರಗಳಲ್ಲಿ ಸೃಷ್ಟಿಯಾದ ಸಣ್ಣಪುಟ್ಟ ಬದಲಾವಣೆಗಳಿಂದ ಮಾನಸಿಕ ನೆಮ್ಮದಿ ಕಳೆದುಕೊಳ್ಳುವಿರಿ. ವಸ್ತ್ರ ವಿನ್ಯಾಸಗಾರರಿಗೆ ವಿಶೇಷ ಪರಿಣತಿಯ ಅಗತ್ಯವಿದೆ. ಸಾಮಗ್ರಿ ಖರೀದಿಯಿಂದ ಖರ್ಚು ಬರಲಿದೆ.

ಧನು: ಗೃಹೋಪಕರಣ ಖರೀದಿ ಅಥವಾ ಕೆಲವಾರು ಯೋಜನೆಗಳಲ್ಲಿ ಎಡವಿದ ಅನುಭವ ಆಗಲಿದೆ. ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಉತ್ಸಾಹವಿರುತ್ತದೆ. ಇದರಿಂದ ವಿದ್ಯಾಪ್ರಗತಿಗೆ ತೊಂದರೆಯಾಗಬಹುದು.

ಮಕರ: ಇಂದಿನವರೆಗೂ ಲೌಕಿಕ ಜೀವನವನ್ನು ಯಾವುದೇ ಯೋಚನೆ ಇಲ್ಲದೆ ಮಾಡುತ್ತಿದ್ದ ನಿಮಗೆ ಇಂದಿನಿಂದ ಮುಕ್ತಿ ಹಾಗೂ ಅದಕ್ಕೆ ಸಂಬಂಧಪಟ್ಟಂತಹ ವಿಚಾರದಲ್ಲಿ ಆಸಕ್ತಿ ಬರಲಿದೆ.

ಕುಂಭ: ಹಣಕಾಸಿನ ವ್ಯವಹಾರಗಳೆಲ್ಲ ಸುಗಮವಾಗಿ ಸಾಗುತ್ತಿರುವುದರಿಂದ ಮನಸ್ಸು ನಿರಾಳವಾಗಿರುವುದು. ಹೂಗಳ ರಫ್ತು ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿದ ಲಾಭ ಪಡೆಯಬಹುದು. ಕೃಷಿಕರಿಗೆ ಕೆಲಸಗಳು ಪ್ರಾರಂಭವಾಗಲಿವೆ.

ಮೀನ: ವ್ಯವಹಾರದಲ್ಲಿ ಮಂದಗತಿಯ ನಡೆ ಕಂಡರೂ ಅಭಿವೃದ್ಧಿಯಂತೂ ಖಚಿತ. ಆಸೆಗಳು ಬಹುಮಟ್ಟಿಗೆ ಈಡೇರುವುದರಿಂದ ಹೊಸ ಹುರುಪು ಮೂಡಲಿದೆ. ಧರ್ಮ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚುವುದು.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,842
ಇಂದಿನ ಅಂತ್ಯ:	24,231
ದಿನದ ಗರಿಷ್ಠ:	24,280
	388

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹570
12 ಕ್ಕೆ	₹78
ಮೈಸೂರು: 100 ಕ್ಕೆ	₹580

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್‌-4	₹228
ಆರ್‌ಎಸ್‌ಎಸ್‌-5	₹221
ಗುಡ್ ಲಾಟ್	₹200

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹495-736
ದ್ವಿತಳಿ (ಬಿ.ವಿ)	₹471-811

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23750
ಎಸಿ	₹14000
ಆರ್‌ಪಿ	₹18250
ಆರ್‌ಸಿ	₹9900

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1740 (1745)
ಸೋಯಾ (ರಿಫೈನ್ಡ್)	₹1530 (1545)
ಸೂರ್ಯಕಾಂತಿ (ರಿಫೈನ್ಡ್)	₹1680 (1670)
ಪಾಮೋಲಿನ್	₹1460 (1445)

ಸಗಟು ಹಣದುಬ್ಬರ 3 ವರ್ಷಗಳ ಗರಿಷ್ಠ

ಯುದ್ಧದ ನಡುವೆ ವಿವಿಧ ಉತ್ಪನ್ನಗಳ ಸಗಟು ಬೆಲೆಯಲ್ಲಿ ಏರಿಕೆ

ನವದೆಹಲಿ (ಪಿಟಿಐ): ಇಂಧನ, ವಿದ್ಯುತ್ ಹಾಗೂ ತಯಾರಿಸಿದ ಉತ್ಪನ್ನಗಳ ಬೆಲೆಯಲ್ಲಿನ ಹೆಚ್ಚಳದ ಪರಿಣಾಮವಾಗಿ ಸಗಟು ಹಣದುಬ್ಬರ ಪ್ರಮಾಣವು ಮಾರ್ಚ್ ತಿಂಗಳಲ್ಲಿ ಶೇ 3.88ಕ್ಕೆ ತಲುಪಿದೆ. ಇದು ಮೂರು ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ದಾಖಲಾಗಿರುವ ಗರಿಷ್ಠ ಮಟ್ಟದ ಸಗಟು ಹಣದುಬ್ಬರ ಪ್ರಮಾಣ.

ಸಗಟು ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರ ದರವು ಸತತ ಐದನೆಯ ತಿಂಗಳಿನಲ್ಲಿಯೂ ಏರಿಕೆ ಆಗಿರುವುದನ್ನು

ಕೇಂದ್ರ ಕೈಗಾರಿಕಾ ಸಚಿವಾಲಯ ಬುಧವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತಿವೆ.

ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧವು ಆರಂಭವಾದ ನಂತರದಲ್ಲಿ ಜಾಗತಿಕ ಮಟ್ಟದಲ್ಲಿ ಸರಕುಗಳ ಬೆಲೆಯು ದುಬಾರಿ ಆಗಿರುವುದನ್ನು, ಇಂಧನ ಬೆಲೆ ಹೆಚ್ಚಾಗಿರುವುದನ್ನು ಮಾರ್ಚ್ ತಿಂಗಳ ಸಗಟು ಹಣದುಬ್ಬರ ಹೆಚ್ಚಳ ಆಗಿರುವುದು ಸೂಚಿಸುತ್ತಿದೆ. ಫೆಬ್ರುವರಿಯಲ್ಲಿ ಸಗಟು ಹಣದುಬ್ಬರ ಪ್ರಮಾಣ ಶೇ 2.13ರಷ್ಟು, ಕಳೆದ ವರ್ಷದ ಮಾರ್ಚ್‌ನಲ್ಲಿ ಶೇ 2.25ರಷ್ಟು ಇತ್ತು.

ಹಣದುಬ್ಬರದ ಏರಿಕೆ (%)

ವಲಯ	ಮಾರ್ಚ್	ಫೆಬ್ರುವರಿ
ಇಂಧನ, ವಿದ್ಯುತ್	1.05	-3.78
ಕಚ್ಚಾ ಪೆಟ್ರೋಲಿಯಂ	51.57	-1.29
ತಯಾರಿಸಿದ ಉತ್ಪನ್ನಗಳು	3.39	2.92

> **ಪಶ್ಚಿಮ ಏಷ್ಯಾ ಯುದ್ಧದ ವಿಚಾರವಾಗಿ ಶಾಂತಿ ಒಪ್ಪಂದವೊಂದು ಬೇಗ ಮೂಡದಿದ್ದರೆ, ಯುದ್ಧ ದೀರ್ಘಕಾಲ ನಡೆದರೆ ದೇಶದಲ್ಲಿ ಇಂಧನ ಬೆಲೆಯಲ್ಲಿ ಏರಿಕೆ ಆಗುತ್ತದೆ**
> **ಸೋನಲ್ ಬಧನ್,** ಅರ್ಥಶಾಸ್ತ್ರಜ್ಞ, ಬ್ಯಾಂಕ್ ಆಫ್ ಬರೋಡ

‘ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಇತರ ತಯಾರಿಕೆಗಳು, ಆಹಾರೇತರ ವಸ್ತುಗಳು, ಮೂಲ ಲೋಹಗಳ ತಯಾರಿಕೆ ಮತ್ತು ಆಹಾರ ಉತ್ಪನ್ನಗಳ ಬೆಲೆ ಏರಿಕೆಯು ಈ ವರ್ಷದ ಮಾರ್ಚ್‌ನಲ್ಲಿ ಹಣದುಬ್ಬರ ಹೆಚ್ಚಾಗಿರುವುದಕ್ಕೆ ಮುಖ್ಯ ಕಾರಣ’ ಎಂದು ಕೈಗಾರಿಕಾ ಸಚಿವಾಲಯ ಹೇಳಿದೆ.

‘ಜಾಗತಿಕ ಮಟ್ಟದಲ್ಲಿ ಇಂಧನ ಬೆಲೆಯು ಹೆಚ್ಚಿನ ಮಟ್ಟದಲ್ಲಿದೆ. ಹಂತಹಂತವಾಗಿ ಇದರ ಪರಿಣಾಮವು ಇತರ ಸರಕುಗಳ ಬೆಲೆಯ ಮೇಲೆಯೂ ಕಾಣಿಸಿಕೊಳ್ಳುತ್ತದೆ. ಹೀಗಾಗಿ, ಮುಂದಿನ ದಿನಗಳಲ್ಲಿಯೂ ಸಗಟು ಹಣದುಬ್ಬರ ಪ್ರಮಾಣ ಹೆಚ್ಚಳ ಆಗುತ್ತದೆ ಎಂಬುದು ನಮ್ಮ ನಿರೀಕ್ಷೆ’ ಎಂದು ಬಾರ್ಕ್ಲೇಸ್ ಸಂಸ್ಥೆ ಅಂದಾಜು ಮಾಡಿದೆ.

ಆರ್‌ಬಿಐ ರೆಪೊ ದರವನ್ನು ಈ ವರ್ಷ ದುದ್ದಕ್ಕೂ ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳಲಿದೆ ಎಂದೂ ಅದು ಅಂದಾಜಿಸಿದೆ.

ತೇಜಸ್ ಎಂಜಿನ್‌ಗೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಘು ಯುದ್ಧ ವಿಮಾನ ತೇಜಸ್‌ನಲ್ಲಿ ಬಳಕೆಯಾಗುವ ‘ಎಫ್404–ಐಎನ್20’ ಎಂಜಿನ್‌ಗಳ ಲಭ್ಯತೆ ಮತ್ತು ನಿರ್ವಹಣೆಯನ್ನು ಉತ್ತಮಗೊಳಿಸುವ ಉದ್ದೇಶದಿಂದ ದೇಶದಲ್ಲಿ ಎಂಜಿನ್ ದುರಸ್ತಿ ಘಟಕ ಸ್ಥಾಪಿಸಲು ಜಿಇ ಏರೋಸ್ಪೇಸ್, ಭಾರತೀಯ ವಾಯುಪಡೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಈ ಘಟಕವನ್ನು ಜಿಇ ಏರೋಸ್ಪೇಸ್‌ನ ತಾಂತ್ರಿಕ ನೆರವಿನೊಂದಿಗೆ ಭಾರತೀಯ ವಾಯುಪಡೆಯು ಸ್ಥಾಪಿಸಲಿದೆ. ಇದು ಸ್ವದೇಶಿ ರಕ್ಷಣಾ ವ್ಯವಸ್ಥೆಗೆ ಹೆಚ್ಚಿನ ಬಲ ನೀಡುವ ನಿರೀಕ್ಷೆಯಿದೆ. ಈ ಘಟಕವು ಕಾರ್ಯಾರಂಭ ಮಾಡಿದ ಬಳಿಕ, ವಿಮಾನಗಳ ದುರಸ್ತಿಗಾಗಿ ವಿದೇಶಿ ಕೇಂದ್ರಗಳ ಮೇಲೆ ಅವಲಂಬಿತವಾಗುವ ಅಗತ್ಯವಿರುವುದಿಲ್ಲ. ಅಲ್ಲದೆ, ಎಂಜಿನ್‌ನ ದುರಸ್ತಿಯ ಸಮಯವನ್ನು ಗಣನೀಯವಾಗಿ ಕಡಿಮೆ ಮಾಡಲಿದೆ ಎಂದು ಜಿಇ ಏರೋಸ್ಪೇಸ್ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಭಾರತೀಯ ವಾಯುಪಡೆಯೇ ನಿರ್ವಹಿಸಲಿದ್ದು, ಜಿಇ ಏರೋಸ್ಪೇಸ್ ತಾಂತ್ರಿಕ ಮಾಹಿತಿ, ತರಬೇತಿ, ಪೂರಕ ಸಿಬ್ಬಂದಿ ಹಾಗೂ ಅಗತ್ಯ ಬಿಡಿಭಾಗಗಳು ಮತ್ತು ವಿಶೇಷ ಉಪಕರಣಗಳನ್ನು ಒದಗಿಸಲಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ)
15-04-2026

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9600-9700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1750 (1755)
ಒಂದು ವಾರದ ಡೆಲಿವರಿ	1745 (1750)
ಪಾಮ್ ವಾರದ ಡೆಲಿವರಿ	1458 (1443)
ಸೂರ್ಯಕಾಂತಿ ಎಣ್ಣೆ ಕಚ್ಚಾ	1580 (1565)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,52,500 (1,51,200)
ಬೆಳ್ಳಿ ಕೆ.ಜಿಗೆ	2,50,000 (2,47,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹24000-28500
ಸುಳ್ಯ	₹10000-19000
ಪುತ್ತೂರು	₹5000-16500

‘ಕಾಯಂ ಸದಸ್ಯತ್ವ ಸಂಖ್ಯೆ ಹೆಚ್ಚಿಸಿ’

ವಿಶ್ವಸಂಸ್ಥೆ (ಪಿಟಿಐ): ‘ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಸುಧಾರಣೆ ತರುವುದಾದರೆ, ಪರಮಾಧಿಕಾರ ಹೊಂದಿರುವ ಕಾಯಂ ಸದಸ್ಯರ ಸಂಖ್ಯೆಯನ್ನು ಅಧಿಕಗೊಳಿಸಬೇಕು. ಇಲ್ಲವಾದಲ್ಲಿ ವಿಶ್ವಸಂಸ್ಥೆಯಲ್ಲಿ ಈಗಾಗಲೇ ಇರುವ ಅಧಿಕಾರದ ಅಸಮಾನತೆಯು ಇನ್ನಷ್ಟು ಹೆಚ್ಚಾಗಲಿದೆ’ ಎಂದು ಭಾರತ ಪ್ರತಿಪಾದಿಸಿದೆ.

ಸರ್ಕಾರಗಳ ನಡುವಿನ ಮಾತುಕತೆ (ಐಜಿಎನ್) ಸಭೆಯಲ್ಲಿ ವಿಶ್ವಸಂಸ್ಥೆಗೆ ಭಾರತದ ಕಾಯಂ ಪ್ರತಿನಿಧಿ ಆಗಿರುವ ಪರ್ವತನೇನಿ ಹರೀಶ್ ಮಾತನಾಡಿದರು. ಕಾಯಂ ಸದಸ್ಯತ್ವ ನೀಡಬೇಕು ಎಂಬುದು ಭಾರತದ ಹಲವು ದಶಕಗಳ ಬೇಡಿಕೆಯಾಗಿದೆ.

‘ಭದ್ರತಾ ಮಂಡಳಿಯಲ್ಲಿ ಸಾಂಸ್ಥಿಕ ಸ್ವರೂಪದಲ್ಲಿ ಬದಲಾವಣೆಗಳು ಆಗಬೇಕಿದೆ. ಹಳೆಯ ಸ್ವರೂಪಕ್ಕೆ 80 ವರ್ಷ ಕಳೆದಿದೆ. ಈ ಸ್ವರೂಪವು ಈಗಿನ ಕಾಲದ ಬದಲಾದ ಅಂತರರಾಷ್ಟ್ರೀಯ ರಾಜಕಾರಣಕ್ಕೆ ಒಗ್ಗುವುದಿಲ್ಲ’ ಎಂದರು.

ಕ್ಷೇತ್ರ ಪುನರ್‌ವಿಂಗಡಣೆ ಜೊತೆಗೆ ಮಹಿಳಾ ಮೀಸಲಾತಿ: ಕೇಂದ್ರದ ನಡೆ ಸೂಕ್ತವೇ?

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಯುದ್ಧ: ಮಾರ್ಚ್‌ನಲ್ಲಿ ರಫ್ತು ಕುಸಿತ

ಜಾಗತಿಕ ಮಟ್ಟದಲ್ಲಿನ ಬಿಕ್ಕಟ್ಟು, ವ್ಯಾಪಾರ ಅನಿಶ್ಚಿತತೆ ಇಳಿಕೆಗೆ ಕಾರಣ

ನವದೆಹಲಿ (ಪಿಟಿಐ): ಭಾರತದ ರಫ್ತು ವಹಿವಾಟು ಮಾರ್ಚ್ ತಿಂಗಳಲ್ಲಿ ಶೇಕಡ 7.44ರಷ್ಟು ಕುಸಿತ ಕಂಡು, 38.92 ಬಿಲಿಯನ್ ಡಾಲರ್‌ಗೆ (₹3.62 ಲಕ್ಷ ಕೋಟಿ) ತಲುಪಿದೆ. ಇದು ಐದು ತಿಂಗಳ ಅವಧಿಯಲ್ಲಿ ಕಂಡ ಅತ್ಯಂತ ಹೆಚ್ಚಿನ ಕುಸಿತ.

ವ್ಯಾಪಾರ ವಹಿವಾಟುಗಳಲ್ಲಿನ ಅನಿಶ್ಚಿತತೆ, ಜಾಗತಿಕ ಮಟ್ಟದಲ್ಲಿನ ಬಿಕ್ಕಟ್ಟುಗಳು ಈ ಕುಸಿತಕ್ಕೆ ಮುಖ್ಯ ಕಾರಣವಾಗಿವೆ. ಪಶ್ಚಿಮ ಏಷ್ಯಾಕ್ಕೆ ಸರಕು ಸಾಗಣೆಯು ಮಾರ್ಚ್ ತಿಂಗಳಲ್ಲಿ ಶೇ 50ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕಡಿಮೆಯಾಗಿದೆ.

ಆದರೂ, ಆಮದು ಕೂಡ ಕಡಿಮೆ ಆದ ಪರಿಣಾಮವಾಗಿ ವ್ಯಾಪಾರ ಕೊರತೆಯು ಒಂಬತ್ತು ತಿಂಗಳ ಕನಿಷ್ಠ ಮಟ್ಟವಾದ 20.67 ಬಿಲಿಯನ್ ಡಾಲರ್‌ಗೆ (₹1.92 ಲಕ್ಷ ಕೋಟಿ) ಇಳಿಕೆ ಆಗಿದೆ. ಆಮದು ವಹಿವಾಟುಗಳು ಮಾರ್ಚ್‌ನಲ್ಲಿ ಶೇ 6.51ರಷ್ಟು ಇಳಿಕೆ ಕಂಡಿವೆ. ಕಚ್ಚಾ ತೈಲ ಮತ್ತು ಚಿನ್ನದ ಆಮದು ಗಣನೀಯವಾಗಿ ತಗ್ಗಿದೆ.

ಮುಖ್ಯಾಂಶಗಳು

- ಪಶ್ಚಿಮ ಏಷ್ಯಾಕ್ಕೆ ಸರಕು ಸಾಗಣೆ ಮಾರ್ಚ್‌ನಲ್ಲಿ ಶೇ 50ಕ್ಕಿಂತ ಹೆಚ್ಚು ಇಳಿಕೆ
- 2025-26ರಲ್ಲಿ ದೇಶದ ವ್ಯಾಪಾರ ಕೊರತೆ ₹31 ಲಕ್ಷ ಕೋಟಿಗೆ ಏರಿಕೆ

2025–26ನೆಯ ಪೂರ್ಣ ಆರ್ಥಿಕ ವರ್ಷದಲ್ಲಿ ದೇಶದ ರಫ್ತು ವಹಿವಾಟು ಶೇ 0.93ರಷ್ಟು ಹೆಚ್ಚಳ ಆಗಿದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟವಾದ 441.78 ಬಿಲಿಯನ್ ಡಾಲರ್‌ಗೆ (₹41.19 ಲಕ್ಷ ಕೋಟಿ) ತಲುಪಿದೆ. ಇದೇ ಅವಧಿಯಲ್ಲಿ ಆಮದು ವಹಿವಾಟು ಶೇ 7.45ರಷ್ಟು ಹೆಚ್ಚಾಗಿ 775 ಬಿಲಿಯನ್ ಡಾಲರ್‌ಗೆ (₹72.26 ಲಕ್ಷ ಕೋಟಿ) ತಲುಪಿದೆ. ವ್ಯಾಪಾರ ಕೊರತೆ ಅಂತರವು 333.2 ಬಿಲಿಯನ್ ಡಾಲರ್‌ಗೆ (₹31.06 ಲಕ್ಷ ಕೋಟಿ) ಏರಿಕೆ ಆಗಿದೆ.

ಚೀನಾ ಜೊತೆ ಹೆಚ್ಚು ವಹಿವಾಟು

2025–26ರಲ್ಲಿ ಭಾರತವು ಚೀನಾ ಜೊತೆ ಅತಿಹೆಚ್ಚಿನ ಮೊತ್ತದ ವಹಿವಾಟು ನಡೆಸಿದೆ. ಈ ಮೂಲಕ ಭಾರತದ ಅತಿದೊಡ್ಡ ವಾಣಿಜ್ಯ ಪಾಲುದಾರ ಚೀನಾ ಆಗಿದೆ. 2024–25ರಲ್ಲಿ ಈ ಸ್ಥಾನದಲ್ಲಿ ಅಮೆರಿಕ ಇತ್ತು. ಆದರೆ ಎಲ್‌ಪಿಜಿ ಸೇರಿದಂತೆ ಅಮೆರಿಕದಿಂದ ಇಂಧನ ಆಮದು ಮಾಡಿಕೊಳ್ಳುವುದು ಜಾಸ್ತಿ ಆಗಿದೆ.

ಜಾಗತಿಕ ಮಟ್ಟದಲ್ಲಿ ಸವಾಲುಗಳು ಇದ್ದರೂ ಭಾರತದ ರಫ್ತು ವಹಿವಾಟುದಾರರು ಬೆಳವಣಿಗೆ ಸಾಧಿಸಿದ್ದಾರೆ ಎಂದು ಕೇಂದ್ರ ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ಹೇಳಿದ್ದಾರೆ. ‘2026–27ನೆಯ ಸಾಲಿನಲ್ಲಿ ಇನ್ನೂ ಉತ್ತಮ ಸಾಧನೆ ಕಾಣಬಹುದು ಎಂಬ ಭರವಸೆ ನಮಗಿದೆ’ ಎಂದು ಅವರು ತಿಳಿಸಿದ್ದಾರೆ.

ಭಾರತದಿಂದ ಪಶ್ಚಿಮ ಏಷ್ಯಾಕ್ಕೆ ನಡೆಯುವ ರಫ್ತು ವಹಿವಾಟು ಮಾರ್ಚ್‌ನಲ್ಲಿ ಶೇ 57.95ರಷ್ಟು ಕುಸಿದಿದೆ. ಇದೇ ತಿಂಗಳಲ್ಲಿ ಕೊಲ್ಲಿ ರಾಷ್ಟ್ರಗಳಿಂದ ಆಗುವ ಆಮದು ಶೇ 51.64ರಷ್ಟು ತಗ್ಗಿದೆ. ‘ಮಾರ್ಚ್‌ನಲ್ಲಿ ಪಶ್ಚಿಮ ಏಷ್ಯಾಕ್ಕೆ ಆಗುವ ರಫ್ತು ವಹಿವಾಟು ಕಡಿಮೆ ಆಗಿದ್ದುದು ಒಟ್ಟು ರಫ್ತು ವಹಿವಾಟುಗಳ ಮೇಲೆ ಪರಿಣಾಮ ಬೀರಿದೆ’ ಎಂದು ಅಗರ್ವಾಲ್ ತಿಳಿಸಿದ್ದಾರೆ.

ಯುದ್ಧದಿಂದಾಗಿ ಅಂತರರಾಷ್ಟ್ರೀಯ ಜಲಮಾರ್ಗಗಳಲ್ಲಿ ಹಡಗುಗಳ ಸಂಚಾರಕ್ಕೆ ಅಡ್ಡಿ ಉಂಟಾಗುತ್ತಿದ್ದು, ಏಪ್ರಿಲ್‌ನಲ್ಲಿಯೂ ರಫ್ತು ವಹಿವಾಟು ಸಮಸ್ಯೆ ಎದುರಿಸಬಹುದು ಎಂದು ಅವರು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಷೇರುಪೇಟೆ ಏರಿಕೆ, ಸಂಪತ್ತು ವೃದ್ಧಿ

ನವದೆಹಲಿ (ಪಿಟಿಐ): ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆಯಿಂದ ಉತ್ತಮ ಫಲಿತಾಂಶ ಹೊರಹೊಮ್ಮಬಹುದು ಎಂಬ ಆಶಾವಾದ, ಕಚ್ಚಾ ತೈಲ ದರವು ಬ್ಯಾರಲ್‌ಗೆ 100 ಡಾಲರ್‌ಗಿಂತ ಕೆಳಕ್ಕೆ ಬಂದಿದ್ದುದು ಹೂಡಿಕೆದಾರರಿಗೆ ಉತ್ತೇಜನ ನೀಡಿದವು. ಹೀಗಾಗಿ, ದೇಶದ ಷೇರುಪೇಟೆ ಸೂಚ್ಯಂಕಗಳು ಬುಧವಾರ ಏರಿಕೆ ಕಂಡವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,263 ಅಂಶ ಏರಿಕೆಯಾಗಿ, 78,111ಕ್ಕೆ ವಹಿವಾಟು ಕೊನೆಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 388 ಅಂಶ ಹೆಚ್ಚಳವಾಗಿ, 24,231ಕ್ಕೆ ಅಂತ್ಯಗೊಂಡಿದೆ. ಷೇರು ಸೂಚ್ಯಂಕಗಳ ಏರಿಕೆಯಿಂದ ಹೂಡಿಕೆದಾರರ ಸಂಪತ್ತು ₹9.41 ಲಕ್ಷ ಕೋಟಿಯಷ್ಟು ವೃದ್ಧಿಸಿದೆ.



ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 1.4ರಷ್ಟು ಏರಿಕೆಯಾಗಿ ಬ್ಯಾರಲ್‌ಗೆ 95.74 ಡಾಲರ್ ಆಗಿದೆ.

ಮುಂದಿನ ಎರಡು ದಿನಗಳಲ್ಲಿ ಇಸ್ಲಾಮಾಬಾದ್‌ನಲ್ಲಿ ಇರಾನ್ ಜೊತೆ ಎರಡನೇ ಸುತ್ತಿನ ಮಾತುಕತೆ ನಡೆಸಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಹೇಳಿರುವುದಾಗಿ ಕೆಲವು ಮಾಧ್ಯಮಗಳು ವರದಿ ಮಾಡಿವೆ.

ಬೆಳ್ಳಿ ದರ ₹11,800 ಏರಿಕೆ

ನವದೆಹಲಿ (ಪಿಟಿಐ): ಆಭರಣ ವ್ಯಾಪಾರಿಗಳಿಂದ ಹೆಚ್ಚಿದ ಬೇಡಿಕೆಯ ಕಾರಣದಿಂದಾಗಿ ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಬುಧವಾರ ಏರಿಕೆಯಾಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹3 ಸಾವಿರ ಹೆಚ್ಚಳವಾಗಿ, ₹1.58 ಲಕ್ಷದಂತೆ ಮಾರಾಟವಾಗಿದೆ. ಬೆಳ್ಳಿ ಬೆಲೆಯು ಕೆ.ಜಿಗೆ ₹11,800 ಹೆಚ್ಚಳವಾಗಿ, ₹2.57 ಲಕ್ಷಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಕ್ಷಯ ತೃತೀಯ ಅಂಗವಾಗಿ ರಿಟೇಲ್ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿಗೆ ಹೆಚ್ಚಿನ ಬೇಡಿಕೆ ಉಂಟಾಗಬಹುದು ಎಂದು ವರ್ತಕರು ಈ ಲೋಹಗಳನ್ನು ಹಬ್ಬದ ಆರಂಭಕ್ಕೂ ಮೊದಲೇ ಖರೀದಿಸಲು ಮುಂದಾಗಿದ್ದಾರೆ. ಇದರಿಂದ ಚಿನ್ನ, ಬೆಳ್ಳಿ ದರದಲ್ಲಿ ಹೆಚ್ಚಳವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

‘ಟೈಮ್’ ಪ್ರಭಾವಿಗಳ ಪಟ್ಟಿಯಲ್ಲಿ ಪಿಚೈ, ರಣಬೀರ್ ಕಪೂರ್

ನ್ಯೂಯಾರ್ಕ್ (ಪಿಟಿಐ): ಟೈಮ್ ನಿಯತಕಾಲಿಕ 2026ರ ವಿಶ್ವದ 100 ಅತ್ಯಂತ ಪ್ರಭಾವಿ ವ್ಯಕ್ತಿಗಳ ಪಟ್ಟಿಯನ್ನು ಬುಧವಾರ ಬಿಡುಗಡೆ ಮಾಡಿದೆ. ಪಟ್ಟಿಯಲ್ಲಿ ಗೂಗಲ್ ಸಿಇಒ ಸುಂದರ್ ಪಿಚೈ, ಮೈಕಲಿನ್ ಸ್ಟಾರ್ ಪ್ರಶಸ್ತಿ ವಿಜೇತ ಬಾಣಸಿಗ ವಿಕಾಸ್ ಖನ್ನ, ನಟ ರಣಬೀರ್ ಕಪೂರ್, ನ್ಯೂಯಾರ್ಕ್ ನಗರದ ಮೇಯರ್ ಜೊಹ್ರಾನ್ ಮಮ್ದಾನಿ, ಯೂಟ್ಯೂಬ್ ಮುಖ್ಯಸ್ಥ ನೀಲ್ ಮೋಹನ್ ಮತ್ತು ನೇಪಾಳ ಪ್ರಧಾನಿ ಬಾಲೇಂದ್ರ ಶಾ ಸ್ಥಾನ ಪಡೆದಿದ್ದಾರೆ.

ಟೈಮ್ ಬಿಡುಗಡೆ ಮಾಡಿರುವ ಸಮಗ್ರ ಪಟ್ಟಿಯಲ್ಲಿ ಜಾಗತಿಕ ಸಾಧಕರು, ನಾಯಕರು, ಉದ್ಯಮ ದಿಗ್ಗಜರು, ಕಲಾವಿದರು, ಸಂಶೋಧಕರು ಮತ್ತು ಗಣ್ಯರು ಇದ್ದಾರೆ. ಪಟ್ಟಿಯಲ್ಲಿ ಸ್ಥಾನ ಪಡೆದವರು ಸಂಸ್ಕೃತಿಯನ್ನು ಅಭೂತಪೂರ್ವ ರೀತಿಯಲ್ಲಿ ಬದಲಾಯಿಸಿದ್ದಾರೆ ಎಂದು ಟೈಮ್ ಒತ್ತಿ ಹೇಳಿದೆ.

ಏ. 20ರಿಂದ ಭಾರತ–ಅಮೆರಿಕ ವ್ಯಾಪಾರ ಮಾತುಕತೆ

ನವದೆಹಲಿ (ಪಿಟಿಐ): ಭಾರತ ಮತ್ತು ಅಮೆರಿಕ ನಡುವಿನ ಪ್ರಸ್ತಾವಿತ ವಾಣಿಜ್ಯ ಒಪ್ಪಂದದ ಕುರಿತಾಗಿ ಎರಡೂ ದೇಶದ ಅಧಿಕಾರಿಗಳು ವಾಷಿಂಗ್ಟನ್‌ನಲ್ಲಿ ಏಪ್ರಿಲ್ 20ರಿಂದ ಮೂರು ದಿನ ಮಾತುಕತೆ ನಡೆಸಲಿದ್ದಾರೆ.

ಅಮೆರಿಕವು ವಿಧಿಸುವ ಸುಂಕದ ವಿಚಾರದಲ್ಲಿ ಬದಲಾವಣೆ ಆಗಿರುವ ಕಾರಣದಿಂದಾಗಿ, ಫೆಬ್ರುವರಿಯಲ್ಲಿ ಎರಡೂ ದೇಶಗಳ ಪೂರ್ಣಗೊಂಡ ಒಪ್ಪಂದದ ಬಗ್ಗೆ ಮತ್ತೆ ಮಾತುಕತೆ ನಡೆಸುವ ಅಗತ್ಯ ಎದುರಾಗಿದೆ ಎಂದು ಕೇಂದ್ರ ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ತಿಳಿಸಿದ್ದಾರೆ.

ಕೇಂದ್ರ ವಾಣಿಜ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ದರ್ಪಣ್ ಜೈನ್ ಅವರು ಭಾರತದ ಅಧಿಕಾರಿಗಳ ತಂಡದ ನೇತೃತ್ವ ವಹಿಸಲಿದ್ದಾರೆ.

ಫೆಬ್ರುವರಿ ತಿಂಗಳಿನಲ್ಲಿ ನಡೆದ ಒಪ್ಪಂದ ಪ್ರಕಾರ, ಭಾರತದ ಸರಕುಗಳ ಮೇಲೆ ಅಮೆರಿಕ ಆಮದು ಸುಂಕವನ್ನು ಶೇ 18ಕ್ಕೆ ಇಳಿಸಲು ಒಪ್ಪಿಕೊಂಡಿತ್ತು. ಆದರೆ, ಅಮೆರಿಕದ ಸುಪ್ರೀಂ ಕೋರ್ಟ್, ಪ್ರತೀಕಾರ ಸುಂಕವನ್ನು ರದ್ದುಗೊಳಿಸಿತ್ತು. ಇದರಿಂದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಲ್ಲ ದೇಶಗಳ ಮೇಲೆ ಫೆಬ್ರುವರಿ 24ರಿಂದ ಜಾರಿಗೆ ಬರುವಂತೆ ಎಲ್ಲ ದೇಶಗಳ ಮೇಲೆ ಶೇ 10ರಷ್ಟು ಸುಂಕವನ್ನು 150 ದಿನಗಳಿಗೆ ವಿಧಿಸಿದರು.

ಅಂತ್ಯದತ್ತ ಇರಾನ್ ಯುದ್ಧ: ಡೊನಾಲ್ಡ್ ಟ್ರಂಪ್

ಒಂದನೇ ಪುಟದಿಂದ...

ಈ ಸಂದರ್ಶನದ ವಿಡಿಯೊ ತುಣುಕುಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿವೆ.

ಚೀನಾಕ್ಕೆ ಸಂತಸ: ‘ಹೊರ್ಮುಜ್ ಜಲಸಂಧಿಯನ್ನು ಶಾಶ್ವತವಾಗಿ ನಾನು ಮುಕ್ತಗೊಳಿಸುತ್ತಿರುವುದಕ್ಕೆ ಚೀನಾ ಸಂತಸಗೊಂಡಿದೆ. ಇರಾನ್‌ಗೆ ಶಸ್ತ್ರಾಸ್ತ್ರಗಳನ್ನು ಒದಗಿಸದಿರಲು ಚೀನಾ ಒಪ್ಪಿಕೊಂಡಿದೆ’ ಎಂದು ಡೊನಾಲ್ಡ್ ಟ್ರಂಪ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಉಲ್ಲೇಖಿಸಿದ್ದಾರೆ.

‘ಇರಾನ್ ಜೊತೆ ಭಾರಿ ಚೌಕಾಶಿ ನಡೆಸಲು ಟ್ರಂಪ್ ಬಯಸಿದ್ದಾರೆ. ಅಣ್ವಸ್ತ್ರ ಹೊಂದುವುದಿಲ್ಲ ಎಂಬುದಕ್ಕೆ ಅವರು ಬದ್ಧರಾದರೆ ಮಾತ್ರ ಅಭಿವೃದ್ಧಿ ಹೊಂದುವಂತೆ ಮಾಡುತ್ತೇವೆ ಎಂದಿದ್ದಾರೆ’ ಎಂದು ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಜಾರ್ಜಿಯಾದಲ್ಲಿ ಹೇಳಿದ್ದಾರೆ.

‘ಅಮೆರಿಕ– ಇರಾನ್ ನಡುವೆ ಮಾತುಕತೆಯ ಪುನರಾರಂಭದ ಸಾಧ್ಯತೆ ಹೆಚ್ಚಿದೆ’ ಎಂದು ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರೆಸ್ ತಿಳಿಸಿದ್ದಾರೆ.

ಯುದ್ಧವು ಬಹುತೇಕ ಅಂತ್ಯದತ್ತ ತಲುಪಿದೆ ಹಾಗೂ ಮಾತುಕತೆ ಪುನರಾರಂಭಗೊಳ್ಳಲಿದೆ ಎಂದು ಟ್ರಂಪ್ ಸುಳಿವು ನೀಡಿದ ಬೆನ್ನಿಗೆ, ಜಾಗತಿಕವಾಗಿ ತೈಲ ಬೆಲೆಗಳು ಕುಸಿದವು. ಷೇರು ಮಾರುಕಟ್ಟೆ ಸಕಾರಾತ್ಮಕವಾಗಿ ಸ್ಪಂದಿಸಿದೆ.

> **ಸಮುದ್ರದಲ್ಲಿ ಸಿಲುಕಿರುವ ಇರಾನ್‌ನ ತೈಲ ಮಾರಾಟಕ್ಕೆ ಅನುಮತಿ ನೀಡಿರುವ ಅವಧಿ ಶೀಘ್ರದಲ್ಲೇ ಮುಗಿಯಲಿದೆ. ಇದನ್ನು ನವೀಕರಿಸುವುದಿಲ್ಲ**
> **ಅಮೆರಿಕದ ಹಣಕಾಸು ಇಲಾಖೆ**

ಲೆಬನಾನ್– ಇಸ್ರೇಲ್ ಮಧ್ಯೆ ನೇರ ಮಾತುಕತೆ

ಲೆಬನಾನ್ ಮತ್ತು ಇಸ್ರೇಲ್ ದಶಕದ ಬಳಿಕ ಮೊದಲ ಬಾರಿಗೆ ನೇರ ರಾಜತಾಂತ್ರಿಕ ಮಾತುಕತೆಗಳನ್ನು ವಾಷಿಂಗ್ಟನ್‌ನಲ್ಲಿ ಮಂಗಳವಾರ ನಡೆಸಿದವು.

‘ಇರಾನ್ ದುರ್ಬಲಗೊಂಡಿದೆ. ಇನ್ನಾದರೂ ಲೆಬನಾನ್ ಸರ್ಕಾರವು ಹಿಜ್ಬುಲ್ಲಾ ಬಂಡುಕೋರರಿಗೆ ಪ್ರೋತ್ಸಾಹ ನೀಡಬಾರದು’ ಎಂದು ಅಮೆರಿಕ ದಲ್ಲಿರುವ ಇಸ್ರೇಲ್ ರಾಯಭಾರಿ ಯೆಚೀಲ್ ಲೈಟರ್ ಮಾತುಕತೆಯಲ್ಲಿ ಪ್ರಸ್ತಾಪಿಸಿದರು.

ಲೆಬನಾನ್‌ನಲ್ಲಿ ನಡೆದಿರುವ ಇಸ್ರೇಲ್– ಹಿಬ್ಜುಲ್ಲಾ ಬಂಡುಕೋರರ ನಡುವಿನ ಸಂಘರ್ಷವನ್ನು ಕೊನೆಗೊಳಿಸುವ ತುರ್ತು ಅಗತ್ಯವನ್ನು ಅಮೆರಿಕದಲ್ಲಿನ ಲೆಬನಾನ್ ರಾಯಭಾರಿ ನಾಡಾ ಹಮಾದೇಹ್ ಮೊವಾಡ್ ಇದೇ ಸಂದರ್ಭ ಪುನರುಚ್ಚರಿಸಿದರು.

ಸಾರ್ವಭೌಮತ್ವ ಹಾಗೂ ಪ್ರಾದೇಶಿಕ ಸಮಗ್ರತೆಗೆ ಧಕ್ಕೆ ತರಬಾರದು ಎಂದು ಆಗ್ರಹಿಸಿದರು.

ಉಭಯ ದೇಶಗಳ ನಡುವಿನ ಮಾತುಕತೆಗೆ ಇರಾನ್ ಬೆಂಬಲಿತ ಹಿಜ್ಬುಲ್ಲಾ ಬಂಡುಕೋರರು ವಿರೋಧ ವ್ಯಕ್ತಪಡಿಸಿದ್ದಾರೆ. ಚರ್ಚೆಯಲ್ಲಿ ಭಾಗಿಯಾಗಿಲ್ಲ. ಎರಡು ತಾಸಿಗೂ ಹೆಚ್ಚಿನ ಹೊತ್ತು ಉಭಯ ರಾಷ್ಟ್ರಗಳ ರಾಜತಾಂತ್ರಿಕ ಅಧಿಕಾರಿಗಳು ಮಾತುಕತೆ ನಡೆಸಿದರು.

‘ಇದೊಂದು ಐತಿಹಾಸಿಕ ಅವಕಾಶ’ ಎಂದು ಬಣ್ಣಿಸಿರುವ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ, ‘ಯಾವುದೇ ಒಪ್ಪಂದವು ತಕ್ಷಣಕ್ಕೆ ಆಗುವುದಿಲ್ಲ’ ಎಂದಿದ್ದಾರೆ.

ಮಾತುಕತೆಗೆ ಪಾಕ್ ಸೇನಾ ಮುಖ್ಯಸ್ಥ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಸೇನಾ ಮುಖ್ಯಸ್ಥ, ಫೀಲ್ಡ್ ಮಾರ್ಷಲ್ ಆಸೀಂ ಮುನೀರ್ ಅವರ ನೇತೃತ್ವದ ನಿಯೋಗವು ಮಾತುಕತೆಗಾಗಿ ಟೆಹರಾನ್‌ಗೆ ಬುಧವಾರ ತಲುಪಿದೆ.

ಇರಾನ್– ಅಮೆರಿಕ ನಡುವಿನ ಯುದ್ಧ ಕೊನೆಗಾಣಿಸುವ ಮಾತುಕತೆಗಾಗಿ ಮುನೀರ್ ಅವರು ಆಂತರಿಕ ಸಚಿವ ಮೊಹ್ಸಿನ್ ನಖ್ವಿ ಅವರನ್ನೂ ಒಳಗೊಂಡ ನಿಯೋಗವನ್ನು ಕೊಂಡೊಯ್ದಿದ್ದಾರೆ ಎಂದು ಸೇನೆಯ ಮಾಧ್ಯಮ ವಿಭಾಗವಾದ ಇಂಟರ್ ಸರ್ವಿಸಸ್ ಪಬ್ಲಿಕ್ ರಿಲೇಶನ್ಸ್ ಹೇಳಿಕೆಯಲ್ಲಿ ತಿಳಿಸಿದೆ.

ಉಭಯ ದೇಶಗಳ ನಡುವಿನ ಮಾತುಕತೆ ಮುಂದುವರಿಸುವಂತೆ ಮನವೊಲಿಸಲು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಸಹ ಬುಧವಾರದಿಂದ ಸೌದಿ ಅರೇಬಿಯಾ, ಕತಾರ್ ಮತ್ತು ಟರ್ಕಿ ಪ್ರವಾಸ ಕೈಗೊಂಡಿದ್ದಾರೆ.

ನಾಲ್ಕು ದಿನದ ಪ್ರವಾಸದಲ್ಲಿ (ಏಪ್ರಿಲ್ 15ರಿಂದ 18) ಷರೀಫ್ ಅವರು ಆಯಾ ದೇಶಗಳೊಂದಿಗೆ ಪ್ರಾದೇಶಿಕ ಶಾಂತಿ, ದ್ವಿಪಕ್ಷೀಯ ಸಹಕಾರ ಹಾಗೂ ಭದ್ರತೆ ಕುರಿತಂತೆ ಚರ್ಚೆ ನಡೆಸಲಿದ್ದಾರೆ ಎಂದು ವಿದೇಶಾಂಗ ಇಲಾಖೆ ತಿಳಿಸಿದೆ.

ಪಾಕ್ ಬ್ಯಾಂಕ್‌ನಲ್ಲಿ ಸೌದಿ ಠೇವಣಿ: ಪಾಕಿಸ್ತಾನದ ಸೆಂಟ್ರಲ್ ಬ್ಯಾಂಕ್‌ನಲ್ಲಿ ಸೌದಿ ಅರೇಬಿಯಾವು ₹28 ಸಾವಿರ ಕೋಟಿಯನ್ನು (3 ಬಿಲಿಯನ್ ಡಾಲರ್) ಠೇವಣಿ ಇಡಲಿದೆ ಎಂದು ಹಣಕಾಸು ಸಚಿವ ಮುಹಮ್ಮದ್ ಔರಂಗಜೇಬ್ ತಿಳಿಸಿದ್ದಾರೆ.

ಪ್ರಾದೇಶಿಕ ಉದ್ವಿಗ್ನತೆಯಿಂದ ಕುಸಿದಿರುವ ಪಾಕಿಸ್ತಾನದ ಆರ್ಥಿಕತೆಗೆ ಸೌದಿಯ ಠೇವಣಿಯು ಬಲ ತುಂಬಲಿದೆ ಎಂದಿದ್ದಾರೆ.

‘ಈಗಾಗಲೇ ಠೇವಣಿ ಇಟ್ಟಿರುವ ₹46 ಸಾವಿರ ಕೋಟಿಯನ್ನು (5 ಬಿಲಿಯನ್ ಡಾಲರ್) ದೀರ್ಘಕಾಲದವರೆಗೆ ವಿಸ್ತರಿಸಿದೆ. ಇದರಿಂದ ವಿದೇಶಿ ವಿನಿಮಯ ಮೀಸಲು ಹೆಚ್ಚಿಸಿಕೊಳ್ಳಲು ಪಾಕಿಸ್ತಾನಕ್ಕೆ ನೆರವಾಗಲಿದೆ’ ಎಂದು ಹೇಳಿದ್ದಾರೆ.

ಅಡಿಕೆ ಧಾರಣೆ

ಕಾರ್ಕಳ		ಕೋಕ	26099-31699	ಗೊರಬಲು	19000-42599
ಹೊಸತು	30000-48500	ಕೆಂಪುಗೋಟು	31699-36699	**ಸಿದ್ದಾಪುರ**	
ಹಳತು	35000-55500	ರಾಶಿ	40009-54409	ಬಿಳಿಗೋಟು	27899-38009
ಪುತ್ತೂರು		ಸಿಪ್ಪೆಗೋಟು	9369-23299	ಚಾಲಿ	41700-47809
ಕೋಕ	20000-34500	**ಶಿವಮೊಗ್ಗ**		ಕೋಕ	22379-33589
ಹೊಸತು	30000-50000	ಸರಕು	57099-92096	ಕೆಂಪುಗೋಟು	27819-35689
ಸಾಗರ		ಬೆಟ್ಟೆ	56519-63599	ರಾಶಿ	48399-54099
ಬಿಳಿಗೋಟು	31699-33399	ರಾಶಿ	44009-55899	ತಟ್ಟಿಬೆಟ್ಟೆ	39509-48899
ಚಾಲಿ	40599-43099				

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಪ್ರವಾಸ

Travel

24-4-2026 ಆಗ್ರಾ, ದೆಹಲಿ, ಅಮೃತ್ ಸರ್, ವೈಷ್ಣೋದೇವಿ, ಹರಿದ್ವಾರ. 2-5-2026 ಅಯೋಧ್ಯೆ, ಪ್ರಯಾಗ್‌ರಾಜ್, ಕಾಶಿ, ಗಯಾ. 16-5-2026 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. 29-6-2026 ಅಮರನಾಥ ಯಾತ್ರಾ. ಕರ್ನಾಟಕ ಹೆರಿಟೇಜ್ ಟೂರ್ಸ್(ಹನುಮಂತನಗರ) 9845035349, 9482435755

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ನಿಯಮ ರೂಪಿಸಲು ವಿಳಂಬ ಸಲ್ಲ: ಹೈಕೋರ್ಟ್

ಮುಟ್ಟಿನ ರಜೆಗೆ ಕಟ್ಟುನಿಟ್ಟಿನ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳಾ ನೌಕರರ ಋತುಚಕ್ರದ ಸಮಯದಲ್ಲಿ ತಿಂಗಳಲ್ಲಿ ಒಂದು ದಿನದ ವೇತನ ಸಹಿತ ರಜೆ ನೀಡುವ ಕುರಿತ ನೀತಿಗೆ ಕೂಡಲೇ ನಿಯಮಗಳನ್ನು ರೂಪಿಸಿ, ಕಿಂಚಿತ್ತೂ ವಿಳಂಬಕ್ಕೆ ಅವಕಾಶ ಮಾಡದೆ ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ.

‘ಋತುಚಕ್ರದ ರಜೆ ನೀತಿಯನ್ನು ಹೋಟೆಲ್ ಮತ್ತಿತರ ಸಂಸ್ಥೆಗಳಲ್ಲಿ ಕಟ್ಟುನಿಟ್ಟಾಗಿ ಜಾರಿಗೊಳಿಸಿಲ್ಲ’ ಎಂದು ಆಕ್ಷೇಪಿಸಿ ಬೆಳಗಾವಿ ಜಿಲ್ಲೆಯ ಹೋಟೆಲ್ ಉದ್ಯೋಗಿ ಚಂದ್ರವ್ವ ಹಣಮಂತ ಗೋಕಾವಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪ್ರಕಟಿಸಿದೆ.

‘ಅಸಂಘಟಿತ ವಲಯಗಳೂ ಸೇರಿದಂತೆ ಎಲ್ಲಾ ವಲಯಗಳಲ್ಲೂ ಸರ್ಕಾರ ತನ್ನ ಈ ಮಹತ್ವದ ನೀತಿ ಜಾರಿಗೊಳಿಸುವುದನ್ನು ಖಾತರಿಪಡಿಸಬೇಕು. ಮಹಿಳೆ ಮತ್ತು ಪುರುಷರು ಸಮಾನರೆಂದು ಕಾನೂನು ಹೇಳಿದ್ದರೂ ಜೈವಿಕ ಅಂಶಗಳು ಅವರನ್ನು ಪ್ರತ್ಯೇಕಿಸುತ್ತವೆ. ಮುಟ್ಟಿನ ರಜೆಯ ನ್ಯಾಯಯುತ ಮತ್ತು ಮಹಿಳೆಯೊಬ್ಬಳ ವಾಸ್ತವಿಕ ಬದುಕಿನ ಮಾನವೀಯ ಅರಿವು’ ಎಂದು ನ್ಯಾಯಪೀಠ ತೀರ್ಪಿನಲ್ಲಿ ವಿವರಿಸಿದೆ.

‘ಮಹಿಳೆಯರ ಆರೋಗ್ಯ, ಘನತೆ ಮತ್ತು ದೈಹಿಕ ಸ್ವಾಯತ್ತತೆಗೆ ಸಂಬಂಧಿಸಿದ ವಿಷಯಗಳಲ್ಲಿ, ಸಮಾನತೆಯ ಗ್ಯಾರಂಟಿಯನ್ನು ತುಳಿಯುವುದಕ್ಕೆ ಬದಲಾಗಿ ಅದನ್ನು ವಿಸ್ತೃತ ನೆಲೆಯಲ್ಲಿ ನೋಡಬೇಕಿದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.

ಸರ್ಕಾರದ ಪರ ವಾದ ಮಂಡಿಸಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ, ‘ಸರ್ಕಾರದ ನೀತಿಯು ಪ್ರಗತಿಪರ ಹೆಜ್ಜೆಯಾಗಿದೆ. ವಿಶಾಲ ಮತ್ತು ವೈವಿಧ್ಯಮಯ ಅಸಂಘಟಿತ ವಲಯದಿಂದಾಗಿ ಕೆಲವು ಪ್ರಾಯೋಗಿಕ ಅಡೆತಡೆ ಉದ್ಭವಿಸಿವೆ’ ಎಂದು ಪ್ರತಿಪಾದಿಸಿದ್ದರು. ಅರ್ಜಿದಾರರ ಪರ ಹೈಕೋರ್ಟ್ ವಕೀಲೆ ದೀಕ್ಷಾ ಅಮೃತೇಶ್ ವಾದ ಮಂಡಿಸಿದ್ದರು.

ಅಶೋಕ್ ಮಿತ್ತಲ್‌ಗೆ ಸಂಬಂಧಿಸಿದ ಹಲವೆಡೆ ಇ.ಡಿ ದಾಳಿ

ಜಲಂಧರ್/ ನವದೆಹಲಿ (ಪಿಟಿಐ): ಎಎಪಿ ರಾಜ್ಯಸಭಾ ಸದಸ್ಯ ಅಶೋಕ್ ಕುಮಾರ್ ಮಿತ್ತಲ್ ಅವರಿಗೆ ಸಂಬಂಧಿಸಿದ ಶೈಕ್ಷಣಿಕ ಸಂಸ್ಥೆಗಳು ಮತ್ತು ಇತರ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯವು ಬುಧವಾರ ಶೋಧ ನಡೆಸಿತು.

‘ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆಗೆ ಸಂಬಂಧಿಸಿದಂತೆ ಪಂಜಾಬ್, ಹರಿಯಾಣದಲ್ಲಿ ಕಾರ್ಯಾಚರಣೆ ನಡೆಸಿತು’ ಎಂದು ಅಧಿಕಾರಿಗಳು ತಿಳಿಸಿದರು.

‘ಜಲಂಧರ್ ಮತ್ತು ಗುರುಗ್ರಾಮದ ಸುತ್ತಮುತ್ತಲಿನ ಸುಮಾರು 10 ಸ್ಥಳಗಳಲ್ಲಿ ಶೋಧ ನಡೆಸಲಾಯಿತು. ಈ ವೇಳೆ ತನಿಖೆಯ ಭಾಗವಾಗಿ ಕೆಲವು ವ್ಯಕ್ತಿಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ’ ಎಂದು ಹೇಳಿದರು. ಮಿತ್ತಲ್ ಅವರನ್ನು ರಾಜ್ಯಸಭೆಯ ಉಪ ನಾಯಕನನ್ನಾಗಿ ಇತ್ತೀಚೆಗೆ ನೇಮಕ ಮಾಡಲಾಗಿದೆ.

ಇ.ಡಿ ಕಾರ್ಯಾಚರಣೆಯನ್ನು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಖಂಡಿಸಿದ್ದಾರೆ.

ಮಗುಚಿದ ಬೋಟ್ • ಮಲೇಷ್ಯಾಕ್ಕೆ ಅಕ್ರಮವಾಗಿ ತೆರಳುತ್ತಿದ್ದ ರೋಹಿಂಗ್ಯಾ, ಬಾಂಗ್ಲಾ ನಾಗರಿಕರು

ಜೀವನ ಅರಸಿ ಹೊರಟವರು ನೀರುಪಾಲು

ಢಾಕಾ (ಎಪಿ/ಎಎಫ್‌ಪಿ): ‘ಉತ್ತಮ ಜೀವನ ಅರಸಿ ಅಂಡಮಾನ್ ಸಮುದ್ರದ ಮೂಲಕ ಅಕ್ರಮವಾಗಿ ಮಲೇಷ್ಯಾಕ್ಕೆ ತೆರಳುತ್ತಿದ್ದ ರೋಹಿಂಗ್ಯಾ ಸಮುದಾಯದವರು ಮತ್ತು ಬಾಂಗ್ಲಾ ದೇಶದ ಮಹಿಳೆಯರು, ಮಕ್ಕಳು ಸೇರಿ ಸುಮಾರು 250 ಮಂದಿ ಇದ್ದ ದೋಣಿ ಮಗುಚಿದ್ದು, ನೂರಾರು ಮಂದಿ ಕಾಣೆಯಾಗಿದ್ದಾರೆ’ ಎಂದು ವಿಶ್ವಸಂಸ್ಥೆ ಬುಧವಾರ ಮಾಹಿತಿ ನೀಡಿದೆ.

‘ವೇಗವಾಗಿ ಬೀಸುತ್ತಿದ್ದ ಗಾಳಿ, ಎತ್ತರದ ಅಲೆಗಳು ಮತ್ತು ಸಾಮರ್ಥ್ಯಕ್ಕಿಂತ ಹೆಚ್ಚಿನವರನ್ನು ತುಂಬಿಸಿಕೊಂಡಿದ್ದರಿಂದ ದುರಂತ ಸಂಭವಿಸಿದೆ’ ಎಂದು ವಿಶ್ವಸಂಸ್ಥೆ ಹೇಳಿದೆ. ಬಾಂಗ್ಲಾದೇಶದಿಂದ ಇಂಡೊನೇಷ್ಯಾಕ್ಕೆ ತೆರಳುತ್ತಿದ್ದ ಬಾಂಗ್ಲಾದ ಎಂ.ಟಿ. ಮೇಘನಾ ಪ್ರೈಡ್ ಎಂಬ ಹಡಗು ಸಮುದ್ರದಲ್ಲಿ ತೇಲುತ್ತಿದ್ದ ಜನರನ್ನು ಗಮನಿಸಿ 9 ಮಂದಿಯನ್ನು ರಕ್ಷಿಸಿದೆ. ದುರಂತ ನಡೆದ ದಿನದ ಕುರಿತು ಸ್ಪಷ್ಟ ಮಾಹಿತಿ ಇಲ್ಲ.

ಬಾಂಗ್ಲಾದ ಟೆಕ್‌ನಾಫ್ ಬಂದರಿನಿಂದ ಏಪ್ರಿಲ್ 4ರಂದು ದೋಣಿ ಹೊರಟಿತ್ತು. ಇಲ್ಲಿನ ಕಾಕ್ಸ್ ಬಜಾರ್‌ನ ನಿರಾಶ್ರಿತರ ಶಿಬಿರದಲ್ಲಿದ್ದ ರೋಹಿಂಗ್ಯಾ ಜನರು ಮತ್ತು ಹಲವು ಬಾಂಗ್ಲಾ ನಾಗರಿಕರು ದೋಣಿಯಲ್ಲಿದ್ದರು. ‘ದೋಣಿಯಲ್ಲಿ ಸುಮಾರು 300 ಮಂದಿ ಇದ್ದೆವು. ದುರಂತ ನಡೆದು 10 ದಿನ ಕಳೆದಿರಬಹುದು’ ಎಂದು ದುರಂತದಲ್ಲಿ ಬದುಕುಳಿದ ರಫೀಕುಲ್ ಇಸ್ಲಾಂ ತಿಳಿಸಿದರು. ಬಾಂಗ್ಲಾದ ಹಡಗು ಇವರನ್ನು ಏ.9ರಂದು ರಕ್ಷಿಸಿತ್ತು.

‘ಉದ್ಯೋಗದ ಭರವಸೆ ನೀಡಲಾಗಿತ್ತು’

ಮಲೇಷ್ಯಾದಲ್ಲಿ ಉದ್ಯೋಗ ಕೊಡಿಸುವುದಾಗಿ ವ್ಯಕ್ತಿಯೊಬ್ಬ ನನಗೆ ಭರವಸೆ ನೀಡಿದ್ದ. ಉದ್ಯೋಗ, ಉತ್ತಮ ಜೀವನದ ಭರವಸೆ ನೀಡಿ ನಮ್ಮನ್ನು ಅಲ್ಲಿಗೆ ಕರೆದೊಯ್ಯುತ್ತಿದ್ದವರೂ ದೋಣಿಯಲ್ಲಿ ಇದ್ದರು. ಗಸ್ತು ತಿರುಗುವ ಅಧಿಕಾರಿಗಳಿಂದ ತಪ್ಪಿಸಿಕೊಳ್ಳಲು ಮೀನು ಮತ್ತು ಬಲೆ ಇಡುವ ಇಕ್ಕಟ್ಟಿನ ಪೆಟ್ಟಿಗೆ ಒಳಗೆ ನಮ್ಮನ್ನು ತುಂಬಿದರು. ಉಸಿರುಕಟ್ಟಿ ಪೆಟ್ಟಿಗೆಯಲ್ಲಿಯೇ ಸುಮಾರು 30 ಜನರು ಸತ್ತು ಹೋದರು. ದೋಣಿ ಮಗುಚಿದ ಮೇಲೆ ಅದರ ತೈಲ ಹೊರಚೆಲ್ಲಿ ಬೆಂಕಿ ಹೊತ್ತಿಕೊಂಡಿತು. ಇದರಿಂದ ನನಗೂ ಸುಟ್ಟ ಗಾಯಗಳಾದವು. ನಮ್ಮನ್ನು ರಕ್ಷಿಸುವವರೆಗೆ ನಾನು ಸುಮಾರು 36 ಗಂಟೆ ದೋಣಿಯಲ್ಲಿದ್ದ ಮರದ ದಿಮ್ಮಿಯ ಸಹಾಯದಿಂದ ಸಮುದ್ರದಲ್ಲಿಯೇ ತೇಲುತ್ತಿದ್ದೆ

ರಫೀಕುಲ್ ಇಸ್ಲಾಂ, ದುರಂತದಲ್ಲಿ ಬದುಕುಳಿದವ

‘ಬಡತನ: ರೋಹಿಂಗ್ಯಾಗಳ ಯಾತನೆ’

- ‘ಬಾಂಗ್ಲಾದ ನಿರಾಶ್ರಿತರ ಶಿಬಿರದಲ್ಲಿ ಸುಮಾರು 10 ಲಕ್ಷ ರೋಹಿಂಗ್ಯಾ ಸಮುದಾಯದವರು ಇದ್ದಾರೆ. ಆಹಾರ, ಶಿಕ್ಷಣ, ಉದ್ಯೋಗ ಇಲ್ಲ. ಅದಕ್ಕಾಗಿಯೇ ಮಲೇಷ್ಯಾ, ಥಾಯ್ಲೆಂಡ್ ಮತ್ತು ಇಂಡೊನೇಷ್ಯಾಕ್ಕೆ ಅಪಾಯಕಾರಿ ಸಮುದ್ರ ಮಾರ್ಗದ ಮೂಲಕ ತೆರಳುತ್ತಿದ್ದಾರೆ. ಇವರ ಮಾನವ ಕಳ್ಳಸಾಗಣೆಯೂ ಹೆಚ್ಚುತ್ತಿದೆ’ ಎಂದು ವಿಶ್ವಸಂಸ್ಥೆಯ ನಿರಾಶ್ರಿತರ ಹೈಕಮಿಷನರ್ ಮಾಹಿತಿ ನೀಡಿದೆ
- ವಿಶ್ವಸಂಸ್ಥೆ ಆಹಾರ ಯೋಜನೆ ಅಡಿ ರೋಹಿಂಗ್ಯಾ ನಿರಾಶ್ರಿತರಿಗೆ ನೀಡುವ ತಿಂಗಳ ಭತ್ಯೆಯನ್ನು ಏಪ್ರಿಲ್ 1ರಿಂದ ಕಡಿತ ಮಾಡಲಾಗಿದೆ. ‘ಇವರ ಜೀವನಮಟ್ಟ ಸುಧಾರಿಸಲು ಅಂತರರಾಷ್ಟ್ರೀಯ ಸಮುದಾಯ ಆರ್ಥಿಕ ಸಹಕಾರ ನೀಡಬೇಕು’ ಎಂದು ವಿಶ್ವಸಂಸ್ಥೆ ಕೋರಿದೆ

238 ಇರಾನ್ ನಾವಿಕರು ಶ್ರೀಲಂಕಾದಿಂದ ಸ್ವದೇಶಕ್ಕೆ

ಕೊಲಂಬೊ (ಪಿಟಿಐ): ಅಮೆರಿಕದ ದಾಳಿ ಮತ್ತು ಎಂಜಿನ್ ವೈಫಲ್ಯಕ್ಕೀಡಾಗಿದ್ದ ಇರಾನ್‌ನ ಎರಡು ನೌಕೆಗಳಲ್ಲಿದ್ದ 230ಕ್ಕೂ ಅಧಿಕ ಸಿಬ್ಬಂದಿಗಳನ್ನು ಸುರಕ್ಷಿತವಾಗಿ ಅವರ ದೇಶಕ್ಕೆ ಕಳುಹಿಸಲಾಗಿದೆ ಎಂದು ಶ್ರೀಲಂಕಾ ಸೇನೆಯ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

238 ಜನರನ್ನು ಮಂಗಳವಾರ ರಾತ್ರಿ ಟರ್ಕಿಯ ವಿಮಾನದಲ್ಲಿ ಕಳುಹಿಸಲಾಗಿದೆ.

ಮಾರ್ಚ್ 4ರಂದು ಶ್ರೀಲಂಕಾದ ಅಂತರರಾಷ್ಟ್ರೀಯ ಸಾಗರ ಗಡಿಯ ಸಮೀಪ ಇರಾನ್‌ನ ನೌಕೆ ‘ಐರೀಸ್ ಡೇನಾ’ದ ಮೇಲೆ ಅಮೆರಿಕ ದಾಳಿ ನಡೆಸಿತ್ತು. ಈ ಘಟನೆಯಲ್ಲಿ 84 ಮಂದಿ ಮೃತಪಟ್ಟಿದ್ದರು. ಬದುಕುಳಿದಿದ್ದ 32 ಜನರನ್ನು ಶ್ರೀಲಂಕಾ ರಕ್ಷಿಸಿತ್ತು.

ಇದಾದ ಬೆನ್ನಲ್ಲೇ ಇರಾನ್‌ನ ಇನ್ನೊಂದು ನೌಕೆ ‘ಐರೀಸ್ ಬುಶೆಹ್ರ್’ನ ಎಂಜಿನ್ ವೈಫಲ್ಯಗೊಂಡ ಕಾರಣ ಅದರಲ್ಲಿದ್ದ 200ಕ್ಕೂ ಅಧಿಕ ಮಂದಿಯೂ ಶ್ರೀಲಂಕಾದಲ್ಲಿ ತಂಗಿದ್ದರು.

ಯಶ್

ಡಾರ್ಕ್ ಪಾತ್ರಗಳು ಇಷ್ಟ: ಯಶ್

ಯಶ್ ಹಾಗೂ 'ರಾಮಾಯಣ' ಸಿನಿಮಾದ ಬರಹಗಾರ, ನಿರ್ಮಾಪಕ ನಮಿತ್ ಮಲ್ಹೋತ್ರಾ ಅಮೆರಿಕದ ಲಾಸ್ ವೇಗಸ್‌ನಲ್ಲಿ ನಡೆಯುತ್ತಿರುವ 'ಸಿನಿಮಾಕಾನ್'ನಲ್ಲಿ ಭಾಗವಹಿಸಿದ್ದಾರೆ. ಈ ಸಂದರ್ಭದಲ್ಲಿ ಅಲ್ಲಿನ ಯುಟ್ಯೂಬ್ ಚಾನಲ್ ಒಂದಕ್ಕೆ ಸಂದರ್ಶನ ನೀಡಿದ್ದು, 'ರಾಮಾಯಣ' ಹಾಗೂ 'ಟಾಕ್ಸಿಕ್' ಸಿನಿಮಾಗಳ ಬಗ್ಗೆ ಯಶ್ ಮಾತನಾಡಿದ್ದಾರೆ. 'ಡಾರ್ಕ್ ಪಾತ್ರಗಳೆಂದರೆ ನನಗಿಷ್ಟ' ಎಂದಿರುವ ಯಶ್ 'ಟಾಕ್ಸಿಕ್' ಸಿನಿಮಾವನ್ನು ಒಂದು ಮಹತ್ವಾಕಾಂಕ್ಷೆಯ ಸಿನಿಮಾ ಎಂದು ಬಣ್ಣಿಸಿದ್ದಾರೆ.

'ಮೊದಲ ಬಾರಿಗೆ ನಾವು ಸಿನಿಮಾವೊಂದನ್ನು ಇಂಗ್ಲಿಷ್‌ನಲ್ಲೂ ಚಿತ್ರೀಕರಣ ಮಾಡಿದ್ದೇವೆ. ಹಲವು ಪದರಗಳಲ್ಲಿ 'ಟಾಕ್ಸಿಕ್' ಸಿನಿಮಾ ಕಥೆಯಿದೆ. ಇದು ಸಾಮಾನ್ಯವಾದ ಗ್ಯಾಂಗ್‌ಸ್ಟರ್ ಆ್ಯಕ್ಷನ್ ಸ್ಟೋರಿ ಅಲ್ಲ. ಪ್ರೇಕ್ಷಕರಿಗೆ ಹೋಲಿಕೆಯಾಗುವ ಮನುಷ್ಯ ಜೀವನದ ಹಲವು ಅಂಶಗಳು ಇದರಲ್ಲಿವೆ. ಕಥೆಯೊಳಗಿನ ಡಾರ್ಕ್ ಪಾತ್ರವನ್ನು ನಿರ್ವಹಿಸಿದ್ದು ಬಹಳ ಆಕರ್ಷಕವಾಗಿತ್ತು. ಸಿನಿಮಾವು ಪ್ರೇಕ್ಷಕರ ಕಣ್ಣಿಗೆ ಹಬ್ಬವಾಗಲಿದೆ. ನಾನು ಗ್ಯಾಂಗ್‌ಸ್ಟರ್ ಪಾತ್ರಗಳನ್ನು ಮಾಡಿದ್ದೇನೆ. ಡಾರ್ಕ್ ಪಾತ್ರಗಳನ್ನು ನಿರ್ವಹಿಸುವುದು ನನಗಿಷ್ಟ. ನಟನಾಗಿ ಇಂತಹ ಪಾತ್ರಗಳಲ್ಲಿ ಪ್ರಯೋಗಗಳನ್ನು ಮಾಡುವ ಅವಕಾಶ ಸಿಗುತ್ತದೆ. ಇವುಗಳಿಗೆ ಯಾವುದೇ ನಿರ್ದಿಷ್ಟ ಗಡಿರೇಖೆಗಳಿಲ್ಲ. 'ಟಾಕ್ಸಿಕ್'ನಲ್ಲಿ ನಾನು ನಿರ್ವಹಿಸಿರುವ ಪಾತ್ರಕ್ಕೆ ಹಲವು ಶೇಡ್‌ಗಳು, ಲುಕ್‌ಗಳಿವೆ. ಪ್ರೇಕ್ಷಕರಿಗೆ ಈ ಸಿನಿಮಾ ಒಂದು ಅನನ್ಯ ಅನುಭವ ನೀಡಲಿದೆ' ಎಂದಿದ್ದಾರೆ.

'ನಮಿತ್ ಮಲ್ಹೋತ್ರಾ ಹಾಗೂ ಅವರ ಕಂಪನಿ ಡಿಎನ್‌ಇಜಿ 'ಟಾಕ್ಸಿಕ್'ನ ಪ್ರಮುಖ ಭಾಗವಾಗಿದೆ. ಹಾಲಿವುಡ್ ಮತ್ತು ಭಾರತೀಯ ಸಿನಿಮಾಗಳಿಗೆ ಸೇತುವಾಗಿ 'ಟಾಕ್ಸಿಕ್' ಅಡಿಪಾಯ ಹಾಕಲಿದೆ. ಕಥೆ ಹಾಗೂ ತಂತ್ರಜ್ಞಾನದ ವಿಷಯದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳು ಹಾಗೂ ಭಾರತ ಒಂದುಗೂಡಿದರೆ ಸಿನಿಮಾ ಲೋಕದಲ್ಲಿ ಹೊಸ ಅಧ್ಯಾಯವನ್ನೇ ಬರೆಯಬಹುದು' ಎಂದಿದ್ದಾರೆ ಯಶ್.

'ರಾಮಾಯಣ' ಸಿನಿಮಾ ಬಗ್ಗೆ ಮಾತನಾಡಿರುವ ಯಶ್, 'ನಾವು ರಾಮಾಯಣದ ಕಥೆಗಳನ್ನು ಕೇಳಿಕೊಂಡು ಬೆಳೆದವರು. ಅದೊಂದು ಪರಿಚಿತ ಜಗತ್ತು. ಇದು ನಮ್ಮ ಸಂಸ್ಕೃತಿ ಹಾಗೂ ನಂಬಿಕೆಯ ಭಾಗ. ಹೀಗಾಗಿ ಇದು ಹೊಸ ಕಥೆಯಲ್ಲ. ಇದರೊಳಗಿನ ಎಲ್ಲ ಪಾತ್ರಗಳಿಗೂ ಅದರದ್ದೇ ಆದ ದೃಷ್ಟಿಕೋನವಿದೆ. ಅವುಗಳಲ್ಲಿ ಆ ಪಾತ್ರಗಳಿಗೆ ನಂಬಿಕೆ ಇತ್ತು. ಇಂದಿನ ಜಗತ್ತಿನಲ್ಲೂ ನಮ್ಮ ದೃಷ್ಟಿಕೋನದಲ್ಲಿ ನಾವು ಮಾಡಿದ್ದು ಸರಿ ಎನಿಸುತ್ತದೆ. ಇದು ಒಳ್ಳೆಯ ಹಾಗೂ ಕೆಟ್ಟ ಮನುಷ್ಯನ ಕಥೆಯಲ್ಲ. ನಿಮ್ಮ ಬಳಿ ಎಲ್ಲಾ ಕೌಶಲಗಳು ಇರಬಹುದು, ಇತರರಿಗಿಂತ ಶಕ್ತಿಯುತನಾಗಿರಬಹುದು. ಆದರೆ ನಿಮ್ಮ ನಡೆ, ನಿರ್ಧಾರ ಎಲ್ಲವನ್ನೂ ಪ್ರತಿಬಿಂಬಿಸುತ್ತವೆ. ರಾವಣ ತನ್ನ ಜನರಿಗಾಗಿ ಹೋರಾಡುವಾತ. ಆತನ ದೃಷ್ಟಿಯಲ್ಲಿ ಆತನ ಕೆಲಸಗಳು ಶ್ರೇಷ್ಠ. ಆದರೆ ಆತ್ಮವಿಶ್ವಾಸ ಮತ್ತು ದುರಹಂಕಾರದ ನಡುವೆ ತೆಳುವಾದ ಗೆರೆ ಇದೆಯಷ್ಟೇ. ಅದರ ಕಥೆ ಇದು. ಮೊದಲ ಭಾಗದಲ್ಲಿ ನಾನು ಹಾಗೂ ರಣಬೀರ್ ತೆರೆ ಮೇಲೆ ಜೊತೆಯಾಗಿ ಬರುವುದಿಲ್ಲ. ಸಿನಿಮಾ ಎರಡು ಭಾಗವಾಗಿ ಬರುತ್ತಿರುವ ಕಾರಣ ಮೊದಲ ಭಾಗದಲ್ಲಿ ರಾವಣನ ಸಾಮ್ರಾಜ್ಯವನ್ನಷ್ಟೇ ತೋರಿಸಲಾಗಿದೆ' ಎಂದಿದ್ದಾರೆ.

'ರಾಮಾಯಣ' ಸಿನಿಮಾ ಎರಡು ಭಾಗಗಳಲ್ಲಿ ತೆರೆಕಾಣುತ್ತಿದ್ದು, ರಣಬೀರ್ ಕಪೂರ್ 'ರಾಮ'ನಾಗಿ ಹಾಗೂ ಯಶ್ 'ರಾವಣ'ನಾಗಿ ನಟಿಸಿದ್ದಾರೆ. 2026ರ ದೀಪಾವಳಿಗೆ ಮೊದಲ ಭಾಗ, 2027ರ ದೀಪಾವಳಿಗೆ ಎರಡನೇ ಭಾಗ ತೆರೆಕಾಣಲಿದೆ. ❖

'ರಾವಣನ ಪಾತ್ರಕ್ಕೆ ಯಶ್‌ಗಿಂತ ಸೂಕ್ತರಿಲ್ಲ'

'ರಾಮಾಯಣ ಭಾರತದ ಸಂಸ್ಕೃತಿಯ ಅಡಿಪಾಯ. ಇದು ಕಾಲಾತೀತ ಕಥೆ. ಇದರಲ್ಲಿನ ಪಾತ್ರಗಳು ಸಾವಿರಾರು ಸಿನಿಮಾಗಳು, ಜನಪದ ಕಥೆಗಳಲ್ಲಿ ಜೀವಪಡೆದಿವೆ. 'ಅವತಾರ್', 'ಗ್ಲೇಡಿಯೇಟರ್' ಸಿನಿಮಾಗಳಂತೆ ಇದು ಮೂಡಿಬರಲಿದೆ. ರಾವಣನ ಪಾತ್ರಕ್ಕೆ ಯಶ್ ಅವರಿಗಿಂತ ಸೂಕ್ತ ನಟ ನನಗೆ ಕಾಣಿಸಲಿಲ್ಲ. ಇದನ್ನು ವಿಶ್ವವೇ ಮುಂದೆ ಗಮನಿಸಲಿದೆ. ರಾಮಾಯಣದ ಕಥೆ ಎಲ್ಲರಿಗೂ ತಿಳಿದಿದ್ದರೂ, ಎಲ್ಲರೂ ನೋಡಿದ್ದರೂ ನಮ್ಮ ಕಥೆ ಹೊಸ ಅನುಭವವನ್ನು ನೀಡಲಿದೆ. ಕೇವಲ ಉಪದೇಶವಾಗದೆ ಆಕರ್ಷಕವಾಗಿ ಕಥೆಯನ್ನು ಪ್ರಸ್ತುತಪಡಿಸಲಾಗಿದೆ' ಎನ್ನುತ್ತಾರೆ ನಮಿತ್ ಮಲ್ಹೋತ್ರಾ.

ಕೆವಿಎನ್ ಜತೆ ವಿಜಯ್ ಮತ್ತೊಂದು ಸಿನಿಮಾ?

ದಳಪತಿ ವಿಜಯ್

ದಳಪತಿ ವಿಜಯ್ ನಟನೆಯ ತಮಿಳು ಚಿತ್ರ 'ಜನ ನಾಯಗನ್' ಬಿಡುಗಡೆಗೂ ಮೊದಲೇ ಸೋರಿಕೆಯಾಗಿದೆ. ಕೊಯಂಬತ್ತೂರಿನ ಸ್ಥಳೀಯ ಕೇಬಲ್ ವಾಹಿನಿಯೊಂದು ಚಿತ್ರವನ್ನು ಬಿತ್ತರಿಸಿ ರಾದ್ಧಾಂತವನ್ನೇ ಸೃಷ್ಟಿಸಿದೆ. ಇದರಿಂದ ಬೇಸತ್ತಿರುವ ವಿಜಯ್, ನಿರ್ಮಾಣ ಸಂಸ್ಥೆಯಾದ ಕೆವಿಎನ್‌ಗೆ ಮತ್ತೊಂದು ಸಿನಿಮಾ ಮಾಡಿಕೊಡಲಿದ್ದಾರೆ ಎನ್ನುವ ಮಾತು ಹರಿದಾಡುತ್ತಿದೆ.

ವಿಜಯ್ ಅವರ ರಾಜಕೀಯದ ನಡೆಯಿಂದಾಗಿ 'ಜನ ನಾಯಗನ್' ಚಿತ್ರಕ್ಕೆ ಎಲ್ಲ ರೀತಿಯಿಂದಲೂ ಸಂಕಷ್ಟ ಎದುರಾಗುತ್ತಿದೆ ಎನ್ನಲಾಗಿದೆ. ಇದು ವಿಜಯ್ ಅವರ ಕೊನೆಯ ಸಿನಿಮಾ ಎಂಬ ಕಾರಣಕ್ಕೆ ದೊಡ್ಡಮಟ್ಟದಲ್ಲಿ ಸುದ್ದಿಯಾಗಿತ್ತು. ಕೆವಿಎನ್ ಪ್ರೊಡಕ್ಷನ್ ಬೃಹತ್ ಬಂಡವಾಳವನ್ನೂ ಸುರಿದಿತ್ತು. ಆದರೆ ಚಿತ್ರ ಬಿಡುಗಡೆ ಕಾಣದೆ ನಿರ್ಮಾಣ ಸಂಸ್ಥೆಗೆ ಹಿನ್ನಡೆಯಾಗಿದೆ.

ವಿಜಯ್, ವೆಟ್ರಿಮಾರನ್ ಜತೆ ಕೈಜೋಡಿಸಿ ತಮ್ಮ ಮುಂದಿನ ಸಿನಿಮಾಕ್ಕೆ ಸಜ್ಜಾಗಿದ್ದಾರೆ ಎಂಬ ವರದಿಯಿದೆ. ಇದು ವಿಜಯ್ ಅವರ 70ನೇ ಸಿನಿಮಾವಾಗಿದ್ದು, ಕೆವಿಎನ್‌ಗಾಗಿಯೇ ಈ ಸಿನಿಮಾ ಸೆಟ್ಟೇರುತ್ತಿದೆ ಎನ್ನಲಾಗಿದೆ.

'ಜನ ನಾಯಗನ್' ಚಿತ್ರ ಸೋರಿಕೆಗೆ ಕಾರಣಕರ್ತರಾದವರನ್ನು ಪತ್ತೆ ಹಚ್ಚುವ ಕಾರ್ಯ ಪ್ರಗತಿಯಲ್ಲಿದೆ. ಅದರ ಜತೆಗೆ ಮುಂದಿನ ಸಿನಿಮಾದ ತಯಾರಿಯೂ ನಡೆದಿದೆ ಎಂದು ತಮಿಳು ಮಾಧ್ಯಮಗಳು ವರದಿ ಮಾಡಿವೆ. ಆದರೆ ಈ ಬಗ್ಗೆ ನಿರ್ಮಾಣ ಸಂಸ್ಥೆಯಾಗಲಿ, ವಿಜಯ್ ಅವರಾಗಲಿ ಈತನಕ ಅಧಿಕೃತ ಹೇಳಿಕೆ ನೀಡಿಲ್ಲ. ❖

ರುದ್ರ ಕಾಲಕ್ಕೆ ದಿಗಂತ್ ನಾಯಕ

ದಿಗಂತ್ ನಾಯಕನಾಗಿ ನಟಿಸುತ್ತಿರುವ ಹೊಸಚಿತ್ರದ ಶೀರ್ಷಿಕೆ ಇತ್ತೀಚೆಗಷ್ಟೇ ಅನಾವರಣಗೊಂಡಿದೆ. ಗೋಪಿ ನಿರ್ದೇಶನದ ಚಿತ್ರಕ್ಕೆ 'ರುದ್ರ ಕಾಲ' ಎಂದು ಹೆಸರಿಡಲಾಗಿದೆ. ನಟಿ ಸಮಂತಾ ಶೀರ್ಷಿಕೆ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

'ರುದ್ರ ಕಾಲ' ಚಿತ್ರದ ಚಿತ್ರೀಕರಣ ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಏಕಕಾಲಕ್ಕೆ ನಡೆಯಲಿದೆ. ಒಂದೇ ಹಂತದ ಚಿತ್ರೀಕರಣ ನಡೆಸಿ ಆದಷ್ಟು ಬೇಗ ತೆರೆಗೆ ತರುವ ಯೋಚನೆ ಇದೆ. ಇದು ನನ್ನ ನಿರ್ದೇಶನದ ನಾಲ್ಕನೇ ಚಿತ್ರ. ಈ ತಿಂಗಳ ಅಂತ್ಯದೊಳಗೆ ಚಿತ್ರೀಕರಣ ಪ್ರಾರಂಭವಾಗಲಿದೆ' ಎಂದರು ನಿರ್ದೇಶಕ.

ರಮೇಶ್ ನಾಯ್ಕ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. 'ಚಿತ್ರದ ಕಥೆ ಬಹಳ ಇಷ್ಟವಾಯ್ತು. ಹೀಗಾಗಿ ಒಪ್ಪಿಕೊಂಡೆ. ನಟಿ ಸಮಂತಾ ಶೀರ್ಷಿಕೆ ಅನಾವರಣ ಮಾಡಿರುವುದು ಚಿತ್ರಕ್ಕೆ ಮತ್ತಷ್ಟು ಬಲ ನೀಡಿದೆ. ಎಲ್ಲರಿಗೂ ಇಷ್ಟವಾಗುವ ಚಿತ್ರ ಇದಾಗಲಿದೆ ಎಂಬ ಭರವಸೆಯಿದೆ' ಎಂದಿದ್ದಾರೆ ದಿಗಂತ್.

ರಮೇಶ್ ಅವರು ಕಥೆ ಬರೆದಿರುವ ಈ ಚಿತ್ರಕ್ಕೆ ಕ್ರಿಸ್ಟೋಫರ್ ಜೋಸೆಫ್ ಛಾಯಾಗ್ರಹಣವಿದೆ. ಉಳಿದ ತಂತ್ರಜ್ಞರ ಮಾಹಿತಿಯನ್ನು ಶೀಘ್ರದಲ್ಲಿಯೇ ನೀಡುವುದಾಗಿ ನಿರ್ದೇಶಕರು ತಿಳಿಸಿದ್ದಾರೆ. ❖

ಕಿಂಗ್ಸ್–ಇಂಡಿಯನ್ಸ್ ಹಣಾಹಣಿ ಇಂದು

ಎಂಐಗೆ 'ಮುಂಬೈಕರ್' ಶ್ರೇಯಸ್ ಸವಾಲು; ಬೂಮ್ರಾಗೆ ಒಲಿಯುವುದೇ ವಿಕೆಟ್?

ಪಂಜಾಬ್ ಕಿಂಗ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್

ಮುಂಬೈ ಇಂಡಿಯನ್ಸ್ ತಂಡದ ಹಾರ್ದಿಕ್ ಪಾಂಡ್ಯ, ಸೂರ್ಯಕುಮಾರ್ ಯಾದವ್

ಮುಂಬೈ (ಪಿಟಿಐ): ಸತತ ಮೂರು ಸೋಲುಗಳಿಂದಾಗಿ ಒತ್ತಡದಲ್ಲಿರುವ ಮುಂಬೈ ಇಂಡಿಯನ್ಸ್ ತಂಡವು ಅಜೇಯ ಓಟ ಮುಂದುವರಿಸುವ ಛಲದಲ್ಲಿರುವ ಪಂಜಾಬ್ ಕಿಂಗ್ಸ್ ಪಡೆಯನ್ನು ಗುರುವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಎದುರಿಸಲಿದೆ.

ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ತಂಡವು ತವರಿನಂಗಳದಲ್ಲಿ ಲಯಕ್ಕೆ ಮರಳುವ ಛಲದಲ್ಲಿದೆ. ಕಿಂಗ್ಸ್ ತಂಡವನ್ನು ಮುನ್ನಡೆಸುತ್ತಿರುವ ಶ್ರೇಯಸ್ ಅಯ್ಯರ್ ಅವರಿಗೂ ವಾಂಖೆಡೆ ಕ್ರೀಡಾಂಗಣ ತವರಿನಂಗಳ ಎಂಬುದು ವಿಶೇಷ.

ಮುಂಬೈ ತಂಡವು ನಾಲ್ಕು ದಿನಗಳ ಹಿಂದೆ ಇಲ್ಲಿಯೇ ನಡೆದಿದ್ದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಸೋತಿತ್ತು.

ಈ ಪಂದ್ಯವು ಮುಂಬೈ ತಂಡಕ್ಕೆ ಮಹತ್ವದ್ದಾಗಿದೆ. ಆಡಿರುವ ನಾಲ್ಕು ಪಂದ್ಯಗಳಲ್ಲಿ ಒಂದರಲ್ಲಿ ಮಾತ್ರ ಜಯಿಸಿದೆ. 13 ವರ್ಷಗಳ ನಂತರ ಟೂರ್ನಿಯಲ್ಲಿ ತಾನಾಡಿದ ಮೊದಲ ಪಂದ್ಯ ಗೆದ್ದ ಸಂಭ್ರಮ ಆಚರಿಸಿತ್ತು. ಆದರೆ ನಂತರದ ಹಣಾಹಣಿಗಳಲ್ಲಿ ಗೆಲುವು ಒಲಿದಿಲ್ಲ.

ರಿಯಾನ್ ರಿಕೆಲ್ಟನ್, ಶೆರ್ಫೇನ್ ರುದರ್‌ಫೋರ್ಡ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ ಹಾಗೂ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರಂತಹ ಉತ್ತಮ ಬ್ಯಾಟರ್‌ಗಳು ತಂಡದಲ್ಲಿದ್ದಾರೆ. ಆದರೆ ಅವರಿಂದ ಸ್ಥಿರವಾದ ಪ್ರದರ್ಶನ ಮೂಡಿಬಂದಿಲ್ಲ. ಸೋಲುಗಳಿಗೆ ಅದೂ ಒಂದು ಕಾರಣವಾಗಿದೆ.

ಜಸ್‌ಪ್ರೀತ್ ಬೂಮ್ರಾ, ಟ್ರೆಂಟ್ ಬೌಲ್ಟ್, ದೀಪಕ್ ಚಾಹರ್ ಅವರಂತಹ ಅನುಭವಿ ಬೌಲರ್‌ಗಳು ತಂಡದಲ್ಲಿದ್ದಾರೆ. ಬೂಮ್ರಾ ಅವರು ನಾಲ್ಕು ಪಂದ್ಯಗಳಲ್ಲಿ ಒಂದೂ ವಿಕೆಟ್ ಗಳಿಸಿಲ್ಲ. ಆದರೆ ರನ್‌ಗಳನ್ನು ನಿಯಂತ್ರಿಸಿದ್ದಾರೆ. ಉಳಿದ ಬೌಲರ್‌ಗಳು ರನ್‌ಗಳನ್ನು ಧಾರಾಳವಾಗಿ ನೀಡಿದ್ದಾರೆ. ಈ ಕ್ಲಿಷ್ಟಕರ ಹಾದಿಯಿಂದ ತಂಡವನ್ನು ಗೆಲುವಿನತ್ತ ಮುನ್ನಡೆಸುವುದು ಹಾರ್ದಿಕ್ ನಾಯಕತ್ವಕ್ಕೆ ದೊಡ್ಡ ಸವಾಲಾಗಿದೆ.

ಶ್ರೇಯಸ್ ಬಳಗವು ಆಡಿರುವ ನಾಲ್ಕು ಪಂದ್ಯಗಳಲ್ಲಿ ಮೂರು ಗೆದ್ದಿದೆ. ಒಂದು ಪಂದ್ಯ ಮಳೆಯಿಂದಾಗಿ ರದ್ದಾಗಿತ್ತು. ಕಳೆದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರು ಶ್ರೇಯಸ್ ಅವರೇ ಗೆಲುವಿನ ರೂವಾರಿಯಾಗಿದ್ದರು. ಅವರಲ್ಲದೇ ಕೂಪರ್ ಕೊನೊಲಿ, ಪ್ರಭಸಿಮ್ರನ್ ಸಿಂಗ್, ಪ್ರಿಯಾಂಶ್ ಆರ್ಯ, ಶಶಾಂಕ್ ಸಿಂಗ್ ಉತ್ತಮ ಲಯದಲ್ಲಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಅರ್ಷದೀಪ್ ಸಿಂಗ್ ಅವರು ಹೆಚ್ಚು ರನ್ ಕೊಡುತ್ತಿರುವುದು ತಂಡದ ಚಿಂತೆಗೆ ಕಾರಣವಾಗಿದೆ. ಝೇವಿಯರ್ ಬಾರ್ಟ್‌ಲೆಟ್, ಕನ್ನಡಿಗ ವೈಶಾಖ ವಿಜಯಕುಮಾರ್, ಸ್ಪಿನ್ನರ್ ಯಜುವೇಂದ್ರ ಚಾಹಲ್ ಮತ್ತು ಮಾರ್ಕೊ ಯಾನ್ಸೆನ್ ಅವರೇ ಬೌಲಿಂಗ್ ವಿಭಾಗದ ಹೊಣೆಯನ್ನು ನಿಭಾಯಿಸಬೇಕಿದೆ.

ಇಂದಿನ ಪಂದ್ಯ

ಮುಂಬೈ ಇಂಡಿಯನ್ಸ್ V/s ಪಂಜಾಬ್ ಕಿಂಗ್ಸ್
ತಾಣ: ವಾಂಖೆಡೆ
ಆರಂಭ: ರಾತ್ರಿ 7.30
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಬಲಾಬಲ	ಒಟ್ಟು ಪಂದ್ಯ 34
ಪಂಜಾಬ್ ಜಯ	17
ಮುಂಬೈ ಗೆಲುವು	17

ರೋಹಿತ್ ಆಡುವುದು ಅನಿಶ್ಚಿತ

ಮುಂಬೈ (ಪಿಟಿಐ): ಪಂಜಾಬ್ ಕಿಂಗ್ಸ್ ವಿರುದ್ಧ ಗುರುವಾರ ನಡೆಯಲಿರುವ ಪಂದ್ಯಕ್ಕೆ ಮುಂಬೈ ಇಂಡಿಯನ್ಸ್ ತಂಡದ ಪ್ರಮುಖ ಆಟಗಾರ ರೋಹಿತ್ ಶರ್ಮಾ ಅವರ ಲಭ್ಯತೆ ಅನಿಶ್ಚಿತವಾಗಿದೆ. ಅವರು ಬುಧವಾರ ತಂಡದ ಲಘು ವ್ಯಾಯಾಮದ ವೇಳೆ ಕಾಣಿಸಿಕೊಂಡರು.

ಆರ್‌ಸಿಬಿ ವಿರುದ್ಧ ಭಾನುವಾರ ನಡೆದ ಹೈ ಸ್ಕೋರಿಂಗ್ ಪಂದ್ಯದಲ್ಲಿ ಬ್ಯಾಟ್ ಮಾಡುವ ವೇಳೆ (ಆರನೇ ಓವರಿನಲ್ಲಿ) ಮಂಡಿರಜ್ಜು (ಹ್ಯಾಮ್‌ಸ್ಟ್ರಿಂಗ್) ನೋವಿನಿಂದ ರೋಹಿತ್ ಮೈದಾನ ತೊರೆದಿದ್ದರು. ಆಗ ಅವರು 13 ಎಸೆತಗಳಲ್ಲಿ 19 ರನ್ ಗಳಿಸಿದ್ದರು.

'ವೈದ್ಯಕೀಯ ತಂಡದವರು ಮತ್ತು ಕೋಚಿಂಗ್ ಸಿಬ್ಬಂದಿ ಅವರ ಫಿಟ್ನೆಸ್ ಮೇಲೆ ನಿಗಾ ವಹಿಸಿದ್ದಾರೆ' ಎಂದು ತಂಡದ ಸಿಬ್ಬಂದಿಯೊಬ್ಬರು ನೆಟ್ಸ್‌ಗೆ ಮುನ್ನ ತಿಳಿಸಿದ್ದರು. ಆದರೆ ನೆಟ್ಸ್‌ನಲ್ಲಿ ಕಾಣಿಸಿಕೊಂಡ ಕಾರಣ ಆಡುವ ಸಾಧ್ಯತೆ ತಳ್ಳಿಹಾಕುವಂತಿಲ್ಲ. 38 ವರ್ಷ ವಯಸ್ಸಿನ ಆಟಗಾರ ಲಘು ವ್ಯಾಯಾಮದ ಜೊತೆಗೆ ಆರಾಮವಾಗಿ ಓಡುತ್ತಿದ್ದುದು ಕಾಣಿಸಿತು. ಬಲಗಾಲಿಗೆ ಪಟ್ಟಿ ಕಟ್ಟಿಕೊಂಡಿದ್ದರು.

ಮಾಂಡವೀಯ–'ವಾಡಾ' ಮುಖ್ಯಸ್ಥ ಸಮಾಲೋಚನೆ

ನವದೆಹಲಿ (ಪಿಟಿಐ): ಉದ್ದೀಪನ ಮದ್ದುಸೇವನೆ ನಿಗ್ರಹ ಕ್ರಮಗಳನ್ನು ಜಾಗತಿಕ ಮಟ್ಟಕ್ಕೆ ಅನುಗುಣವಾಗಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ವಿಶ್ವ ಉದ್ದೀಪನ ಮದ್ದುಸೇವನೆ ನಿಗ್ರಹ ಘಟಕದ (ವಾಡಾ) ಅಧ್ಯಕ್ಷ ವಿಟೋಲ್ಡ್ ಬಾಂಕಾ ಅವರು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಜೊತೆ ಬುಧವಾರ ಸಮಾಲೋಚನೆ ನಡೆಸಿದರು.

ಬಾಂಕಾ ಅವರು ಮೂರು ದಿನಗಳಿಂದ ಭಾರತದಲ್ಲಿ ಬಿಡುವಿಲ್ಲದ ಪ್ರವಾಸದಲ್ಲಿದ್ದಾರೆ. ಸೋಮವಾರ ಅವರು, ಭಾರತದಲ್ಲಿ ಕ್ರೀಡೆಯ ವಿಶ್ವಾಸಾರ್ಹತೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕೈಗೊಳ್ಳಬಹುದಾದ ತುರ್ತು ಮತ್ತು ಗಂಭೀರ ಕ್ರಮಗಳ ಬಗ್ಗೆ ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ನಿಗ್ರಹ ಘಟಕದ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿದ್ದರು.

'ವಾಡಾ' ಅಧ್ಯಕ್ಷ ವಿಟೋಲ್ಡ್ ಬಾಂಕಾ ಜೊತೆ ನವದೆಹಲಿಯಲ್ಲಿ ಬುಧವಾರ ಮಾತುಕತೆ ನಡೆಯಿತು. ಕ್ರೀಡೆಯನ್ನು ಸ್ವಚ್ಛಗೊಳಿಸುವ ಪ್ರಬಲ ಸಂಸ್ಕೃತಿ ರೂಪಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತವು ಬದ್ಧವಾಗಿದೆ' ಎಂದು ಮಾಂಡವೀಯ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಉದ್ದೀಪನ ಮದ್ದು ಸೇವನೆ ತಡೆಯುವ ನಿಟ್ಟಿನಲ್ಲಿ ಆಗುತ್ತಿರುವ ಪ್ರಗತಿಯ ಮೇಲೆ ಮಾತುಕತೆ ಕೇಂದ್ರೀಕೃತವಾಗಿತ್ತು ಎಂದು ಬಾಂಕಾ ಹೇಳಿದ್ದಾರೆ.

ಇದಕ್ಕೆ ಮೊದಲು ಅವರು ಸಿಬಿಐ ವಿಶೇಷ ನಿರ್ದೇಶಕ ಮನೋಜ್ ಶಶಿಧರ್ ಅವರನ್ನು ಭೇಟಿಯಾಗಿದ್ದರು. ನಿಷೇಧಿತ ಉದ್ದೀಪನ ಮದ್ದುಗಳ ಮಾರಾಟದಲ್ಲಿ ತೊಡಗಿರುವ ಕ್ರಿಮಿನಲ್ ಜಾಲ ಮಟ್ಟಹಾಕುವ ನಿಟ್ಟಿನಲ್ಲಿ ಸಹಕರಿಸುವ ಬಗ್ಗೆ ಚರ್ಚೆಯಾಯಿತು.

ವೈಶಾಲಿ ಮುಡಿಗೆ ಕಿರೀಟ

ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ ಮಹಿಳಾ ವಿಭಾಗದಲ್ಲಿ ಅಗ್ರಸ್ಥಾನ

ತಾಯಿ ನಾಗಲಕ್ಷ್ಮಿ ಜೊತೆ ವೈಶಾಲಿ ಸಂಭ್ರಮ ಫಿಡೆ ಚಿತ್ರ

ಪಾಫೋಸ್ (ಸೈಪ್ರಸ್), (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ ಅವರು ರಷ್ಯಾದ ಕ್ಯಾತರಿನಾ ಲಾಗ್ನೊ ಅವರನ್ನು ಬುಧವಾರ ಅಂತಿಮ ಸುತ್ತಿನಲ್ಲಿ ಸೋಲಿಸಿ ಕ್ಯಾಂಡಿಡೇಟ್ಸ್ ಟೂರ್ನಿಯ ಮಹಿಳಾ ವಿಭಾಗದ ಚಾಂಪಿಯನ್ ಆದರು. ಅವರು ಈ ಸಾಧನೆಗೆ ಪಾತ್ರರಾದ ಭಾರತದ ಮೊದಲ ಆಟಗಾರ್ತಿ.

ಟೂರ್ನಿ ಗೆಲ್ಲುವ ಮೂಲಕ ಚೆನ್ನೈನ 24 ವರ್ಷ ವಯಸ್ಸಿನ ಆಟಗಾರ್ತಿ, ವಿಶ್ವ ಚಾಂಪಿಯನ್ ಜು ವೆನ್‌ಜುನ್ (ಚೀನಾ) ಅವರಿಗೆ 'ಚಾಲೆಂಜರ್' ಆಗುವ ಅರ್ಹತೆ ಪಡೆದರು. ಈ ವರ್ಷದ ಕೊನೆಗೆ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್ ಹಣಾಹಣಿಗೆ ತಾಣ ಮತ್ತು ದಿನಾಂಕ ಇನ್ನಷ್ಟೇ ನಿಗದಿ ಆಗಬೇಕಾಗಿದೆ.

ಈ ಟೂರ್ನಿಯ ಓಪನ್ ವಿಭಾಗದಲ್ಲಿ ಪ್ರಶಸ್ತಿಗೆ ನೆಚ್ಚಿನ ಆಟಗಾರರಲ್ಲಿ ಒಬ್ಬರಾಗಿದ್ದ ಆರ್.ಪ್ರಜ್ಞಾನಂದ ನಿರಾಸೆ ಮೂಡಿಸಿದ್ದರು. ಆದರೆ ಅಕ್ಕ ವೈಶಾಲಿ ಆ ನಿರಾಸೆ ಮರೆಸುವಂತೆ ಆಡಿ ಮಿಂಚಿದರು. ಕೊನೆಯ ಸುತ್ತಿನಲ್ಲಿ ಲಾಗ್ನೊ (6.5) ಅವರನ್ನು 48 ನಡೆಗಳಲ್ಲಿ ಅಧಿಕಾರಯುತವಾಗಿ ಮಣಿಸಿದರು. ಆಗ ಅವರ ಬಳಿ 'ಕ್ವೀನ್' ಜೊತೆ ಎರಡು 'ರೂಕ್'ಗಳು ಉಳಿದಿದ್ದರೆ, ಲಾಗ್ನೊ ಬಳಿ 'ಕ್ವೀನ್' ಮತ್ತು 'ಬಿಷಪ್' ಉಳಿದಿದ್ದವು.

ಅಂತಿಮ ಸುತ್ತಿನ ಗೆಲುವಿನ ನಂತರ 8.5 ಅಂಕ ಗಳಿಸಿದ ವೈಶಾಲಿ ಅರ್ಧ ಪಾಯಿಂಟ್ ಅಂತರದಿಂದ ಒಂಟಿಯಾಗಿ ಅಗ್ರಸ್ಥಾನ ಪಡೆದರು. ಕಜಾಕಸ್ತಾನದ ಬಿಬಿಸಾರ ಅಸೌಬಯೇವಾ (8) ಎರಡನೇ ಸ್ಥಾನ ಪಡೆದರು. ಅವರು ಅಂತಿಮ ಸುತ್ತಿನಲ್ಲಿ ಭಾರತದ ದಿವ್ಯಾ ದೇಶಮುಖ್ (5.5) ವಿರುದ್ಧ ಗೆಲುವಿಗೆ ಯತ್ನಿಸಿ ವಿಫಲರಾದರು. ಪಂದ್ಯ ಬಹುತೇಕ ಸಮಬಲದಲ್ಲಿಯೇ ಸಾಗಿತ್ತು.

ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ ಮತ್ತು ಚೀನಾದ ಝು ಜಿನೆರ್ (ತಲಾ 7.5) ಅವರು ಮೂರನೇ ಸ್ಥಾನ ಹಂಚಿಕೊಂಡರು. ವೈಶಾಲಿ ಸಾಧನೆಯಿಂದ ವಿಶ್ವ ಚೆಸ್‌ನಲ್ಲಿ ಭಾರತದ ವರ್ಚಸ್ಸು ಇನ್ನಷ್ಟು ಹೆಚ್ಚಿದೆ.

ಓಪನ್ ವಿಭಾಗದಲ್ಲಿ ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ (10 ಪಾಯಿಂಟ್ಸ್) ಒಂದು ಸುತ್ತು ಮೊದಲೇ ಚಾಂಪಿಯನ್ ಆಗಿದ್ದು, ಅವರು ಕೊನೆಯ ಸುತ್ತಿನಲ್ಲಿ ಚೀನಾದ ವೀ ಯಿ (7) ಜೊತೆ ಡ್ರಾ ಮಾಡಿಕೊಂಡರು.

ಪ್ರಜ್ಞಾನಂದ (6) ಕೊನೆಯ ಸುತ್ತಿನಲ್ಲಿ ಅಮೆರಿಕದ ಹಿಕಾರು ನಕಾಮುರ (6.5) ಜೊತೆ ಡ್ರಾ ಮಾಡಿಕೊಂಡರು. ಜರ್ಮನಿಯ ಮಥಾಯಸ್ ಬ್ಲೂಬಾಮ್ (7) ಅವರನ್ನು ಸೋಲಿಸಿದ ನೆದರ್ಲೆಂಡ್ಸ್‌ನ ಅನಿಶ್ ಗಿರಿ (8.5) ಎರಡನೇ ಸ್ಥಾನ ಪಡೆದರು.

ಚೀನಾದಲ್ಲಿ ನಡೆದ ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದು ಬೆಂಗಳೂರಿಗೆ ಬುಧವಾರ ಬಂದ ಉದಯೋನ್ಮುಖ ಆಟಗಾರ ಆಯುಷ್ ಶೆಟ್ಟಿ ಅವರನ್ನು ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಅಧ್ಯಕ್ಷ ಕುಮಾರ ಬಂಗಾರಪ್ಪ, ಕಾರ್ಯದರ್ಶಿ ಮುರಳೀಧರ ವಿ. ಮತ್ತು ಪದಾಧಿಕಾರಿಗಳು ಆತ್ಮೀಯವಾಗಿ ಬರಮಾಡಿಕೊಂಡರು. ಆಯುಷ್ ಶೆಟ್ಟಿ ಅವರಿಗೆ ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯಿಂದ ₹1 ಲಕ್ಷ ಬಹುಮಾನ ನೀಡಿ ಗೌರವಿಸಲಾಯಿತು

ಬಿಎಫ್‌ಸಿಗೆ ಈಸ್ಟ್ ಬೆಂಗಾಲ್ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಎಫ್‌ಸಿ ತಂಡವು ಕೋಲ್ಕತ್ತದ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ಗುರುವಾರ ನಡೆಯುವ ಐಎಸ್‌ಎಲ್ ಪಂದ್ಯದಲ್ಲಿ ಈಸ್ಟ್ ಬೆಂಗಾಲ್ ಎಫ್‌ಸಿ ತಂಡವನ್ನು ಎದುರಿಸಲಿದೆ. ಉಭಯ ತಂಡಗಳು ತಲಾ 14 ಪಾಯಿಂಟ್ಸ್ ಹೊಂದಿವೆ. ಗೋಲು ಗಳಿಕೆಯ ಆಧಾರದಲ್ಲಿ ಈಸ್ಟ್ ಬೆಂಗಾಲ್ ತಂಡವು ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿ ಹಾಗೂ ಬಿಎಫ್‌ಸಿ ನಾಲ್ಕನೇ ಸ್ಥಾನದಲ್ಲಿವೆ.

ಈ ಹಿಂದಿನ ಪಂದ್ಯದಲ್ಲಿ ಬೆಂಗಳೂರು ತಂಡವು 1–2ರಿಂದ ಕೇರಳ ಬ್ಲಾಸ್ಟರ್ಸ್ ಎದುರು ಸೋಲನುಭವಿಸಿತ್ತು. ಅದರೊಂದಿಗೆ ಮೂರು ಪಂದ್ಯಗಳ ಅಜೇಯ ಓಟಕ್ಕೆ ಬ್ರೇಕ್ ಬಿದ್ದಿತ್ತು. ಈಗ ಮತ್ತೆ ಗೆಲುವಿನ ಹಾದಿಗೆ ಮರಳುವ ದಿಸೆಯಲ್ಲಿ ಸುನಿಲ್ ಚೆಟ್ರಿ ಪಡೆಗೆ ಈ ಪಂದ್ಯ ಮಹತ್ವದ್ದಾಗಿದೆ.

ಕಳೆದ ಎರಡು ಪಂದ್ಯಗಳಲ್ಲಿ ಗೆದ್ದಿರುವ ಈಸ್ಟ್ ಬೆಂಗಾಲ್ ತಂಡವು 'ಹ್ಯಾಟ್ರಿಕ್' ಗೆಲುವಿನ ಮೇಲೆ ಚಿತ್ತ ನೆಟ್ಟಿದೆ.

ಕೇರಳ ಬ್ಲಾಸ್ಟರ್ಸ್ ಎದುರಿನ ಪಂದ್ಯದಲ್ಲಿ ರೆಡ್ ಕಾರ್ಡ್ ಪಡೆದಿದ್ದ ಬಿಎಫ್‌ಸಿ ತಂಡದ ಬ್ರಯಾನ್ ಸ್ಯಾಂಚೆಜ್ ಅವರು ಈಸ್ಟ್ ಬೆಂಗಾಲ್ ವಿರುದ್ಧದ ಪಂದ್ಯಕ್ಕೆ ಲಭ್ಯವಿರಲಿದ್ದಾರೆ. ಸ್ಯಾಂಚೆಜ್ ಅವರಿಗೆ ರೆಡ್ ಕಾರ್ಡ್ ನೀಡಿದ್ದನ್ನು ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ಲೀಗ್ ಅಂಗೀಕರಿಸಿದ್ದು, ಅವರ ಅಮಾನತು ಶಿಕ್ಷೆಯನ್ನು ರದ್ದುಗೊಳಿಸಲಾಗಿದೆ.

ಪಂದ್ಯ ಆರಂಭ: ರಾತ್ರಿ 7.30

ಬ್ಯಾಡ್ಮಿಂಟನ್‌ಗೆ ಆ್ಯಕ್ಸೆಲ್ಸನ್ ವಿದಾಯ

ಎರಡು ಬಾರಿ ಒಲಿಂಪಿಕ್ ಚಿನ್ನ ಗೆದ್ದಿದ್ದ ಡೆನ್ಮಾರ್ಕ್‌ನ ದಿಗ್ಗಜ

ವಿಕ್ಟರ್ ಆ್ಯಕ್ಸೆಲ್ಸನ್

ಕೋಪೆನ್‌ಹೇಗನ್ (ಎಎಫ್‌ಪಿ): ಎರಡು ಬಾರಿಯ ಒಲಿಂಪಿಕ್ ಸ್ವರ್ಣ ವಿಜೇತ, ಡೆನ್ಮಾರ್ಕ್‌ನ ಬ್ಯಾಡ್ಮಿಂಟನ್ ದಿಗ್ಗಜ ವಿಕ್ಟರ್ ಆಕ್ಸೆಲ್ಸನ್ ಅವರು ಕ್ರೀಡಾಬದುಕಿಗೆ ಬುಧವಾರ ನಿವೃತ್ತಿ ಪ್ರಕಟಿಸಿದ್ದಾರೆ. ಬೆನ್ನು ನೋವಿನಿಂದಾಗಿ ಇನ್ನು ಮುಂದೆ ಉನ್ನತ ಮಟ್ಟದ ಸ್ಪರ್ಧೆಯಲ್ಲಿ ತೊಡಗಿಕೊಳ್ಳಲು ತಮ್ಮಿಂದ ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದಾರೆ.

ಆಕ್ಸೆಲ್ಸನ್ ಅವರು 2021ರ ಟೋಕಿಯೊ ಮತ್ತು 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸಿಂಗಲ್ಸ್ ಚಾಂಪಿಯನ್ ಆಗಿದ್ದರು. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಅವರು ಕಂಚಿನ ಪದಕ ಗೆದ್ದಿದ್ದರು. ವರ್ಷದ ಹಿಂದೆ ಅವರು ಬೆನ್ನು ನೋವಿಗೆ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದರು. ಆದರೆ ದೈಹಿಕ ಸಮಸ್ಯೆಗಳಿಂದ ಹೊರಬರಲು ಆಗಿರಲಿಲ್ಲ.

'ಈ ಸ್ಥಿತಿಯನ್ನು ಒಪ್ಪಿಕೊಳ್ಳುವುದು ಕಡುಕಷ್ಟ. ಆದರೆ ಆಟದಲ್ಲಿ ಇನ್ನು ಮುಂದುವರಿಯಲು ನನ್ನ ದೇಹ ಅವಕಾಶ ಕೊಡುತ್ತಿಲ್ಲ' ಎಂದು 32 ವರ್ಷ ವಯಸ್ಸಿನ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಒಲಿಂಪಿಕ್ ಪದಕಗಳ ಜೊತೆಗೆ ಅವರು ಎರಡು ಬಾರಿ (2017, 2022) ವಿಶ್ವ ಚಾಂಪಿಯನ್ ಆಗಿದ್ದಾರೆ. ಅವರು ಸತತ 100 ವಾರ ವಿಶ್ವದ ಅಗ್ರಮಾನ್ಯ ಸಿಂಗಲ್ಸ್ ಆಟಗಾರನಾಗಿದ್ದರು. ಮಲೇಷ್ಯಾದ ಮಹಾನ್ ಆಟಗಾರ ಲೀ ಚೊಂಗ್–ವೀ ಮಾತ್ರ ಅವರಿಗಿಂತ ಹೆಚ್ಚು ಸಮಯ ಅಗ್ರಪಟ್ಟದಲ್ಲಿದ್ದರು.

ಆರು ಅಡಿ ನಾಲ್ಕು ಇಂಚು ಎತ್ತರದ ಆ್ಯಕ್ಸೆಲ್ಸನ್, ನೀಳಕಾಯದ ಲಾಭಪಡೆದು ದೀರ್ಘ 'ರೀಚ್' ಹೊಂದಿದ್ದರು.

'ನಾನೇನು ಕನಸು ಕಂಡಿದ್ದೆನೋ, ಅದಕ್ಕಿಂತ ಹೆಚ್ಚಿನದನ್ನು ಸಾಧಿಸಿದ ತೃಪ್ತಿಯಿದೆ' ಎಂದು ಹಿಂದೊಮ್ಮೆ ಅವರು ಹೇಳಿದ್ದರು.

ಮಂದಾರಿನ್ ಭಾಷೆಯನ್ನು ಸರಾಗವಾಗಿ ಮಾತನಾಡುತ್ತಿದ್ದ ಅವರು ಚೀನಾದಲ್ಲೂ ಜನಪ್ರಿಯ. ಮಂದಾರಿನ್ ಚೀನಾದ ಪ್ರಮುಖ ಭಾಷೆಯಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ಅವರ ಬಗ್ಗೆ ಮೆಚ್ಚುಗೆಯ ಮಹಾಪೂರ ಹರಿದುಬಂದಿದೆ. 'ನೈಜ ದಂತಕತೆ ಬ್ಯಾಡ್ಮಿಂಟನ್‌ಗೆ ವಿದಾಯ ಹೇಳಿದ್ದಾರೆ' ಎಂದು ನೆಟ್ಟಿಗರೊಬ್ಬರು ಬರೆದಿದ್ದಾರೆ.

'ಅವರು ಅಂಕಣದಲ್ಲಷ್ಟೇ ರಾಜನಾಗಿ ಮೆರೆಯಲಿಲ್ಲ. ಅವರು ತಮ್ಮ ವಿನೀತ ಮತ್ತು ಸ್ನೇಹದ ಮನೋಭಾವದಿಂದ ಅಸಂಖ್ಯಾತ ಹೃದಯಗಳನ್ನು ಗೆದ್ದಿದ್ದಾರೆ' ಎಂದು ಇನ್ನೊಬ್ಬರು ಪ್ರತಿಕ್ರಿಯಿಸಿದ್ದಾರೆ.

ಒಂದೂ ಗೇಮ್ ಬಿಟ್ಟುಕೊಡದೇ ಅವರು ಟೋಕಿಯೊದಲ್ಲಿ (2021) ಚಿನ್ನ ಗೆದ್ದಿದ್ದರು. ಚೀನಾದ ಚೆನ್ ಲಾಂಗ್ ಅವರನ್ನು ಫೈನಲ್‌ನಲ್ಲಿ ಸೋಲಿಸಿ 1996ರ ನಂತರ ಒಲಿಂಪಿಕ್ಸ್ ಬ್ಯಾಡ್ಮಿಂಟನ್ ಚಿನ್ನ ಗೆದ್ದ ಏಷ್ಯಾ ಖಂಡದ ಹೊರಗಿನ ಮೊದಲ ಆಟಗಾರ ಎನಿಸಿದ್ದರು.

ನಾಲ್ಕು ವರ್ಷಗಳ ನಂತರ ಪ್ಯಾರಿಸ್‌ನಲ್ಲಿ ಅವರು ತಮ್ಮ ಹೀರೊ ಲಿನ್ ಡಾನ್ ಅವರನ್ನು ಸೋಲಿಸಿ ಸತತ ಒಲಿಂಪಿಕ್ಸ್‌ಗಳಲ್ಲಿ ಚಿನ್ನ ಜಯಿಸಿದ್ದರು.

ತವರಿನಲ್ಲಿ ಆರ್‌ಸಿಬಿ ಜಯದ 'ಹ್ಯಾಟ್ರಿಕ್'

ರಸಿಕ್ ಡಾರ್‌ಗೆ 4 ವಿಕೆಟ್ • ವಿರಾಟ್, ರಜತ್ ಮಿಂಚು • ಲಖನೌ ತಂಡಕ್ಕೆ ಸೋಲು

• ಗಿರೀಶ ದೊಡ್ಡಮನಿ

ಬೆಂಗಳೂರು: ಬೇಸಿಗೆಯ ಕಾವಿಗೆ ಬಸವಳಿದಿದ್ದ ಬೆಂಗಳೂರಿನ ಅಭಿಮಾನಿಗಳ ಮನಗಳಿಗೆ ಜಮ್ಮು–ಕಾಶ್ಮೀರ ಕಣಿವೆಯ ರಸಿಕ್ ಸಲಾಮ್ ಡಾರ್ ಸಂತಸದ ಧಾರೆಯೆರೆದರು.

ಅವರ ಅಮೋಘ ಬೌಲಿಂಗ್ ಬಲದಿಂದ ರಾಯಲ್ ಚಾಲೆಂಜರ್ ಬೆಂಗಳೂರು ತಂಡವು ತವರಿನಂಗಳದಲ್ಲಿ ಗೆಲುವಿನ 'ಹ್ಯಾಟ್ರಿಕ್' ಸಾಧಿಸಿತು. ಲಖನೌ ಸೂಪರ್ ಜೈಂಟ್ಸ್ 5 ವಿಕೆಟ್‌ಗಳಿಂದ ಸೋತಿತು. ರಜತ್ ಪಾಟೀದಾರ್ ಬಳಗವು ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಜಿಗಿಯಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ಸೇರಿದ್ದ 29 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರ ಸಮ್ಮುಖದಲ್ಲಿ ಆರ್‌ಸಿಬಿ, ಲಖನೌ ವಿರುದ್ಧ ಏಕಪಕ್ಷೀಯ ಜಯ ಸಾಧಿಸಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಆತಿಥೇಯ ಬಳಗವು ಎಲ್ಲ ವಿಭಾಗಗಳಲ್ಲಿಯೂ ಪಾರಮ್ಯ ಮೆರೆಯಿತು. ಲಖನೌ ತಂಡದ ಬ್ಯಾಟಿಂಗ್ ವಿಭಾಗದ ದೌರ್ಬಲ್ಯವನ್ನು ರಸಿಕ್ (4–0–24–4) ಅನಾವರಣಗೊಳಿಸಿದರು.

ಅವರ ನಿಖರ ದಾಳಿಗೆ ಬ್ಯಾಟರ್‌ಗಳು ಹೆಜ್ಜೆ ತಪ್ಪಿದರು. ಲಖನೌ ತಂಡವು 20 ಓವರ್‌ಗಳಲ್ಲಿ 146 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಅನುಭವಿ ವೇಗಿ ಭುವನೇಶ್ವರ್ ಕುಮಾರ್ (4–0–27–3) ಕೂಡ ಮಿಂಚಿದರು. ಸ್ಪಿನ್ನರ್ ಕೃಣಾಲ್ ಪಾಂಡ್ಯ (38ಕ್ಕೆ2) ಅವರು ಐಪಿಎಲ್‌ನಲ್ಲಿ 100 ವಿಕೆಟ್ ಪೂರ್ಣಗೊಳಿಸಿಕೊಂಡರು.

ಗುರಿ ಬೆನ್ನಟ್ಟಿದ ಆರ್‌ಸಿಬಿಯು 5 ವಿಕೆಟ್ ಕಳೆದುಕೊಂಡು 149 ರನ್ ಗಳಿಸಿತು. ಇನ್ನೂ 29 ಎಸೆತಗಳು ಬಾಕಿಯಿರುವಾಗಲೇ ಜಯಿಸಿತು.

ಆದರೆ ಕೇವಲ ಒಂದು ರನ್ ಅಂತರದಿಂದ ವಿರಾಟ್ ಕೊಹ್ಲಿ (49; 34ಎ) ಅರ್ಧಶತಕ ಕೈತಪ್ಪಿಸಿಕೊಂಡರು. ಅವರು ಈ ಪಂದ್ಯದಲ್ಲಿ ಫೀಲ್ಡಿಂಗ್ ಮಾಡಲಿಲ್ಲ. ಇಂಪ್ಯಾಕ್ಟ್ ಸಬ್‌ಸ್ಟಿಟ್ಯೂಟ್ ಆಗಿ ಬ್ಯಾಟಿಂಗ್‌ಗೆ ಮಾತ್ರ ಬಂದರು.

ರಜತ್ ಪಾಟೀದಾರ್ (27; 13ಎ), ಜಿತೇಶ್ ಶರ್ಮಾ (23; 9ಎ), ಟಿಮ್ ಡೇವಿಡ್ (ಔಟಾಗದೇ 14) ಮತ್ತು ರೊಮೆರಿಯೊ ಶೆಫರ್ಡ್ (ಔಟಾಗದೇ 14) ಕೂಡ ತಮ್ಮ ಕಾಣಿಕೆ ನೀಡಿದರು. ಲಖನೌ ತಂಡದ ಅನುಭವಿ ವೇಗಿ ಮೊಹಮ್ಮದ್ ಶಮಿ ಹಾಗೂ ಸ್ಪಿನ್ನರ್ ದಿಗ್ವೇಶ್ ಸಿಂಗ್ ರಾಠಿ ಅವರ ಮೋಡಿ ನಡೆಯಲಿಲ್ಲ. ಪ್ರಿನ್ಸ್ ಯಾದವ್ ಮತ್ತು ಆವೇಶ್ ಖಾನ್ ಅವರು ಕ್ರಮವಾಗಿ ಮೂರು ಮತ್ತು ಎರಡು ವಿಕೆಟ್ ಪಡೆದರು.

ರಸಿಕ್ ಸಲಾಮ್ ಡಾರ್

ವಿರಾಟ್ ಕೊಹ್ಲಿ

ಜೋಶ್ ಹ್ಯಾಜಲ್‌ವುಡ್

ಚಿತ್ರಗಳು: ಪ್ರಶಾಂತ್ ಎಚ್.ಜಿ.

ರಸಿಕ್ ದಾಳಿ: ಲಖನೌ ತಂಡದ ಆರಂಭಿಕ ಜೋಡಿ ಮಿಚೆಲ್ ಮಾರ್ಷ್ (40 ರನ್) ಮತ್ತು ಏಡನ್ ಮರ್ಕರಂ (12 ರನ್) ಅವರು ಜೋಶ್ ಹ್ಯಾಜಲ್‌ವುಡ್ ಮತ್ತು ಭುವನೇಶ್ವರ್ ಅವರ ದಾಳಿಯನ್ನು ಎಚ್ಚರಿಕೆಯಿಂದ ಎದುರಿಸಿ ಆಟಕ್ಕೆ ಕುದುರಿಕೊಂಡಿದ್ದರು.

ಆದರೆ ನಾಲ್ಕನೇ ಓವರ್‌ನಲ್ಲಿ ರಸಿಕ್ ಕೈಗೆ ಚೆಂಡು ಕೊಟ್ಟ ರಜತ್ ಪಾಟೀದಾರ್ ತಂತ್ರಗಾರಿಕೆ ಫಲ ನೀಡಿತು. ನಿಧಾನಗತಿಯ ಫುಲ್‌ಟಾಸ್ ಎಸೆತವನ್ನು ಫ್ಲಿಕ್ ಮಾಡುವ ಮರ್ಕರಂ ಪ್ರಯತ್ನ ಕೈಕೊಟ್ಟಿತು. ಬ್ಯಾಟ್ ಮೇಲ್ಮೈಗೆ ಅಪ್ಪಳಿಸಿದ ಚೆಂಡು ಮೇಲಕ್ಕೆ ಚಿಮ್ಮಿತು. ಕವರ್ಸ್‌ನಲ್ಲಿದ್ದ ದೇವದತ್ತ ಪಡಿಕ್ಕಲ್‌ಗೆ ಸುಲಭ ಕ್ಯಾಚ್ ಆಯಿತು. ಅಲ್ಲಿಂದ ಲಖನೌ ತಂಡದ ಹಿನ್ನಡೆ ಆರಂಭವಾಯಿತು.

ನಿಕೊಲಸ್ ಪೂರನ್ ಲಯಕ್ಕೆ ಮರಳದಂತೆ ಹ್ಯಾಜಲ್‌ವುಡ್ ನೋಡಿಕೊಂಡರು. ಹ್ಯಾಜಲ್‌ವುಡ್ ಹಾಕಿದ ಐದನೇ ಓವರ್‌ನ ಎಸೆತವೊಂದನ್ನು ಆಡುವ ಭರದಲ್ಲಿ ರಿಷಭ್ ಪಂತ್ ಎಡಗೈ ಮೊಣಕೈಗೆ ಪೆಟ್ಟಾಯಿತು. ಚೆಂಡು ಬಡಿದ ರಭಸಕ್ಕೆ ರಿಷಭ್ ನೋವಿನಿಂದ ಮುಖ ಕಿವುಚಿಕೊಂಡರು. ಪ್ರಥಮ ಚಿಕಿತ್ಸೆ ನೀಡಿದ ಫಿಸಿಯೊ ಜೊತೆಗೆ ಡಗ್‌ಔಟ್‌ಗೆ ತೆರಳಿದರು. ಅವರು 16ನೇ ಓವರ್‌ನಲ್ಲಿ ಕ್ರೀಸ್‌ಗೆ ಮರಳುವ ಹೊತ್ತಿಗೆ ಇನಿಂಗ್ಸ್ ಮೇಲೆ ಆರ್‌ಸಿಬಿಯ ಹಿಡಿತ ಬಿಗಿಯಾಗಿತ್ತು. ಈ ಒತ್ತಡದಲ್ಲಿ ರಿಷಭ್ ಅವರಿಗೂ ಹೆಚ್ಚು ಹೊತ್ತು ಆಡಲು ಸಾಧ್ಯವಾಗಲಿಲ್ಲ. ಕೇವಲ ಒಂದು ರನ್ ಹೊಡೆದು ಭುವನೇಶ್ವರ್ ಅವರಿಗೆ ಕ್ಯಾಚಿತ್ತರು.

ಲಖನೌ ಮೊತ್ತ ಹೆಚ್ಚಿಸುವ ಪ್ರಯತ್ನದಲ್ಲಿದ್ದ ಆಯುಷ್ ಬಡೋನಿ (38; 24ಎ) ಅವರ ವಿಕೆಟ್ ರಸಿಕ್ ಪಾಲಾಗಿತ್ತು. 39 ರನ್ ಗಳಿಸಿದ ಮುಕುಲ್ ಚೌಧರಿಗೆ 20ನೇ ಓವರ್‌ನಲ್ಲಿ ರಸಿಕ್ ಪೆವಿಲಿಯನ್ ದಾರಿ ತೋರಿದರು.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಸಿಬಿ	5	4	1	0	8	1.503
ಆರ್ ಆರ್	5	4	1	0	8	0.889
ಪಿಬಿಕೆಎಸ್	4	3	0	1	7	0.720
ಎಸ್‌ಆರ್‌ಎಚ್	5	2	3	0	4	0.576
ಡಿ ಸಿ	4	2	2	0	4	0.322
ಜಿ ಟಿ	4	2	2	0	4	- 0.029
ಎಲ್‌ಎಸ್‌ಜಿ	5	2	3	0	4	- 0.804
ಸಿಎಸ್‌ಕೆ	5	2	3	0	4	- 0.846
ಎಂ ಐ	4	1	3	0	2	- 0.772
ಕೆಕೆಆರ್	5	0	4	1	1	- 1.383

ಆರೇಂಜ್ ಕ್ಯಾಪ್–ವಿರಾಟ್ ಕೊಹ್ಲಿ, ಆರ್‌ಸಿಬಿ (228 ರನ್)

ಪರ್ಪಲ್ ಕ್ಯಾಪ್–ಪ್ರಸಿದ್ಧ ಕೃಷ್ಣ, ಜಿಟಿ (10 ವಿಕೆಟ್)

ಸ್ಕೋರ್ ಕಾರ್ಡ್

ಲಖನೌ ಸೂಪರ್ ಜೈಂಟ್ಸ್: 146 (20 ಓವರುಗಳಲ್ಲಿ)
ಮಾರ್ಷ್ ಬಿ ಕೃಣಾಲ್ 40 (32ಎ, 4x3, 6x2)
ಮರ್ಕರಂ ಸಿ ಪಡಿಕ್ಕಲ್ ಬಿ ರಸಿಕ್ 12 (8ಎ, 6x1)
ಪಂತ್ ಸಿ ಸಾಲ್ಟ್ ಬಿ ಭುವನೇಶ್ವರ್ 1 (6ಎ)
ಪೂರನ್ ಬಿ ಹ್ಯಾಜಲ್‌ವುಡ್ 1 (7ಎ)
ಬಡೋನಿ ಸಿ ಶರ್ಮಾ ಬಿ ರಸಿಕ್ 38 (24ಎ, 4x4, 6x1)
ಸಮದ್ ಸಿ ಪಾಟೀದಾರ್ ಬಿ ಕೃಣಾಲ್ 0 (2)
ಮುಕುಲ್ ಬಿ ರಸಿಕ್ 39 (28ಎ, 4x3, 6x2)
ಲಿಂಡೆ ಸಿ ಡೇವಿಡ್ ಬಿ ಭುವನೇಶ್ವರ್ 7 (7ಎ, 4x1)
ಶಮಿ ಬಿ ಭುವನೇಶ್ವರ್ 0 (1ಎ)
ಆವೇಶ್ ಬಿ ರಸಿಕ್ 1 (2ಎ)
ದಿಗ್ವೇಶ್ ಸಿಂಗ್ ರಾಠಿ ಔಟಾಗದೇ 0 (3ಎ)
ಇತರೆ: 7 (ಬೈ 1, ಲೆಗ್‌ಬೈ 2, ವೈಡ್ 4)
ವಿಕೆಟ್ ಪತನ: 1–32 (ಏಡನ್ ಮರ್ಕರಂ, 3.6), 1–33 (ರಿಷಭ್ ಗಾಯಾಳಾಗಿ ನಿವೃತ್ತಿ), 2–35 (ನಿಕೋಲಸ್ ಪೂರನ್, 6.1), 3–71 (ಮಿಚೆಲ್ ಮಾರ್ಷ್, 9.5), 4–83 (ಅಬ್ದುಲ್ ಸಮದ್, 11.2), 5–118 (ಆಯುಷ್ ಬಡೋನಿ, 15.5), 6–124 (ರಿಷಭ್ ಪಂತ್, 16.5), 7–137 (ಜಾರ್ಜ್ ಲಿಂಡೆ, 18.3), 8–137 (ಮೊಹಮ್ಮದ್ ಶಮಿ, 18.4), 9–145 (ಮುಕುಲ್ ಚೌಧರಿ, 19.2), 10–146 (ಆವೇಶ್ ಖಾನ್, 19.6)
ಬೌಲಿಂಗ್: ಭುವನೇಶ್ವರ ಕುಮಾರ್ 4–0–27–3; ಜೋಶ್ ಹ್ಯಾಜಲ್‌ವುಡ್ 4–0–20–1; ರಸಿಕ್ ಸಲಾಂ ಡಾರ್ 4–0–24–4; ಕೃಣಾಲ್ ಪಾಂಡ್ಯ 4–0–38–2; ಸುಯಶ್ ಶರ್ಮಾ 4–0–34–0.

ರಾಯಲ್ ಚಾಲೆಂಜರ್ಸ್ ಬೆಂಗಳೂರು: 5 ವಿಕೆಟ್‌ಗೆ 149 (15.1 ಓವರ್‌ಗಳಲ್ಲಿ)
ಸಾಲ್ಟ್ ಬಿ ಪ್ರಿನ್ಸ್ 7 (8ಎ, 4x1)
ವಿರಾಟ್ ಸಿ ಪೂರನ್ ಬಿ ಆವೇಶ್ 49 (34ಎ, 4x6, 6x1)
ಪಡಿಕ್ಕಲ್ ಸಿ ಹಿಮ್ಮತ್ ಬಿ ಆವೇಶ್ 10 (11ಎ, 4x1)
ರಜತ್ ಸಿ ದಿಗ್ವೇಶ್ ಬಿ ಪ್ರಿನ್ಸ್ 27 (13ಎ, 4x1, 6x3)
ಜಿತೇಶ್ ಸಿ ಮುಕುಲ್ ಬಿ ಪ್ರಿನ್ಸ್ 23 (9ಎ, 4x2, 6x2)
ಟಿಮ್ ಡೇವಿಡ್ ಔಟಾಗದೇ 14 (8ಎ, 4x1, 6x1)
ರೊಮಾರಿಯೊ ಶೆಫರ್ಡ್ ಔಟಾಗದೇ 14 (8ಎ, 4x1, 6x1)
ಇತರೆ: 5 (ಲೆಗ್‌ಬೈ 4, ವೈಡ್ 1)
ವಿಕೆಟ್ ಪತನ: 1–9 (ಫಿಲ್ ಸಾಲ್ಟ್, 1.4), 2–66 (ದೇವದತ್ತ ಪಡಿಕ್ಕಲ್, 7.2), 3–86 (ವಿರಾಟ್ ಕೊಹ್ಲಿ, 10.1), 4–121 (ರಜತ್ ಪಾಟೀದಾರ್, 12.2), 5–122 (ಜಿತೇಶ್ ಶರ್ಮಾ, 12.4)
ಬೌಲಿಂಗ್: ಮೊಹಮ್ಮದ್ ಶಮಿ 3–0–30–0; ಪ್ರಿನ್ಸ್ ಯಾದವ್ 3–0–32–3; ದಿಗ್ವೇಶ್ ಸಿಂಗ್ ರಾಠಿ 4–0–51–0; ಆವೇಶ್ ಖಾನ್ 4–0–23–2; ಜಾರ್ಜ್ ಲಿಂಡೆ 1.1–0–9–0
ಪಂದ್ಯದ ಆಟಗಾರ: ಜೋಶ್ ಹ್ಯಾಜಲ್‌ವುಡ್.

ನಿಧಾನಗತಿಯ ಓವರ್: ರಹಾನೆಗೆ ದಂಡ

ಚೆನ್ನೈ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ನಿಗದಿತ ಅವಧಿಯಲ್ಲಿ ಓವರುಗಳನ್ನು ಮುಗಿಸದ ಕಾರಣ ಕೋಲ್ಕತ್ತ ನೈಟ್ ರೈಡರ್ಸ್ ನಾಯಕ ಅಜಿಂಕ್ಯ ರಹಾನೆ ಅವರಿಗೆ ₹12 ಲಕ್ಷ ದಂಡ ವಿಧಿಸಲಾಗಿದೆ.

ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯವನ್ನು ಕೋಲ್ಕತ್ತದ ತಂಡ 32 ರನ್‌ಗಳಿಂದ ಸೋತಿತ್ತು. ತಂಡ ಆಡಿದ 5 ಪಂದ್ಯಗಳಲ್ಲಿ ನಾಲ್ಕು ಸೋತಿದ್ದು, ಒಂದು ಪಂದ್ಯ ಮಳೆಯ ಪಾಲಾಗಿತ್ತು.

ಅಜಿಂಕ್ಯ ಸಾರಥ್ಯದ ತಂಡ ಶುಕ್ರವಾರ ಅಹಮದಾಬಾದಿನಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ಆಡಲಿದೆ.